ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

# ಕಲಿಕಾ ಫಲ ಆಧಾರಿತ
# ಮೌಲ್ಯಾಂಕನ ಪ್ರಶ್ನೆಕೋಠಿ

## 7

## ಸಮಾಜ ವಿಜ್ಞಾನ (ಭಾಗ-1 & 2)

2026-27 (ಪರಿಷ್ಕೃತ)



ರಾಜ್ಯ ಶಿಕ್ಷಣ ಸಂಶೋಧನ ಮತ್ತು ತರಬೇತಿ ಇಲಾಖೆ
ಸಂ.4, 100 ಅಡಿ ಮರ್ಜಿಲ ರಸ್ತೆ, ಬಸವೇಶರಿ 3 ನೇ ಹಂತ, ಬೆಂಗಳೂದು-560085

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ಡಢ್ಲೂಬಿ, ಚೆನ್ನ, ಬಸಪ್ಪ ನಗರ, ಪೊಡ್ಲ ರಸ್ತೆ, ಧಾರವಾಡ-580008

# ಶಾಲಾ ಶಿಕ್ಷಣ ಇಲಾಖೆ

# ಕಲಿಕಾ ಫಲ ಆಧಾರಿತ ಪ್ರಶ್ನೆಕೋಠಿ

# 2026-27

# ಸಮಾಜ ವಿಜ್ಞಾನ

**ಭಾಗ : 1-2 (ಪರಿಷ್ಕೃತ)**

# 7 ನೇ ತರಗತಿ

## ಕನ್ನಡ ಮಾಧ್ಯಮ


ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ನಂ.4,100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇಹಂತ, ಬೆಂಗಳೂರು -85

ಮತ್ತು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ

ಡೆಪ್ಯೂಟಿ ಚೆನ್ನಬಸಪ್ಪ ನಗರ, ರೊದ್ದ ರಸ್ತೆ, ಧಾರವಾಡ

## ಪರಿಕಲ್ಪನೆ ಮತ್ತು ಮಾರ್ಗದರ್ಶನ

**ಶ್ರೀಮತಿ ರಶ್ಮಿ ಮಹೇಶ್ ಭಾ.ಆ.ಸೇ**
ಅಪರ ಮುಖ್ಯ ಕಾರ್ಯದರ್ಶಿಗಳು
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

| | |
|---|---|
| **ಶ್ರೀಮತಿ. ಡಾ. ಕೆ. ವಿದ್ಯಾಕುಮಾರಿ, ಭಾ.ಆ.ಸೇ**<br>ರಾಜ್ಯ ಯೋಜನಾ ನಿರ್ದೇಶಕರು,<br>ಸಮಗ್ರ ಶಿಕ್ಷಣ ಇಲಾಖೆ, ಬೆಂಗಳೂರು | **ಶ್ರೀಮತಿ ಅನಿತಾ ನಾಜರೆ**<br>ನಿರ್ದೇಶಕರು,<br>DSERT, ಬೆಂಗಳೂರು |

## ಡಯಟ್ ಸಹಕಾರ

| | |
|---|---|
| **ಪ್ರಾಂಶುಪಾಲರು**<br>ಶ್ರೀ ಬಸವರಾಜ ನಾಲತವಾಡ<br>ಡಯಟ್ ಧಾರವಾಡ | **ನೋಡಲ್ ಅಧಿಕಾರಿ**<br>ಶ್ರೀಮತಿ ವೀಣಾ ಮಲ್ಲಳ್ಳಿ<br>ಡಯಟ್ ಧಾರವಾಡ |

## ಸಂಯೋಜನೆ

**ಶ್ರೀಮತಿ ರಾಧಾ P,**
ಹಿರಿಯ ಸಹಾಯಕ ನಿರ್ದೇಶಕರು,
DSERT, ಬೆಂಗಳೂರು

| ರಚನಾ ಸಂಪನ್ಮೂಲ ತಂಡ | ಪರಿಷ್ಕರಣಾ ಸಂಪನ್ಮೂಲ ತಂಡ |
|---|---|
| 1. ಪ್ರಕಾಶ ಕಲ್ಲೇದ, ಸ.ಶಿ,<br>ಸ.ಮಾ.ಶಾಲೆ ಗಾಂಧೀನಗರ ಧಾರವಾಡ | 1. ಜಗದೀಶ ಗೊರೋಬಾಳ, ಸ.ಶಿ,<br>ಸ.ಹಿ.ಪ್ರಾ..ಶಾಲೆ ಶಿಂಗನಹಳ್ಳಿ, ಧಾರವಾಡ |
| 2. ಜಗದೀಶ ಗೊರೋಬಾಳ, ಸ.ಶಿ,<br>ಸ.ಹಿ.ಪ್ರಾ..ಶಾಲೆ ಶಿಂಗನಹಳ್ಳಿ, ಧಾರವಾಡ | 2. ಪ್ರಕಾಶ ಕಲ್ಲೇದ, ಸ.ಶಿ,<br>ಸ.ಮಾ.ಶಾಲೆ ಗಾಂಧೀನಗರ ಧಾರವಾಡ |
| 3. ಶಿವಾನಂದ ಲೋಕಪ್ಪನವರ, ಸ.ಶಿ,<br>ಸ.ಹಿ.ಪ್ರಾ.ಶಾಲೆ ಕಾಶೇನಟ್ಟಿ ಧಾರವಾಡ | 3. ಶಿವಾನಂದ ಲೋಕಪ್ಪನವರ, ಸ.ಶಿ,<br>ಸ.ಹಿ.ಪ್ರಾ.ಶಾಲೆ ಕಾಶೇನಟ್ಟಿ ಧಾರವಾಡ |
| 4. ಯಲ್ಲಪ್ಪ ನಾಯ್ಕರ, ಸ.ಶಿ,<br>ಸ.ಹಿ.ಪ್ರಾ.ಶಾಲೆ ಮಾಧನಬಾವಿ | 4. ದೀಪಾ ಬಗಾಡೆ, ಸ.ಶಿ,<br>ಪಿ.ಎಂ.ಶ್ರೀ ಸ.ಹಿ.ಪ್ರಾ.ಶಾಲೆ ಛಬ್ಬಿ<br>ಹುಬ್ಬಳ್ಳಿ ಗ್ರಾಮಾಂತರ ಧಾರವಾಡ |
| 5. ಜ್ಯೋತಿ ಪಾಟೀಲ, ಸ.ಶಿ,<br>ಸ.ಹೆ.ಮ.ಶಾಲೆ ಗರಗ ಧಾರವಾಡ | 5. ಯಲ್ಲಪ್ಪ ನಾಯ್ಕರ, ಸ.ಶಿ,<br>ಸ.ಹಿ.ಪ್ರಾ.ಶಾಲೆ ಮಾಧನಬಾವಿ |
| 6. ಮಂಜುಳಾ ಪತ್ತಾರ, ಸ.ಶಿ,<br>ಸ.ಹಿ.ಪ್ರಾ.ಶಾಲೆ ಕಬ್ಬೇನೂರ ಧಾರವಾಡ | 6. ಕೇದಾರಿ ಮಾಳಗಾರ, ಸ.ಶಿ.<br>ಸ.ಹಿ.ಪ್ರಾ.ಶಾಲೆ ಕುರುವಿನಕೊಪ್ಪ |
| 7. ಮಂಜುನಾಥ ಅಗಡಿ, ಸ.ಶಿ.<br>ಸ.ಹಿ.ಪ್ರಾ.ಶಾಲೆ ರಾಮಾಪುರ | |
| 8. ಸಂಜೀವಕುಮಾರ ಕೋಲಕಾರ, ಸ.ಶಿ.<br>ಸ.ಹಿ.ಪ್ರಾ.ಶಾಲೆ ಹೊಸಟ್ಟಿ | |

| ಮಾರ್ಗದರ್ಶಕರು | ಪರಿಶೀಲಕರು |
| --- | --- |
| **ಡಾ. ಶ್ರೀ ಹರಿಪ್ರಸಾದ ಜಿ.ವಿ**<br>ಉಪನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು | **ಶ್ರೀ ಅಭಿಮನ್ಯು ಯಾದವ ಕೆ.**<br>ಸ.ಶಿ -ಜಿ.ಪಿ.ಟಿ.<br>ಸ.ಹಿ.ಪ್ರಾ.ಕ.ಶಾಲೆ ಕನ್ನಲ್ಲಿ<br>ಬೆಂಗಳೂರು ಉತ್ತರ ವಲಯ-01 |

# ಮುನ್ನುಡಿ

## *ಕಲಿಕೆಯ ಪಯಣಕ್ಕೆ ದಾರಿದೀಪ – ಕಲಿಕಾ ಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ*

ಶಿಕ್ಷಣವೆಂಬುದು ಕೇವಲ ಪಠ್ಯಪುಸ್ತಕಗಳ ಅಕ್ಷರಜ್ಞಾನಕ್ಕೆ ಸೀಮಿತವಾಗಿರದೆ, ವಿದ್ಯಾರ್ಥಿಗಳ ಚಿಂತನೆ, ಗ್ರಹಿಕೆ, ವಿಶ್ಲೇಷಣಾ ಸಾಮರ್ಥ್ಯ ಹಾಗೂ ಜೀವನ ಮೌಲ್ಯಗಳನ್ನು ರೂಪಿಸುವ ಸೃಜನಾತ್ಮಕ ಪ್ರಕ್ರಿಯೆಯಾಗಿದೆ. ಈ ಕಲಿಕೆಯ ಪಯಣದಲ್ಲಿ **ಮೌಲ್ಯಾಂಕನವು** ವಿದ್ಯಾರ್ಥಿಯ ಕಲಿಕೆಯ ಪ್ರಗತಿಯನ್ನು ಗುರುತಿಸುವ ದಾರಿದೀಪವಾಗಿದ್ದು, ಅವರ ಸಾಮರ್ಥ್ಯವನ್ನು ಅನಾವರಣಗೊಳಿಸುವ ಪ್ರೇರಕ ಶಕ್ತಿಯಾಗಿದೆ.ಈ ಮಹತ್ವದ ಆಶಯವನ್ನು ಮನಗಂಡು, **2025–26ನೇ ಶೈಕ್ಷಣಿಕ ವರ್ಷದಲ್ಲಿ** *ಪಾಠಾಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ*ಯನ್ನು ವಿದ್ಯಾರ್ಥಿಗಳ ಕಲಿಕೆಯನ್ನು ಬಲಪಡಿಸುವ ಉದ್ದೇಶದಿಂದ ರೂಪಿಸಲಾಗಿತ್ತು. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಸಮಾನವಾಗಿ ಉಪಯುಕ್ತವಾಗುವಂತೆ ಸಿದ್ಧಗೊಂಡ ಈ ಪ್ರಯತ್ನಕ್ಕೆ ದೊರೆತ ಅತ್ಯುತ್ತಮ ಸ್ಪಂದನೆ ನಮ್ಮೆಲ್ಲರಿಗೂ ಸಂತೋಷ ಮತ್ತು ಪ್ರೇರಣೆಯನ್ನು ನೀಡಿದೆ. ಅದೇ ಉತ್ಸಾಹ, ಅನುಭವ ಮತ್ತು ಬದ್ಧತೆಯನ್ನು ಮುಂದುವರಿಸಿಕೊಂಡು, **2026–27ನೇ ಶೈಕ್ಷಣಿಕ ವರ್ಷದಲ್ಲಿ** ಈ ಉಪಕ್ರಮವನ್ನು ಮತ್ತಷ್ಟು ವಿದ್ಯಾರ್ಥಿ ಸ್ನೇಹಿಯಾಗಿ, ಸರಳವಾಗಿ, ಪರಿಣಾಮಕಾರಿಯಾಗಿ ಹಾಗೂ ಸಮಾಜ ವಿಜ್ಞಾನ ವಿಷಯದ **ಕಲಿಕಾ ಫಲಗಳಿಗೆ ಅನುಗುಣವಾಗಿ** ಪರಿಷ್ಕರಿಸಿ "ಕಲಿಕಾ ಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ"ಯನ್ನು ನಿಮ್ಮ ಕೈಗೆ ಅರ್ಪಿಸುತ್ತಿದ್ದೇವೆ. ಈ ಪ್ರಶ್ನೆಕೋಠಿಯಲ್ಲಿನ ಪ್ರತಿಯೊಂದು ಅಧ್ಯಾಯಕ್ಕೂ ಸಂಬಂಧಿಸಿದ ಪ್ರಶ್ನೆಗಳು ನಿರ್ದಿಷ್ಟ ಕಲಿಕಾ ಫಲಗಳ ಆಧಾರದ ಮೇಲೆ ವಿನ್ಯಾಸಗೊಳಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ವಿಷಯದ ಆಳವಾದ ಗ್ರಹಿಕೆ, ವಿಶ್ಲೇಷಣಾತ್ಮಕ ಚಿಂತನೆ, ಅನ್ವಯಿಕ ಸಾಮರ್ಥ್ಯ ಹಾಗೂ ಸಮಸ್ಯೆ ಪರಿಹಾರ ಕೌಶಲಗಳು ವೃದ್ಧಿಯಾಗುವಂತೆಯೇ, ಶಿಕ್ಷಕರಿಗೆ ಕಲಿಕಾ ಫಲಗಳನ್ನು ಪರಿಣಾಮಕಾರಿಯಾಗಿ ಮೌಲ್ಯಾಂಕನ ಮಾಡಲು ಸಹಕಾರಿಯಾಗುತ್ತದೆ.ಈ ಪ್ರಶ್ನೆಕೋಠಿಯನ್ನು ಶಿಕ್ಷಕರು ತರಗತಿ ಬೋಧನೆ, ಕಲಿಕಾ ಚಟುವಟಿಕೆಗಳು, ರೂಪಣಾತ್ಮಕ ಮೌಲ್ಯಮಾಪನ (FA), ಸಂಕಲನಾತ್ಮಕ ಮೌಲ್ಯಮಾಪನ (SA), **ಕಲಿಕಾ ಫಲ ಆಧಾರಿತ ಮೌಲ್ಯಾಂಕನ (LBA)** ಹಾಗೂ ನಿರಂತರ ಸಮಗ್ರ ಮೌಲ್ಯಮಾಪನ (CCE) ಪ್ರಕ್ರಿಯೆಗಳಲ್ಲಿ ಸಮರ್ಪಕವಾಗಿ ಬಳಸುವ ಮೂಲಕ ಸಮಾಜ ವಿಜ್ಞಾನ ವಿಷಯದ ಕುರಿತು ವಿದ್ಯಾರ್ಥಿಗಳಲ್ಲಿ ಆಸಕ್ತಿ, ಆತ್ಮವಿಶ್ವಾಸ ಮತ್ತು ಕಲಿಕೆಯ ಗುಣಮಟ್ಟವನ್ನು ಇನ್ನಷ್ಟು ವೃದ್ಧಿಸಲಿ ಎಂಬುದು ನಮ್ಮ ಹಾರೈಕೆಯಾಗಿದೆ.ಈ ಮಹತ್ವದ ಕಾರ್ಯಕ್ಕೆ ಮಾರ್ಗದರ್ಶನ ನೀಡಿದ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸಂಪನ್ಮೂಲ ವ್ಯಕ್ತಿಗಳು, ಸಂಪಾದಕ ಮಂಡಳಿ, ಸಂಪನ್ಮೂಲ ತಂಡ ಹಾಗೂ ತಮ್ಮ ಅಮೂಲ್ಯ ಸಲಹೆ ಮತ್ತು ಸಹಕಾರವನ್ನು ನೀಡಿದ ಎಲ್ಲ ಶಿಕ್ಷಕರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

**ಪ್ರೀತಿಯ ವಿದ್ಯಾರ್ಥಿಗಳೇ,**

ಜ್ಞಾನವೇ ನಿಮ್ಮ ಅತ್ಯಮೂಲ್ಯ ಸಂಪತ್ತು. ನಿರಂತರ ಅಧ್ಯಯನ, ಆತ್ಮವಿಶ್ವಾಸ, ಶಿಸ್ತು ಮತ್ತು ಪರಿಶ್ರಮವೇ ಯಶಸ್ಸಿನ ಭದ್ರ ಅಡಿಪಾಯಗಳು. ಈ **ಕಲಿಕಾ ಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ** ನಿಮ್ಮ ಕಲಿಕೆಯ ಪಯಣದಲ್ಲಿ ಆತ್ಮವಿಶ್ವಾಸದ ಗೆಳೆಯನಾಗಿ, ಪ್ರತಿಯೊಂದು ಕಲಿಕಾ ಫಲವನ್ನು ಯಶಸ್ವಿಯಾಗಿ ತಲುಪಲು ಮಾರ್ಗದರ್ಶಿಯಾಗಲಿ ಎಂಬುದು ನಮ್ಮ ಆಶಯ.ನಿಮ್ಮ ಶೈಕ್ಷಣಿಕ ಪಯಣವು ಸದಾ ಯಶಸ್ಸಿನಿಂದ ಕಂಗೊಳಿಸಲಿ. ನಿಮ್ಮೆಲ್ಲರಿಗೂ ಹೃತ್ಪೂರ್ವಕ ಶುಭಾಶಯಗಳು.

**ಉಜ್ವಲ ಭವಿಷ್ಯ ನಿಮ್ಮದಾಗಲಿ!**

**ನಿರ್ದೇಶಕರು**

**ರಾಜ್ಯ ಶಿಕ್ಷಣ ಸಂಶೋದನೆ ಮತ್ತು ತರಬೇತಿ ಸಂಸ್ಥೆ ಬೆಂಗಳೂರು**

## ಶಿಕ್ಷಕರಿಗೆ ಮಾರ್ಗಸೂಚಿ

| | |
|---|---|
| 1 | ಸಮಾಜ ವಿಜ್ಞಾನ ಕೌಶಲಗಳು (ನಕ್ಷೆ ಬಿಡಿಸುವುದು, ನಕ್ಷೆಯಲ್ಲಿ ಸ್ಥಳ ಗುರುತಿಸುವುದು, ಆಲೇಖಗಳನ್ನು ರೂಪಿಸುವುದು, ವಿಶ್ಲೇಷಿಸುವುದು, ವಿವರಿಸುವುದು ಹಾಗೂ ವಿಮರ್ಶಿಸುವುದು) ಎಲ್ಲಾ ಪಾಠಗಳಿಗೂ ಅನ್ವಯಿಸುತ್ತವೆ. ಆದ್ದರಿಂದ ಈ ಕೌಶಲಗಳನ್ನು ನಿರಂತರವಾಗಿ ಅಭ್ಯಾಸ ಮಾಡಿಸಬೇಕು. |
| 2 | ಪ್ರತಿಯೊಂದು ಘಟಕದ ಪ್ರಶ್ನೆಗಳನ್ನು ನಿರ್ದಿಷ್ಟ ಕಲಿಕಾಫಲಗಳ ಆಧಾರದ ಮೇಲೆ ರಚಿಸಲಾಗಿದೆ. ಶಿಕ್ಷಕರು ಮೊದಲು ಸಂಬಂಧಿತ ಕಲಿಕಾಫಲಗಳನ್ನು ಸ್ಪಷ್ಟವಾಗಿ ತಿಳಿದುಕೊಂಡಿರಬೇಕು. |
| 3 | ಕೇವಲ ಕಂಠಪಾಠಕ್ಕೆ ಒತ್ತು ನೀಡದೆ, ವಿದ್ಯಾರ್ಥಿಗಳ ವಿಮರ್ಶಾತ್ಮಕ ಚಿಂತನೆ ಹಾಗೂ ಅನ್ವಯಿಕ ಸಾಮರ್ಥ್ಯವನ್ನು ಬೆಳೆಸುವ ರೀತಿಯಲ್ಲಿ ಪ್ರಶ್ನೆಗಳನ್ನು ಬಳಸಬೇಕು. ತರಗತಿಯ ಅಗತ್ಯಕ್ಕೆ ಅನುಗುಣವಾಗಿ ಪ್ರಶ್ನೆಗಳನ್ನು ಆಯ್ಕೆ ಮಾಡಬೇಕು. |
| 4 | ಇತಿಹಾಸ, ರಾಜ್ಯಶಾಸ್ತ್ರ, ಭೂಗೋಳಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಹಾಗೂ ವ್ಯವಹಾರ ಅಧ್ಯಯನ ವಿಭಾಗಗಳಿಗೆ ಕಲಿಕಾಫಲಗಳ ಆಧಾರದ ಮೇಲೆ ಸಮಾನ ಆದ್ಯತೆ ನೀಡಬೇಕು. |
| 5 | ಭೂಗೋಳ ಮತ್ತು ಇತಿಹಾಸ ವಿಭಾಗಗಳಲ್ಲಿ ನಕ್ಷೆ ಗುರುತಿಸುವಿಕೆ, ರೇಖಾಚಿತ್ರ ಹಾಗೂ ಕಾಲಾವಧಿ ಆಧಾರಿತ ಪ್ರಶ್ನೆಗಳಿಗೆ ಹೆಚ್ಚಿನ ಅಭ್ಯಾಸ ಮಾಡಿಸಬೇಕು. |
| 6 | ಈ ಪ್ರಶ್ನೆಕೋಠಿಯನ್ನು ತರಗತಿ ಬೋಧನೆ, ವಾರ್ಷಿಕ ಪರೀಕ್ಷೆಗಳು, LBA, FA, SA ಹಾಗೂ CCE ಚಟುವಟಿಕೆಗಳಲ್ಲಿ ನಿರಂತರವಾಗಿ ಬಳಸಬೇಕು. |
| 7 | ವಿದ್ಯಾರ್ಥಿಗಳ ವಿಭಿನ್ನ ಕಲಿಕಾ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಸುಲಭ, ಸಾಧಾರಣ ಹಾಗೂ ಕಠಿಣ ಮಟ್ಟದ ಪ್ರಶ್ನೆಗಳನ್ನು ವರ್ಗೀಕರಿಸಿ ನೀಡಬೇಕು. |
| 8 | ವಿದ್ಯಾರ್ಥಿಗಳಲ್ಲಿ ಆಲೋಚನಾ ಶಕ್ತಿ ಮತ್ತು ಸಮಸ್ಯೆ ಪರಿಹಾರ ಸಾಮರ್ಥ್ಯವನ್ನು ಬೆಳೆಸಲು ಪ್ರಶ್ನೆಕೋಠಿಯ ಪ್ರಶ್ನೆಗಳನ್ನು ಬಳಸಿ ಗುಂಪು ಚರ್ಚೆ ಹಾಗೂ ಸಹಪಾಠಿ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಬೇಕು. |
| 9 | ಪರೀಕ್ಷೆಗಳ ನಂತರ ವಿದ್ಯಾರ್ಥಿಗಳು ಯಾವ ಕಲಿಕಾಫಲಗಳನ್ನು ತಲುಪಲು ಹಿಂದುಳಿದಿದ್ದಾರೆ ಎಂಬುದನ್ನು ಗುರುತಿಸಿ, ಯೋಜಿತ ಪರಿಹಾರ ಬೋಧನೆ (Remedial Teaching) ನಡೆಸಬೇಕು. |
| 10 | ದೈನಂದಿನ ಗೃಹಪಾಠ ಹಾಗೂ ನಿಯೋಜಿತ ಕಾರ್ಯಗಳನ್ನು ನೀಡುವಾಗ ಪ್ರಶ್ನೆಕೋಠಿಯಲ್ಲಿರುವ ಉನ್ನತ ಆಲೋಚನಾ ಸಾಮರ್ಥ್ಯ (Higher Order Thinking Skills - HOTS) ಆಧಾರಿತ ಪ್ರಶ್ನೆಗಳನ್ನು ಆಯ್ಕೆ ಮಾಡಬೇಕು. |
| 11 | ಕಠಿಣ ಪ್ರಶ್ನೆಗಳಿಗೆ ಉತ್ತರಿಸುವಾಗ ಮುಖ್ಯ ಅಂಶಗಳನ್ನು ಗುರುತಿಸಿ, ಕೀ ಉತ್ತರಗಳ ಸಹಾಯದಿಂದ ಸರಿಯಾದ ಉತ್ತರ ಬರೆಯುವ ವಿಧಾನವನ್ನು ತರಗತಿಯಲ್ಲಿ ಮಾದರಿಯಾಗಿ ತೋರಿಸಬೇಕು. |
| 12 | ಕೌಶಲ್ಯಗಳಿಗೆ ಸಂಬಂಧಿಸಿದ ಕಲಿಕಾಫಲಗಳನ್ನು ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ತಲುಪಲು ಪ್ರಶ್ನೆಕೋಠಿಯ ಜೊತೆಗೆ ಸ್ಮಾರ್ಟ್ ಕ್ಲಾಸ್ ಹಾಗೂ ಪೂರಕ ಡಿಜಿಟಲ್ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಬೇಕು. |

| CGs | ಸಾಮರ್ಥ್ಯ | ಕಲಿಕಾ ಫಲಗಳು | ಅನ್ವಯವಾಗುವ ಅಧ್ಯಾಯಗಳು |
|---|---|---|---|
| **CG-1:** ಮಾನವ ಜೀವನದ ವಿವಿಧ ಆಯಾಮಗಳಿಗೆ ಸಂಬಂಧಿಸಿದ ಮೂಲಗಳನ್ನು ಅರ್ಥೈಸಿಕೊಂಡು ಅರ್ಥಪೂರ್ಣವಾಗಿ ವಿಶ್ಲೇಷಿಸುವರು. | **C-1.1:** ಮಾನವ ಜೀವನದ ಐತಿಹಾಸಿಕ, ಸಾಂಸ್ಕೃತಿಕ, ಭೌಗೋಳಿಕ ಹಾಗೂ ಸಾಮಾಜಿಕ-ರಾಜಕೀಯ ಅಂಶಗಳನ್ನು ಅರ್ಥಮಾಡಿಕೊಳ್ಳಲು ಪ್ರಾಥಮಿಕ ಹಾಗೂ ಎರಡನೆಯ ಹಂತದ ಮಾಹಿತಿಯನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ, ಅರ್ಥೈಸುವರು. | | |
| | **C-1.2:** ಮಾನವ ಜೀವನದ ವಿವಿಧ ಆಯಾಮಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಠ್ಯ, ಕೋಷ್ಟಕ, ಚಾರ್ಟ್, ರೇಖಾಚಿತ್ರ ಹಾಗೂ ನಕ್ಷೆಗಳ ರೂಪದಲ್ಲಿ ರಚಿಸಿ, ವಿಶ್ಲೇಷಿಸುವರು. | 1. **ಸಮಾಜ ವಿಜ್ಞಾನ ಕೌಶಲಗಳು:** ನಕ್ಷೆ ಬಿಡಿಸುವ, ನಕ್ಷೆಯಲ್ಲಿ ಸ್ಥಳ ಗುರುತಿಸುವ, ಆಲೇಖಗಳನ್ನು ರೂಪಿಸಿ, ವಿಶ್ಲೇಷಿಸಿ, ವಿವರಿಸಿ, ವಿಮರ್ಶಿಸುವ ಕೌಶಲಗಳು ಎಲ್ಲಾ ಪಾಠಗಳಿಗೂ ಅನ್ವಯ | |
| **CG-2:** ತಮ್ಮ ಸನ್ನಿವೇಶ ಹಾಗೂ ಕೆಲವು ಐತಿಹಾಸಿಕ ಘಟನೆಗಳ ಉದಾಹರಣೆಗಳ ಮೂಲಕ ಮಾನವ ನಾಗರಿಕತೆಗಳಲ್ಲಿನ ನಿರಂತರತೆ ಮತ್ತು ಬದಲಾವಣೆಯ | **C-2.1:** ಭೂತಕಾಲದಲ್ಲಿ ಸಂಭವಿಸಿದ ಪ್ರಮುಖ ಬದಲಾವಣೆಗಳು ಹಾಗೂ ಅವು ಸಮಾಜದ ಮೇಲೆ ಬೀರಿದ ಪರಿಣಾಮಗಳನ್ನು ವಿವರಿಸಿ, ವಿಶ್ಲೇಷಿಸುವರು. | 2. ಪ್ರವಾದಿ ಮೊಹಮ್ಮದ್ ಮತ್ತು ಏಸು ಕ್ರಿಸ್ತರ ಬೋಧನೆಗಳು, ಭಕ್ತಿ ಪಂಥ, ದಾಸರು, ಸೂಫಿ ಸಂತರು ಹಾಗೂ ವಿವಿಧ ಮತಗಳಲ್ಲಿನ ಸಾಮಾನ್ಯ ಮೌಲ್ಯಗಳು ಮತ್ತು ತತ್ವಗಳನ್ನು ವಿಶ್ಲೇಷಿಸುವರು.<br>3. ಹೊರ ಸಾಮ್ರಾಜ್ಯದ ವಿಸ್ತರಣೆ, ಹೊರ ದೇಶದ (ಅರಬ್ ಸೇರಿದಂತೆ) ಸಾಹಿತ್ಯ, | ಅಧ್ಯಾಯ-**1** ಜಗತ್ತಿನ ಪ್ರಮುಖ ಘಟನೆಗಳು<br><br>ಅಧ್ಯಾಯ-**8** ಭಕ್ತಿಪಂಥ ಹಾಗೂ ಸೂಫಿ ಪರಂಪರೆ |

| | | | |
|---|---|---|---|
| ಪ್ರಕ್ರಿಯೆಯನ್ನು ಅನ್ವೇಷಿಸುವರು. | | ವಿಜ್ಞಾನಗಳು ಭಾರತದ ಸಾಂಸ್ಕೃತಿಕ ಜೀವನದ ಮೇಲೆ ಬೀರಿದ ಪರಿಣಾಮಗಳನ್ನು ಉದಾಹರಣೆಗಳೊಂದಿಗೆ ವಿವರಿಸುವರು | |
| | | 4. ಪುನರುಜ್ಜೀವನವು ಅಂದು ಮತ್ತು ಸಮಕಾಲಿನ ಜಗತ್ತಿನ ಮೇಲೆ ಬೀರಿ ಪ್ರಭಾವ ಮತ್ತು ಪರಿಣಾಮಗಳನ್ನು ವಿಶ್ಲೇಷಿಸುವರು. | ಅಧ್ಯಾಯ-**2** ಮಧ್ಯಯುಗದ ಯುರೋಪ್ |
| | **C-2.2:** ಸಮಾಜದಲ್ಲಿ ಮಹತ್ತರ ಬದಲಾವಣೆಗಳು ನಡೆದಿದ್ದರೂ, ಕೆಲವು ನಂಬಿಕೆಗಳು, ಸಂಬಂಧಗಳು, ಆಚರಣೆಗಳು ಹಾಗೂ ಚಟುವಟಿಕೆಗಳು ನಿರಂತರವಾಗಿ ಮುಂದುವರಿದಿರುವುದನ್ನು ಗುರುತಿಸುವರು. | 5. ವಿವಿಧ ಕಂದಾಯ ಪದ್ಧತಿಗಳನ್ನು ಹೋಲಿಸಿ ಅವುಗಳ ಗುಣ–ಅವಗುಣಗಳನ್ನು ಪಟ್ಟಿ ಮಾಡುವರು.<br>6. ಬ್ರಿಟೀಷ್ ಆಳ್ವಿಕೆಯು ಸಮಾಜದ ಮೇಲೆ ಬೀರಿದ ಪರಿಣಾಮಗಳನ್ನು ವಿಶ್ಲೇಷಿಸುವರು. | ಅಧ್ಯಾಯ-**6.** ಬ್ರಿಟೀಷ್ ಆಳ್ವಿಕೆಯ ಪರಿಣಾಮಗಳು |

| | | | |
|---|---|---|---|
| **CG-3:** ವಿವಿಧ ಸಾಮಾಜಿಕ ಹಾಗೂ ಐತಿಹಾಸಿಕ ಘಟನೆಗಳ ಕಾರಣಗಳು ಮತ್ತು ಪರಿಣಾಮಗಳ ನಡುವಿನ ಸಂಬಂಧವನ್ನು ಗುರುತಿಸಿ, ಅವು ಮಾನವ ಜೀವನದ ಮೇಲೆ ಬೀರಿದ ಸಮಗ್ರ ಪರಿಣಾಮವನ್ನು ಅರ್ಥಮಾಡಿಕೊಳ್ಳುವರು. | **C-3.1:** ಅಲೆಮಾರಿ ಜೀವನದಿಂದ ನೆಲೆಸುವಿಕೆ ಹಾಗೂ ಆರಂಭಿಕ ನಾಗರಿಕತೆಯವರೆಗೆ ಮಾನವ ಸಮಾಜದಲ್ಲಿ ಸಂಭವಿಸಿದ ಬದಲಾವಣೆಗಳ ಪರಿಣಾಮಗಳನ್ನು ವಿಶ್ಲೇಷಿಸುವರು. ಉದಾಹರಣೆಗೆ ಕೃಷಿಯ ಉದ್ಭವ, ಆಹಾರ ಪದ್ಧತಿಯ ಬದಲಾವಣೆ, ನಿರ್ಮಾಣ, ಸಾರಿಗೆ, ಕುಂಬಾರಿಕೆ ಹಾಗೂ ಲೋಹಶಾಸ್ತ್ರದಂತಹ ಮೂಲ ತಂತ್ರಜ್ಞಾನಗಳ ಬೆಳವಣಿಗೆಗಳ ಕಾರಣ-ಪರಿಣಾಮವನ್ನು ವಿಶ್ಲೇಷಿಸುವರು. ಹಾಗೆಯೇ ವಾಸಸ್ಥಳ, ಕುಟುಂಬ ರಚನೆ, ಸಂಬಂಧಗಳು, ಕೆಲಸದ ಸ್ವರೂಪ ಹಾಗೂ ಕಾಲಕ್ರಮೇಣ ಸಾಮಾಜಿಕ-ಸಾಂಸ್ಕೃತಿಕ ನಂಬಿಕೆಗಳು ಮತ್ತು ಪರಿಕಲ್ಪನೆಗಳಲ್ಲಿ ಉಂಟಾದ ಬದಲಾವಣೆಗಳು ಮಾನವ ಸಮಾಜದ ಮೇಲೆ ಬೀರಿದ ಪರಿಣಾಮಗಳನ್ನು ವಿಶ್ಲೇಷಿಸುವರು. (ಉದಾ: ಅಹಿಂಸೆ ಹಾಗೂ ಪ್ರಮುಖ ಯುದ್ಧಗಳು ಅಥವಾ ಆಕ್ರಮಣಗಳ ಪರಿಣಾಮಗಳು) | 7. ಸಾಮಾಜಿಕ ಅನಿಷ್ಟ ಪದ್ಧತಿಗಳಿಗೆ ನಿವಾರಣೆಗೆ ಸುಧಾರಣಾ ಚಳುವಳಿಗಳ ಕೊಡುಗೆಯನ್ನು ವಿವರಿಸುವರು.<br>8. ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಮಹತ್ವವನ್ನು ಅರಿಯುವರು. | ಅಧ್ಯಾಯ **– 15** ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು |
| | **C-3.2:** ತಮ್ಮ ಪ್ರದೇಶ ಹಾಗೂ ವಿಶ್ವದ ಇತರ ಭಾಗಗಳಲ್ಲಿನ ವಿವಿಧ ಸಾಮಾಜಿಕ ಗುಂಪುಗಳು ಮತ್ತು ಸಮುದಾಯಗಳ ನಡುವೆ ಸಾಮರಸ್ಯ ಹಾಗೂ ಸಂಘರ್ಷ | 9. ಯುರೋಪಿಯನ್ನರ ಆಗಮನ, ಅವರು ಇಲ್ಲಿ ನೆಲೆಸಲು ಕಾರಣಗಳನ್ನು ವಿಮರ್ಶಿಸುವರು. | ಅಧ್ಯಾಯ-**3** ಭಾರತಕ್ಕೆ ಐರೋಪ್ಯರ ಆಗಮನ |

| | | | |
|---|---|---|---|
| | ಉಂಟಾಗಲು ಕಾರಣಗಳನ್ನು ಗುರುತಿಸಿ, ಸಮಾಜದ ಮೇಲೆ ಅವುಗಳ ಪರಿಣಾಮಗಳನ್ನು ವಿಶ್ಲೇಷಿಸುವರು. | 10. ಮೊಗಲ ಸಾಮ್ರಾಜ್ಯದ ಅವನತಿ, ಮರಾಠರ ರಾಜಕೀಯ ಪ್ರಾಬಲ್ಯದ ಬೆಳವಣಿಗೆಯ ಕುರಿತು ವಿವರಿಸುವರು.<br>11. ಬ್ರಿಟೀಷ್ ಸಾಮ್ರಾಜ್ಯ ಸ್ಥಾಪನೆ ಮತ್ತು ವಿಸ್ತರಣೆಗೆ ಯುದ್ಧ ತಂತ್ರ, ಅವರ ನೀತಿಗಳು ಮತ್ತು ಸಹಾಯಕ ಅಂಶಗಳನ್ನು ವಿಶ್ಲೇಷಿಸುವರು. | ಅಧ್ಯಾಯ-**4** ಹದಿನೆಂಟನೆಯ ಶತಮಾನದ ಭಾರತ<br>ಅಧ್ಯಾಯ-**5** ಬ್ರಿಟೀಷ್ ಪ್ರಾಬಲ್ಯದ ಬೆಳವಣಿಗೆ |
| | | 12. ಮೈಸೂರು ಒಡೆಯರು, ಹೈದರಲಿ, ಟಿಪ್ಪು ಸುಲ್ತಾನ್, ದೇಶದ ವಿವಿಧ ಸಂಸ್ಥಾನಗಳ ಆಡಳಿತ, ವೈಶಿಷ್ಟ್ಯ ಮತ್ತು ಹೋರಾಟಗಳನ್ನು ಪ್ರಶಂಸಿಸುವರು | ಅಧ್ಯಾಯ-**7** ಮೈಸೂರು ಮತ್ತು ಇತರ ಸಂಸ್ಥಾನಗಳ |
| **CG-4:** ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸಂಸ್ಥೆಗಳ ಕಾರ್ಯವೈಖರಿ, ಅವುಗಳಿಂದ ಸಮಾಜದ ಮೇಲಿನ ಪ್ರಭಾವ ಮತ್ತು ವ್ಯಕ್ತಿಗಳು ಹಾಗೂ ಸಮೂಹಗಳು ಈ ಸಂಸ್ಥೆಗಳನ್ನು ರೂಪಿಸುವಲ್ಲಿ ವಹಿಸುವ | **C-4.1:** ತಮ್ಮ ಸುತ್ತಮುತ್ತಲಿನ ಪ್ರದೇಶ ಹಾಗೂ ವಲಯದಲ್ಲಿರುವ ವಿವಿಧ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಸಂಸ್ಥೆಗಳ ಕುರಿತು ಮಾಹಿತಿಯನ್ನು ಸಂಗ್ರಹಿಸಿ, ಸಂಘಟಿಸಿ, ಅರ್ಥೈಸಿ, ಸಮಾಜದಲ್ಲಿ ಅವುಗಳ ಮಹತ್ವವನ್ನು ತಿಳಿದುಕೊಳ್ಳುವರು. | 13. **1857**ರ ಸಂಗ್ರಾಮ, ಸ್ವಾತಂತ್ರ್ಯ ಚಳುವಳಿಗೆ ಕಾರಣಗಳನ್ನು ಗುರುತಿಸಿ, ಸ್ವಾತಂತ್ರ್ಯಕ್ಕಾಗಿ ಆದ ತ್ಯಾಗಗಳನ್ನು ಪ್ರಶಂಸಿಸುವರು<br>14. ಸ್ವಾತಂತ್ರ್ಯದಲ್ಲಿ ಮಹಿಳೆಯರ ಪಾತ್ರವನ್ನು ಪ್ರಶಂಸಿಸುವರು<br>15. ಮಂದಗಾಮಿ**,** ತೀವ್ರಗಾಮಿ ಮತ್ತು ಕ್ರಾಂತಿಕಾರಿಗಳ ಆಲೋಚನೆಗಳನ್ನು ಹೋಲಿಸುವರು. | ಅಧ್ಯಾಯ **16 –** ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ **(**ಸಾ.ಶ **1857-58)**<br>ಅಧ್ಯಾಯ **– 17** ಸ್ವಾತಂತ್ರ್ಯ ಚಳವಳಿ **(**ಸಾ.ಶ **1885-1919)** |

| | | | |
|---|---|---|---|
| ಪಾತ್ರವನ್ನು ಅರ್ಥಮಾಡಿಕೊಳ್ಳುವರು. | **C-4.2:** ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸಂಸ್ಥೆಗಳು ವ್ಯಕ್ತಿ, ಗುಂಪು, ಸಮುದಾಯ ಹಾಗೂ ಸಮಾಜದ ಮೇಲೆ ಬೀರುವ ಪ್ರಭಾವವನ್ನು ಮೌಲ್ಯಮಾಪನ ಮಾಡುವರು. | 16. ಕರ್ನಾಟಕದ ಏಕೀಕರಣದ ಹಾದಿ, ಗಡಿ ವಿವಾದಗಳು, ಸಮಾಜ ಮುಖಿ ಚಳುವಳಿಗಳು, ವಿವಿಧ ಸುಧಾರಣೆಗಳು ಮತ್ತು ಸಬಲೀಕರಣದ ಕ್ರಮಗಳನ್ನು ವಿವರಿಸುವರು. | ಅಧ್ಯಾಯ **-18** ಕರ್ನಾಟಕದ ಏಕೀಕರಣ ಮತ್ತು ಗಡಿ ವಿವಾದಗಳು ಅಧ್ಯಾಯ **-19** ಕರ್ನಾಟಕದ ಸಮಾಜ ಮುಖಿ ಚಳವಳಿಗಳು ಅಧ್ಯಾಯ **-20** ಕರ್ನಾಟಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ |
| **CG-5:** ಕುಟುಂಬದಿಂದ ಸಮುದಾಯ, ಪ್ರಾದೇಶಿಕ, ರಾಷ್ಟ್ರೀಯ ಮಟ್ಟದವರೆಗೆ ಸಮಾಜದಲ್ಲಿ ಕಂಡುಬರುವ ವಿವಿಧ ರೀತಿಯ ಅಸಮಾನತೆಗಳು ಹಾಗೂ ಪೂರ್ವಾಗ್ರಹಗಳನ್ನು ಅರ್ಥಮಾಡಿಕೊಳ್ಳುವರು, ಅವುಗಳನ್ನು ನಿವಾರಿಸಲು ವಿವಿಧ ಹಂತಗಳಲ್ಲಿ ಕೈಗೊಳ್ಳಲಾಗುತ್ತಿರುವ ಪ್ರಯತ್ನಗಳನ್ನು ಗುರುತಿಸುವರು. | **C-5.1:** ತಮ್ಮ ಕುಟುಂಬ, ಸ್ಥಳೀಯ ಪ್ರದೇಶ, ವಲಯ, ರಾಜ್ಯ, ರಾಷ್ಟ್ರ ಹಾಗೂ ಜಾಗತಿಕ ಮಟ್ಟದಲ್ಲಿ ಕಂಡುಬರುವ ವಿವಿಧ ರೀತಿಯ ಅಸಮಾನತೆ, ಪೂರ್ವಾಗ್ರಹ ಹಾಗೂ ತಾರತಮ್ಯಗಳನ್ನು ಗುರುತಿಸಿ, ವಿವರಿಸಿ, ಅವುಗಳ ಕುರಿತು ಪ್ರಶ್ನಿಸುವರು. | | |
| | **C-5.2:** ಸಮಾನತೆ, ಒಳಗೊಳ್ಳುವಿಕೆ ಹಾಗೂ ನ್ಯಾಯವನ್ನು ಖಚಿತಪಡಿಸಲು ವಿವಿಧ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳು ಹಾಗೂ ಸಂಸ್ಥೆಗಳ ಮೂಲಕ ವಿವಿಧ ಹಂತಗಳಲ್ಲಿ ನಡೆಯುತ್ತಿರುವ ಪ್ರಯತ್ನಗಳನ್ನು ಗುರುತಿಸಿ, ವಿವರಿಸಿ, ಪ್ರಶಂಶಿಸುವರು ಹಾಗೂ ಈ ನಿಟ್ಟಿನಲ್ಲಿ ವ್ಯಕ್ತಿಗಳು ವಹಿಸಬಹುದಾದ ಪಾತ್ರವನ್ನು ಅರ್ಥೈಸಿಕೊಳ್ಳುವರು. | | |

| | | | |
|---|---|---|---|
| **CG-6:** ಸ್ಥಳೀಯದಿಂದ ಜಾಗತಿಕತೆಯವರೆಗೆ ಸಂಪನ್ಮೂಲಗಳ ಹಂಚಿಕೆ, ಅವುಗಳ ಸಂರಕ್ಷಣೆ, ನೈಸರ್ಗಿಕ ವಿದ್ಯಮಾನಗಳು ಮತ್ತು ಮಾನವ ಜೀವನದ ಪರಸ್ಪರ ಅವಲಂಬನೆ, ಅವುಗಳ ಪರಿಸರ ಮತ್ತು ಇತರ ನಿಹಿತಾರ್ಥಗಳನ್ನು ಅರ್ಥಮಾಡಿಕೊಳ್ಳುವರು. | **C-6.1:** ಹವಾಮಾನ, ವಾತಾವರಣ, ಸಾಗರ ಚಕ್ರಗಳು, ಮಣ್ಣಿನ ರಚನೆ, ನದಿಗಳ ಹರಿವು ಮುಂತಾದ ಪ್ರಮುಖ ನೈಸರ್ಗಿಕ ವಿದ್ಯಮಾನಗಳನ್ನು ಹಾಗೂ ಅವುಗಳ ಸ್ಥಳೀಯ ಹಂಚಿಕೆಯನ್ನು ವಿವರಿಸುವರು. | 17. ಕರ್ನಾಟಕದ ಭೌಗೋಳಿಕತೆ ಮತ್ತು ಭಾರತದ ಒಟ್ಟು ಭೌಗೋಳಿಕತೆಯ ನಡುವಿನ ಸಂಬಂಧವನ್ನು ಅರ್ಥೈಸಿಕೊಂಡು ತುಲನಾತ್ಮಕವಾಗಿ ವಿಶ್ಲೇಷಿಸುವರು<br>18. ನಕ್ಷೆಯಲ್ಲಿ ಪ್ರಾಕೃತಿಕ ವಿಭಾಗಗಳು, ಮರಭೂಮಿ ಮತ್ತು ದ್ವೀಪಗಳನ್ನು ನಿಖರವಾಗಿ ಗುರುತಿಸುವ ಹಚ್ಚುವ ಕೌಶಲ ಹೊಂದುವರು | ಅಧ್ಯಾಯ 12 ಭಾರತದ ಪ್ರಾಕೃತಿಕ ವಿಭಾಗಗಳು |
| | **C-6.2:** ನೀರು, ಕೃಷಿ, ಕಚ್ಚಾ ವಸ್ತುಗಳು ಹಾಗೂ ಸೇವೆಗಳಂತಹ ಸಂಪನ್ಮೂಲಗಳ ಭೌಗೋಳಿಕ ಹಂಚಿಕೆಯನ್ನು ಗುರುತಿಸುವರು. | | |
| | **C-6.3:** ಪ್ರಕೃತಿ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಯ ಕುರಿತು ಭಾರತದ ದೃಷ್ಟಿಕೋನ ಹಾಗೂ ಕೈಗೊಂಡಿರುವ ಪ್ರಯತ್ನಗಳನ್ನು ವಿಶ್ಲೇಷಿಸಿ, ಅವುಗಳ ಮಹತ್ವವನ್ನು ಪ್ರತಿಪಾದಿಸುವರು ಹಾಗೂ ಜಾಗತಿಕ ಹವಾಮಾನ ಬದಲಾವಣೆಯ ಸಂದರ್ಭದಲ್ಲಿ ಇನ್ನೂ ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸುವರು. | 19. ವಿಜ್ಞಾನದಿಂದ ತಂತ್ರಜ್ಞಾನ, ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿ ವಿವರಿಸುವರು ಮತ್ತು ಸುಸ್ಥಿರತೆಯ ಅಗತ್ಯತೆಯನ್ನು ಸಮರ್ಥಿಸುವರು | ಅಧ್ಯಾಯ **-21** ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆ |
| | **C-6.4:** ವಿವಿಧ ಭೂ ಸ್ವರೂಪಗಳು, ಸಂಪನ್ಮೂಲಗಳ ಲಭ್ಯತೆ ಹಾಗೂ ಹವಾಮಾನ ಪರಿಸ್ಥಿತಿಗಳೊಂದಿಗೆ ವಿವಿಧ | 20. ಉತ್ತರ ಮತ್ತು ದಕ್ಷಿಣ ಅಮೇರಿಕ ಖಂಡದ ಪ್ರಾಕೃತಿಕ ವಿಭಾಗಗಳು, ಹವಾಮಾನ ಮತ್ತು ನೈಸರ್ಗಿಕ ಸಸ್ಯ | ಅಧ್ಯಾಯ 13 ಉತ್ತರ ಅಮೇರಿಕಾ ಖಂಡ |

| | | | |
|---|---|---|---|
| | ಜೀವನೋಪಾಯಗಳ ಮಾದರಿಗಳನ್ನು (ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಜಾಗತಿಕ) ಸಂಬಂಧಗಳನ್ನು ಹೋಲಿಸಿ, ವ್ಯತ್ಯಾಸೀಕರಿಸುವರು. | ವರ್ಗಗಳು, ಜೀವಿಗಳ ನಡುವಿನ ಪರಸ್ಪರ ಸಂಬಂಧವನ್ನು ಗುರುತಿಸಿ ವಿವರಿಸುವರು<br>21. ಭೂಪಟದಲ್ಲಿ ಉತ್ತರ & ದಕ್ಷಿಣ ಅಮೇರಿಕದ ಪರ್ವತಗಳು, ನದಿಗಳು, ಸರೋವರಗಳು ಮತ್ತು ಪ್ರಮುಖ ನಗರಗಳನ್ನು ಗುರುತಿಸುವ ಕೌಶಲ ಹೊಂದುವರು | ಅಧ್ಯಾಯ -14 ದಕ್ಷಿಣ ಅಮೇರಿಕಾ ಖಂಡ<br>(C 6.2 also has the relevance) |
| | | 22. ಆಸ್ಟ್ರೇಲಿಯಾ, ಅಂಟಾರ್ಟಿಕಾ ಖಂಡಗಳ ಮೇಲ್ಮೈ ಲಕ್ಷಣಗಳು, ವಿಶಿಷ್ಟ ವಾಯುಗುಣ, ಸಸ್ಯ ಮತ್ತು ಪ್ರಾಣಿ ವರ್ಗಗಳ ನಡುವಿನ ಅಂತರ್ ಸಂಬಂಧವನ್ನು ವಿಶ್ಲೇಷಿಸುವರು<br>23. ಭೌಗೋಳಿಕ ಸ್ಥಾನ ಮತ್ತು ಸನ್ನಿವೇಶವನ್ನು ನಕ್ಷೆಯ ಮೂಲಕ ಗುರುತಿಸುವರು.<br>24. 'ಅಂಟಾರ್ಟಿಕಾ ಒಪ್ಪಂದ'ದ ಪ್ರಾಮುಖ್ಯತೆ ಮತ್ತು ಅಲ್ಲಿನ ಭಾರತದ ಸಂಶೋಧನಾ ಕೇಂದ್ರಗಳ ಕಾರ್ಯಗಳನ್ನು ಅರ್ಥೈಸುವರು | ಅಧ್ಯಾಯ- 26 ಆಸ್ಟ್ರೇಲಿಯಾ ಖಂಡ<br>ಅಧ್ಯಾಯ-27 ಅಂಟಾರ್ಟಿಕಾ ಖಂಡ<br>(C 6.2 also has the relevance) |

| | | | |
|---|---|---|---|
| **CG-7:** ಈ ಕೆಳಗಿನ ಮಹತ್ವತೆಗಳನ್ನು ಅರ್ಥೈಸಿಕೊಂಡು ಭಾರತೀಯರಾಗಿರುವುದಕ್ಕೆ ಹೆಮ್ಮೆ ಹೊಂದುವರು. **(ಅ)** ಭಾರತದ ಸಮೃದ್ಧ ಭೂತಕಾಲ ಮತ್ತು ವರ್ತಮಾನವನ್ನು ಅರ್ಥಮಾಡಿಕೊಳ್ಳುವುದರ ಮೂಲಕ, ಅದರ ವೈವಿಧ್ಯತೆಯಲ್ಲಿನ ಏಕತೆ, ಬಹುತ್ವ, ಸಾಂಸ್ಕೃತಿಕ ಪರಂಪರೆ, | **C-7.1:** ಭಾಷೆಗಳು, ಕಲೆ, ತತ್ತ್ವಶಾಸ್ತ್ರ, ಮೌಲ್ಯಗಳು, ಉಡುಪು, ಆಹಾರ ಪದ್ಧತಿ, ಸಂಪ್ರದಾಯಗಳು, ಹಬ್ಬಗಳು, ವ್ಯಾಪಾರ, ವಾಣಿಜ್ಯ ಹಾಗೂ ಆಯುರ್ವೇದ ಮತ್ತು ಯೋಗ ಸೇರಿದಂತೆ ಆರೋಗ್ಯ ಪರಂಪರೆಗಳಲ್ಲಿನ ಸಾಮಾನ್ಯ ಅಂಶಗಳನ್ನು ಗುರುತಿಸುವ ಮೂಲಕ ಭಾರತದ ವೈವಿಧ್ಯತೆಯಲ್ಲಿನ ಏಕತೆಯನ್ನು ವಿವರಿಸುವರು. | | |

| | | | |
|---|---|---|---|
| ಸಂಪ್ರದಾಯಗಳು, ಸಾಹಿತ್ಯ, ಕಲೆ, ವಾಸ್ತುಶಿಲ್ಪ, ತತ್ತ್ವಶಾಸ್ತ್ರ, ವೈದ್ಯಕೀಯ, ವಿಜ್ಞಾನ ಹಾಗೂ ಮಾನವಕುಲಕ್ಕೆ ಭಾರತ ನೀಡಿರುವ ಇತರ ಮಹತ್ವದ ಕೊಡುಗೆಗಳ ಬಗ್ಗೆ ಅರಿವು ಬೆಳೆಸಿಕೊಳ್ಳುವರು.<br>**(ಆ)** ಭಾರತದ ಭೌಗೋಳಿಕ ವೈವಿಧ್ಯತೆಯ ನಡುವೆಯೂ ದೇಶವನ್ನು ಒಗ್ಗೂಡಿಸುವ ವಿವಿಧ ಏಕೀಕರಣ ಅಂಶಗಳನ್ನು ಅರ್ಥೈಸಿಕೊಂಡು ರ್ಥಮಾಡಿಕೊಂಡು ಅವುಗಳ ಮಹತ್ವವನ್ನು ಪ್ರಶಂಸಿಸುವರು. | **C-7.2:** ಪಶ್ಚಿಮದ ಅರೆಶುಷ್ಕ ಪ್ರದೇಶಗಳಿಂದ ಈಶಾನ್ಯದ ಅಧಿಕ ಮಳೆಯ ಪ್ರದೇಶಗಳವರೆಗೆ, ದಕ್ಷಿಣದ ದೀರ್ಘ ಕರಾವಳಿ ಪ್ರದೇಶಗಳಿಂದ ಉತ್ತರದ ಹಿಮಾಚ್ಛಾದಿತ ಪರ್ವತಗಳವರೆಗೆ ಹರಡಿರುವ ಭಾರತದ ಭೌಗೋಳಿಕ ವೈವಿಧ್ಯತೆ ಹಾಗೂ ಸಮೃದ್ಧ ಜೀವವೈವಿಧ್ಯತೆಯನ್ನು ಅನ್ವೇಷಿಸುವರು. | 25. ಕರ್ನಾಟಕದ ಭೌಗೋಳಿಕತೆ ಮತ್ತು ಭಾರತದ ಒಟ್ಟು ಭೌಗೋಳಿಕತೆಯ ನಡುವಿನ ಸಂಬಂಧವನ್ನು ಅರ್ಥೈಸಿಕೊಂಡು ತುಲನಾತ್ಮಕವಾಗಿ ವಿಶ್ಲೇಷಿಸುವರು<br>26. ನಕ್ಷೆಯಲ್ಲಿ ಪ್ರಾಕೃತಿಕ ವಿಭಾಗಗಳು, ಮರಭೂಮಿ ಮತ್ತು ದ್ವೀಪಗಳನ್ನು ನಿಖರವಾಗಿ ಗುರುತಿಸುವ ಹಚ್ಚುವ ಕೌಶಲ ಹೊಂದುವರು | ಅಧ್ಯಾಯ 12 ಭಾರತದ ಪ್ರಾಕೃತಿಕ ವಿಭಾಗಗಳು |
| | **C-7.3:** ವಿವಿಧ ಸಮುದಾಯಗಳು ಹಾಗೂ ಸಾಮಾಜಿಕ ಗುಂಪುಗಳನ್ನು ಒಳಗೊಳ್ಳುವ ಭಾರತದ ಪರಂಪರೆಯನ್ನು ಮೆಚ್ಚಿ, ಅದರ ಸಾಂಸ್ಕೃತಿಕ ಪ್ರಭಾವವು ವಿಶ್ವದ ಅನೇಕ | | |

| | | | |
|---|---|---|---|
| | ಭಾಗಗಳಿಗೆ ವ್ಯಾಪಿಸಿರುವುದನ್ನು ಅರ್ಥಮಾಡಿಕೊಳ್ಳುವರು. | | |
| **CG-8:** ಭಾರತದ ಸಂವಿಧಾನದ ರಚನಾ ಪ್ರಕ್ರಿಯೆಯನ್ನು ಅರ್ಥಮಾಡಿಕೊಂಡು, ಭಾರತೀಯ ಸಮಾಜದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬಲಪಡಿಸುವಲ್ಲಿ ಅದರ ಮಹತ್ವವನ್ನು ಗೌರವಿಸುವರು. | **C-8.1:** ಕಳೆದ ಕೆಲವು ಶತಮಾನಗಳಲ್ಲಿ ಯಾವುದೇ ರಾಷ್ಟ್ರಕ್ಕೆ, ವಿಶೇಷವಾಗಿ ಭಾರತದಂತಹ ವೈವಿಧ್ಯಮಯ ರಾಷ್ಟ್ರಕ್ಕೆ ಸಂವಿಧಾನದ ಅಗತ್ಯತೆ ಮತ್ತು ಅದರ ಮೂಲ ಉದ್ದೇಶಗಳನ್ನು ಅರ್ಥಮಾಡಿಕೊಳ್ಳುವರು. | | |
| | **C-8.2:** ಭಾರತದ ಸಂವಿಧಾನ ರಚನೆಯ ಪ್ರಕ್ರಿಯೆಯನ್ನು ವಿವರಿಸಿ, ಅದರಲ್ಲಿ ಅಡಕವಾಗಿರುವ ಭಾರತೀಯ ರಾಷ್ಟ್ರೀಯ ಚಳವಳಿಯ ಆದರ್ಶಗಳು ಹಾಗೂ ಭಾರತದ ನಾಗರಿಕತೆಯ ಪರಂಪರೆಯಿಂದ ಪಡೆದ ಮೌಲ್ಯಗಳನ್ನು ಅರ್ಥಮಾಡಿಕೊಳ್ಳುವರು. | | |
| | **C-8.3:** ಸ್ಥಳೀಯ ಸ್ವ-ಆಡಳಿತದ ಮೂರು ಸ್ತರಗಳ ವ್ಯವಸ್ಥೆಯ ಕಾರ್ಯವೈಖರಿಯನ್ನು ವಿವರಿಸಿ, ತಳಮಟ್ಟದಲ್ಲಿ ಪ್ರಜಾಪ್ರಭುತ್ವವನ್ನು ಬಲಪಡಿಸುವರು ಮತ್ತು ಅದರ ಮಹತ್ವವನ್ನು ಪ್ರಶಂಸಿಸುವರು. | 27. ಕೇಂದ್ರ ಮತ್ತು ರಾಜ್ಯಗಳ ಶಾಸಕಾಂಗ (ಲೋಕ ಸಭೆ, ರಾಜ್ಯ ಸಭೆ, ವಿಧಾನ ಸಭೆ, ವಿಧಾನ ಪರಿಷತ್), ಕಾರ್ಯಾಂಗ ಮತ್ತು ನ್ಯಾಯಾಂಗದ ಅರ್ಥ, ರಚನೆ ಮತ್ತು ಮಹತ್ವವನ್ನು ಅರಿತು ಅವುಗಳ ಕಾರ್ಯಗಳನ್ನು ಪ್ರಶಂಶಿಸುವರು & ವಿಮರ್ಶಿಸುವರು. | ಅಧ್ಯಾಯ -9 ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಪರಭಾಷೆಗಳ ಪರಿಚಯ<br>ಅಧ್ಯಾಯ -10 ಕೇಂದ್ರ ಸರ್ಕಾರ<br>ಅಧ್ಯಾಯ – 11 ರಾಜ್ಯ ಸರ್ಕಾರ |

| | | | |
|---|---|---|---|
| | | 28. ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗಳ ಅಧಿಕಾರ ಮತ್ತು ಕಾರ್ಯ, ರಾಜ್ಯದಲ್ಲಿ ರಾಜ್ಯಪಾಲರು & ಮುಖ್ಯಮಂತ್ರಿಗಳ ಕಾರ್ಯ, ಸ್ಥಳೀಯ ಜನಪ್ರತಿನಿಧಿಗಳ ಕಾರ್ಯಗಳನ್ನು ವಿವರಿಸುವರು | |
| | | 29. ನ್ಯಾಯಾಂಗದ ರಚನೆ, ಕಾರ್ಯ ಹಾಗೂ ಮಹತ್ವವನ್ನು ಪ್ರಶಂಸಿಸುವರು.<br>30. ಭಾರತದ ರಕ್ಷಣಾ ಪಡೆಗಳ ಕಾರ್ಯ ಹಾಗೂ ಪ್ರಾಮುಖ್ಯತೆಯನ್ನು ವರ್ಣಿಸಿ ಪ್ರಶಂಸಿಸುವರು | ಅಧ್ಯಾಯ -22 ನ್ಯಾಯಾಂಗ<br>ಅಧ್ಯಾಯ -23 ರಕ್ಷಣಾ ಪಡೆಗಳು |
| **CG-9:** ಉತ್ಪಾದನೆ, ಬಳಕೆ, ವ್ಯಾಪಾರ ಹಾಗೂ ವಾಣಿಜ್ಯ ಸೇರಿದಂತೆ ಆರ್ಥಿಕ ಚಟುವಟಿಕೆಗಳ ಪ್ರಕ್ರಿಯೆಗಳನ್ನು ಅರ್ಥೈಸಿಕೊಳ್ಳುವರು. | **C-9.1:** ಸರಕು, ಉತ್ಪಾದನೆ, ಬಳಕೆ, ಬಂಡವಾಳ, ವ್ಯಾಪಾರ ಹಾಗೂ ವಾಣಿಜ್ಯದ ಪ್ರಮುಖ ಅಂಶಗಳನ್ನು ವಿವರಿಸಿ, ಅವು ವ್ಯಕ್ತಿ ಹಾಗೂ ಸಮಾಜದ ಮೇಲೆ ಬೀರುವ ಪರಿಣಾಮವನ್ನು ವಿಶ್ಲೇಷಿಸುವರು. | 31. ವಿಜ್ಞಾನದಿಂದ ತಂತ್ರಜ್ಞಾನ, ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿ ವಿವರಿಸುವರು ಮತ್ತು ಸುಸ್ಥಿರತೆಯ ಅಗತ್ಯತೆಯನ್ನು ಸಮರ್ಥಿಸುವರು | ಅಧ್ಯಾಯ **-21** ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆ |
| **CG-10:** ಇತಿಹಾಸದಿಂದ ಇಂದಿನವರೆಗೂ ಸಮಾಜ ವಿಜ್ಞಾನ ಹಾಗೂ ಅದರ ವಿವಿಧ ಶಾಖೆಗಳಿಗೆ ಭಾರತ ನೀಡಿರುವ | **C-10.1:** ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಒಳಗೊಂಡಿರುವ ವಿವಿಧ ಪರಿಕಲ್ಪನೆಗಳು, ವಿವರಣೆಗಳು ಹಾಗೂ ವಿಧಾನಗಳಿಗೆ ಭಾರತ ನೀಡಿರುವ ಮಹತ್ವದ ಕೊಡುಗೆಗಳನ್ನು ಸಮಗ್ರವಾಗಿ | 32. ನೆರೆದೇಶಗಳೊಂದಿಗೆ ಭಾರತ ಹೊಂದಿರುವ ರಾಜತಾಂತ್ರಿಕ ಸಂಬಂಧ, ಶಾಂತಿ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಹಕಾರದ ವಿಷಯಗಳನ್ನು ಅರ್ಥೈಸುವರು | ಅಧ್ಯಾಯ – 24 ಭಾರತ ಮತ್ತು ನೆರೆದೇಶಗಳು |

| | | | |
|---|---|---|---|
| ಕೊಡುಗೆಗಳನ್ನು ಅರ್ಥಮಾಡಿಕೊಂಡು ಪ್ರಶಂಸಿಸುವರು. | ವಿವರಿಸುವರು. ಉದಾ: ಭಾರತದ ಐತಿಹಾಸಿಕ, ಪ್ರಜಾಸತ್ತಾತ್ಮಕ ಸಂಪ್ರದಾಯಗಳ ಮಹತ್ವದ ಅರ್ಥ. | 33. ವಿಶ್ವಸಂಸ್ಥೆಯ ಮಹತ್ವ, ಆದರ್ಶಗಳು ಹಾಗೂ ಅದರ ಅಂಗಸಂಸ್ಥೆಗಳ ಕಾರ್ಯವಿಧಾನಗಳನ್ನು ಅಭಿವ್ಯಕ್ತಿಸುವರು. ಜಾಗತಿಕ ಶಾಂತಿ ಸ್ಥಾಪನೆಯಲ್ಲಿ ಭಾರತವು ನಿರ್ವಹಿಸಿದ ಪಾತ್ರವನ್ನು ಪ್ರಶಂಸಿಸುವರು. | ಅಧ್ಯಾಯ -25 ವಿಶ್ವಸಂಸ್ಥೆ |
| **CG-11:** CG-1 ರಿಂದ CG-10 ರವರೆಗೆ ಇರುವ ಪಠ್ಯಕ್ರಮ ಗುರಿಗಳ ಮೂಲಕ ಸ್ಥಳೀಯ, ಪ್ರದೇಶ, ರಾಜ್ಯ ಹಾಗೂ ದೇಶದ ಇತಿಹಾಸ, ಭೂಗೋಳ ಮತ್ತು ಸಂಸ್ಕೃತಿಯ ಕುರಿತು ಮೂಲಭೂತ ಹಾಗೂ ಸಮರ್ಪಕ ಅರಿವನ್ನು ಬೆಳೆಸಿಕೊಳ್ಳುವರು. | ಸೂಚನೆ: ಈ ಪಠ್ಯಕ್ರಮ ಗುರಿಗೆ ಸಂಬಂಧಿಸಿದ ಸಾಮರ್ಥ್ಯಗಳು ಈಗಾಗಲೇ CG-1 ರಿಂದ CG-10 ರ ಅಡಿಯಲ್ಲಿ ಒಳಗೊಂಡಿವೆ. | | |
| 34. **CG1 ರ C 1.2, CG10 & CG11 ಇವು ಎಲ್ಲಾ ಕಲಿಕಾಂಶ (ಪಾಠ)ಗಳಲ್ಲೂ ಸಮ್ಮಿಳಿತವಾಗಿರುತ್ತವೆ** | | | |

# ಪರಿವಿಡಿ ಭಾಗ-1


| ಅ.ಸಂ | ಅಧ್ಯಾಯದ ಹೆಸರು | ಪುಟಗಳ ಸಂಖ್ಯೆ | |
|---|---|---|---|
| | | ಪ್ರಶ್ನೆಗಳು | ಉತ್ತರಗಳು |
| 1 | ಜಗತ್ತಿನ ಪ್ರಮುಖ ಘಟನೆಗಳು | 1-5 | 176-182 |
| 1 | ಮಧ್ಯಯುಗದ ಯುರೋಪ್ | 6-16 | 183-195 |
| 3 | ಭಾರತಕ್ಕೆ ಐರೋಪ್ಯರ ಆಗಮನ | 17-20 | 196-201 |
| 4 | ಹದಿನೆಂಟನೇ ಶತಮಾನದ ಭಾರತ (ಸಾ.ಶ. 1707-1757) | 21-26 | 202-205 |
| 5 | ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆ (ಸಾ.ಶ 1758-1856) | 27-32 | 206-211 |
| 6 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | 33-37 | 212-217 |
| 7 | ಮೈಸೂರು ಮತ್ತು ಇತರ ಸಂಸ್ಥಾನಗಳು | 38-55 | 218-232 |
| 8 | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ | 56-59 | 233-237 |
| 9 | ಶಾಸಕಾಂಗ , ಕಾರ್ಯಾಂಗ ಮತ್ತು ನ್ಯಾಯಾಂಗ ಪರಿಭ್ಲಾಷೆಗಳ ಪರಿಚಯ | 60-65 | 238-244 |
| 10 | ಕೇಂದ್ರ ಸರ್ಕಾರ | 66-69 | 245-249 |
| 11 | ರಾಜ್ಯ ಸರ್ಕಾರ | 70-73 | 250-253 |
| 12 | ಭಾರತದ ಪ್ರಾಕೃತಿಕ ವಿಭಾಗಗಳು | 74-82 | 254-256 |
| 13 | ಉತ್ತರ ಅಮೇರಿಕಾ ಖಂಡ | 83-91 | 257-261 |
| 14 | ದಕ್ಷಿಣ ಅಮೇರಿಕಾ ಖಂಡ | 92-99 | 262-265 |

# ಪರಿವಿಡಿ ಭಾಗ-2


| ಅ.ಸಂ | ಅಧ್ಯಾಯದ ಹೆಸರು | ಪುಟಗಳ ಸಂಖ್ಯೆ | |
|---|---|---|---|
| | | ಪ್ರಶ್ನೆಗಳು | ಉತ್ತರಗಳು |
| 15 | ಸಾಮಾಜಿಕ ಧಾರ್ಮಿಕ ಸುಧಾರಣೆ | 100-106 | 266-272 |
| 16 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857-1858) | 107-111 | 273-276 |
| 17 | ಸ್ವಾತಂತ್ರ್ಯ ಚಳವಳಿ | 112-127 | 277-287 |
| 18 | ಕರ್ನಾಟಕದ ಏಕೀಕರಣ ಮತ್ತು ಗಡಿ ವಿವಾದಗಳು | 128-132 | 288-291 |
| 19 | ಕರ್ನಾಟಕದ ಸಮಾಜಮುಖಿ ಚಳವಳಿಗಳು | 133-137 | 292-295 |
| 20 | ಕರ್ನಾಟಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ | 138-142 | 296-299 |
| 21 | ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆ | 143-147 | 300-304 |
| 22 | ನ್ಯಾಯಾಂಗ | 148-151 | 305-307 |
| 23 | ರಕ್ಷಣಾ ಪಡೆಗಳು | 152-156 | 308-310 |
| 24 | ಭಾರತ ಮತ್ತು ನೆರೆ ದೇಶಗಳು | 157-159 | 311-313 |
| 25 | ವಿಶ್ವಸಂಸ್ಥೆ | 160-163 | 314-317 |
| 26 | ಆಸ್ಟ್ರೇಲಿಯಾ | 164-169 | 318-318 |
| 27 | ಅಂಟಾರ್ಟಿಕಾ | 170-175 | 319-319 |

# ಇತಿಹಾಸ

| ಅಧ್ಯಾಯ – 1 | ಜಗತ್ತಿನ ಪ್ರಮುಖ ಘಟನೆಗಳು |
|---|---|

H9W4S5

| ಕ.ಫ.ಸಂ. | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 02 | ಪ್ರವಾದಿ ಮೊಹಮ್ಮದ್ ಮತ್ತು ಏಸು ಕ್ರಿಸ್ತರ ಬೋಧನೆಗಳು, ಭಕ್ತಿ ಪಂಥ, ದಾಸರು, ಸೂಫಿ ಸಂತರು ಹಾಗೂ ವಿವಿಧ ಮತಗಳಲ್ಲಿನ ಸಾಮಾನ್ಯ ಮೌಲ್ಯಗಳು ಮತ್ತು ತತ್ವಗಳನ್ನು ವಿಶ್ಲೇಷಿಸುವರು. | 1,2,7,8,9,10,11,12,13,14,16,17,18, 19,20,21,22,24,25,26,28,30,33,35,36, 44,45,46,47,48. |
| 03 | ಹೊರ ಸಾಮ್ರಾಜ್ಯದ ವಿಸ್ತರಣೆ, ಹೊರ ದೇಶದ (ಅರಬ್ ಸೇರಿದಂತೆ) ಸಾಹಿತ್ಯ, ವಿಜ್ಞಾನಗಳು ಭಾರತದ ಸಾಂಸ್ಕೃತಿಕ ಜೀವನದ ಮೇಲೆ ಬೀರಿದ ಪರಿಣಾಮಗಳನ್ನು ಉದಾಹರಣೆಗಳೊಂದಿಗೆ ವಿವರಿಸುವರು | 3,4,5,6,15,23,27,29,31,32,34,37, 38,39,40,41,42,43,49. |

| ಕ್ರಮ ಸಂಖ್ಯೆ | ಪ್ರಶ್ನೆಗಳ ವಿಧ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 10 |
| 2 | ಸಾಧಾರಣ | 31 |
| 3 | ಕಠಿಣ | 8 |
| **ಒಟ್ಟು** | **ಒಟ್ಟು ಪ್ರಶ್ನೆಗಳು** | **49** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಕ್ರೈಸ್ತ ಧರ್ಮದ ಪರಮ ಗುರುಗಳನ್ನು ಹೀಗೆಂದು ಕರೆಯುತ್ತಾರೆ. (ಸಾಧಾರಣ)

   A. ಖಲೀಫರು   B. ಪೋಪರು   C. ಮಹಮ್ಮದರು   D. ಪಾದ್ರಿಗಳು

2. ಮಹಮ್ಮದ್ ಪೈಗಂಬರರ ಸಂದೇಶಗಳನ್ನು ಈ ಗ್ರಂಥದಲ್ಲಿ ಸಂಗ್ರಹಿಸಲಾಗಿದೆ. (ಸುಲಭ)

   A. ಗುರು ಗ್ರಂಥ ಸಾಹೇಬ್ B. ಖುರಾನ್ C. ಬೈಬಲ್ D. ಭಗವದ್ಗೀತಾ

3. ಕಾಲಗತಿಯಲ್ಲಿ ಅವನತಿ ಕಂಡ ಕುಬ್ಲಾಯ್ ಖಾನ್ನ ಸಾಮ್ರಾಜ್ಯವನ್ನು ಮತ್ತೊಮ್ಮೆ ಕಟ್ಟಿದವರು. (ಸಾಧಾರಣ)

   A. ಬಾಬರ್ B. ತೈಮೂರ್ C. ಚಂಗಿಸ್ ಖಾನ್ D. ಮಾವೋತ್ಸೆ ತುಂಗ್

4. ಆಟೋಮನ್ ಎಂಬ ಮಿಲಿಟರಿ ರಾಜ್ಯವನ್ನು ಕಟ್ಟಿದವರು. (ಸಾಧಾರಣ)

   A. ಅರಬ್ಬರು B. ಪರ್ಷಿಯನ್ನರು C. ಗ್ರೀಕರು D. ಟರ್ಕರು

5. ಚಂಗಿಸ್ ಖಾನ್ನ ಮೊಮ್ಮಗನ ಹೆಸರು ಇದಾಗಿದೆ. (ಸಾಧಾರಣ)

   A. ಕುಬ್ಲಾಯ್ ಖಾನ್ B. ತೈಮೂರ್ C. ಬಾಬರ್ D. ಮಾವೋತ್ಸೆ ತುಂಗ್

6. ಈ ನಗರವು ಪ್ಯಾಲೆಸ್ತೇನಿನ ರಾಜಧಾನಿಯಾಗಿದೆ. (ಸುಲಭ)

   A. ಕಾಬುಲ್ B. ಜೆರೂಸಲಮ್ C. ಬಾಗ್ದಾದ್ D. ವ್ಯಾಟಿಕನ್ ಸಿಟಿ

7. ಜಗತ್ತಿನ ಪ್ರಮುಖ ಧರ್ಮಗಳಲ್ಲಿ ಒಂದಾದ ಕ್ರೈಸ್ತ ಧರ್ಮವನ್ನು ಸ್ಥಾಪಿಸಿದವರು. (ಸುಲಭ)

   A. ಏಸುಕ್ರಿಸ್ತ B. ವರ್ಧಮಾನ ಮಹಾವೀರ್ C. ಮಹಮ್ಮದ್ ಪೈಗಂಬರ್ D. ಗುರುನಾನಕ್

8. ಇಸ್ಲಾಂ ಧರ್ಮವನ್ನು ಸ್ಥಾಪಿಸಿದವರು. (ಸುಲಭ)

   A. ಏಸುಕ್ರಿಸ್ತ B. ಮಹಮ್ಮದ್ ಪೈಗಂಬರ್ C. ದಲೈಲಾಮಾ D. ಖಲೀಫರು

9. ಏಸುಕ್ರಿಸ್ತನ ಬೋಧನೆಗಳನ್ನು ಒಳಗೊಂಡ ಕ್ರೈಸ್ತ ಧರ್ಮದ ಪವಿತ್ರ ಗ್ರಂಥ ಇದಾಗಿದೆ. (ಸುಲಭ)

   A. ಭಗವದ್ಗೀತಾ B. ಕುರಾನ್ C. ಬೈಬಲ್ D. ಗ್ರಂಥ ಸಾಹೇಬ್

10. ಏಸುಕ್ರಿಸ್ತನ ತಾಯಿಯ ಹೆಸರು ___________. (ಸುಲಭ)

    A. ಮರ್ಲಿನ್ B. ಮೋಸಸ್ C. ಅಮೀನ D. ಮೇರಿ

**ಆ. ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರ**

11. ಬೆತ್ಲೆಹೆಂನಲ್ಲಿ ಜನಿಸಿದ ಕ್ರೈಸ್ತ ಧರ್ಮದ ಸ್ಥಾಪಕರು …………………… (ಸಾಧಾರಣ)

12. ಇಟಲಿಯ ರೋಮ್ ನಗರದಲ್ಲಿ ಇರುವ ಪ್ರಸಿದ್ಧ ಚರ್ಚ್ __________. (ಸಾಧಾರಣ)
13. ಪೈಗಂಬರ್ ಎಂದರೆ ದೇವರ __________ ವನ್ನು ಸಾರುವವರು. (ಸಾಧಾರಣ)
14. ಮಹಮ್ಮದರ ಉತ್ತರಾಧಿಕಾರಿಗಳನ್ನು __________ ಎನ್ನುವರು. (ಸಾಧಾರಣ)
15. ಇಟಲಿಯ __________ ನಗರವು ಕ್ರೈಸ್ತರ ಪ್ರಮುಖ ಧಾರ್ಮಿಕ ಕೇಂದ್ರವಾಗಿ ಬೆಳೆಯಿತು. (ಸಾಧಾರಣ)
16. ಪ್ರವಾದಿಯವರು ಮೆಕ್ಕಾದಿಂದ ಮದೀನಕ್ಕೆ ಹೋದ ವರ್ಷದಿಂದಲೇ ಮುಸಲ್ಮಾನರ _________ ಶಕೆ ಆರಂಭವಾಯಿತು. (ಸಾಧಾರಣ)
17. 'ಯೇಸು ರಾಜದ್ರೋಹಿ' ಎಂಬ ತಪ್ಪು ಹೊರಸಿ ಅವರನ್ನು _________ ಏರಿಸಿದರು. (ಸಾಧಾರಣ)
18. ಮಹಮ್ಮದ್ ಪೈಗಂಬರರು ಜನಿಸಿದ ಸ್ಥಳ _________. (ಸಾಧಾರಣ)

**ಇ. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗ್ರಹಿಸಿ ಮೂರನೇ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

19. ಕುರಾನ್ : ಇಸ್ಲಾಂ ಧರ್ಮ :: ಬೈಬಲ್ : _________. (ಸಾಧಾರಣ)
20. ಜೀಸಸ್ : ಏಸು :: ಕ್ರೈಸ್ತ : _________. (ಸಾಧಾರಣ)
21. ಮಹಮ್ಮದ್ ಪೈಗಂಬರ್ : ಅಮೀನಾ :: ಏಸುಕ್ರಿಸ್ತ : _________. (ಸಾಧಾರಣ)
22. ಮುಸ್ಲಿಂ : ದೇವರಿಗೆ ಶರಣಾದವರು :: ಇಸ್ಲಾಂ : _________. (ಸಾಧಾರಣ)
23. ಆಯುರ್ವೇದ : ಭಾರತೀಯರು :: ಯುನಾನಿ : _________. (ಸಾಧಾರಣ)

**ಈ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

24. ಯೇಸುವಿನ ಕಾಲಾನಂತರ ಕ್ರೈಸ್ತ ಧರ್ಮಕ್ಕೆ ಮಾನ್ಯತೆ ನೀಡಿದ ಜಗತ್ತಿನ ಮೊಟ್ಟ ಮೊದಲ ಸಾಮ್ರಾಜ್ಯ ಯಾವುದು? (ಸುಲಭ)
25. ಯೇಸುವಿನ ಬೋಧನೆಗಳನ್ನು ಅವರ ಎಷ್ಟು ಜನ ಪರಮಶಿಷ್ಯರು ಪ್ರಚಾರ ಮಾಡಿದರು? (ಸಾಧಾರಣ)
26. ಮಹಮ್ಮದ್ ಪೈಗಂಬರರ ಹೆಂಡತಿಯ ಹೆಸರೇನು? (ಸಾಧಾರಣ)
27. 'ರುಬಾಯತ್' ಮತ್ತು 'ಷಾನಾಮ' ಕೃತಿಗಳು ಯಾವ ಭಾಷೆಯ ಶ್ರೇಷ್ಠ ಕೃತಿಗಳಾಗಿವೆ? (ಸಾಧಾರಣ)
28. ಮಹಮ್ಮದ್ ಪೈಗಂಬರರ ತಂದೆಯ ಹೆಸರೇನು? (ಸಾಧಾರಣ)
29. ಟರ್ಕರ ಮೂಲ ಸ್ಥಾನ ಯಾವುದು? (ಸಾಧಾರಣ)

30. ಮಹಮ್ಮದ್ ಪೈಗಂಬರರಿಗೆ ಯಾವ ಗುಹೆಯಲ್ಲಿ ಪ್ರಾರ್ಥನೆ ಮತ್ತು ಧ್ಯಾನ ಮಾಡುವಾಗ ಪ್ರವಾದಿತ್ವ ದೊರೆಯಿತು? (ಕಠಿಣ)
31. ಮಂಗೋಲರ ಮೂಲ ಸ್ಥಾನ ಯಾವುದು? (ಸಾಧಾರಣ)
32. ಮಂಗೋಲರ ಪ್ರಮುಖ ವೃತ್ತಿ ಏನಾಗಿತ್ತು? (ಸಾಧಾರಣ)
33. ಇತಿಹಾಸ ಎಂದರೇನು? (ಸುಲಭ)
34. ಅಲೆಮಾರಿ ಜನಾಂಗಕ್ಕೆ ಸೇರಿದ ಟರ್ಕರ ಮೂಲಸ್ಥಾನ ಯಾವುದು? (ಸಾಧಾರಣ)

**ಉ. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ.**

35. ಯೇಸುವಿನ ಬೋಧನೆಗಳನ್ನು ಪಟ್ಟಿಮಾಡಿ. (ಸಾಧಾರಣ)
36. ಇಸ್ಲಾಮಿನ ಬೋಧನೆಗಳು ಯಾವುವು? (ಸಾಧಾರಣ)
37. ಧರ್ಮಯುದ್ಧ (ಕ್ರೂಸೇಡ್ಸ್)ಗಳಿಗೆ ಕಾರಣವೇನು? (ಕಠಿಣ)
38. ಧರ್ಮಯುದ್ಧ (ಕ್ರೂಸೇಡ್ಸ್)ಗಳ ಪರಿಣಾಮಗಳನ್ನು ಪಟ್ಟಿಮಾಡಿ. (ಕಠಿಣ)
39. ಧರ್ಮಯುದ್ಧ (ಕ್ರೂಸೇಡ್ಸ್)ಗಳು ಎಂದು ಯಾವ ಯುದ್ಧಗಳಿಗೆ ಕರೆಯಲಾಗುತ್ತದೆ? (ಸಾಧಾರಣ)

**ಊ. ಈ ಕೆಳಗಿನವುಗಳಿಗೆ ಟಿಪ್ಪಣಿ ಬರೆಯಿರಿ.** (ಕಠಿಣ)

40. ಚೆಂಗಿಸ್ ಖಾನ್
41. ಅಟೋಮನ್ ಟರ್ಕರು
42. ತೈಮೂರ್
43. ಕುಬ್ಲಾಯ್ ಖಾನ್

**ಋ. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

44. ಯೇಸುವಿನ ಜೀವನ ಕುರಿತು ತಿಳಿಸಿ. (ಕಠಿಣ)
45. ಮಹಮ್ಮದ್ ಪೈಗಂಬರರ ಜೀವನ ಕುರಿತು ತಿಳಿಸಿ. (ಕಠಿಣ)
46. ಇಸ್ಲಾಮಿನ ಐದು ಆಧಾರ ಸ್ತಂಭಗಳು ಯಾವುವು?/ಇಸ್ಲಾಂ ಧರ್ಮದ ಪ್ರಮುಖ ಆಚರಣೆಗಳು ಯಾವುವು? (ಕಠಿಣ)
47. ಭಾರತದಲ್ಲಿರುವ ವಿವಿಧ ಧರ್ಮಗಳನ್ನು ಪಟ್ಟಿ ಮಾಡಿ. (ಸಾಧಾರಣ)

48. ನಿಮ್ಮ ಮನೆಯ / ಶಾಲೆಯ ಕ್ಯಾಲೆಂಡರ್‌ನಲ್ಲಿ ಕಂಡುಬರುವ ವಿವಿಧ ಧಾರ್ಮಿಕ ಹಬ್ಬಗಳನ್ನು ಪಟ್ಟಿಮಾಡಿ. (ಸಾಧಾರಣ)

**ಎ. ಈ ಕೆಳಗಿನ ಪ್ರಶ್ನೆಗೆ ಆರು ವಾಕ್ಯಗಳಲ್ಲಿ ಉತ್ತರಿಸಿ.**

49. ಆಧುನಿಕ ಜಗತ್ತಿಗೆ ಅರಬ್ಬರು ನೀಡಿದ ಕೊಡುಗೆಗಳು ಯಾವುವು? (ಕಠಿಣ)

| ಅಧ್ಯಾಯ – 2 | ಮಧ್ಯಯುಗದ ಯುರೋಪ್ |
|---|---|

D6E1G5

| ಕ.ಫ.ಸಂ. | ಕಲಿಕಾ ಫಲ | ಪ್ರಶ್ನೆ ಸಂಖ್ಯೆಗಳು |
|---|---|---|
| 04 | ಪುನರುಜ್ಜೀವನವು ಅಂದು ಮತ್ತು ಸಮಕಾಲಿನ ಜಗತ್ತಿನ ಮೇಲೆ ಬೀರಿ ಪ್ರಭಾವ ಮತ್ತು ಪರಿಣಾಮಗಳನ್ನು ವಿಶ್ಲೇಷಿಸುವರು. | ಅಭ್ಯಾಸ 2.1 : 1 ರಿಂದ 48<br>ಅಭ್ಯಾಸ 2.2 : 1ರಿಂದ 19<br>ಅಭ್ಯಾಸ 2.3 : 1 ರಿಂದ 26 |

## 2.1

| ಕ್ರಮ ಸಂಖ್ಯೆ | ಪ್ರಶ್ನೆಗಳ ವಿಧ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 10 |
| 2 | ಸಾಧಾರಣ | 31 |
| 3 | ಕಠಿಣ | 8 |
| ಒಟ್ಟು | ಒಟ್ಟು ಪ್ರಶ್ನೆಗಳು | **49** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಪುನರುಜ್ಜೀವನವು ಸುಮಾರು ಸಾ.ಶ. ಈ ಕಾಲಾವಧಿಯಲ್ಲಿ ಕಂಡು ಬಂದಿತು. (ಸಾಧಾರಣ)

   A. 1400-1600 B. 1500-1700 C. 1700-1800 D. 1900-2000

2. ಈ ಚಳುವಳಿಯು ಯೂರೋಪನ್ನು ಮಧ್ಯಯುಗದಿಂದ ಆಧುನಿಕ ಯುಗಕ್ಕೆ ಕೊಂಡೊಯ್ದಿತು. (ಸಾಧಾರಣ)

   A. ಧಾರ್ಮಿಕ ಚಳುವಳಿ B. ಸ್ವಾತಂತ್ರ್ಯ ಚಳುವಳಿ C. ಪುನರುಜ್ಜೀವನ ಚಳುವಳಿ D. ಸಾಹಿತ್ಯದ ಚಳುವಳಿ

3. ಈ ಕೆಳಗಿನ ಎರಡು ಭಾಷೆಗಳು ಯುರೋಪ್ ಖಂಡದ ಅಭಿಜಾತ ಭಾಷೆಗಳು ಆಗಿವೆ. (ಸಾಧಾರಣ)

A. ಗ್ರೀಕ್ & ಲ್ಯಾಟಿನ್ B. ಫ್ರೆಂಚ್ & ರೋಮನ್ C. ಇಂಗ್ಲಿಷ್ & ಸ್ಪ್ಯಾನೀಷ್ D. ಗ್ರೀಕ್ & ರೋಮನ್

4. ಮುದ್ರಣ ಯಂತ್ರವನ್ನು ಕಂಡುಹಿಡಿದ ಜರ್ಮನಿಯ ವಿಜ್ಞಾನಿ. (ಸುಲಭ)

   A. ಜಾನ್ ರೈಟ್ B. ಜಾನ್ ಗುಟೆನ್‌ಬರ್ಗ್ C. ಮಾರ್ಕೋನಿ D. ವಿಲಿಯಂ ಹಾರ್ವೆ

5. ಪುನರುಜ್ಜೀವನ ಕಾಲದ ಮೊದಲ ಲೇಖಕ ಈತನಾಗಿದ್ದಾನೆ. (ಸುಲಭ)

   A. ಪೆಟ್ರಾರ್ಕ್ B. ಜಾನ್ ಕ್ಯಾಲ್ವಿನ್ C. ಬೊಕಾಷಿಯೋ D. ಡಾಂಟೆ

6. 'ಡೇವಿಡ್ ಪ್ರತಿಮೆ' ಇದು ಇವರ ಮಹಾನ್ ಶಿಲ್ಪಕೃತಿಯಾಗಿದೆ. (ಸಾಧಾರಣ)

   A. ಡಾಂಟೆ B. ಡೊನಾಟೆಲ್ಲೊ C. ಬೋಕಾಷಿಯೊ D. ಮೈಕಲೆಂಜೆಲೊ

7. ಜೂಲಿಯಸ್ ಸೀಸರ್, ರೋಮಿಯೋ ಜೂಲಿಯೆಟ್, ಕಿಂಗ್ ಲಿಯರ್, ಮ್ಯಾಕ್‌ಬೆತ್ ಮುಂತಾದ ನಾಟಕಗಳನ್ನು ರಚಿಸಿದವರು ಇವರಾಗಿದ್ದಾರೆ. (ಸಾಧಾರಣ)

   A. ಡಾಂಟೆ B. ಸರ್ವಾಂಟಿಸ್ C. ಬೋಕಾಷಿಯೊ D. ವಿಲಿಯಮ್ ಷೇಕ್ಸಪಿಯರ್

8. ಪ್ರಾಚೀನ ಗ್ರೀಕ್ ಸಾಹಿತ್ಯವನ್ನು ಅಧ್ಯಯನ ನಡೆಸುತ್ತಿದ್ದ ವಿದ್ವಾಂಸರನ್ನು ಹೀಗೆಂದು ಕರೆಯಲಾಗುತ್ತಿತ್ತು. (ಸಾಧಾರಣ)

   A. ಕಾವ್ಯಾಸಕ್ತರು B. ವಿಲಿಯಮ್ ಷೇಕ್ಸಪಿಯರ್ C. ಸಾಹಿತ್ಯಾಸಕ್ತರು D. ಪಂಡಿತರು

9. ಮಾನವನ ದೇಹದಲ್ಲಿನ ರಕ್ತ ಪರಿಚಲನೆಯ ಕ್ರಮವನ್ನು ತೋರಿಸಿಕೊಟ್ಟ ವಿಜ್ಞಾನಿ. (ಸಾಧಾರಣ)

   A. ಗೆಲಿಲಿಯೊ B. ಸರ್ ಐಸಾಕ್ ನ್ಯೂಟನ್ C. ವಿಲಿಯಂ ಹಾರ್ವೆ D. ಟಾಲೆಮಿ

10. 'ವರ್ಜಿನ್ ಆನ್ ದಿ ರಾಕ್ಸ್', 'ದಿ ಲಾಸ್ಟ್ ಸಪ್ಪರ್' ಮತ್ತು 'ಮೊನಾಲಿಸಾ' ಈ ಪ್ರಸಿದ್ಧ ವರ್ಣಚಿತ್ರಗಳ ಚಿತ್ರಕಾರನಿವನು. (ಸಾಧಾರಣ)

   A. ಡಾಂಟೆ B. ಲಿಯೊನಾರ್ಡೊ-ದ-ವಿಂಚಿ C. ಬೋಕಾಷಿಯೊ D. ಮೈಕಲೆಂಜೆಲೊ

**ಆ. ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ.**

11. ಪುನರುಜ್ಜೀವನ ಎಂಬ ಪದದ ಅರ್ಥ _____ ಆಗಿದೆ. (ಸುಲಭ)

12. ಪುನರುಜ್ಜೀವನ ಚಳುವಳಿಯು ಬೌದ್ಧಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಂಡುಬರುವ ___________ ಬೆಳವಣಿಗೆಯನ್ನು ಅನಾವರಣ ಮಾಡುತ್ತದೆ. (ಸುಲಭ)

13. ಯುರೋಪಿನ ಆಧುನಿಕ ಯುಗಕ್ಕೆ ಕಾರಣವಾದ ಪುನರುಜ್ಜೀವನದ ತವರೂರು ________. (ಸುಲಭ)
14. ಸಾ.ಶ. 1453ರಲ್ಲಿ ಕಾನ್‌ಸ್ಟಂಟಿನೋಪಲ್ ನಗರವನ್ನು ಆಕ್ರಮಣ ಮಾಡಿದ ಟರ್ಕರ ಸುಲ್ತಾನ _________________. (ಸಾಧಾರಣ)
15. 'ಡಾನ್ ಕೀ ಹೌಟೆ' ಎಂಬ ಪ್ರಸಿದ್ಧ ಸಾಹಿತ್ಯ ಕೃತಿಯಲ್ಲಿ ಮಧ್ಯಯುಗದ ಸರದಾರರನ್ನು ಗೇಲಿ ಮಾಡಿದವನು ___________. (ಸಾಧಾರಣ)
16. ಮೈಕಲೆಂಜೆಲೊ ನಿರ್ಮಿಸಿದ ____________ ಪ್ರತಿಮೆ ಭವ್ಯವಾಗಿದೆ. (ಸುಲಭ)
17. ಭೂಮಿಯ ಸುತ್ತ ಸೂರ್ಯ ಸುತ್ತುವನು ಎಂದು ಹೇಳಿದವರು ___________. (ಸುಲಭ)
18. ರೋಮ್ ನಗರದಲ್ಲಿರುವ ಪ್ರಸಿದ್ಧ ಚರ್ಚಿನ ಹೆಸರು _________. (ಸುಲಭ)
19. ಪುನರುಜ್ಜೀವನ __________ ನಲ್ಲಿ ಆರಂಭವಾಯಿತು. (ಸುಲಭ)
20. ಪುನರುಜ್ಜೀವನ ಕಾಲದ ಪ್ರಖ್ಯಾತ ಚಿತ್ರಕಾರರು _______ ಮತ್ತು _______. (ಸಾಧಾರಣ)

**ಇ. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗ್ರಹಿಸಿ ಮೂರನೇ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

21. ಡಾಂಟೆ : ದ ಡಿವೈನ್ ಕಾಮಿಡಿ :: ಬೊಕಾಷಿಯೊ : _________. (ಸಾಧಾರಣ)
22. ದೂರದರ್ಶಕ : ಗೆಲಿಲಿಯೊ :: ಗುರುತ್ವಾಕರ್ಷಣ ಬಲ : _________. (ಸಾಧಾರಣ)
23. ಸಂತ ಪೀಟರ್ ಚರ್ಚ್ : ರೋಮ್ :: ಸಂತ ಪಾಲ್ ಚರ್ಚ್ : _________. (ಸಾಧಾರಣ)
24. ಡೇವಿಡ್ ಪ್ರತಿಮೆ : ಡೊನಾಟೆಲ್ಲೊ :: ಮೋಸೆಸ್ ಪ್ರತಿಮೆ : _________. (ಸಾಧಾರಣ)
25. ಸೂರ್ಯ ಕೇಂದ್ರ ಸಿದ್ಧಾಂತ : ಕೋಪರ್ನಿಕಸ್ :: ಭೂ ಕೇಂದ್ರ ಸಿದ್ಧಾಂತ : _________. (ಸಾಧಾರಣ)
26. ರಕ್ತ ಪರಿಚಲನೆ ಕ್ರಮ : ವಿಲಿಯಂ ಹಾರ್ವೆ :: ದೂರದರ್ಶಕ : _________. (ಸಾಧಾರಣ)

**27. ಈ. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. (ಸಾಧಾರಣ)**

| 'ಅ' | 'ಬ' |
|---|---|
| 1. ಮೈಕೆಲೆಂಜೆಲೊ | ಅ. ಕಿಂಗ್ ಲಿಯರ್ |
| 2. ಲಿಯೊನಾರ್ಡೊ-ದ-ವಿಂಚಿ | ಆ. ಮೋಸೆಸ್ ಪ್ರತಿಮೆ |

| 'ಅ' | 'ಬ' |
|---|---|
| 3. ಡೊನಾಟೆಲ್ಲೊ | ಇ. ದ ಡಿವೈನ್ ಕಾಮಿಡಿ |
| 4. ಡಾಂಟೆ | ಈ. ಡೇವಿಡ್ ಪ್ರತಿಮೆ |
| 5. ಷೇಕ್ಸ್‌ಪಿಯರ್ | ಉ. ಮೊನಾಲಿಸಾ |

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.**

28. ಪುನರುಜ್ಜೀವನ ಎಂದರೇನು? (ಸುಲಭ)
29. ಸೂರ್ಯನ ಸುತ್ತ ಭೂಮಿ ಸುತ್ತುತ್ತದೆ ಎಂದು ಮೊದಲು ಹೇಳಿದ ಪೋಲೆಂಡಿನ ವಿಜ್ಞಾನಿ ಯಾರು? (ಸುಲಭ)
30. ಯೂರೋಪಿನ ರಾಜರುಗಳ ಮಿಲಿಟರಿಯಲ್ಲಿ ಅಪ್ರತಿಮ ಸೇವೆಯನ್ನು ಸಲ್ಲಿಸುತ್ತಿದ್ದವರಿಗೆ ನೀಡುತ್ತಿದ್ದ ಸೇವಾ ಮಾನ್ಯತೆಯನ್ನು ಏನೆಂದು ಕರೆಯುತ್ತಿದ್ದರು? (ಸಾಧಾರಣ)
31. ಪುನರುಜ್ಜೀವನ ಕಾಲದಲ್ಲಿ ಸ್ವರ್ಗ-ನರಕ ಮತ್ತು ಪರಲೋಕದ ಚಿಂತನೆಯನ್ನು ಪೂರ್ಣವಾಗಿ ಬಿಟ್ಟು ಯಾವ ವಿಷಯಗಳ ಬಗ್ಗೆ ತೀವ್ರ ಒಲವು ತಳೆಯಲಾಯಿತು? (ಸಾಧಾರಣ)
32. ಕಾನ್‌ಸ್ಟಾಂಟಿನೋಪಲ್ ಹಾಗೂ ಬೈಜಾಂಟಿಯನ್ ಎಂದು ಇಂದಿನ ಟರ್ಕಿ ದೇಶದ ಯಾವ ಬಂದರು ನಗರವನ್ನು ಕರೆಯುತ್ತಿದ್ದರು? (ಸುಲಭ)
33. ವಿಲಿಯಮ್ ಷೇಕ್ಸಪಿಯರ್ ಯಾರು? (ಸುಲಭ)
34. ಮಾರ್ಕೋ ಪೋಲೊ ಯಾರು? (ಸಾಧಾರಣ)

**ಊ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ.**

35. ಪುನರುಜ್ಜೀವನದ ಲಕ್ಷಣಗಳು ಯಾವುವು? (ಸಾಧಾರಣ)
36. ಮಾನವತಾವಾದ ಎಂದರೇನು? (ಸಾಧಾರಣ)
37. ವೈಚಾರಿಕತೆ ಎಂದರೇನು? (ಸಾಧಾರಣ)
38. ಇಂಗ್ಲೀಷ್ ನಾಟಕಕಾರ ಷೇಕ್ಸ್‌ಪಿಯರ್‌ನ ಪ್ರಮುಖ ನಾಟಕಗಳು ಯಾವುವು? (ಸಾಧಾರಣ)

39. ಪುನರುಜ್ಜೀವನ ಕಾಲದ ಪ್ರಸಿದ್ಧ ಸಾಹಿತಿಗಳ ಹೆಸರುಗಳನ್ನು ಪಟ್ಟಿಮಾಡಿ. (ಸಾಧಾರಣ)
40. ಪುನರುಜ್ಜೀವನ ಕಾಲದ ಪ್ರಸಿದ್ಧ ವಿಜ್ಞಾನಿಗಳ ಹೆಸರುಗಳನ್ನು ಪಟ್ಟಿಮಾಡಿ. (ಸಾಧಾರಣ)

**ಖ. ಈ ಕೆಳಗಿನ ಪ್ರಶ್ನೆಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

41. ಲಿಯೋನಾರ್ಡೋ-ದ-ವಿಂಚಿಯು ಬಹುಮುಖ ಪ್ರತಿಭಾವಂತ ಏಕೆ? (ಸಾಧಾರಣ)
42. ಪುನರುಜ್ಜೀವನಕ್ಕೆ ಕಾರಣಗಳು ಯಾವುವು? (ಕಠಿಣ)
43. ಸಾಹಿತ್ಯ ಕ್ಷೇತ್ರಕ್ಕೆ ಪುನರುಜ್ಜೀವನ ನೀಡಿರುವ ಕೊಡುಗೆಗಳು ಯಾವುವು? (ಕಠಿಣ)
44. ಕಾನ್‌ಸ್ಟಂಟಿನೋಪಲ್ ನಗರದ ಆಕ್ರಮಣ ಮತ್ತು ಇದರಿಂದಾದ ಪರಿಣಾಮಗಳೇನು? (ಕಠಿಣ)
45. ಮುದ್ರಣ ಯಂತ್ರವು ಪುನರುಜ್ಜೀವನಕ್ಕೆ ಹೇಗೆ ಕಾರಣವಾಯಿತು? (ಕಠಿಣ)
46. ವಾಸ್ತುಶಿಲ್ಪ, ಮೂರ್ತಿಶಿಲ್ಪ ಮತ್ತು ಚಿತ್ರಕಲೆ ಕ್ಷೇತ್ರಕ್ಕೆ ಪುನರುಜ್ಜೀವನ ನೀಡಿರುವ ಕೊಡುಗೆಗಳು ಯಾವುವು? (ಕಠಿಣ)
47. ಪುನರುಜ್ಜೀವನ ಕಾಲದಲ್ಲಿ ವಿಜ್ಞಾನ ಕ್ಷೇತ್ರದಲ್ಲಾದ ಪ್ರಗತಿಯನ್ನು ವಿವರಿಸಿ. (ಕಠಿಣ)
48. ಧಾರ್ಮಿಕ ಸುಧಾರಣಾ ಚಳವಳಿಯಲ್ಲಿ ಮಾರ್ಟಿನ್ ಲೂಥರ್‌ನ ಪಾತ್ರವೇನು? ಪರಾಮರ್ಶಿಸಿ (ಕಠಿಣ)

## 2.2 ಧಾರ್ಮಿಕ ಸುಧಾರಣೆಯ ಅರ್ಥ, ಕಾರಣಗಳು ಹಾಗೂ ಧಾರ್ಮಿಕ ಸುಧಾರಣೆಯಲ್ಲಿ ಮಾರ್ಟಿನ್ ಲೂಥರ್ ಮತ್ತು ಇತರರ ಪಾತ್ರ ಹಾಗೂ ಪ್ರತಿ ಸುಧಾರಣೆ

| ಕ್ರಮ ಸಂಖ್ಯೆ | ಪ್ರಶ್ನೆಗಳ ವಿಧ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 9 |
| 2 | ಸಾಧಾರಣ | 5 |
| 3 | ಕಠಿಣ | 5 |
| ಒಟ್ಟು | ಒಟ್ಟು ಪ್ರಶ್ನೆಗಳು | **19** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಉತ್ತರಿಸಿ.**

1. ಕ್ರೈಸ್ತ ಧರ್ಮದ ಪ್ರಮುಖ ಪಂಗಡಗಳು. (ಸುಲಭ)

   A. ಕ್ಯಾಥೋಲಿಕ್ B. ಪ್ರಾಟೆಸ್ಟಂಟ್ C. ಶಿಯಾ ಮತ್ತು ಸುನ್ನಿ D. 'ಎ' ಮತ್ತು 'ಬಿ' ಎರಡೂ ಸರಿ.

2. ಇವರನ್ನು 'ಧಾರ್ಮಿಕ ಸುಧಾರಣೆಯ ಉಷಾ ತಾರೆ' (Morning Star) ಎಂದು ಕರೆಯುತ್ತಾರೆ. (ಸುಲಭ)

   A. ಜಾನ್ ವೈಕ್ಲಿಫ್ B. ಮಾರ್ಟಿನ್ ಲೂಥರ್ C. ಇಗ್ನೇಶಿಯಸ್ ಲಯೋಲಾ D. ಜಾನ್ ಹಸ್

3. "ನನ್ನ ಆತ್ಮಸಾಕ್ಷಿಯ ವಿರುದ್ಧವಾದ ಯಾವುದೇ ವಿಚಾರಗಳನ್ನು ನಾನು ಒಪ್ಪಿಕೊಳ್ಳಲಾರೆ" ಎಂದು ಹೇಳಿದ ಧಾರ್ಮಿಕ ಸುಧಾರಕ. (ಸುಲಭ)

   A. ಜಾನ್ ವೈಕ್ಲಿಫ್ B. ಮಾರ್ಟಿನ್ ಲೂಥರ್ C. ಜಾನ್ ಹಸ್ D. ಇಗ್ನೇಶಿಯಸ್ ಲೊಯೋಲಾ

4. ಇವುಗಳಿಗೆ 'ಸ್ವರ್ಗದ ರಹದಾರಿ ಪತ್ರಗಳು' ಎಂಬ ಕುರುಡು ನಂಬಿಕೆಗಳನ್ನು ಹುಟ್ಟಿಸಲಾಯಿತು. (ಸುಲಭ)

   A. ಪೋಪನ ಆಶೀರ್ವಾದ ಪತ್ರ B. ಪಾಪ ಕ್ಷಮಾಪಣಾ ಪತ್ರ C. ರಾಜಾಜ್ಞೆ D. ದೇವರ ಆಜ್ಞೆ

5. ಮಾರ್ಟಿನ್ ಲೂಥರ್ ಬೈಬಲ್ ಅನ್ನು ಅನುವಾದಿಸಿದ ಭಾಷೆ. (ಸುಲಭ)

   A. ಜರ್ಮನ್ B. ಲ್ಯಾಟಿನ್ C. ಇಂಗ್ಲೀಷ್ D. ರೋಮನ್

6. ಕ್ಯಾಥೋಲಿಕ್ ಚರ್ಚಿನ ಕುರಿತ ಜನರ ನಂಬಿಕೆಯನ್ನು ಪುನಃ ಸ್ಥಾಪಿಸಲು ಜೀಸಸ್ ಸಂಘವನ್ನು ಸಾ.ಶ. 1541 ರಲ್ಲಿ ಸ್ಥಾಪಿಸಿದವರು. (ಸಾಧಾರಣ)

   A. ಜಾನ್ ವೈಕ್ಲಿಫ್ B. ಮಾರ್ಟಿನ್ ಲೂಥರ್ C. ಜಾನ್ ಹಸ್ D. ಇಗ್ನೇಶಿಯಸ್ ಲಯೋಲಾ

**ಆ. ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ.**

7. ಮಾರ್ಟಿನ್ ಲೂಥರ್ __________ ಚರ್ಚಿನ ಪಾದ್ರಿ ಆಗಿದ್ದನು. (ಸಾಧಾರಣ)
8. ಚರ್ಚಿನ ಧಾರ್ಮಿಕ ಸೇವೆಗಳಲ್ಲಿ ಲ್ಯಾಟಿನ್ ಭಾಷೆಯ ಬದಲಾಗಿ ಲೂಥರ್ ಬಳಸಲಾರಂಭಿಸಿದ ಭಾಷೆ __________. (ಸಾಧಾರಣ)

9. ಕ್ಯಾಥೋಲಿಕ್ ಉಪದೇಶ ಹಾಗೂ ವಿದ್ಯಾಪ್ರಸಾರವನ್ನು ಮಾಡಿದ ಜೀಸಸ್ ಸಂಘದ ಅನುಯಾಯಿಗಳು _________________. (ಸಾಧಾರಣ)

**ಇ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.**

10. ಜರ್ಮನಿಯಲ್ಲಿ ಧಾರ್ಮಿಕ ಸುಧಾರಣಾ ಚಳುವಳಿಯನ್ನು ಆರಂಭಿಸಿದವರು ಯಾರು? (ಸುಲಭ)
11. ಮಾರ್ಟಿನ್ ಲೂಥರ್ ಪಾಪ ಕ್ಷಮಾಪಣ ಪತ್ರಗಳ ಕುರಿತು 95 ಹೇಳಿಕೆಗಳನ್ನು ಬರೆದು ಯಾವ ಚರ್ಚಿನ ಹೆಬ್ಬಾಗಿಲಿಗೆ ಹಚ್ಚಿದನು? (ಸಾಧಾರಣ)
12. ಕ್ಯಾಥೋಲಿಕ್ ಚರ್ಚಿನವರು ಲೂಥರನ ಅನುಯಾಯಿಗಳನ್ನು ಏನೆಂದು ಕರೆದರು? (ಸುಲಭ)
13. ಪ್ರತಿ ಸುಧಾರಣಾ ಚಳುವಳಿಯ ನಾಯಕ ಯಾರು? (ಸುಲಭ)
14. ಪ್ರತಿ ಸುಧಾರಣೆ ಎಂದರೇನು? (ಸಾಧಾರಣ)

**ಈ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

15. ಕ್ರೈಸ್ತರಲ್ಲಿ ಅನೇಕ ಪಂಗಡಗಳಾಗಲು ಕಾರಣವೇನು? (ಕಠಿಣ)
16. ಪ್ರೊಟೆಸ್ಟ ಪಂಗಡದ ಉದಯದಿಂದ ಕ್ಯಾಥೋಲಿಕ್ ಚರ್ಚಿನ ಮೇಲೆ ಉಂಟಾದ ಪರಿಣಾಮಗಳೇನು? (ಕಠಿಣ)
17. ಧಾರ್ಮಿಕ ಸುಧಾರಣಾ ಚಳುವಳಿಯ ಪರಿಣಾಮಗಳೇನು? (ಕಠಿಣ)

**ಉ. ಈ ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

18. ಅ. ಮಾರ್ಟಿನ್ ಲೂಥರ್ ಯಾರು? ವಿವರಿಸಿ. ಅಥವಾ
    ಆ. ಇಗ್ನೇಶಿಯಸ್ ಲಯೋಲಾ ಬಗ್ಗೆ ವಿವರಿಸಿರಿ. (ಕಠಿಣ)
19. ಧಾರ್ಮಿಕ ಸುಧಾರಣಾ ಚಳವಳಿಯಲ್ಲಿ ಮಾರ್ಟಿನ್ ಲೂಥರನ ಪಾತ್ರವೇನು? (ಕಠಿಣ)

## 2.3 ಭೌಗೋಳಿಕ ಅನ್ವೇಷಣೆಗಳಿಗೆ ಮೂಲ ಕಾರಣಗಳು, ಸಮುದ್ರಯಾನಗಳ ಗತಿ, ಅನ್ವೇಷಣೆಗಳು ಬೀರಿದ ಜಾಗತಿಕ ಪ್ರಭಾವ ಮತ್ತು ಪ್ರಪಂಚದ ನಕಾಶೆಯಲ್ಲಿ ಸಮುದ್ರ ಯಾನಗಳ ಮಾರ್ಗ

| ಕ್ರಮ ಸಂಖ್ಯೆ | ಪ್ರಶ್ನೆಗಳ ವಿಧ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 10 |
| 2 | ಸಾಧಾರಣ | 11 |
| 3 | ಕಠಿಣ | 7 |
| ಒಟ್ಟು | ಒಟ್ಟು ಪ್ರಶ್ನೆಗಳು | **28** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಉತ್ತರಿಸಿ.**

1. ಸಮುದ್ರಯಾನದಂತಹ ಸಾಹಸ ಕಾರ್ಯವನ್ನು ಮೊದಲು ಕೈಗೊಂಡವರು. (ಸುಲಭ)

   A. ಪೋರ್ಚುಗೀಸರು  B. ಡಚ್ಚರು  C. ಫ್ರೆಂಚರು  D. ಇಂಗ್ಲಿಷರು

ಪೋರ್ಚುಗೀಸ್ ರಾಜಕುಮಾರ ಹೆನ್ರಿಯು ನೌಕಾಶಾಲೆಯೊಂದನ್ನು ತೆರೆದಿದ್ದಕ್ಕಾಗಿ ಹೀಗೆಂದು ಜನಪ್ರಿಯನಾಗಿದ್ದನು. (ಸಾಧಾರಣ)
A. ಹೆನ್ರಿ ದ ಪ್ರಿನ್ಸ್  B. ಹೆನ್ರಿ ದ ನ್ಯಾವಿಗೇಟರ್  C. ಹೆನ್ರಿ ದ ಕಿಂಗ್  D. ಹೆನ್ರಿ ದ ವಾರಿಯರ್

3. ಬಾರ್ತಲೋಮಿಯೊ ಡಯಾಸ್‌ನ ನೌಕಾಯಾನವು ಮುಂದಿನ ಯಾನಕ್ಕೆ ವಿಶ್ವಾಸ ಮೂಡಿಸಿದ್ದರಿಂದ ಆಫ್ರಿಕಾದ ದಕ್ಷಿಣ ತುದಿಯನ್ನು ರಾಜ ಎರಡನೇ ಜಾನ್ ಹೀಗೆ ಕರೆದನು. (ಸುಲಭ)

P. ಭರವಸೆಯ ಭೂಶಿರ

Q. ಬಿರುಗಾಳಿಯ ಭೂಶಿರ

R. ಕೇಪ್ ಆಫ್ ಸ್ಟ್ರಾಮ್ಸ್

S. ಕೇಪ್ ಆಫ್ ಗುಡ್ ಹೋಪ್

A. P ಮಾತ್ರ ಸರಿ

B. R ಮತ್ತು Q ಎರಡೂ ಸರಿ

C. R ಮಾತ್ರ ಸರಿ

D. P ಮತ್ತು S ಎರಡೂ ಸರಿ

2. ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದ ಪೋರ್ಚುಗೀಸ್ ನಾವಿಕನಿವನು. (ಸುಲಭ)

   A. ವಾಸ್ಕೋ-ಡಿ-ಗಾಮಾ B. ಫರ್ಡಿನೆಂಡ್ ಮೆಗಲನ್ C. ಕ್ರಿಸ್ಟೋಫರ್ ಕೊಲಂಬಸ್ D. ಬಾರ್ತಲೋಮಿಯೊ ಡಯಾಸ್

4. ರಾಜಕುಮಾರ ಹೆನ್ರಿಯ ಹೆಬ್ಬಯಕೆಯನ್ನು ಸಾಕಾರಗೊಳಿಸಿದ ವಾಸ್ಕೋಡಿಗಾಮ ಈ ದೇಶದ ನಾವಿಕ. (ಸಾಧಾರಣ)

   A. ಪೋರ್ಚುಗೀಸ್ B. ಫ್ರಾನ್ಸ್ C. ನೇದರ್‌ಲ್ಯಾಂಡ್ D. ಇಂಗ್ಲೆಂಡ್

5. ಭಾರತಕ್ಕೆ ಜಲಮಾರ್ಗ ಕಂಡುಹಿಡಿಯುವ ಉದ್ದೇಶದಿಂದ ಸಾಗರಯಾನ ಕೈಗೊಂಡು ಭಾರತದ ಬದಲಾಗಿ ಬಹಮಸ್ ದ್ವೀಪವನ್ನು ಕಂಡುಹಿಡಿದ ನಾವಿಕ. (ಸುಲಭ)

   A. ವಾಸ್ಕೋಡಿಗಾಮಾ B. ಕ್ರಿಸ್ಟೋಫರ್ ಕೊಲಂಬಸ್ C. ಫರ್ಡಿನೆಂಡ್ ಮೆಗಲನ್ D. ಬಾರ್ತಲೋಮಿಯೊ ಡಯಾಸ್

6. ಪ್ರಥಮವಾಗಿ ಭೂಪ್ರದಕ್ಷಿಣೆ ನೌಕಾಯಾನ ಕೈಗೊಂಡ ಶ್ರೇಯಸ್ಸು ಇವನಿಗೆ ಸಲ್ಲುತ್ತದೆ. (ಸುಲಭ)

   A. ವೆಸ್ಪುಸ್ಸಿ B. ಕ್ರಿಸ್ಟೋಫರ್ ಕೊಲಂಬಸ್ C. ಫರ್ಡಿನೆಂಡ್ ಮೆಗಲನ್ D. ಕೆಬ್ರಾಲ್

**ಆ. ಈ ಕೆಳಗೆ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

8. ಪೋರ್ಚುಗಲ್ ರಾಜಕುಮಾರ ಹೆನ್ರಿಯು __________ ಎಂಬ ಶಾಲೆಯ ಸ್ಥಾಪಕ. (ಸಾಧಾರಣ)

9. ವಾಸ್ಕೋಡಿಗಾಮನು ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದ ವರ್ಷ __________. (ಸಾಧಾರಣ)

10. ವಾಸ್ಕೋಡಿಗಾಮನು ನಿಜವಾಗಿ ಬಂದು ಇಳಿದಿದ್ದು ಭಾರತದ ಕಲ್ಲಿಕೋಟೆಯ ಹತ್ತಿರದ __________ ಸ್ಥಳದಲ್ಲಿ. (ಸಾಧಾರಣ)

11. ದಕ್ಷಿಣ ಆಫ್ರಿಕಾದ ತುತ್ತತುದಿಯನ್ನು ಮೊದಲು ತಲುಪಿದ ಪೋರ್ಚುಗೀಸ್ ನಾವಿಕ __________. (ಸಾಧಾರಣ)

**ಇ. ಹೊಂದಿಸಿ ಬರೆಯಿರಿ. (ಸಾಧಾರಣ)**

| ಅ | ಬ |
|---|---|
| 1. ವಾಸ್ಕೋಡಿಗಾಮ | ಅ. ದಕ್ಷಿಣ ಆಫ್ರಿಕಾದ ದಕ್ಷಿಣ ತುದಿ |
| 2. ಕ್ರಿಸ್ಟೋಫರ್ ಕೊಲಂಬಸ್ | ಆ. ಕಲ್ಲಿಕೋಟೆ |
| 3. ಪೆದ್ರೊ ಕೆಬ್ರಾಲ್ | ಇ. ಬಹಮಸ್ ದ್ವೀಪ |
| 4. ಅಮೆರಿಗೊ ವೆಸ್ಪುಸ್ಸಿ | ಈ. ಬ್ರೆಜಿಲ್ |
| 5. ಫರ್ಡಿನೆಂಡ್ ಮೆಗಲನ್ | ಉ. ಅಮೆರಿಕಾ |
| 6. ಬಾರ್ತಲೋಮಿಯೊ ಡಯಾಸ್ | ಊ. ಪ್ರಥಮವಾಗಿ ಭೂಪ್ರದಕ್ಷಿಣೆ ಹಾಕಿದ ನಾವಿಕ |

**ಈ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.**

13. ಸಮುದ್ರಯಾನವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 'ಸ್ಕೂಲ್ ಆಫ್ ನ್ಯಾವಿಗೇಶನ್' ಎಂಬ ಶಾಲೆಯನ್ನು ಆರಂಭಿಸಿದವರು ಯಾರು? (ಸಾಧಾರಣ)
14. ಬಾರ್ತಲೋಮಿಯೊ ಡಯಾಸ್ ದಕ್ಷಿಣ ಆಫ್ರಿಕಾದ ತುದಿಯನ್ನು ಏನೆಂದು ಕರೆದನು? (ಸುಲಭ)
15. ನಾವಿಕ ಕ್ರಿಸ್ಟೋಫರ್ ಕೊಲಂಬಸ್‌ನ ದೇಶ ಯಾವುದು? (ಸುಲಭ)
16. ಕ್ರಿಸ್ಟೋಫರ್ ಕೊಲಂಬಸ್ ಅಮೆರಿಕದ ಮೂಲ ನಿವಾಸಿಗಳನ್ನು ಏನೆಂದು ಕರೆದನು? (ಸುಲಭ)
17. ದಕ್ಷಿಣ ಅಮೆರಿಕದ ಬ್ರೆಜಿಲ್‌ನ್ನು ಕಂಡುಹಿಡಿದ ನಾವಿಕ ಯಾರು? (ಸುಲಭ)
18. ಭೂಪ್ರದಕ್ಷಿಣೆ ಮಾಡಿದ ಮೊದಲ ಹಡಗು ಯಾವುದು? (ಸುಲಭ)
19. ಯಾವ ದೇಶಗಳಿಗೆ ಸಾಗರ ಮಾರ್ಗವನ್ನು ಕಂಡುಹಿಡಿಯುವುದು ಪೋರ್ಚುಗೀಸ್ ರಾಜಕುಮಾರ ಹೆನ್ರಿಯ ಜೀವನದ ಹೆಬ್ಬಯಕೆಯಾಗಿತ್ತು? (ಸಾಧಾರಣ)

**ಉ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

20. ಭೌಗೋಳಿಕ ಅನ್ವೇಷಣೆಗಳು ಎಂದರೇನು? (ಕಠಿಣ)
21. ಯುರೋಪಿನಲ್ಲಿ ಬೇಡಿಕೆಯಿದ್ದ ಭಾರತದ ವಸ್ತುಗಳು ಯಾವುವು? (ಸಾಧಾರಣ)

22. ಯುರೋಪಿಯನ್ನರು ಯಾವ ದೇಶಗಳ ಮೂಲ ನಿವಾಸಿಗಳನ್ನು ಗುಲಾಮರನ್ನಾಗಿ ಮಾಡಿಕೊಂಡರು? (ಸಾಧಾರಣ)
23. ವಸಾಹತು ಎಂದರೇನು? (ಕಠಿಣ)

**ಊ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ.**

24. ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳನ್ನು ಪಟ್ಟಿಮಾಡಿ. (ಕಠಿಣ)
25. ಭೌಗೋಳಿಕ ಅನ್ವೇಷಣೆಯಿಂದಾದ ಪರಿಣಾಮಗಳೇನು? (ಕಠಿಣ)

**ಋ. ಟಿಪ್ಪಣಿ ಬರೆಯಿರಿ. (ಕಠಿಣ)**

26. ವಾಸ್ಕೋಡಿಗಾಮ
27. ಕ್ರಿಸ್ಟೋಫರ್ ಕೊಲಂಬಸ್
28. ಫರ್ಡಿನೆಂಡ್ ಮೆಗಲನ್

# ಅಧ್ಯಾಯ – 3 ಭಾರತಕ್ಕೆ ಐರೋಪ್ಯರ ಆಗಮನ

G5J8M4

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 9 | ಯುರೋಪಿಯನ್ನರ ಆಗಮನ, ಅವರು ಇಲ್ಲಿ ನೆಲೆಸಲು ಕಾರಣಗಳನ್ನು ವಿಮರ್ಶಿಸುವರು. | 1 ರಿಂದ 35 |
| 2 | ನಕ್ಷೆ ಬಿಡಿಸುವ, ನಕ್ಷೆಯಲ್ಲಿ ಸ್ಥಳ ಗುರುತಿಸುವ, ಆಲೇಖಗಳನ್ನು ರೂಪಿಸಿ, ವಿಶ್ಲೇಷಿಸಿ, ವಿವರಿಸಿ, ವಿಮರ್ಶಿಸುವ ಕೌಶಲಗಳು ಎಲ್ಲಾ ಪಾಠಗಳಿಗೂ ಅನ್ವಯ | 36 |

| ಕ್ರಮ ಸಂಖ್ಯೆ | ಪ್ರಶ್ನೆಗಳ ವಿಧ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 6 |
| 2 | ಸಾಧಾರಣ | 22 |
| 3 | ಕಠಿಣ | 8 |
| ಒಟ್ಟು | ಒಟ್ಟು ಪ್ರಶ್ನೆಗಳು | **36** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ವಾಸ್ಕೋ-ಡಿ-ಗಾಮನು ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿದ ವರ್ಷ ಮತ್ತು ದಿನಾಂಕ _______. (ಸುಲಭ)

   A. ಸಾ.ಶ. 1498 ಮೇ 17 B. ಸಾ.ಶ. 1498 ಮೇ 16 C. ಸಾ.ಶ. 1516 ಮೇ 18 D. ಸಾ.ಶ. 1600 ಮೇ 20

2. "ಡಚ್ ಈಸ್ಟ್ ಇಂಡಿಯಾ ಕಂಪನಿ" ಸ್ಥಾಪನೆಯಾದ ವರ್ಷ _______. (ಸಾಧಾರಣ)

   A. 1498 B. 1600 C. 1602 D. 1961

3. ಪೂರ್ವ ದೇಶಗಳೊಡನೆ ವ್ಯಾಪಾರ ಮಾಡಲು ಬ್ರಿಟಿಷ್ ಈಸ್ಟ ಇಂಡಿಯಾ ಕಂಪನಿಗೆ ಅನುಮತಿ ನೀಡಿದ ಬ್ರಿಟಿಷರ ರಾಣಿ _______. (ಸುಲಭ)

   A. ಎಲಿಜಬೆತ್ B. ವಿಕ್ಟೋರಿಯಾ

   C. ಪ್ಯಾಂಪಡೋರ D. ಅಂಟಾನೇಟಾ

4. ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರಲ್ಲಿ ಕೊನೆಯವರು _______. (ಸುಲಭ)

   A. ಬ್ರಿಟಿಷರು B. ಡಚ್ಚರು C. ಪೋರ್ಚುಗೀಸರು D. ಫ್ರೆಂಚರು

5. ಭಾರತಕ್ಕೆ ಬಂದ ಪ್ರಥಮ ಪೋರ್ಚುಗೀಸ್ ವೈಸರಾಯ್ _______. (ಸುಲಭ)

   A. ಫ್ರಾನ್ಸಿಸ್ಕೋ-ಡಿ-ಅಲ್ಮೆಡಾ B. ರಾಬರ್ಟ್ ಕ್ಲೈವ್ C. ಡೂಪ್ಲೆ D. ಅಲ್ಬುಕರ್ಕ್

**ಆ. ಮೊದಲೆರಡು ಪದಗಳಿಗೆ ಇರುವ ಸಂಬಂಧವನ್ನು ತಿಳಿದು ಮೂರನೇ ಪದಕ್ಕೆ ಸಂಬಂಧಿಸಿದಂತೆ ನಾಲ್ಕನೇ ಪದ ಬರೆಯಿರಿ.**

6. ಪೋರ್ಚುಗೀಸ್ : ಗೋವಾ :: ಫ್ರೆಂಚ್ : __________. (ಸಾಧಾರಣ)
7. ಬ್ರಿಟಿಷರು : ಕಲ್ಕತ್ತಾ :: ಡಚ್ಚರು : __________. (ಸಾಧಾರಣ)
8. ಜಹಾಂಗೀರ್ : ಬ್ರಿಟಿಷರು :: ಜಾಮೋರಿನ್ : __________. (ಸಾಧಾರಣ)
9. ಫ್ರಾನ್ಸ್ : ಫ್ರೆಂಚರು :: ಡಚ್ : __________. (ಸಾಧಾರಣ)
10. ಅಲ್ಬುಕರ್ಕ್ : ಪೋರ್ಚುಗೀಸ್ :: ಡೂಪ್ಲೆ : __________. (ಸಾಧಾರಣ)

**ಇ. ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ. (ಕಠಿಣ)**

11. ಡಚ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ.
12. ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ.
13. ಗೋವಾ ಪೋರ್ಚುಗೀಸರಿಂದ ವಿಮೋಚನೆಗೊಂಡಿದ್ದು.
14. ಅಲ್ಬುಕರ್ಕ್ ಬಿಜಾಪುರ ಸುಲ್ತಾನನಿಂದ ಗೋವಾವನ್ನು ವಶಪಡಿಸಿಕೊಂಡಿದ್ದು.
15. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ವರ್ಷ.

**ಈ. 16. ಹೊಂದಿಸಿ ಬರೆಯಿರಿ. (ಕಠಿಣ)**

| ಅ | ಬ |
| --- | --- |
| 1. ಪೋರ್ಚುಗೀಸರು | ಅ. ಪಾಂಡಿಚೇರಿ |
| 2. ಡಚ್ಚರು | ಆ. ಕೋಲ್ಕತ್ತಾ |
| 3. ಫ್ರೆಂಚರು | ಇ. ಪುಲಿಕಾಟ್ |
| 4. ಬ್ರಿಟಿಷರು | ಈ. ಗೋವಾ |

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ, ಅಂಶ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ.**

17. 'ದಸ್ತಕ'ಗಳು ಎಂದರೇನು? (ಸಾಧಾರಣ)
18. ಭಾರತದಲ್ಲಿ ಫ್ರೆಂಚರ ವ್ಯಾಪಾರ ಕೇಂದ್ರಗಳನ್ನು ಹೆಸರಿಸಿ. (ಸಾಧಾರಣ)
19. ಕರ್ನಾಟಿಕ್ ಯುದ್ಧಗಳು ಯಾರ ಯಾರ ನಡುವೆ ನಡೆದವು? (ಸಾಧಾರಣ)
20. ಇಂಗ್ಲೀಷರು ಭಾರತದಲ್ಲಿ ರಾಜಕೀಯ ಸಾರ್ವಭೌಮತ್ವ ಸ್ಥಾಪಿಸಲು ಪ್ರಮುಖ ಕಾರಣವೇನು? (ಸಾಧಾರಣ)
21. ಬ್ರಿಟಿಷರಿಗೆ ದಸ್ತಕಗಳನ್ನು ನೀಡಿದ ಮೊಘಲ್ ಚಕ್ರವರ್ತಿ ಯಾರು? (ಸಾಧಾರಣ)
22. ಭಾರತಕ್ಕೆ ವ್ಯಾಪಾರಕ್ಕಾಗಿ ಸಮುದ್ರಮಾರ್ಗವಾಗಿ ಮೊದಲಿಗೆ ಬಂದ ಯುರೋಪಿಯನ್ನರು ಯಾರು? (ಸುಲಭ)
23. ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದವರು ಯಾರು? (ಸಾಧಾರಣ)
24. ಬ್ರಿಟಿಷ್ ಈಸ್ಟ ಇಂಡಿಯಾ ಕಂಪನಿ ಯಾವಾಗ ಸ್ಥಾಪನೆಯಾಯಿತು? (ಸಾಧಾರಣ)
25. ಫ್ರೆಂಚರ ವ್ಯಾಪಾರ ಕೇಂದ್ರಗಳನ್ನು ಹೆಸರಿಸಿರಿ. (ಸುಲಭ)

**ಊ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

26. ಭಾರತಕ್ಕೆ ಬ್ರಿಟಿಷರು ವ್ಯಾಪಾರಿ ಕೋಠಿಗಳನ್ನು ಎಲ್ಲೆಲ್ಲಿ ಸ್ಥಾಪಿಸಿದರು? (ಸಾಧಾರಣ)
27. ಆಗ್ನೇಯ ಏಷ್ಯಾದ ಪ್ರಮುಖ ದ್ವೀಪಗಳನ್ನು ಹೆಸರಿಸಿರಿ. (ಸಾಧಾರಣ)
28. ಯುರೋಪಿಯನ್ನರ ಮೂಲ ಗುರಿಗಳು ಏನಾಗಿದ್ದವು? (ಸಾಧಾರಣ)
29. ಪೋರ್ಚುಗೀಸರ ಏಳಿಗೆಗೆ ಕಾರಣಗಳೇನು? (ಸಾಧಾರಣ)

30.ಡೂಪ್ಲೆಯ ಸಾಧನೆಗಳನ್ನು ಬರೆಯಿರಿ. (ಸಾಧಾರಣ)

## ಋ. ಈ ಕೆಳಗಿನ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ.

31.ಭಾರತದಲ್ಲಿ ಪೋರ್ಚುಗೀಸರ ಅವನತಿಗೆ ಕಾರಣಗಳನ್ನು ಪಟ್ಟಿ ಮಾಡಿರಿ. (ಕಠಿಣ)

32.ಭಾರತದಲ್ಲಿ ಡಚ್ಚರ ವ್ಯಾಪಾರ ಕೇಂದ್ರಗಳ ಕುರಿತು ಬರೆಯಿರಿ. (ಕಠಿಣ)

33.ಭಾರತದಲ್ಲಿ ಫ್ರೆಂಚರ ಅವನತಿಗೆ ಕಾರಣಗಳು ಯಾವುವು? (ಕಠಿಣ)

## ಎ. ಈ ಕೆಳಗಿನ ಪ್ರಶ್ನೆಗಳಿಗೆ ಏಳು–ಎಂಟು ವಾಕ್ಯಗಳಲ್ಲಿ ಉತ್ತರಿಸಿ.

34.ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಬಗ್ಗೆ ಟಿಪ್ಪಣಿ ಬರೆಯಿರಿ. (ಕಠಿಣ)

35.ಡಚ್ ಈಸ್ಟ್ ಇಂಡಿಯಾ ಕಂಪನಿ ಬಗ್ಗೆ ವಿವರಿಸಿ. (ಕಠಿಣ)

36.**ಏ. ಈ ಕೆಳಗಿನ ನಕ್ಷೆ ಬಳಸಿ ಯುರೋಪಿಯನ್ನರ ವ್ಯಾಪಾರಿ ಕೋಠಿಗಳನ್ನು ಪಟ್ಟಿ ಮಾಡಿ.** (ಸಾಧಾರಣ)



| ಅಧ್ಯಾಯ – 4 | ಹದಿನೆಂಟನೇ ಶತಮಾನದ ಭಾರತ (ಸಾ.ಶ. 1707-1757) |
|---|---|

V2L7R9

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 10 | ಮೊಗಲ ಸಾಮ್ರಾಜ್ಯದ ಅವನತಿ, ಮರಾಠರ ರಾಜಕೀಯ ಪ್ರಾಬಲ್ಯದ ಬೆಳವಣಿಗೆಯ ಕುರಿತು ವಿವರಿಸುವರು. | 3,4,5,6,7,8,9,10,11,19,20, 21,22,24,25,26,27,28,29, 30,31,32,34,35,37,39,40, 42,43,44,46,50. |
| 11 | ಬ್ರಿಟೀಷ್ ಸಾಮ್ರಾಜ್ಯ ಸ್ಥಾಪನೆ ಮತ್ತು ವಿಸ್ತರಣೆಗೆ ಯುದ್ಧ ತಂತ್ರ, ಅವರ ನೀತಿಗಳು ಮತ್ತು ಸಹಾಯಕ ಅಂಶಗಳನ್ನು ವಿಶ್ಲೇಷಿಸುವರು. | 1,2,12,13,14,15,16,17, 1823,33,36,38,41,45, 47,48,49. |

| ಕ್ರಮ ಸಂಖ್ಯೆ | ಪ್ರಶ್ನೆಗಳ ವಿಧ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 15 |
| 2 | ಸಾಧಾರಣ | 28 |
| 3 | ಕಠಿಣ | 7 |
| **ಒಟ್ಟು** | **ಒಟ್ಟು ಪ್ರಶ್ನೆಗಳು** | **50** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಆರ್ಕಾಟ್ ಈ ಪ್ರದೇಶದ ರಾಜಧಾನಿಯಾಗಿತ್ತು. (ಸಾಧಾರಣ)

   A. ಮೈಸೂರು B. ಬಂಗಾಳ C. ಮದ್ರಾಸ್ D. ಕರ್ನಾಟಿಕ್

2. ಇಂಗ್ಲೀಷರನ್ನು ದಕ್ಷಿಣ ಭಾರತದ ಶಕ್ತಿಯನ್ನಾಗಿ ರೂಪಿಸಿದ ಯುದ್ಧಗಳು. (ಸಾಧಾರಣ)

   A. ಪ್ಲಾಸಿ ಮತ್ತು ಬಕ್ಸಾರ್ ಯುದ್ಧಗಳು

   B. ಆಂಗ್ಲೋ-ಅಫ್ಘಾನ್ ಯುದ್ಧಗಳು

   C. ಆಂಗ್ಲೋ-ಸೀಖ್ ಯುದ್ಧಗಳು

   D. ಕರ್ನಾಟಿಕ್ ಯುದ್ಧಗಳು

3. ಪ್ರಖ್ಯಾತ ಮಯೂರ ಸಿಂಹಾಸನ ಮತ್ತು ಕೊಹಿನೂರ್ ವಜ್ರವನ್ನು ಕೊಳ್ಳೆ ಹೊಡೆದ ಪರ್ಷಿಯಾದ ರಾಜ. (ಸಾಧಾರಣ)

   A. ನಾದಿರ್ ಷಾ B. ಮಹಮ್ಮದ್ ಘೋರಿ C. ಅಹ್ಮದ್ ಷಾ D. ಮಹಮ್ಮದ್ ಘಜನಿ

4. ಹಿಂದೂ ಧರ್ಮದ ರಕ್ಷಣೆಗಾಗಿ ಸ್ಥಾಪಿತವಾದ ಮರಾಠ ರಾಜ್ಯದ ಸ್ಥಾಪಕ. (ಸಾಧಾರಣ)

   A. ಷಹಾಜಿ ಬೊಸ್ಲೆ B. ಛತ್ರಪತಿ ಶಿವಾಜಿ C. ಬಾಲಾಜಿ ವಿಶ್ವನಾಥ D. ದಾದಾಜಿ ಕೊಂಡದೇವ

5. ಶಿವಾಜಿಯ ಯಶಸ್ವಿ ಆಡಳಿತ ನಿರ್ವಹಣೆಗೆ ನೆರವಾದ ಮಂತ್ರಿಗಳು. (ಸಾಧಾರಣ)

   A. ನವರತ್ನಗಳು B. ಅಷ್ಟ ದಿಕ್ಪಾಲಕರು C. ಅಷ್ಟ ದಿಗ್ಗಜರು D. ಅಷ್ಟ ಪ್ರಧಾನರು

6. ಇತಿಹಾಸಕಾರರು 18ನೇ ಶತಮಾನವನ್ನು ಇವರ ಪರಮಾಧಿಕಾರದ ಕಾಲ ಎಂದು ಬಣ್ಣಿಸಿದ್ದಾರೆ. (ಸಾಧಾರಣ)

   A. ಬ್ರಿಟಿಷರು B. ಮರಾಠರು C. ಫ್ರೆಂಚರು D. ಮೊಗಲರು

7. ಮರಾಠ ರಾಜನ ಪ್ರಧಾನ ಮಂತ್ರಿಯನ್ನು ಹೀಗೆ ಕರೆಯುತ್ತಿದ್ದರು. (ಸಾಧಾರಣ)

   A. ಪೇಶ್ವೆ B. ಮುಖ್ಯಮಂತ್ರಿ C. ದಿವಾನ D. ಅಮಾತ್ಯ

8. ಎರಡನೇ ಶಿವಾಜಿ ಎಂಬ ಕೀರ್ತಿಗೆ ಪಾತ್ರನಾದ ಮರಾಠ ಪೇಶ್ವೆ. (ಸಾಧಾರಣ)

   A. ಬಾಲಾಜಿ ವಿಶ್ವನಾಥ B. ಬಾಲಾಜಿ ಬಾಜೀರಾವ್ C. ಒಂದನೇ ಬಾಜೀರಾವ್ D. ಮಾಧವರಾವ್

9. ಅಹ್ಮದ್ ಷಾ ಅಬ್ದಾಲಿಯೊಂದಿಗೆ ನಡೆದ 3ನೇ ಪಾಣಿಪತ್ ಕದನದ ಸಮಯದಲ್ಲಿದ್ದ ಮರಾಠ ಪೇಶ್ವೆ. (ಸಾಧಾರಣ)

   A. ಬಾಲಾಜಿ ಬಾಜೀರಾವ್ B. ಬಾಲಾಜಿ ವಿಶ್ವನಾಥ C. ಒಂದನೇ ಬಾಜೀರಾವ್ D. ಮಾಧವರಾವ್

10. ಮೂರನೇ ಪಾಣಿಪತ್ ಕದನ ಈ ವರ್ಷದಲ್ಲಿ ನಡೆಯಿತು. (ಸಾಧಾರಣ)

   A. ಸಾ.ಶ. 1757 B. ಸಾ.ಶ. 1764 C. ಸಾ.ಶ. 1761 D. ಸಾ.ಶ. 1771

11. ಈ ಕದನದ ಪರಿಣಾಮವಾಗಿ ಮರಾಠರ ಸೈನಿಕ ಶಕ್ತಿ ಕುಂದಿತು. (ಸಾಧಾರಣ)

   A. 1ನೇ ಪಾಣಿಪತ್ ಕದನ B. 3ನೇ ಪಾಣಿಪತ್ ಕದನ C. 2ನೇ ಪಾಣಿಪತ್ ಕದನ D. 4ನೇ ಪಾಣಿಪತ್ ಕದನ

12. ಕರ್ನಾಟಿಕ್ ಎಂಬುದು ಈ ಸಾಮ್ರಾಜ್ಯದ ಒಂದು ಪ್ರಾಂತ್ಯವಾಗಿತ್ತು. (ಸಾಧಾರಣ)

   A. ಮರಾಠ B. ಮೈಸೂರು C. ಸಿಖ್ D. ಮೊಗಲ್

13. ಕೋರ್ ಮಂಡಲ ತೀರ ಮತ್ತು ಅದರ ಹಿನ್ನಾಡನ್ನು ಯುರೋಪಿಯನ್ನರು ಹೀಗೆನ್ನುತ್ತಿದ್ದರು. (ಸಾಧಾರಣ)

A. ಮಲಬಾರ್  B. ಕೊಂಕಣ ತೀರ  C. ಕರ್ನಾಟಿಕ್  D. ಕೆನರಾ

14. ದಕ್ಷಿಣ ಭಾರತದ ಮೇಲೆ ಹಿಡಿತ ಸಾಧಿಸಲು ಬ್ರಿಟೀಷರು–ಫ್ರೆಂಚರ ನಡುವೆ ನಡೆದ ಕದನಗಳು. (ಸಾಧಾರಣ)

A. ಆಂಗ್ಲೋ-ಮೈಸೂರು ಯುದ್ಧಗಳು

B. ಕರ್ನಾಟಿಕ್ ಯುದ್ಧಗಳು

C. ಆಂಗ್ಲೋ-ಮರಾಠಾ ಯುದ್ಧಗಳು

D. ಆಂಗ್ಲೋ-ಸೀಖ್ ಯುದ್ಧಗಳು

15. ಮೊದಲ ಕರ್ನಾಟಿಕ್ ಯುದ್ಧದಲ್ಲಿ ಮೇಲುಗೈ ಸಾಧಿಸಿದವರು. (ಸಾಧಾರಣ)

A. ಮರಾಠರು  B. ಹೈದರಾಲಿ  C. ಬ್ರಿಟಿಷರು  D. ಫ್ರೆಂಚರು

16. ಎರಡನೇ ಕರ್ನಾಟಿಕ್ ಯುದ್ಧ : ಪಾಂಡಿಚೇರಿ ಒಪ್ಪಂದ :: ಮೊದಲ ಕರ್ನಾಟಿಕ್ ಯುದ್ಧ : _______. (ಸಾಧಾರಣ)

A. ಎಕ್ಸ್-ಲಾ-ಚಾಪೆಲ್  B. ಆರ್ಕಾಟ್  C. ಬೆಸ್ಸಿನ್  D. ಮದ್ರಾಸ್

17. ಕರ್ನಾಟಿಕ್ ಯುದ್ಧಗಳಲ್ಲಿ ಅಂತಿಮವಾಗಿ ಗೆದ್ದವರು. (ಸಾಧಾರಣ)

A. ಮರಾಠರು  B. ಹೈದರಾಲಿ  C. ಬ್ರಿಟಿಷರು  D. ಫ್ರೆಂಚರು

18. ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿ : ಖಾಸಗಿ ಸ್ವಾಮ್ಯದ್ದು :: ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ : _______. (ಸಾಧಾರಣ)

A. ಸರ್ಕಾರಿ ಸ್ವಾಮ್ಯ  B. ಸ್ವಾಯತ್ತ ಸ್ವಾಮ್ಯ  C. ಖಾಸಗಿ ಸ್ವಾಮ್ಯ  D. ಅರೆ ಸರ್ಕಾರಿ ಸ್ವಾಮ್ಯ

19. ಬಂಗಾಳವು ಈ ಸಾಮ್ರಾಜ್ಯದ ಸಂಪದ್ಭರಿತ ಪ್ರಾಂತ್ಯವಾಗಿತ್ತು. (ಸಾಧಾರಣ)

A. ಮರಾಠ  B. ಮೈಸೂರು  C. ಸಿಖ್  D. ಮೊಗಲ್

20. ಅಲಿವರ್ದಿ ಖಾನ್‌ನ ನಂತರ ಬಂಗಾಳದ ನವಾಬನಾದವನು. (ಸಾಧಾರಣ)

A. ಮೀರ್ ಜಾಫರ್  B. ಮೀರ್ ಖಾಸಿಂ  C. ಸಿರಾಜ್ ಉದ್ದೌಲ  D. ಮಹ್ಮದ್ ಸಿರಾಜ್

21. ನವಾಬನ ಅನುಮತಿ ಪಡೆಯದೆ ಬ್ರಿಟಿಷರು ಕಲ್ಕತ್ತಾದಲ್ಲಿ ಬಲಪಡಿಸಿದ ಕೋಟೆ. (ಸಾಧಾರಣ)

A. ಸೇಂಟ್ ಜಾರ್ಜ್  B. ಫೋರ್ಟ್ ವಿಲಿಯಂ  C. ಫೋರ್ಟ್ ಎಲಿಜಬೆತ್  D. ರೆಡ್ ಫೋರ್ಟ್

22. ರಾಬರ್ಟ್ ಕ್ಲೈವ್ ಈ ಸೇನೆಯ ಸೇನಾ ನಾಯಕನಾಗಿದ್ದನು. (ಸಾಧಾರಣ)

A. ಫ್ರೆಂಚ್  B. ಪೋರ್ಚುಗೀಸ್  C. ಡಚ್ಚ್  D. ಬ್ರಿಟಿಷ್

23. ಫ್ರೆಂಚರ ಮಹತ್ವಾಕಾಂಕ್ಷಿ ಸೇನಾ ನಾಯಕನಿವನು. (ಸಾಧಾರಣ)

A. ಡೂಪ್ಲೆ  B. ರಾಬರ್ಟ್ ಕ್ಲೈವ್  C. ಕೌಂಟ್ ಡಿ ಲ್ಯಾಲಿ  D. ಹೆಸ್ಟಿಂಗ್ಸ್

24. ಭಾರತದಲ್ಲಿ ಬ್ರಿಟಿಷರ ಅದೃಷ್ಟವನ್ನು ನಿರ್ಧರಿಸಿದ ಪ್ಲಾಸಿ ಕದನ ನಡೆದ ವರ್ಷ. (ಸಾಧಾರಣ)

A. ಸಾ.ಶ. 1756  B. ಸಾ.ಶ. 1764  C. ಸಾ.ಶ. 1757  D. ಸಾ.ಶ. 1857

25. ಪ್ಲಾಸಿ ಕದನದಲ್ಲಿ ಬ್ರಿಟಿಷರೊಡನೆ ಹೋರಾಡಿದವನು. (ಸಾಧಾರಣ)

A. ಮೀರ್ ಜಾಫರ್  B. ಸಿರಾಜ್ ಉದ್ದೌಲ  C. ಮೀರ್ ಖಾಸಿಂ  D. ಮಹ್ಮದ್ ಸಿರಾಜ್

26. ಪ್ಲಾಸಿ ಕದನದಲ್ಲಿ ಬ್ರಿಟಿಷ್ ಸೇನೆಯ ನಾಯಕತ್ವ ವಹಿಸಿಕೊಂಡಿದ್ದವನು. (ಸಾಧಾರಣ)

A. ಡೂಪ್ಲೆ  B. ವಾರನ್ ಹೆಸ್ಟಿಂಗ್ಸ್  C. ಕಾರ್ನ್‌ವಾಲೀಸ್  D. ರಾಬರ್ಟ್ ಕ್ಲೈವ್

27. ಸಿರಾಜ್ ಉದ್ದೌಲನ ಮಂತ್ರಿಯಾದ ಇವನು ಬ್ರಿಟಿಷರೊಡನೆ ರಹಸ್ಯ ಒಪ್ಪಂದ ಮಾಡಿಕೊಂಡನು. (ಸಾಧಾರಣ)

A. ಮೀರ್ ಜಾಫರ್  B. ಮೀರ್ ಸಾದಿಕ್  C. ಮೀರ್ ಖಾಸಿಂ  D. ಸಾಲಾರ್ ಜಂಗ್

28. ಬಂಗಾಳದ ನವಾಬನಾಗುವ ಆಸೆಯಿಂದ ಮೀರ್ ಜಾಫರ್ ಬ್ರಿಟಿಷರೊಡನೆ ಮಾಡಿಕೊಂಡ ಒಪ್ಪಂದದ ಮಧ್ಯಸ್ಥಿಕೆಯನ್ನು ವಹಿಸಿದ್ದ ವರ್ತಕ. (ಸಾಧಾರಣ)

A. ಉದಯ ಚಂದ್  B. ಅಮೀನ್ ಚಂದ್  C. ವಾಲ್ ಚಂದ್  D. ಜಗತ್ ಸೇಠ್

29. ಪ್ಲಾಸಿ ಕದನದ ನಂತರ ಬ್ರಿಟಿಷರ ಕೃಪೆಯಿಂದ ಬಂಗಾಳದ ನವಾಬನಾದವನು. (ಸಾಧಾರಣ)

A. ಮೀರ್ ಜಾಫರ್  B. ಮೀರ್ ಖಾಸಿಂ  C. ಮೀರ್ ಸಾದಿಕ್  D. ಸಿರಾಜ್ ಉದ್ದೌಲ

30. ಪ್ಲಾಸಿ ಕದನದ ನಂತರ ಈಸ್ಟ್ ಇಂಡಿಯಾ ಕಂಪನಿಯು ಜಮೀನ್ದಾರಿ ಹಕ್ಕನ್ನು ಪಡೆದ ಜಿಲ್ಲೆ. (ಸಾಧಾರಣ)

A. ಹದಿನಾಲ್ಕು ಪರಗಣ  B. ಮಿಡ್ನಾಪುರ  C. ಇಪ್ಪತ್ತನಾಲ್ಕು ಪರಗಣ  D. ನಂದಿಗ್ರಾಮ

31. ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಕಬಳಿಸಿದ ಪ್ರಪ್ರಥಮ ಭೂಭಾಗ. (ಸಾಧಾರಣ)

A. ಹದಿನಾಲ್ಕು ಪರಗಣ ಜಿಲ್ಲೆ B. ಬಂಗಾಳ ಜಿಲ್ಲೆ C. ಮಿಡ್ನಾಪುರ ಜಿಲ್ಲೆ D. ನಂದಿಗ್ರಾಮ ಜಿಲ್ಲೆ

32. ಈ ಕೆಳಗಿನ ಮರಾಠ ಪೇಶ್ವೆಗಳ ಆಡಳಿತದ ಸರಿಯಾದ ಅನುಕ್ರಮವನ್ನು ಗುರುತಿಸಿ. (ಕಠಿಣ)

A. ಬಾಲಾಜಿ ಬಾಜೀರಾವ್ → ಬಾಲಾಜಿ ವಿಶ್ವನಾಥ → ಒಂದನೇ ಬಾಜೀರಾವ್

B. ಒಂದನೇ ಬಾಜೀರಾವ್ → ಬಾಲಾಜಿ ವಿಶ್ವನಾಥ → ಬಾಲಾಜಿ ಬಾಜೀರಾವ್

C. ಬಾಲಾಜಿ ವಿಶ್ವನಾಥ → ಒಂದನೇ ಬಾಜೀರಾವ್ → ಬಾಲಾಜಿ ಬಾಜೀರಾವ್

D. ಬಾಲಾಜಿ ವಿಶ್ವನಾಥ → ಬಾಲಾಜಿ ಬಾಜೀರಾವ್ → ಒಂದನೇ ಬಾಜೀರಾವ್

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ, ಅಂಶ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

33. ಅಂತಿಮವಾಗಿ ಕರ್ನಾಟಿಕ್ ಯುದ್ಧಗಳಲ್ಲಿ ಯಾರು ಜಯ ಸಾಧಿಸಿದರು? (ಸುಲಭ)
34. ಮರಾಠ ರಾಜನ ಪ್ರಧಾನ ಮಂತ್ರಿಯನ್ನು ಏನೆಂದು ಕರೆಯುತ್ತಿದ್ದರು? (ಸುಲಭ)
35. ದಖನ್‌ನ ಆರು ಸುಭಾಗಳಿಂದ ತೆರಿಗೆಗಳನ್ನು ವಸೂಲಿ ಮಾಡುವ ಹಕ್ಕನ್ನು ಪಡೆದ ಪೇಶ್ವೆ ಯಾರು? (ಸುಲಭ)
36. ಪ್ಲಾಸಿ ಕದನವು ಯಾರ–ಯಾರ ನಡುವೆ ನಡೆಯಿತು? (ಸುಲಭ)
37. ಮೂರನೇ ಪಾಣಿಪತ್ ಕಾಳಗ ಯಾರ–ಯಾರ ನಡುವೆ ನಡೆಯಿತು? (ಸುಲಭ)
38. ಕರ್ನಾಟಿಕ್ ಪ್ರದೇಶವು ಈಗಿನ ಯಾವ ಪ್ರದೇಶವನ್ನು ಒಳಗೊಂಡಿತ್ತು? (ಸುಲಭ)
39. ಬಂಗಾಳದ ನವಾಬ ಯಾರು? (ಸುಲಭ)
40. ಪ್ಲಾಸಿ ಕದನದಲ್ಲಿದ್ದ ಸಿರಾಜನ ಸೇನಾನಿ ಯಾರು? (ಸುಲಭ)
41. 2ನೇ ಕರ್ನಾಟಿಕ್ ಯುದ್ಧದಲ್ಲಿ ಆರ್ಕಾಟ್ ಹಾಗೂ ಹೈದರಾಬಾದ್‌ನಲ್ಲಿ ಜಯ ಸಾಧಿಸಿದವರು ಯಾರು? (ಸುಲಭ)

**ಇ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

42. ಭಾರತದಲ್ಲಿ ಮರಾಠರ ಪೇಶ್ವೆ ಒಂದನೇ ಬಾಜೀರಾವನ ಸಾಧನೆಗಳನ್ನು ಪಟ್ಟಿ ಮಾಡಿ. (ಸಾಧಾರಣ)
43. ಪ್ಲಾಸಿ ಕದನಕ್ಕೆ ಕಾರಣಗಳು ಯಾವುವು? (ಸಾಧಾರಣ)
44. ಮರಾಠರ ಪ್ರಾಬಲ್ಯದಲ್ಲಿ ಬಾಲಾಜಿ ಬಾಜೀರಾವರ ಪಾತ್ರವನ್ನು ವಿಶ್ಲೇಷಿಸಿ. (ಸಾಧಾರಣ)
45. ಕರ್ನಾಟಿಕ್ ಯುದ್ಧಗಳಿಗೆ ಕಾರಣಗಳನ್ನು ವಿಮರ್ಶಿಸಿ. (ಕಠಿಣ)
46. ಮರಾಠರ ಮೂರು ಪ್ರಮುಖ ಪೇಶ್ವೆಗಳು ಯಾರು? (ಸುಲಭ)

**ಈ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿರಿ.**

47. ಫ್ರೆಂಚರ ಸೋಲಿಗೆ ಕಾರಣವಾದ ಅಂಶಗಳನ್ನು ವಿಮರ್ಶಿಸಿ. (ಕಠಿಣ)
48. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಗೆ ಭದ್ರ ಬುನಾದಿ ಹಾಕಿದ ಪ್ಲಾಸಿ ಕದನದ ಪರಿಣಾಮಗಳನ್ನು ವಿವರಿಸಿ. (ಕಠಿಣ)

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ.**

49. ಭಾರತದಲ್ಲಿ ಬ್ರಿಟಿಷರ ಏಳಿಗೆಗೆ 'ಕರ್ನಾಟಿಕ್ ಕದನ'ಗಳು ಭೂಮಿಕೆಯಾದವು. ಚರ್ಚಿಸಿ. (ಕಠಿಣ)
50. ಇತಿಹಾಸಕಾರರು 18ನೇ ಶತಮಾನವನ್ನು 'ಮರಾಠರ ಪರಮಾಧಿಕಾರದ ಕಾಲ' ಎನ್ನಲು ಕಾರಣ ಕೊಡಿ. (ಕಠಿಣ)

# ಅಧ್ಯಾಯ – 5

# ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆ (ಸಾ.ಶ 1758-1856)

P5V3P7

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 10 | ಮೊಗಲ ಸಾಮ್ರಾಜ್ಯದ ಅವನತಿ, ಮರಾಠರ ರಾಜಕೀಯ ಪ್ರಾಬಲ್ಯದ ಬೆಳವಣಿಗೆಯ ಕುರಿತು ವಿವರಿಸುವರು. | 1,2,3,4,5,6,7,8,18,24,43 |
| 11 | ಬ್ರಿಟೀಷ್ ಸಾಮ್ರಾಜ್ಯ ಸ್ಥಾಪನೆ ಮತ್ತು ವಿಸ್ತರಣೆಗೆ ಯುದ್ಧ ತಂತ್ರ, ಅವರ ನೀತಿಗಳು ಮತ್ತು ಸಹಾಯಕ ಅಂಶಗಳನ್ನು ವಿಶ್ಲೇಷಿಸುವರು. | 9,10,11,12,13,14,15,16,17, 19,20,21,22,23,25,26,27, 28,29,30,31,32,33,34,35, 36,37,38,39,40,41,42,44 45,46,47,48,49,50. |

| ಕ್ರಮ ಸಂಖ್ಯೆ | ಪ್ರಶ್ನೆಗಳ ವಿಧ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 12 |
| 2 | ಸಾಧಾರಣ | 30 |
| 3 | ಕಠಿಣ | 8 |
| ಒಟ್ಟು | ಒಟ್ಟು ಪ್ರಶ್ನೆಗಳು | **50** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಬಂಗಾಳದ ಪ್ರಥಮ ಗವರ್ನರ್ ಆಗಿ ಈಸ್ಟ್ ಇಂಡಿಯಾ ಕಂಪನಿಯಿಂದ ನೇಮಕವಾದವರು. (ಸಾಧಾರಣ )

   A) ರಾಬರ್ಟ್ ಕ್ಲೈವ್ B) ಕಾರ್ನ್ ವಾಲೀಸ್

   C) ವಾರನ್ ಹೇಸ್ಟಿಂಗ್ D) ವೆಲ್ಲಸ್ಲಿ

2. ಬ್ರಿಟಿಷರು ತಮ್ಮ ಅವಶ್ಯಕತೆಗಳನ್ನು ಪೂರೈಸುವಲ್ಲಿ ವಿಫಲನಾದ ನವಾಬ ಮೀರ್ ಜಾಫರ್ ನನ್ನು ಪದಚ್ಯುತಿಗೊಳಿಸಿ ಇವನನ್ನು ಬಂಗಾಳದ ನವಾಬನ ಹುದ್ದೆಗೇರಿಸಿದರು. (ಸಾಧಾರಣ )

A) ಮೀರ್ ಕಾಸಿಂ B) ಮೀರ್ ಸಾಧಿಕ್

C) ಸಾಲಾರ್ ಜಂಗ್ D) ಮುಜಾಫರ್ ಜಂಗ್

3. ಬಕ್ಸಾರ್ ಕದನ ನಡೆದ ವರ್ಷ. (ಸಾಧಾರಣ )

A) ಸಾ.ಶ 1757 B) ಸಾ.ಶ 1764

C) ಸಾ.ಶ 1765 D) ಸಾ.ಶ 1799

4. ಬಕ್ಸಾರ್ ಕದನವು ಇವರ ಮಧ್ಯ ನಡೆಯಿತು. (ಸಾಧಾರಣ )

A) ಮೀರ್ ಕಾಸಿಂ ಮತ್ತು ಬ್ರಿಟಿಷರು B) ಮೀರಾನ್ ಮತ್ತು ಬ್ರಿಟಿಷರು

C) ಮೀರ್ ಜಾಫರ್ ಮತ್ತು ಬ್ರಿಟಿಷರು D) ಮೀರ್ ಕಾಸಿಂ ಮತ್ತು ಮೀರ್ ಜಾಫರ್

5. ಬ್ರಿಟಿಷ್ ವರ್ತಕರು ತೆರಿಗೆ ನೀಡದೆ ವ್ಯಾಪಾರ ಕೈಗೊಳ್ಳಲು ನೀಡಲಾದ ವಿಶೇಷ ಅನುಮತಿ ಪತ್ರಗಳು (ಸಾಧಾರಣ )

A) ಪಟ್ಟಾ ಪುಸ್ತಕಗಳು B) ಅನುಮತಿ ಪತ್ರಗಳು

C) ದಸ್ತಕಗಳು D) ಪಾಸುಗಳು

6. ಸಾ.ಶ 1765 ರಲ್ಲಿ ಬ್ರಿಟಿಷರು ಮೊಗಲ್ ರಾಜ ಎರಡನೇ ಷಾ ಅಲಂನಿಂದ ಪಡೆದಕೊಂಡ ಹಕ್ಕು. (ಸಾಧಾರಣ )

A) ದಿವಾನಿ ಹಕ್ಕು B) ಆಡಳಿತ ನಡೆಸುವ ಹಕ್ಕು

C) ವ್ಯಾಪಾರ ಮಾಡುವ ಹಕ್ಕು D) ಕೋಟೆ ಕಟ್ಟಿಕೊಳ್ಳುವ ಹಕ್ಕು

7. ಈ ತೆರಿಗೆಯನ್ನು ದಿವಾನಿ ಎನ್ನುವರು. (ಸಾಧಾರಣ )

A) ವ್ಯಾಪಾರ ತೆರಿಗೆ B) ಭೂಕಂದಾಯ

C) ತಲೆಗಂದಾಯ D) ವೃತ್ತಿ ತೆರಿಗೆ

8. ಸಾ.ಶ 1765 ರ ಒಪ್ಪಂದದಂತೆ ಕಂಪನಿಯು ಪ್ರತಿವರ್ಷ ಮೊಗಲ್ ರಾಜನಿಗೆ ನೀಡಬೇಕೆಂದು ನಿರ್ಧರಿಸಲಾದ ಮೊತ್ತ. (ಸಾಧಾರಣ )

A) 20 ಲಕ್ಷ B) 22 ಲಕ್ಷ

C) 24 ಲಕ್ಷ D) 26 ಲಕ್ಷ

9. ರೇಗುಲೇಟಿಂಗ್ ಆಕ್ಟ್ ಜಾರಿಯಾದ ವರ್ಷ. (ಸಾಧಾರಣ )

A) ಸಾ.ಶ 1771 B) ಸಾ.ಶ 1772

C) ಸಾ.ಶ 1773 D) ಸಾ.ಶ 1774

10. ವಾರನ್ ಹೇಸ್ಟಿಂಗ್ ನು ಈ ಆಕ್ಟ್ ನ ಪ್ರಕಾರ ಬಂಗಾಳದ ಪ್ರಥಮ ಗರ್ವನರ್ ಜನರಲ್ ಆಗಿ ನೇಮಿಸಲ್ಪಟ್ಟನು. (ಸಾಧಾರಣ )

A) ರೆಗ್ಯುಲೇಟಿಂಗ್ ಆಕ್ಟ್ B) ಪಿಟ್ ಇಂಡಿಯಾ ಆಕ್ಟ್

C) ಇಂಡಿಯನ್ ಕೌನ್ಸಲ್ ಆಕ್ಟ್ D) ಈಸ್ಟ ಇಂಡಿಯಾ ಆಕ್ಟ್

11. ರೆಗ್ಯುಲೇಟಿಂಗ್ ಕಾಯ್ದೆಯ ಲೋಪದೋಷಗಳನ್ನು ಸರಿಪಡಿಸಲು ಬ್ರಿಟಿಷ್ ಸರ್ಕಾರ ಜಾರಿಗೊಳಸಿದ ಕಾಯ್ದೆ. (ಸಾಧಾರಣ )

A) ರೇಗ್ಯುಲೇಟಿಂಗ್ ಆಕ್ಟ್ B) ಪಿಟ್ ಇಂಡಿಯಾ ಆಕ್ಟ್

C) ಇಂಡಿಯನ್ ಕೌನ್ಸಿಲ್ ಆಕ್ಟ್ D) ರೌಲಟ್ ಆಕ್ಟ್

12. ಪಿಟ್ಸ ಇಂಡಿಯಾ ಕಾಯ್ದೆಯನ್ನು ಬ್ರಿಟೀಷ್ ಸರ್ಕಾರ ಈ ವರ್ಷದಲ್ಲಿ ಜಾರಿಗೊಳಿಸಿತು. (ಸಾಧಾರಣ )

A) ಸಾ.ಶ 1773 B) ಸಾ.ಶ 1774

C) ಸಾ.ಶ 1783 D) ಸಾ.ಶ 1784

13. ಟಿಪ್ಪು ಸುಲ್ತಾನ್ ಮತ್ತು ಹೈದರಾಲಿ ಬ್ರಿಟಿಷರೊಂದಿಗೆ ನಡೆಸಿದ ಯುದ್ಧಗಳು. (ಸುಲಭ )

A) ಆಂಗ್ಲೋ-ಮೈಸೂರು ಯುದ್ಧಗಳು B) ಆಂಗ್ಲೋ-ಸಿಖ್ ಯುದ್ಧಗಳು

C) ಆಂಗ್ಲೋ-ಮರಾಠ ಯುದ್ಧಗಳು D) ಕರ್ನಾಟಿಕ್ ಯುದ್ಧಗಳು

14. ಸಾ.ಶ 1775 ರಿಂದ 1818 ರ ಮಧ್ಯ ನಡೆದ ಆಂಗ್ಲೋ ಮರಾಠ ಯುದ್ಧಗಳ ಸಂಖ್ಯೆ. (ಸಾಧಾರಣ )

A) 2 B) 3 C) 4 D) 5

15. 18ನೇ ಶತಮಾನದ ಉತ್ತರಾರ್ಧ ದಲ್ಲಿ ಸಿಖ್ ರಲ್ಲಿದ್ದ ಪಂಗಡಗಳಿಗೆ ಹೀಗೆನ್ನುತ್ತಿದ್ದರು. (ಸಾಧಾರಣ )

A) ಪಂಕ್ತಿಗಳು B) ಪ್ರಾಂತ್ಯಗಳು

C) ಮಿಸಲ್ ಗಳು D) ಗಣರಾಜ್ಯಗಳು

16. ಸಿಖ್ ರನ್ನು ಒಗ್ಗೂಡಿಸಿ ಪ್ರಬಲ ರಾಜಕೀಯ ಶಕ್ತಿಯಾಗಿ ಮಾರ್ಪಡಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. (ಸಾಧಾರಣ )

A) ಗೋವಿಂದ ಸಿಂಗ್ B) ರಣವೀರ್ ಸಿಂಗ್

C) ತೇಜ ಬಹದ್ದೂರ್ D) ರಣಜಿತ್ ಸಿಂಗ್

17. ಪಂಜಾಬ ರಾಜ್ಯ ಈ ವರ್ಷದಲ್ಲಿ ಬ್ರಿಟಿಷರ ವಶವಾಯಿತು. (ಸಾಧಾರಣ )

A) ಸಾ.ಶ 1757 B) ಸಾ.ಶ 1849

C) ಸಾ.ಶ 1857 D) ಸಾ.ಶ 1784

18. ಅಪ್ಘನ್ ರಾಜನು ಕೊಹಿನೂರ್ ವಜ್ರವನ್ನು ಈತನಿಗೆ ಉಡುಗೊರೆಯಾಗಿ ನೀಡಿದ್ದನು. (ಸಾಧಾರಣ )

A) ರಣಜಿತ್ ಸಿಂಗ್ B) ಗೋವಿಂದ ಸಿಂಗ್

C) ರಣವೀರ್ ಸಿಂಗ್ D) ತೇಜ ಬಹದ್ದೂರ್

19. ಸಹಾಯಕ ಸೈನಿಕ ಪದ್ಧತಿಯನ್ನು ಜಾರಿಗೆ ತಂದ ಈ ಗವರ್ನರ್ ಜನರಲ್ ಇವರಾಗಿದ್ದಾರೆ. (ಸಾಧಾರಣ)

A) ಲಾರ್ಡ್ ಕಾರ್ನ ವಾಲೀಸ್ B) ಲಾರ್ಡ್ ಡಾಲ್ ಹೌಸಿ

C) ಲಾರ್ಡ್ ವೆಲ್ಲಸ್ಲಿ D) ಲಾರ್ಡ್ ಕ್ಯಾನಿಂಗ್

20. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್ ರನ್ನು ಗುರುತಿಸಿ (ಸಾಧಾರಣ)

A) ಲಾರ್ಡ್ ಕಾರ್ನ್ ವಾಲೀಸ್ B) ಲಾರ್ಡ್ ಡಾಲ್ ಹೌಸಿ

C) ಲಾರ್ಡ್ ವೆಲ್ಲೆಸ್ಲಿ D) ಲಾರ್ಡ್ ಕ್ಯಾನಿಂಗ್

21. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಈ ವರ್ಷದಲ್ಲಿ ನಡೆಯಿತು.(ಸಾಧಾರಣ)

A) ಸಾ.ಶ 1757 B) ಸಾ.ಶ 1764

14. ಅಮೆರಿಕ ಮತ್ತು ಕೆನಡಾದ ಪ್ರಮುಖ ನದಿ ಯಾವುದು? (ಸಾಧಾರಣ)

A) ಒಂಟಾರಿಯೊ

B) ಮಿಚಿಗನ್

C) ಸೇಂಟ್ ಲಾರೆನ್ಸ್

D) ಹ್ಯೂರಾನ್

15. ವಿಶ್ವದ ಅತಿದೊಡ್ಡ ಸಿಹಿನೀರಿನ ಸರೋವರ ಯಾವುದು? (ಸಾಧಾರಣ)

A) ಐರಿ

B) ಮಿಚಿಗನ್

C) ಸುಪೀರಿಯರ್

D) ಒಂಟಾರಿಯೊ

16. ಚಿಕಾಗೋ ಮತ್ತು ಡೆಟ್ರಾಯಿಟ್ ನಗರಗಳು ಯಾವ ಸರೋವರದ ದಡದಲ್ಲಿವೆ? (ಸಾಧಾರಣ)

A) ಸುಪೀರಿಯರ್

B) ಒಂಟಾರಿಯೊ

C) ಮಿಚಿಗನ್

D) ಐರಿ

17. ಹರಿಕೇನ್ ಮತ್ತು ಟಾರ್ನಾಡೋಗಳಂತಹ ಬಿರುಗಾಳಿಗಳು ಹೆಚ್ಚಾಗಿ ಕಂಡುಬರುವ ಪ್ರದೇಶ ಯಾವುದು? (ಸಾಧಾರಣ)

A) ಕೇಂದ್ರೀಯ ಭಾಗ

B) ಕೇಂದ್ರ ಮತ್ತು ದಕ್ಷಿಣ ಭಾಗಗಳು

C) ನೈರುತ್ಯ ಭಾಗ

D) ಆಗ್ನೇಯ ಭಾಗ

18. ಕೆನಡಾ, ಅಲಾಸ್ಕಾ ಮತ್ತು ಗ್ರೀನ್‌ಲ್ಯಾಂಡ್ ಪ್ರದೇಶಗಳಲ್ಲಿ ಯಾವ ಸಸ್ಯವರ್ಗ ಬೆಳೆಯುತ್ತದೆ? (ಸಾಧಾರಣ)

A) ಟೈಗಾ ಹುಲ್ಲುಗಾವಲು

B) ತಂಡ್ರು ಪಾಚಿ ಮತ್ತು ಹಾವಸೆಗಳು

C) ಪೈನ್, ಫರ್, ಲಾರ್ಚ್

D) ಎಲೆ ಉದುರುವ ಅರಣ್ಯ

19. ಸೂಚಿಪರ್ಣ ಅರಣ್ಯಗಳಲ್ಲಿ ಸದಾ ಹಸಿರಾಗಿರುವ ಸಸ್ಯಗಳು ಯಾವುವು? (ಸಾಧಾರಣ)

A) ಟೈಗಾ ಹುಲ್ಲುಗಾವಲು

B) ತಂಡ್ರು ಪಾಚಿ ಮತ್ತು ಹಾವಸೆಗಳು

C) ಪೈನ್, ಫರ್, ಲಾರ್ಚ್

D) ಎಲೆ ಉದುರುವ ಅರಣ್ಯ

20. ಪ್ರಪಂಚದ ಗೋಧಿಯ ಕಣಜ ಎಂದು ಯಾವ ಪ್ರದೇಶವನ್ನು ಕರೆಯುತ್ತಾರೆ? (ಸಾಧಾರಣ)

A) ಸ್ಟೆಪ್ಪಿಸ್

B) ಪ್ರೈರೀಸ್

C) ಡೌನ್ಸ್

D) ಪಂಪಾಸ್

21. ಮೆಡಿಟರೇನಿಯನ್ ಮಾದರಿಯ ವಾಯುಗುಣ ಹೊಂದಿರುವ ಪ್ರದೇಶ ಯಾವುದು? (ಸಾಧಾರಣ)

A) ಕ್ಯಾಲಿಫೋರ್ನಿಯಾದ ಪಶ್ಚಿಮ ಕರಾವಳಿ

B) ಅಲಾಸ್ಕಾದ ಉತ್ತರ ಭಾಗ

C) ಯುಎಸ್ಎ ಪಶ್ಚಿಮ ಭಾಗ

D) ಕೆರಿಬಿಯನ್ ದ್ವೀಪಗಳು

22. 'ಜಗತ್ತಿನ ಸಕ್ಕರೆ ಬೊಗಣಿ' ಎಂದು ಯಾವ ಪ್ರದೇಶವನ್ನು ಕರೆಯುತ್ತಾರೆ? (ಸಾಧಾರಣ)

A) ಉತ್ತರ ಅಮೆರಿಕ

B) ಕ್ಯೂಬಾ

C) ಮೆಕ್ಸಿಕೋ

D) ಕ್ಯಾಲಿಫೋರ್ನಿಯಾ

23.'ದ್ರಾಕ್ಷಾರಸದ ರಾಜ್ಯ' ಎಂದು ಯಾವುದನ್ನು ಕರೆಯುತ್ತಾರೆ? (ಸಾಧಾರಣ)

A) ನ್ಯೂ ಜರ್ಸಿ

B) ಫ್ಲೋರಿಡಾ

C) ಕ್ಯಾಲಿಫೋರ್ನಿಯಾ

D) ವೆಸ್ಟ್ ಇಂಡೀಸ್

24.ಗ್ರ್ಯಾಂಡ್ ಬ್ಯಾಂಕ್, ಜಾರ್ಜಸ್ ಬ್ಯಾಂಕ್ ಮತ್ತು ನ್ಯೂಫೌಂಡ್‌ಲ್ಯಾಂಡ್ ಯಾವ ಕಾರಣಕ್ಕೆ ಪ್ರಸಿದ್ಧವಾಗಿವೆ? (ಸಾಧಾರಣ)

A) ತೋಟಗಾರಿಕೆ

B) ಕಾಫಿ ಉತ್ಪಾದನೆ

C) ಮೀನುಗಾರಿಕೆ

D) ಹಂದಿ ಸಾಕಾಣಿಕೆ

25.ಉತ್ತರ ಅಮೆರಿಕದ ಪ್ರಮುಖ ಖನಿಜಗಣಿ ಯಾವುದು? (ಸಾಧಾರಣ)

A) ತಾಮ್ರ

B) ಚಿನ್ನ

C) ಕಬ್ಬಿಣ

D) ಬೆಳ್ಳಿ

26.ವಿಶ್ವದ ಪ್ರಮುಖ ಬೆಳ್ಳಿ ಉತ್ಪಾದಿಸುವ ರಾಷ್ಟ್ರ ಯಾವುದು? (ಸಾಧಾರಣ)

A) ಕೆನಡಾ

B) ಮೆಕ್ಸಿಕೋ

C) ಆಫ್ರಿಕಾ

D) ಚೀನಾ

27.ವಿಶ್ವದಲ್ಲಿ ಅತಿ ಹೆಚ್ಚು ಅಣುಶಕ್ತಿಯನ್ನು ಉತ್ಪಾದಿಸುವ ದೇಶ ಯಾವುದು? (ಸಾಧಾರಣ)

A) ಕೆನಡಾ

B) ಅಮೆರಿಕ ಸಂಯುಕ್ತ ಸಂಸ್ಥಾನ

C) ಚೀನಾ

D) ಮೆಕ್ಸಿಕೋ

28.'ಉಕ್ಕಿನ ನಗರ' ಎಂದು ಯಾವ ನಗರವನ್ನು ಕರೆಯುತ್ತಾರೆ? (ಸಾಧಾರಣ)

A) ಕ್ಯಾಲಿಫೋರ್ನಿಯಾ

B) ವೆಸ್ಟ್ ಇಂಡೀಸ್

C) ಚಿಕಾಗೋ

D) ಪಿಟ್ಸ್‌ಬರ್ಗ್

29.ಪ್ಲಾಸ್ಟಿಕ್ ಕೈಗಾರಿಕೆಗಳಿಗೆ ಹೆಸರುವಾಸಿಯಾದ ನಗರ ಯಾವುದು? (ಸಾಧಾರಣ)

A) ಕೆನಡಾ

B) ಚಿಕಾಗೋ

C) ಕಾನ್ಸಾಸ್

D) ಅಲಾಸ್ಕಾ

30.ಉತ್ತರ ಅಮೆರಿಕದಲ್ಲಿ ಹೆಚ್ಚಿನ ಜನಸಾಂದ್ರತೆ ಕಂಡುಬರುವ ಭಾಗ ಯಾವುದು? (ಸಾಧಾರಣ)

A) ಪಶ್ಚಿಮ ಭಾಗ

B) ಪೂರ್ವ ಭಾಗ

C) ಉತ್ತರ ಭಾಗ

D) ದಕ್ಷಿಣ ಭಾಗ

**ಆ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

31.ಉತ್ತರ ಅಮೆರಿಕ ಖಂಡವನ್ನು _________ ಖಂಡ ಎಂದು ಕರೆಯುತ್ತಾರೆ. (ಸುಲಭ)

32.ಕೆನಡಾದಲ್ಲಿ ಮರಕಡಿಯುವ ವೃತ್ತಿಯನ್ನು ಅವಲಂಬಿಸಿದ ಜನರನ್ನು _________ ಎನ್ನುವರು. (ಸುಲಭ)

33.ಪ್ರಪಂಚದ ಗೋಧಿಯ ಕಣಜ ಎಂದು _________ ಅನ್ನು ಕರೆಯುತ್ತಾರೆ. (ಸುಲಭ)

34.ಸೂಚಿಪರ್ಣ ಅರಣ್ಯವನ್ನು _________ ಎಂದು ಕರೆಯಲಾಗಿದೆ. (ಸುಲಭ)

35.ಹಡ್ಸನ್ ಕೊಲ್ಲಿ _________ ಸಾಗರದಲ್ಲಿ ಕಂಡುಬರುತ್ತದೆ. (ಸುಲಭ)

36. ಓಲ್ಡ್ ಫೇತ್‌ಫುಲ್ ಗೈಸರ್ _________ ರಾಷ್ಟ್ರೀಯ ಉದ್ಯಾನದಲ್ಲಿ ಕಂಡುಬರುತ್ತದೆ. (ಸುಲಭ)

37. ಬಾರ್ಲಿಯನ್ನು _________ ತಯಾರಿಕೆಗೆ ಬಳಸಲಾಗುತ್ತದೆ. (ಸುಲಭ)

**ಇ. ಹೊಂದಿಸಿ ಬರೆಯಿರಿ. (ಸಾಧಾರಣ)**

| ಅ | ಬ |
|---|---|
| 1. ಮೆಕ್ಸಿಕೋ | ಅ. ಕ್ರಿಕೆಟ್, ದ್ವೀಪಗಳು |
| 2. ಕೆನಡಾ | ಆ. ಮಾಯನ್ ನಾಗರಿಕತೆಯ ತಾಣಗಳು |
| 3. ಯುಎಸ್‌ಎ | ಇ. ಕಿವಿಮ್ (ಕಿಮ್) ಹಕ್ಕಿ, ಹಿಮಕರಡಿ |
| 4. ವೆಸ್ಟ್ ಇಂಡೀಸ್ | ಈ. ಗ್ರ್ಯಾಂಡ್ ಕ್ಯಾನಿಯನ್, ಹೋಮ್ಸ್, ಬ್ಯಾರಿಂಜರ್ ಕ್ರೇಟರ್, ಜ್ವಾಲಾಮುಖಿಗಳು |

**ಈ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

39. ಜಗತ್ತಿನ ಅತಿದೊಡ್ಡ ದ್ವೀಪ ಯಾವುದು? (ಸುಲಭ)

40. ಉತ್ತರ ಅಮೆರಿಕ ಖಂಡದ ಅತಿ ತಗ್ಗಾದ ಭಾಗ ಯಾವುದು? (ಸುಲಭ)

41. ವೈಟ್ನಿ ಪರ್ವತಗಳು ಮತ್ತು ಶ್ವೇತ ಪರ್ವತಗಳು ಕಂಡುಬರುವ ಪ್ರದೇಶ ಯಾವುದು? (ಸುಲಭ)

42. ಲ್ಯಾಬ್ರಡಾರ್ ಪ್ರಸ್ಥಭೂಮಿಯನ್ನು ಅಪಲೇಶಿಯನ್ ಶ್ರೇಣಿಗಳಿಂದ ಪ್ರತ್ಯೇಕಿಸುವ ಕಣಿವೆ ಯಾವುದು? (ಸುಲಭ)

43. ಒಂದು ವರ್ಷದ ಐದು ತಿಂಗಳು ಹಿಮದಿಂದ ಆವೃತವಾಗಿರುವ ಉತ್ತರ ಅಮೆರಿಕದ ನದಿ ಯಾವುದು? (ಸುಲಭ)

44. ಉತ್ತರ ಅಮೆರಿಕದಲ್ಲಿ "ಕಾರ್ನ್" ಎಂದು ಪ್ರಸಿದ್ಧವಾದ ಬೆಳೆ ಯಾವುದು? (ಸುಲಭ)

45. ಉತ್ತರ ಅಮೆರಿಕದ ಪ್ರಮುಖ ಖನಿಜಗಣಿ ಯಾವುದು? (ಸುಲಭ)

46. ವಿಶ್ವದಲ್ಲಿ ಅಧಿಕ ಅಣುಶಕ್ತಿಯನ್ನು ಉತ್ಪಾದಿಸುವ ದೇಶ ಯಾವುದು? (ಸುಲಭ)

47. ಆರ್ಕ್ಟಿಕ್ ಮಹಾಸಾಗರದಲ್ಲಿರುವ ಅತಿದೊಡ್ಡ ದ್ವೀಪ ಯಾವುದು? (ಸುಲಭ)

48. ಉತ್ತರ ಅಮೆರಿಕ ಖಂಡದಲ್ಲಿ ಎಷ್ಟು ದೇಶಗಳಿವೆ? (ಸುಲಭ)

**ಉ. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

49. ಉತ್ತರ ಅಮೆರಿಕ ಖಂಡದ ಸ್ಥಾನ ಮತ್ತು ವಿಸ್ತೀರ್ಣ ತಿಳಿಸಿ. (ಸಾಧಾರಣ)
50. ಉತ್ತರ ಅಮೆರಿಕ ಖಂಡದ ಪ್ರಮುಖ ರಾಷ್ಟ್ರಗಳನ್ನು ಪಟ್ಟಿ ಮಾಡಿರಿ. (ಸಾಧಾರಣ)
51. ಉತ್ತರ ಅಮೆರಿಕದ ಗ್ರ್ಯಾಂಡ್ ಕ್ಯಾನಿಯನ್ ಹೇಗೆ ನಿರ್ಮಾಣಗೊಂಡಿದೆ? (ಸಾಧಾರಣ)
52. ಉತ್ತರ ಅಮೆರಿಕದ ಪ್ರಮುಖ ಸಸ್ಯಗಳು ಹಾಗೂ ಪ್ರಾಣಿಗಳನ್ನು ಹೆಸರಿಸಿರಿ. (ಸುಲಭ)
53. ಉತ್ತರ ಅಮೆರಿಕದ ಪ್ರಮುಖ ನದಿಗಳನ್ನು ಪಟ್ಟಿ ಮಾಡಿರಿ. (ಸಾಧಾರಣ)
54. ಉತ್ತರ ಅಮೆರಿಕದಲ್ಲಿ ಕಂಡುಬರುವ ಪ್ರಮುಖ ಜನರು ಹಾಗೂ ಅವರ ಭಾಷೆಗಳನ್ನು ತಿಳಿಸಿರಿ. (ಸಾಧಾರಣ)

**ಊ. ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

55. ಉತ್ತರ ಅಮೆರಿಕ ಖಂಡದ ಪ್ರಾಕೃತಿಕ ವಿಭಾಗಗಳ ಕುರಿತು ಬರೆಯಿರಿ. (ಸಾಧಾರಣ)
56. ಪ್ರೈರೀಸ್ ಮಹಾಮೈದಾನದ ಕುರಿತು ಟಿಪ್ಪಣಿ ಬರೆಯಿರಿ. (ಸಾಧಾರಣ)
57. ಉತ್ತರ ಅಮೆರಿಕ ಖಂಡದ ಪ್ರಮುಖ ಸರೋವರಗಳ ಕುರಿತು ಬರೆಯಿರಿ. (ಸಾಧಾರಣ)
58. ಉತ್ತರ ಅಮೆರಿಕ ಖಂಡದ ಸ್ವಾಭಾವಿಕ ಸಸ್ಯವರ್ಗಗಳ ವಿಧಗಳನ್ನು ಪಟ್ಟಿಮಾಡಿ. (ಸುಲಭ)
59. ಉತ್ತರ ಅಮೆರಿಕ ಖಂಡದ ಜನಸಾಂದ್ರತೆ ಕುರಿತು ಬರೆಯಿರಿ. (ಸಾಧಾರಣ)

| ಅಧ್ಯಾಯ – 14 | ದಕ್ಷಿಣ ಅಮೇರಿಕಾ ಖಂಡ |
|---|---|

P3S1B1

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 20 | ಉತ್ತರ ಮತ್ತು ದಕ್ಷಿಣ ಅಮೇರಿಕ ಖಂಡದ ಪ್ರಾಕೃತಿಕ ವಿಭಾಗಗಳು, ಹವಾಮಾನ ಮತ್ತು ನೈಸರ್ಗಿಕ ಸಸ್ಯ ವರ್ಗಗಳು, ಜೀವಿಗಳ ನಡುವಿನ ಪರಸ್ಪರ ಸಂಬಂಧವನ್ನು ಗುರುತಿಸಿ ವಿವರಿಸುವರು | 01 ರಿಂದ 49 |

| ಕ್ರ.ಸಂ | ಕ್ಲಿಷ್ಟತೆಯ ಮಟ್ಟ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 15 |
| 2 | ಸಾಧಾರಣ | 31 |
| 3 | ಕಠಿಣ | 3 |
| **ಒಟ್ಟು** | | **49** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ದಕ್ಷಿಣ ಅಮೆರಿಕ ಖಂಡವನ್ನು ಕಂಡುಹಿಡಿದ ವರ್ಷ ಯಾವುದು? (ಸಾಧಾರಣ)

   A) 1598 ರಲ್ಲಿ

   B) 1498 ರಲ್ಲಿ

   C) 1298 ರಲ್ಲಿ

   D) 1698 ರಲ್ಲಿ

2. ಕೊಲಂಬಸ್ ದಕ್ಷಿಣ ಅಮೆರಿಕದ ಸ್ಥಳೀಯರನ್ನು ಈ ರೀತಿ ಕರೆದನು. (ಸಾಧಾರಣ)

   A) ಸ್ಪ್ಯಾನಿಷ್ ಜನಾಂಗದವರು

   B) ರೆಡ್ ಇಂಡಿಯನ್ನರು

   C) ಪೋರ್ಚುಗೀಸರು

   D) ಭಾರತೀಯ ವಸಾಹತುಗಾರರು

3. ದಕ್ಷಿಣ ಅಮೆರಿಕ ಖಂಡದಲ್ಲಿ ಹಾದುಹೋಗುವ ರೇಖೆಗಳು ಯಾವುವು? (ಸಾಧಾರಣ)

A) ಸಮಭಾಜಕ ರೇಖೆ

B) ಕರ್ಕಾಟಕ ಸಂಕ್ರಾಂತಿ ವೃತ್ತ ಮತ್ತು ಸಮಭಾಜಕ ರೇಖೆ

C) ಭೂಮಧ್ಯರೇಖೆ ಮತ್ತು ಮಕರ ಸಂಕ್ರಾಂತಿ ವೃತ್ತ

D) ಭೂಮಧ್ಯರೇಖೆ ಮತ್ತು ದಕ್ಷಿಣ ಅಂಟಾರ್ಟಿಕ್ ವೃತ್ತ

4. ಭೂಮಿಯ ಪಶ್ಚಿಮ ಗೋಳಾರ್ಧದಲ್ಲಿ ನೆಲೆಗೊಂಡಿರುವ ಖಂಡ ಯಾವುದು? (ಸಾಧಾರಣ)

A) ಏಷ್ಯಾ

B) ಆಫ್ರಿಕಾ

C) ಉತ್ತರ ಅಮೆರಿಕ

D) ದಕ್ಷಿಣ ಅಮೆರಿಕ

5. ದಕ್ಷಿಣ ಅಮೆರಿಕ ಖಂಡಕ್ಕೆ ಸಂಪರ್ಕ ಹೊಂದಿಲ್ಲದ ಸಾಗರ ಯಾವುದು? (ಸಾಧಾರಣ)

A) ಪೆಸಿಫಿಕ್ ಮಹಾಸಾಗರ

B) ಅಟ್ಲಾಂಟಿಕ್ ಸಾಗರ

C) ಕೆರಿಬಿಯನ್ ಸಮುದ್ರ

D) ಆರ್ಕ್ಟಿಕ್ ಮಹಾಸಾಗರ

6. ದಕ್ಷಿಣ ಅಮೆರಿಕದ ಅತಿದೊಡ್ಡ ರಾಷ್ಟ್ರ ಯಾವುದು? (ಸಾಧಾರಣ)

A) ಫ್ರೆಂಚ್ ಗಯಾನಾ

B) ಬ್ರೆಜಿಲ್

C) ಅರ್ಜೆಂಟಿನಾ

D) ಚಿಲಿ

7. ದಕ್ಷಿಣ ಅಮೆರಿಕದಲ್ಲಿ ಕರಾವಳಿ ತೀರವನ್ನು ಹೊಂದಿರದ ದೇಶಗಳು ಯಾವುವು? (ಸಾಧಾರಣ)

A) ಪರಾಗ್ವೆ ಮತ್ತು ಉರುಗ್ವೆ

B) ಅರ್ಜೆಂಟಿನಾ ಮತ್ತು ಬೊಲಿವಿಯಾ

C) ಬೊಲಿವಿಯಾ ಮತ್ತು ಪರಾಗ್ವೆ

D) ಇಕ್ವೆಡಾರ್ ಮತ್ತು ಪರಾಗ್ವೆ

8. ಪ್ರಪಂಚದ ಅತ್ಯಂತ ಉದ್ದವಾದ ಪರ್ವತ ಶ್ರೇಣಿ ಯಾವುದು? (ಸಾಧಾರಣ)

A) ರಾಕಿ ಪರ್ವತಗಳು

B) ಹಿಮಾಲಯ ಪರ್ವತಗಳು

C) ಅಪಲೇಶಿಯನ್ ಪರ್ವತಗಳು

D) ಆಂಡಿಸ್ ಪರ್ವತಗಳು

9. ಆಂಡಿಸ್ ಪರ್ವತ ಶ್ರೇಣಿಯ ಅತ್ಯುನ್ನತ ಶಿಖರ ಯಾವುದು? (ಸಾಧಾರಣ)

A) ಮೌಂಟ್ ಮ್ಯಾಕ್‌ಕಿನ್ಲೆ

B) ಮೌಂಟ್ ಅಕನ್ಕಾಗುವಾ

C) ಮೌಂಟ್ ಎಲ್ಬ್ರುಸ್

D) ಮೌಂಟ್ ಕಿಲಿಮಂಜಾರೋ

10. ದಕ್ಷಿಣ ಅಮೆರಿಕದಲ್ಲಿ ಕಂಡುಬರುವ ವಿಶ್ವದ ಅತಿ ಎತ್ತರದ ಜಲಪಾತ ಯಾವುದು? (ಸಾಧಾರಣ)

A) ವಿಕ್ಟೋರಿಯಾ ಜಲಪಾತ

B) ಜೋಗ ಜಲಪಾತ

C) ಏಂಜಲ್ ಜಲಪಾತ

D) ಸೇಂಟ್ ಲಾರೆನ್ಸ್ ಜಲಪಾತ

11. ನದಿ ಮುಖಜ ಭೂಮಿಯನ್ನು ನಿರ್ಮಿಸಿರುವ ನದಿ ಯಾವುದು? (ಸಾಧಾರಣ)

A) ಒರಿನೋಕೊ

B) ಲಾ ಪ್ಲಾಟಾ

C) ಅಮೆಜಾನ್

D) ಮೇಲಿನ ಎಲ್ಲವೂ

12. ಪ್ರಪಂಚದ ಅತಿದೊಡ್ಡ ನದಿ ಯಾವುದು? (ಸಾಧಾರಣ)

A) ಪರಾನಾ

B) ಪರಾಗ್ವೆ

C) ಅಮೆಜಾನ್

D) ನೈಲ್

13. ಪ್ರಪಂಚದಲ್ಲಿಯೇ ಅತಿ ಎತ್ತರದಲ್ಲಿರುವ ಸರೋವರ ಯಾವುದು? (ಸಾಧಾರಣ)

A) ವಿಕ್ಟೋರಿಯಾ ಸರೋವರ

B) ಟಿಟಿಕಾಕಾ ಸರೋವರ

C) ಐರಿ ಸರೋವರ

D) ಕಾಮ್ಚಟ್ಕಾ ಸರೋವರ

14. ಉಷ್ಣವಲಯ ಪ್ರದೇಶವು ಯಾವ ಅಕ್ಷಾಂಶಗಳ ನಡುವೆ ಕಂಡುಬರುತ್ತದೆ? (ಸಾಧಾರಣ)

A) ಭೂಮಧ್ಯರೇಖೆ ಮತ್ತು ಮಕರ ಸಂಕ್ರಾಂತಿ ವೃತ್ತ

B) ಉತ್ತರ ಧ್ರುವ ವೃತ್ತ ಮತ್ತು ಕರ್ಕಾಟಕ ಸಂಕ್ರಾಂತಿ ವೃತ್ತ

C) ಭೂಮಧ್ಯರೇಖೆ ಮತ್ತು ಅಂಟಾರ್ಕ್ಟಿಕ್ ವೃತ್ತ

D) ಮಕರ ಸಂಕ್ರಾಂತಿ ವೃತ್ತ ಮತ್ತು ಅಂಟಾರ್ಕ್ಟಿಕ್ ವೃತ್ತ

15. ಪ್ರತಿನಿತ್ಯ ಸಂವಹನ ಮಳೆಯ ಅನುಭವವನ್ನು ಪಡೆಯುವ ಪ್ರದೇಶ ಯಾವುದು? (ಸಾಧಾರಣ)

A) ಖಂಡಾಂತರ ಪಶ್ಚಿಮ ಪ್ರದೇಶ

B) ಆಂಡಿಸ್ ಪರ್ವತದ ಪೂರ್ವ ಭಾಗ

C) ಸಮಭಾಜಕ ವಾಯುಗುಣ ಪ್ರದೇಶ

D) ಸಮಶೀತೋಷ್ಣ ವಲಯ

16. ಭೂಮಿಯ ಮೇಲಿನ ಅತಿ ಶುಷ್ಕ ಮರುಭೂಮಿ ಯಾವುದು? (ಸಾಧಾರಣ)

A) ಪಟಗೋನಿಯಾ

B) ಥಾರ್ ಮರುಭೂಮಿ

C) ಅಟಕಾಮ ಮರುಭೂಮಿ

D) ಸಹಾರಾ ಮರುಭೂಮಿ

17. ಸಮಭಾಜಕ ವೃತ್ತ ಪ್ರದೇಶದ ಮಳೆಕಾಡುಗಳನ್ನು ಸ್ಥಳೀಯವಾಗಿ ಏನೆಂದು ಕರೆಯುತ್ತಾರೆ? (ಸಾಧಾರಣ)

A) ಪಂಪಾಸ್

B) ಸೆಲ್ವಾಸ್

C) ಕಾಂಪಾಸ್

D) ಯಾವುದೂ ಅಲ್ಲ

18. ಅಮೆಜಾನ್ ಕಾಡುಗಳಲ್ಲಿ ಕಂಡುಬರುವ ಬೆಲೆಬಾಳುವ ಮರಗಳು ಯಾವುವು? (ಸಾಧಾರಣ)

A) ಲ್ಯಾಟ್ರಿಕ್ಸ್

B) ಮಹಾಗನಿ ಮತ್ತು ಎಬೋನಿ

C) ಲಾನೋಸ್

D) ಸಾಗುವಾನಿ ಮತ್ತು ಮಹಾಗನಿ

19. ಒರಿನೋಕೊ ನದಿ ಬಯಲಿನ ಹುಲ್ಲುಗಾವಲುಗಳನ್ನು ಏನೆಂದು ಕರೆಯುತ್ತಾರೆ? (ಸಾಧಾರಣ)

A) ಕಾಂಪಾಸ್

B) ಲಾನೋಸ್

C) ಪಂಪಾಸ್

D) ಯಾವುದೂ ಅಲ್ಲ

20. ಅರ್ಜೆಂಟಿನಾ ಮತ್ತು ಉರುಗ್ವೆ ಪ್ರದೇಶದಲ್ಲಿ ಕಂಡುಬರುವ ಸಮಶೀತೋಷ್ಣ ಹುಲ್ಲುಗಾವಲು ಯಾವುದು? (ಸಾಧಾರಣ)

A) ಕಾಂಪಾಸ್

B) ಲಾನೋಸ್

C) ಪಂಪಾಸ್

D) ಸೆಲ್ವಾಸ್

21. ಪಕ್ಷಿಗಳ ಖಂಡ ಎಂದು ಯಾವುದನ್ನು ಕರೆಯುತ್ತಾರೆ? (ಸಾಧಾರಣ)

A) ಉತ್ತರ ಅಮೆರಿಕ

B) ದಕ್ಷಿಣ ಅಮೆರಿಕ

C) ಏಷ್ಯಾ

D) ಆಫ್ರಿಕಾ

22. ಬೃಹದಾಕಾರದ ಆಮೆಗಳಿಗೆ ಪ್ರಸಿದ್ಧವಾದ ದ್ವೀಪ ಯಾವುದು? (ಸಾಧಾರಣ)

A) ಅಮೆಜಾನ್ ದ್ವೀಪಗಳು

B) ಗಾಲಪಗೋಸ್ ದ್ವೀಪಗಳು

C) ಫಿನಿಸ್ ದ್ವೀಪಗಳು

D) ಕೆರಿಬಿಯನ್ ದ್ವೀಪಗಳು

23. ದಕ್ಷಿಣ ಅಮೆರಿಕದ ದೇಶೀಯ ಬೆಳೆ ಯಾವುದು? (ಸಾಧಾರಣ)

A) ಮೆಕ್ಕೆಜೋಳ

B) ಗೋಧಿ

C) ಭತ್ತ

D) ಕಾಫಿ

24. "ಪ್ರಪಂಚದ ಕಾಫಿಯ ಪಾತ್ರೆ" ಎಂದು ಯಾವುದನ್ನು ಕರೆಯುತ್ತಾರೆ? (ಸಾಧಾರಣ)

A) ಅರ್ಜೆಂಟಿನಾ

B) ಬ್ರೆಜಿಲ್

C) ಬೊಲಿವಿಯಾ

D) ಉರುಗ್ವೆ

25. ದಕ್ಷಿಣ ಅಮೆರಿಕದ ಯಾವ ದೇಶಗಳ ಕರಾವಳಿ ಮೀನುಗಾರಿಕೆಗೆ ಪ್ರಸಿದ್ಧವಾಗಿದೆ? (ಸಾಧಾರಣ)

A) ಪೆರು ಮತ್ತು ಚಿಲಿ

B) ಬ್ರೆಜಿಲ್ ಮತ್ತು ಪೆರು

C) ಬೊಲಿವಿಯಾ ಮತ್ತು ಬ್ರೆಜಿಲ್

D) ಇಕ್ವೆಡಾರ್ ಮತ್ತು ಬ್ರೆಜಿಲ್

26. "ಟೊಳ್ಳು ಭೂಮಿ" ಎಂದು ಯಾವ ಖಂಡವನ್ನು ಕರೆಯುತ್ತಾರೆ? (ಸಾಧಾರಣ)

A) ಆಫ್ರಿಕಾ

B) ಉತ್ತರ ಅಮೆರಿಕ

C) ದಕ್ಷಿಣ ಅಮೆರಿಕ

D) ಯುರೋಪ್

**ಆ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

27. ದಕ್ಷಿಣ ಅಮೆರಿಕ ಖಂಡದ ಸ್ಥಳೀಯರನ್ನು _________ ಎಂದು ಕರೆಯುತ್ತಾರೆ. (ಸುಲಭ)

28. ದಕ್ಷಿಣ ಅಮೆರಿಕದಲ್ಲಿ ಕಂಡುಬರುವ ಹುಲ್ಲುಗಾವಲು _________. (ಸುಲಭ)

29. ಪ್ರಪಂಚದಲ್ಲೇ ಅತ್ಯಧಿಕ ಕಾಫಿಯನ್ನು ಉತ್ಪಾದಿಸುವ ಖಂಡ _________. (ಸುಲಭ)
30. ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳನ್ನು _________ ಕಾಲುವೆ ಪ್ರತ್ಯೇಕಿಸುತ್ತದೆ. (ಸುಲಭ)
31. ಅರ್ಜೆಂಟಿನಾ ಮತ್ತು ಬ್ರೆಜಿಲ್ _________ ಆಟಕ್ಕೆ ಪ್ರಖ್ಯಾತವಾಗಿವೆ. (ಸುಲಭ)

**ಇ. ಹೊಂದಿಸಿ ಬರೆಯಿರಿ. (ಸಾಧಾರಣ)**

| ಅ | ಬ |
|---|---|
| 1. ವೆನೆಜುವೆಲಾ | ಅ. ಸೆಲ್ವಾಸ್ |
| 2. ಬ್ರೆಜಿಲ್ | ಆ. ಪಂಪಾಸ್ |
| 3. ಅರ್ಜೆಂಟಿನಾ | ಇ. ಕಾಂಪಾಸ್ |
| 4. ಸಮಭಾಜಕ ವೃತ್ತ ಪ್ರದೇಶ | ಈ. ಲಾನೋಸ್ |

**ಈ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

33. ದಕ್ಷಿಣ ಅಮೆರಿಕದ ಅತಿಚಿಕ್ಕ ರಾಷ್ಟ್ರ ಯಾವುದು? (ಸುಲಭ)
34. ದಕ್ಷಿಣ ಅಮೆರಿಕದ ಅತ್ಯಂತ ಉದ್ದವಾದ ರಾಷ್ಟ್ರ ಯಾವುದು? (ಸುಲಭ)
35. "ಗಗನಚುಂಬಿ ಕಟ್ಟಡಗಳ ನಗರ" ಎಂದು ಯಾವ ನಗರವನ್ನು ಕರೆಯುತ್ತಾರೆ? (ಸುಲಭ)
36. ಮೌಂಟ್ ಅಕನ್ಕಾಗುವಾ ಶಿಖರದ ಎತ್ತರ ಎಷ್ಟು ಮೀಟರ್? (ಸುಲಭ)
37. ಒರಿನೋಕೊ ನದಿಯ ಪ್ರಮುಖ ಉಪನದಿ ಯಾವುದು? (ಸುಲಭ)
38. ಏಂಜಲ್ ಜಲಪಾತವು ಯಾವ ನದಿಯಿಂದ ನಿರ್ಮಾಣಗೊಂಡಿದೆ? (ಸುಲಭ)
39. ದಕ್ಷಿಣ ಅಮೆರಿಕದ ಅತಿದೊಡ್ಡ ಪಕ್ಷಿ ಯಾವುದು? (ಸುಲಭ)
40. ದಕ್ಷಿಣ ಅಮೆರಿಕದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಪ್ರದೇಶ ಯಾವುದು? (ಸುಲಭ)
41. ದಕ್ಷಿಣ ಅಮೆರಿಕದಲ್ಲಿ ಕಡಿಮೆ ಜನಸಂಖ್ಯೆ ಹೊಂದಿರುವ ಪ್ರದೇಶ ಯಾವುದು? (ಸುಲಭ)
42. ದಕ್ಷಿಣ ಅಮೆರಿಕದಲ್ಲಿ ರಬ್ಬರ್ ಅನ್ನು ಯಾವುದಕ್ಕಾಗಿ ಬಳಸುತ್ತಾರೆ? (ಸುಲಭ)

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

43. ದಕ್ಷಿಣ ಅಮೆರಿಕ ಖಂಡದ ಸ್ಥಾನ ಮತ್ತು ವಿಸ್ತೀರ್ಣವನ್ನು ತಿಳಿಸಿರಿ. (ಸಾಧಾರಣ)
44. ದಕ್ಷಿಣ ಅಮೆರಿಕದ ಪ್ರಮುಖ ಹುಲ್ಲುಗಾವಲುಗಳನ್ನು ತಿಳಿಸಿರಿ. (ಸಾಧಾರಣ)
45. ದಕ್ಷಿಣ ಅಮೆರಿಕದ ಪ್ರಮುಖ ಸಸ್ಯಗಳು ಹಾಗೂ ವನ್ಯಜೀವಿಗಳನ್ನು ಹೆಸರಿಸಿರಿ. (ಕಠಿಣ)
46. ದಕ್ಷಿಣ ಅಮೆರಿಕದಲ್ಲಿ ಹೆಚ್ಚು ಜನಸಾಂದ್ರತೆ ಹೊಂದಿರುವ ಪ್ರಮುಖ ನಗರಗಳನ್ನು ಹೆಸರಿಸಿರಿ. (ಸುಲಭ)
47. ದಕ್ಷಿಣ ಅಮೆರಿಕದ ಸ್ಥಳೀಯರನ್ನು "ರೆಡ್ ಇಂಡಿಯನ್ಸ್" ಎಂದು ಏಕೆ ಕರೆಯುತ್ತಾರೆ? (ಸಾಧಾರಣ)

**ಊ. ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿರಿ.**

48. ದಕ್ಷಿಣ ಅಮೆರಿಕ ಖಂಡದ ಪ್ರಾಕೃತಿಕ ವಿಭಾಗಗಳನ್ನು ವಿವರಿಸಿರಿ. (ಕಠಿಣ)
49. ದಕ್ಷಿಣ ಅಮೆರಿಕ ಖಂಡದ ಸ್ವಾಭಾವಿಕ ಸಸ್ಯವರ್ಗಗಳ ವಿಧಗಳನ್ನು ಪಟ್ಟಿ ಮಾಡಿರಿ. (ಕಠಿಣ)

# ಭಾಗ-02

| ಇತಿಹಾಸ | |
|---|---|
| **ಅಧ್ಯಾಯ – 15** | **ಸಾಮಾಜಿಕ ಧಾರ್ಮಿಕ ಸುಧಾರಣೆ** |

M7I1N4

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 01 | ನಕ್ಷೆ ಬಿಡಿಸುವ, ನಕ್ಷೆಯಲ್ಲಿ ಸ್ಥಳ ಗುರುತಿಸುವ, ಆಲೇಖಗಳನ್ನು ರೂಪಿಸಿ, ವಿಶ್ಲೇಷಿಸಿ, ವಿವರಿಸಿ, ವಿಮರ್ಶಿಸುವ ಕೌಶಲಗಳು ಎಲ್ಲಾ ಪಾಠಗಳಿಗೂ ಅನ್ವಯ | 57 |
| 07 | ಸಾಮಾಜಿಕ ಅನಿಷ್ಠ ಪದ್ಧತಿಗಳಿಗೆ ನಿವಾರಣೆಗೆ ಸುಧಾರಣಾ ಚಳುವಳಿಗಳ ಕೊಡುಗೆಯನ್ನು ವಿವರಿಸುವರು. | 1 ರಿಂದ 17<br>19 ರಿಂದ 46, 48, 50, 52 |
| 08 | ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಮಹತ್ವವನ್ನು ಅರಿಯುವರು. | 18, 47, 49, 51, 53, 54, 55, 56 |

| ಕ್ರಮ ಸಂಖ್ಯೆ | ಕ್ಲಿಷ್ಟತೆಯ ಮಟ್ಟ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 35 |
| 2 | ಸಾಧಾರಣ | 17 |
| 3 | ಕಠಿಣ | 5 |
| **ಒಟ್ಟು** | | **57** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಯ ಹೆಸರಿನಿಂದಲೂ ಕರೆಯಲ್ಪಡುವ, ಸಮಾನತೆಯ ಅಂಶಗಳನ್ನು ಸಾರುವ ಹೊಸ ಅರಿವು ಯಾವುದು? (ಸಾಧಾರಣ)

   A) ಸಾಮಾಜಿಕ ಚಳವಳಿ

   B) ಧಾರ್ಮಿಕ ಚಳವಳಿ

C) ಪುನರುಜ್ಜೀವನ ಚಳವಳಿ

D) ಮಾನವತವಾದ

2. 'ಆತ್ಮೀಯ ಸಭಾ'ವನ್ನು ಸ್ಥಾಪಿಸಿದ ವರ್ಷ ಯಾವುದು? (ಸಾಧಾರಣ)

A) ಸಾ.ಶ. 1819

B) ಸಾ.ಶ. 1816

C) ಸಾ.ಶ. 1814

D) ಸಾ.ಶ. 1828

3. ಸತಿ ಪದ್ಧತಿಯನ್ನು ಕಾನೂನುಬಾಹಿರವೆಂದು ಘೋಷಿಸಿದ ಬ್ರಿಟಿಷ್ ಗವರ್ನರ್ ಜನರಲ್ ಯಾರು? (ಸಾಧಾರಣ)

A) ವಿಲಿಯಂ ಬೆಂಟಿಕ್

B) ಲಾರ್ಡ್ ಡಲ್ಹೌಸಿ

C) ಲಾರ್ಡ್ ಮೆಕಾಲೆ

D) ಲಾರ್ಡ್ ವೆಲ್ಲೆಸ್ಲಿ

4. ದೇವೇಂದ್ರನಾಥ ಟ್ಯಾಗೋರ್ : ಬ್ರಹ್ಮ ಸಮಾಜ :: ಎಂ.ಜಿ. ರಾನಡೆ : _______ (ಸಾಧಾರಣ)

A) ಆರ್ಯ ಸಮಾಜ

B) ಪ್ರಾರ್ಥನಾ ಸಮಾಜ

C) ಸತ್ಯಶೋಧಕ ಸಮಾಜ

D) ರಾಮಕೃಷ್ಣ ಮಿಷನ್

5. ಜ್ಯೋತಿಬಾ ಫುಲೆ ಅವರು ಶಿಶುಹತ್ಯೆ ಪದ್ಧತಿಯನ್ನು ತಡೆಯುವ ಉದ್ದೇಶದಿಂದ ಸಾ.ಶ. 1863ರಲ್ಲಿ ಯಾರಿಗಾಗಿ ಪುನರ್ವಸತಿ ಕೇಂದ್ರವನ್ನು ಪ್ರಾರಂಭಿಸಿದರು? (ಸಾಧಾರಣ)

A) ವಿಧವೆಯರಿಗಾಗಿ

B) ಬಾಲ ವಿಧವೆಯರಿಗಾಗಿ

C) ಗರ್ಭಿಣಿಯರಿಗಾಗಿ

D) ಕೆಳವರ್ಗದವರಿಗಾಗಿ

6. ಸ್ವಾಮಿ ವಿವೇಕಾನಂದ : ನರೇಂದ್ರನಾಥ :: ದಯಾನಂದ ಸರಸ್ವತಿ : _______ (ಸಾಧಾರಣ)

A) ಮೂಲಶಂಕರ

B) ದಯಾನಂದ

C) ಪ್ರಕಾಶನ

D) ಕೇಶವ ದೀಕ್ಷಿತ

7. ಶುದ್ಧಿ ಚಳವಳಿಯನ್ನು ಆರಂಭಿಸಿದ ದಯಾನಂದ ಸರಸ್ವತಿಯವರ ಶಿಷ್ಯರು ಯಾರು? (ಸಾಧಾರಣ)

A) ಬಾಲ ಗಂಗಾಧರ ತಿಲಕ್

B) ಲಾಲಾ ಲಜಪತ್ ರಾಯ್

C) ಶ್ರದ್ಧಾನಂದರು

D) ಶ್ರೀ ನಾರಾಯಣ ಗುರು

8. ಭಾರತೀಯ ವೇದಾಂತವನ್ನು ಜಗತ್ತಿಗೆ ಪರಿಚಯಿಸಿದ ಸ್ವಾಮಿ ವಿವೇಕಾನಂದರು ಯಾವಾಗ ಜನಿಸಿದರು? (ಸಾಧಾರಣ)

A) 1863 ಅಕ್ಟೋಬರ್ 2

B) 1863 ನವೆಂಬರ್ 12

C) 1863 ಸೆಪ್ಟೆಂಬರ್ 12

D) 1863 ಜನವರಿ 12

9. ಭಾರತದಲ್ಲಿ ಸ್ಥಾಪನೆಯಾದ ಥಿಯೊಸಾಫಿಕಲ್ ಸೊಸೈಟಿಯ ಅಧ್ಯಕ್ಷರಾಗಿದ್ದವರು ಯಾರು? (ಸಾಧಾರಣ)

A) ಎಚ್.ಎಸ್. ಅಲ್ಕಾಟ್

B) ಮೇಡಂ ಎಚ್.ಪಿ. ಬ್ಲಾವಟ್ಸ್ಕಿ

C) ಡಾ. ಅನಿ ಬೆಸೆಂಟ್

D) ಮೇಲಿನ ಯಾರೂ ಅಲ್ಲ

10. ಭಾರತದ ಮೊದಲ ಮಹಿಳಾ ಶಿಕ್ಷಕಿ ಯಾರು? (ಸಾಧಾರಣ)

A) ಮದರ್ ತೆರೇಸಾ

B) ತಾರಾಬಾಯಿ ಶಿಂಡೆ

C) ಪಂಡಿತ ರಮಾಬಾಯಿ

D) ಸಾವಿತ್ರಿಬಾಯಿ ಫುಲೆ

**ಆ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.**

11. 'ಸಂವಾದ ಕೌಮುದಿ' ಪತ್ರಿಕೆಯನ್ನು ಆರಂಭಿಸಿದವರು ________. (ಸುಲಭ)
12. *ಗುಲಾಮಗಿರಿ* ಎಂಬ ಕೃತಿಯನ್ನು ರಚಿಸಿದವರು ________. (ಸುಲಭ)
13. ಲಾಹೋರಿನಲ್ಲಿ ದಯಾನಂದ ಆಂಗ್ಲೋ ವೇದಿಕ್ ಶಾಲೆಯನ್ನು ಆರಂಭಿಸಿದವರು ________. (ಸುಲಭ)
14. ರಾಜಾರಾಮ ಮೋಹನರಾಯರನ್ನು ಭಾರತದ ಪುನರುಜ್ಜೀವನದ ಪಿತಾಮಹ ಎಂದು ________ ಕರೆದಿದ್ದಾರೆ. (ಸುಲಭ)
15. ವೇದಗಳ ಕಾಲದ ಆದರ್ಶ ಸಮಾಜವನ್ನು ಪುನಃ ಸ್ಥಾಪಿಸಬೇಕು ಎಂದು ದಯಾನಂದ ಸರಸ್ವತಿಯವರು ನೀಡಿದ ಕರೆ ________. (ಸುಲಭ)
16. ಸ್ವಾಮಿ ವಿವೇಕಾನಂದರನ್ನು ಭಾರತದ ರಾಷ್ಟ್ರೀಯತೆಯ ನಿಜವಾದ ಪಿತಾಮಹ ಎಂದು ಬಣ್ಣಿಸಿದವರು ________. (ಸುಲಭ)
17. ನ್ಯೂಯಾರ್ಕ್‌ನಲ್ಲಿ ಥಿಯೊಸಾಫಿಕಲ್ ಸೊಸೈಟಿ (ಬ್ರಹ್ಮವಿದ್ಯಾ ಸಮಾಜ)ವನ್ನು ಸ್ಥಾಪಿಸಿದವರು ________ ಮತ್ತು ________. (ಸುಲಭ)
18. "ಒಬ್ಬನೇ ದೇವರು, ಒಂದು ಧರ್ಮ ಮತ್ತು ಒಂದು ಜಾತಿ" ಎಂಬ ಆಶಯ ________ ಅವರದು. (ಸುಲಭ)
19. 'ಅಲಿಘರ್ ಇನ್‌ಸ್ಟಿಟ್ಯೂಟ್ ಗೆಜೆಟ್' ಪತ್ರಿಕೆಯನ್ನು ಆರಂಭಿಸಿದವರು ________. (ಸುಲಭ)
20. *ಸ್ತ್ರೀ-ಪುರುಷ ತುಲನಾ* ಕೃತಿಯ ಲೇಖಕರು ________. (ಸುಲಭ)
21. ಯಂಗ್ ಬಂಗಾಲಿಯನ್ (ತರುಣ ಬಂಗಾಳಿ) ಚಳವಳಿಯ ನೇತಾರ ________. (ಸುಲಭ)

**ಇ. ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೇ ಪದಕ್ಕೆ ಬಿಟ್ಟ ಸ್ಥಳವನ್ನು ತುಂಬಿರಿ.**

22. ಬ್ರಹ್ಮ ಸಮಾಜ : 1828 :: ಆರ್ಯ ಸಮಾಜ : _______ (ಸಾಧಾರಣ)
23. ಪ್ರಾರ್ಥನಾ ಸಮಾಜ : 1867 :: ಸತ್ಯಶೋಧಕ ಸಮಾಜ : _______ (ಸಾಧಾರಣ)
24. ರಾಮಕೃಷ್ಣ ಮಿಷನ್ : 1897 :: ಮುಕ್ತಿ ಮಿಷನ್ : _______ (ಸಾಧಾರಣ)
25. ಥಿಯೊಸಾಫಿಕಲ್ ಸೊಸೈಟಿ : 1875 :: ಆತ್ಮೀಯ ಸಭಾ : _______ (ಸಾಧಾರಣ)

26. ಶ್ರೀ ನಾರಾಯಣ ಧರ್ಮ ಪರಿಪಾಲನ ಯೋಗಂ : 1903 :: ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ : _______ (ಸಾಧಾರಣ)

**ಈ. ಕೆಳಗಿನ ಪಟ್ಟಿಗೆ ಸಂಬಂಧಿಸಿದಂತೆ ಬಿ ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಅ ಪಟ್ಟಿ | ಬ ಪಟ್ಟಿ |
|---|---|
| 1. ರಾಜಾರಾಮ ಮೋಹನರಾಯ್ | ಅ. ಆರ್ಯ ಸಮಾಜ |
| 2. ಆತ್ಮಾರಾಮ ಪಾಂಡುರಂಗ | ಆ. ರಾಮಕೃಷ್ಣ ಮಿಷನ್ |
| 3. ಜ್ಯೋತಿಬಾ ಫುಲೆ | ಇ. ಮುಕ್ತಿ ಮಿಷನ್ |
| 4. ಸ್ವಾಮಿ ದಯಾನಂದ ಸರಸ್ವತಿ | ಈ. ಅಲಿಘರ್ ಚಳವಳಿ |
| 5. ಸ್ವಾಮಿ ವಿವೇಕಾನಂದ | ಉ. ಪ್ರಾರ್ಥನಾ ಸಮಾಜ |
| 6. ಶ್ರೀ ನಾರಾಯಣ ಗುರು | ಊ. ಸತ್ಯಶೋಧಕ ಸಮಾಜ |
| 7. ಪಂಡಿತ ರಮಾಬಾಯಿ | ಋ. ಶ್ರೀ ನಾರಾಯಣ ಧರ್ಮ ಪರಿಪಾಲನ ಯೋಗಂ |
| 8. ಸಯ್ಯದ್ ಅಹಮದ್ ಖಾನ್ | ಎ. ಬ್ರಹ್ಮ ಸಮಾಜ |

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

28. ಭಾರತದ ಪುನರುಜ್ಜೀವನದ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ? (ಸುಲಭ)
29. ಸತ್ಯಶೋಧಕ ಸಮಾಜದ ಸ್ಥಾಪಕರು ಯಾರು? (ಸುಲಭ)
30. "ಏಳಿ! ಎದ್ದೇಳಿ! ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬುದು ಯಾರ ಕರೆ? (ಸುಲಭ)
31. ಅಲಿಘರ್ ಚಳವಳಿಯ ನೇತಾರರು ಯಾರು? (ಸುಲಭ)
32. ಶ್ರೀ ನಾರಾಯಣ ಗುರು ಸ್ಥಾಪಿಸಿದ ಸಂಸ್ಥೆ ಯಾವುದು? (ಸುಲಭ)
33. ಭಾರತದ ಪ್ರಸಿದ್ಧ ಕ್ರೈಸ್ತ ಸಮಾಜ ಸುಧಾರಕಿ ಯಾರು? (ಸುಲಭ)
34. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಮಹಿಳಾ ಅಧ್ಯಕ್ಷೆ ಯಾರು? (ಸುಲಭ)
35. ಯಾರ ಸಲಹೆಯ ಮೇರೆಗೆ ನರೇಂದ್ರನಾಥ ದತ್ತರ ಹೆಸರು "ಸ್ವಾಮಿ ವಿವೇಕಾನಂದ" ಎಂದು ನಾಮಕರಣವಾಯಿತು? (ಸುಲಭ)
36. ಡಾ. ಬಿ.ಆರ್. ಅಂಬೇಡ್ಕರ್ ಅವರು ತಮ್ಮ ತಾತ್ವಿಕ ಮಾರ್ಗದರ್ಶಕರಾಗಿ ಯಾರನ್ನು ಸ್ವೀಕರಿಸಿದ್ದರು? (ಸುಲಭ)

37. ಪಂಡಿತ ರಮಾಬಾಯಿ ಅವರು ಎಲ್ಲಿ ಜನಿಸಿದರು? (ಸುಲಭ)
38. ಮಹಾರಾಷ್ಟ್ರದಲ್ಲಿ ಬ್ರಾಹ್ಮಣೇತರ ಚಳವಳಿಯನ್ನು ಯಾರು ಆರಂಭಿಸಿದರು? (ಸುಲಭ)
39. ಸಾ.ಶ. 1829ರಲ್ಲಿ ಮೋಹನರಾಯರಿಗೆ "ರಾಜಾ" ಎಂಬ ಬಿರುದನ್ನು ನೀಡಿದವರು ಯಾರು? (ಸಾಧಾರಣ)
40. ಮಹಾದೇವ ಗೋವಿಂದ ರಾನಡೆ ಯಾರು? (ಸುಲಭ)

**ಊ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

41. ಪ್ರಾರ್ಥನಾ ಸಮಾಜದ ಪ್ರಮುಖ ನಾಯಕರನ್ನು ಹೆಸರಿಸಿ. (ಸುಲಭ)
42. ಮಹಿಳಾ ಸಮಾಜ ಸುಧಾರಕಿಯರನ್ನು ಹೆಸರಿಸಿ. (ಸುಲಭ)
43. ಡಾ. ಅನಿ ಬೆಸೆಂಟ್ ಅವರು ಹೊರಡಿಸಿದ ಪ್ರಮುಖ ಪತ್ರಿಕೆಗಳನ್ನು ಹೆಸರಿಸಿ. (ಸುಲಭ)
44. ಸ್ವಾಮಿ ವಿವೇಕಾನಂದರು ಭಾರತದ ಅಂದಿನ ಸಾಮಾಜಿಕ ಸ್ಥಿತಿಗತಿಯನ್ನು ಕಂಡು ಏನೆಂದು ಮರುಗಿದರು? (ಸಾಧಾರಣ)
45. ಆರ್ಯ ಸಮಾಜದ ತತ್ವ ಮತ್ತು ಚಿಂತನೆಗಳಿಂದ ಗಾಢವಾಗಿ ಪ್ರಭಾವಿತರಾದ ರಾಷ್ಟ್ರೀಯ ನಾಯಕರನ್ನು ಹೆಸರಿಸಿ. (ಸುಲಭ)
46. ರಾಜಾರಾಮ ಮೋಹನರಾಯರ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಕ್ರಮಗಳನ್ನು ತಿಳಿಸಿರಿ. (ಸಾಧಾರಣ)
47. ಸಮಾಜ ಸುಧಾರಣೆಯಲ್ಲಿ ಜ್ಯೋತಿಬಾ ಫುಲೆಯವರ ಪಾತ್ರವೇನು? (ಸಾಧಾರಣ)
48. ಥಿಯೊಸಾಫಿಕಲ್ ಸೊಸೈಟಿಯ ಉದ್ದೇಶಗಳೇನು? (ಸಾಧಾರಣ)
49. ಮಹಿಳಾ ಸುಧಾರಣೆಯಲ್ಲಿ ಪಂಡಿತ ರಮಾಬಾಯಿಯವರ ಪಾತ್ರವೇನು? (ಸಾಧಾರಣ)

**ಋ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿ.**

50. ಭಾರತದಲ್ಲಿದ್ದ ಕಂದಾಚಾರಗಳನ್ನು ಹೋಗಲಾಡಿಸುವಲ್ಲಿ ಬ್ರಹ್ಮ ಸಮಾಜದ ಪಾತ್ರವನ್ನು ವಿಶ್ಲೇಷಿಸಿ. (ಕಠಿಣ)
51. ಸಮಾಜ ಸುಧಾರಣೆಯಲ್ಲಿ ಸತ್ಯಶೋಧಕ ಸಮಾಜದ ಕಾರ್ಯಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. (ಕಠಿಣ)
52. ಮತಾಂತರಗೊಂಡವರನ್ನು ಮರಳಿ ಮಾತೃಧರ್ಮಕ್ಕೆ ಕರೆತರುವಲ್ಲಿ ಆರ್ಯ ಸಮಾಜದ ಪಾತ್ರವೇನು? (ಸಾಧಾರಣ)

53. ಮುಸ್ಲಿಂ ಸಮುದಾಯವನ್ನು ಸುಧಾರಿಸುವಲ್ಲಿ ಸಯ್ಯದ್ ಅಹಮದ್ ಖಾನ್ ಅವರ ಪಾತ್ರವೇನು? (ಸಾಧಾರಣ)
54. ಹಿಂದುಳಿದ ಸಮುದಾಯಗಳನ್ನು ಸುಧಾರಿಸುವಲ್ಲಿ ಶ್ರೀ ನಾರಾಯಣ ಗುರು ಕೈಗೊಂಡ ಕ್ರಮಗಳೇನು? (ಸಾಧಾರಣ)
55. ಮಹಿಳೆಯರ ಶೈಕ್ಷಣಿಕ ಸುಧಾರಣೆಯಲ್ಲಿ ಸಾವಿತ್ರಿಬಾಯಿ ಫುಲೆಯವರ ಪಾತ್ರವೇನು? (ಸಾಧಾರಣ)
56. "ಸ್ತ್ರೀಯರ ಉದ್ಧಾರ ನಮ್ಮ ರಾಷ್ಟ್ರದ ಉದ್ಧಾರ" ಎಂಬ ಸ್ವಾಮಿ ವಿವೇಕಾನಂದರ ಹೇಳಿಕೆಯನ್ನು ಸಮರ್ಥಿಸಿ. (ಕಠಿಣ)

**ಎ. 57. ಭಾರತದ ನಕ್ಷೆಯನ್ನು ರಚಿಸಿ ಕೆಳಗಿನ ಸ್ಥಳಗಳನ್ನು ಗುರುತಿಸಿ. (ಕಠಿಣ)**

1. ಮುಂಬೈ – ಪ್ರಾರ್ಥನಾ ಸಮಾಜ
2. ಲಾಹೋರ್ – ಆರ್ಯ ಸಮಾಜ
3. ಪುಣೆ – ಸತ್ಯಶೋಧಕ ಸಮಾಜ
4. ಕಲ್ಕತ್ತಾ – ಬ್ರಹ್ಮ ಸಮಾಜ

| ಅಧ್ಯಾಯ – 16 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857-1858) |
|---|---|

Q6N8U3

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 01 | ನಕ್ಷೆ ಬಿಡಿಸುವ, ನಕ್ಷೆಯಲ್ಲಿ ಸ್ಥಳ ಗುರುತಿಸುವ, ಆಲೇಖಗಳನ್ನು ರೂಪಿಸಿ, ವಿಶ್ಲೇಷಿಸಿ, ವಿವರಿಸಿ, ವಿಮರ್ಶಿಸುವ ಕೌಶಲಗಳು ಎಲ್ಲಾ ಪಾಠಗಳಿಗೂ ಅನ್ವಯ | 29 |
| 13 | 1857ರ ಸಂಗ್ರಾಮ, ಸ್ವಾತಂತ್ರ್ಯ ಚಳುವಳಿಗೆ ಕಾರಣಗಳನ್ನು ಗುರುತಿಸಿ, ಸ್ವಾತಂತ್ರ್ಯಕ್ಕಾಗಿ ಆದ ತ್ಯಾಗಗಳನ್ನು ಪ್ರಶಂಸಿಸುವರು | 1,2,4,5,6,7,8,9,10,11,12,13 14,15,16,17,18,19,20,21, 22,23,24,25,26,28. |
| 14 | ಸ್ವಾತಂತ್ರ್ಯದಲ್ಲಿ ಮಹಿಳೆಯರ ಪಾತ್ರವನ್ನು ಪ್ರಶಂಸಿಸುವರು | 3,27 |

| ಕ್ರಮ ಸಂಖ್ಯೆ | ಕ್ಲಿಷ್ಟತೆಯ ಮಟ್ಟ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 10 |
| 2 | ಸಾಧಾರಣ | 15 |
| 3 | ಕಠಿಣ | 4 |
| **ಒಟ್ಟು** | | **29** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಬ್ರಿಟಿಷ್ ಇತಿಹಾಸಕಾರರು ಸಾ.ಶ. 1857ರ ಭಾರತೀಯರ ಹೋರಾಟವನ್ನು ಹೇಗೆ ಪರಿಗಣಿಸಿದರು? (ಸಾಧಾರಣ)

   A) ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

   B) ಸಿಪಾಯಿ ದಂಗೆ

   C) ಸ್ವಾತಂತ್ರ್ಯ ಸಮರ

   D) ಮೇಲಿನ ಯಾವುದು ಅಲ್ಲ

2. 1857ರ ಹೋರಾಟವನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಸಮರ ಎಂದು ಮೊದಲು ಅಭಿಪ್ರಾಯಪಟ್ಟವರು ಯಾರು? (ಸಾಧಾರಣ)

   A) ವಿ.ಡಿ. ಸಾವರ್ಕರ್

   B) ಜವಾಹರಲಾಲ್ ನೆಹರು

   C) ಪಟ್ಟಾಭಿ ಸೀತಾರಾಮಯ್ಯ

   D) ಬ್ರಿಟಿಷರು

3. ಸಾ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಇಬ್ಬರು ಪ್ರಮುಖ ಮಹಿಳೆಯರು ಯಾರು? (ಸಾಧಾರಣ)

   A) ರಾಣಿ ದುರ್ಗಾವತಿ ಮತ್ತು ಪದ್ಮಾವತಿ

   B) ಕಿತ್ತೂರು ಚೆನ್ನಮ್ಮ ಮತ್ತು ಬೆಳವಡಿ ಮಲ್ಲಮ್ಮ

   C) ಲಕ್ಷ್ಮೀಬಾಯಿ ಮತ್ತು ಬೇಗಂ ಹಜರತ್ ಮಹಲ್

   D) ಮೇಲಿನ ಯಾರೂ ಅಲ್ಲ

4. ಸಾ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತದ ಚಕ್ರವರ್ತಿಯಾಗಿ ಘೋಷಿಸಲ್ಪಟ್ಟವರು ಯಾರು? (ಸಾಧಾರಣ)

   A) ನಾನಾಸಾಹೇಬ್

   B) ಮಂಗಲ್ ಪಾಂಡೆ

   C) ತಾಂತ್ಯಾ ಟೋಪಿ

   D) ಎರಡನೇ ಬಹಾದೂರ್ ಷಾ

5. ಸಾ.ಶ. 1857ರಲ್ಲಿ ಬ್ರಿಟಿಷರ ವಿರುದ್ಧ ಬಂಡೆದ್ದ ಭಾರತದ ಮೊದಲ ಸಿಪಾಯಿ ಯಾರು? (ಸಾಧಾರಣ)

   A) ಈಶ್ವರ್ ಪಾಂಡೆ

   B) ನಾನಾಸಾಹೇಬ್

   C) ಮಂಗಲ್ ಪಾಂಡೆ

   D) ತಾಂತ್ಯಾ ಟೋಪಿ

6. ಸಾ.ಶ. 1857ರ ಹೋರಾಟವು ಮೊದಲು ಎಲ್ಲಿ ಪ್ರಾರಂಭವಾಯಿತು? (ಸಾಧಾರಣ)

   A) ಮೀರತ್

   B) ದೆಹಲಿ

C) ಬ್ಯಾರಕ್‌ಪುರ್

D) ಗ್ವಾಲಿಯರ್

7. ಭಾರತೀಯ ಸಂಸ್ಥಾನಗಳನ್ನು ಆಕ್ರಮಿಸಲು ಬ್ರಿಟಿಷ್ ಗವರ್ನರ್ ಜನರಲ್ ಲಾರ್ಡ್ ವೆಲ್ಲೆಸ್ಲಿ ಜಾರಿಗೆ ತಂದ ಕುಟಿಲ ನೀತಿ ಯಾವುದು? (ಸಾಧಾರಣ)

A) ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ

B) ತೆರಿಗೆ ನೀತಿ

C) ಖಾಯಂ ಜಮೀನ್ದಾರಿ ಪದ್ಧತಿ

D) ಸಹಾಯಕ ಸೈನ್ಯ ಪದ್ಧತಿ

8. ಜನಾಂಗೀಯ ಶ್ರೇಷ್ಠತೆಯ ಅಮಲಿನಲ್ಲಿದ್ದ ಬ್ರಿಟಿಷರು ಭಾರತದಲ್ಲಿ ಅನುಸರಿಸಿದ ಸಿದ್ಧಾಂತ ಯಾವುದು? (ಸಾಧಾರಣ)

A) ಬಿಳಿಯರ ಮೇಲಿನ ಹೊರೆ ಸಿದ್ಧಾಂತ

B) ಕರಿಯರ ಮೇಲಿನ ಹೊರೆ ಸಿದ್ಧಾಂತ

C) ಸಂಪತ್ತಿನ ಸೋರಿಕೆ ಸಿದ್ಧಾಂತ

D) ದ್ರಾವಿಡ ಮತ್ತು ಆರ್ಯ ಸಿದ್ಧಾಂತ

9. ಸಾ.ಶ. 1857ರಲ್ಲಿ ಭಾರತೀಯ ಸೈನಿಕರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಉದ್ದೇಶದಿಂದ ಬ್ರಿಟಿಷರು ಪರಿಚಯಿಸಿದ ರೈಫಲ್‌ಗಳ ಕಾರ್ಟ್ರಿಡ್ಜ್‌ಗಳಿಗೆ ಯಾವ ಪ್ರಾಣಿಗಳ ಕೊಬ್ಬನ್ನು ಸವರಲಾಗಿತ್ತು? (ಸಾಧಾರಣ )

A) ಕುದುರೆ ಮತ್ತು ಹಂದಿ

B) ಹಂದಿ ಮತ್ತು ನಾಯಿ

C) ಗೋವು ಮತ್ತು ಎತ್ತು

D) ಹಂದಿ ಮತ್ತು ಗೋವು

10. ಆಧುನಿಕ ಭಾರತದ ಇತಿಹಾಸದಲ್ಲಿ ಮೈಲುಗಲ್ಲಾದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದ ವರ್ಷ ಯಾವುದು? (ಸಾಧಾರಣ )

A) ಸಾ.ಶ. 1855–56

B) ಸಾ.ಶ. 1857–58

C) ಸಾ.ಶ. 1885–86

D) ಸಾ.ಶ. 1856–57

**ಆ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

11. ಬಿಹಾರದಲ್ಲಿ ________ ರವರ ನೇತೃತ್ವದಲ್ಲಿ ದಂಗೆಗಳು ಎದ್ದವು. (ಸುಲಭ )
12. "ದತ್ತು ಮಕ್ಕಳಿಗೆ ಹಕ್ಕಿಲ್ಲ" ಎಂಬ ನೀತಿಯನ್ನು ಜಾರಿಗೆ ತಂದವರು ________. (ಸುಲಭ )
13. ಸಾ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ಇಂಗ್ಲೀಷರು ಪರಿಚಯಿಸಿದ ಹೊಸ ಮಾದರಿಯ ಬಂದೂಕು ________. (ಸುಲಭ )
14. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಈಸ್ಟ್ ಇಂಡಿಯಾ ಕಂಪನಿಯ ಆಡಳಿತವನ್ನು ಕೊನೆಗೊಳಿಸಿ ಭಾರತದ ಆಡಳಿತದ ಚುಕ್ಕಾಣಿ ಹಿಡಿದ ಬ್ರಿಟಿಷ್ ರಾಣಿ ________. (ಸುಲಭ )

**ಇ. 15. ಹೊಂದಿಸಿ ಬರೆಯಿರಿ. (ಸಾಧಾರಣ)**

| ಅ ಪಟ್ಟಿ | ಬ ಪಟ್ಟಿ |
|---|---|
| 1. ನಾನಾಸಾಹೇಬ್ | ಅ. ದೆಹಲಿ |
| 2. ಬೇಗಂ ಹಜರತ್ ಮಹಲ್ | ಆ. ನರಗುಂದ |
| 3. ಲಕ್ಷ್ಮೀಬಾಯಿ | ಇ. ಮುಂಡರಗಿ |
| 4. ಭೀಮರಾವ್ | ಈ. ಬಿಹಾರ |
| 5. ಬಾಬಾಸಾಹೇಬ್ | ಉ. ಸುರಪುರ |
| 6. ವೆಂಕಟಪ್ಪ ನಾಯಕ | ಊ. ಕಾನ್ಪುರ್ |
| 7. ಕುಂವರ್ ಸಿಂಗ್ | ಋ. ಲಕ್ನೋ |
| 8. ಸೇನಾಪತಿ ಭಕ್ತ್ ಖಾನ್ | ಎ. ಝಾನ್ಸಿ |

**ಈ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

16. ಭಾರತೀಯರನ್ನು ಬ್ರಿಟಿಷರು ಯಾವ ಪದಗಳಿಂದ ಸಂಬೋಧಿಸುತ್ತಿದ್ದರು? (ಸುಲಭ )
17. ಯುರೋಪಿಯನ್ನರ ಮೇಲುಸ್ತುವಾರಿಯಲ್ಲಿದ್ದ ಹೋಟೆಲ್‌ಗಳು ಮತ್ತು ಕ್ಲಬ್‌ಗಳ ಮುಂದೆ ಯಾವ ನಾಮಫಲಕಗಳನ್ನು ತೂಗುಹಾಕಲಾಗುತ್ತಿತ್ತು? (ಸುಲಭ )
18. "ಬಿಳಿಯರ ಮೇಲಿನ ಹೊರೆ" ಸಿದ್ಧಾಂತವನ್ನು ಪ್ರತಿಪಾದಿಸಿದ ಆಂಗ್ಲ ಕವಿ ಯಾರು? (ಸುಲಭ )

19. ಸಾ.ಶ. 1858ರಲ್ಲಿ ಘೋಷಣೆ ಹೊರಡಿಸಿದ ಬ್ರಿಟನ್‌ನ ರಾಣಿ ಯಾರು? (ಸುಲಭ )
20. ಮೀರತ್‌ನಲ್ಲಿ ದಂಗೆಯು ಯಾವ ದಿನದಂದು ಆರಂಭವಾಯಿತು? (ಸುಲಭ )

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

21. ಸಾ.ಶ. 1857ರ ಹೋರಾಟದ ತಕ್ಷಣದ ಕಾರಣವನ್ನು ತಿಳಿಸಿರಿ. (ಸಾಧಾರಣ )
22. "ದತ್ತು ಮಕ್ಕಳಿಗೆ ಹಕ್ಕಿಲ್ಲ" ಎಂಬ ನೀತಿಯಿಂದ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ರಾಜ್ಯಗಳನ್ನು ಪಟ್ಟಿಮಾಡಿ. (ಸುಲಭ )
23. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ಅಂಶಗಳನ್ನು ಪಟ್ಟಿ ಮಾಡಿ. (ಸಾಧಾರಣ )
24. "ಬಿಳಿಯರ ಮೇಲಿನ ಹೊರೆ" ಎಂದರೇನು? (ಕಠಿಣ )
25. ಸಾ.ಶ. 1857ರ ಹೋರಾಟದಲ್ಲಿ ಎರಡನೇ ಬಹಾದೂರ್ ಷಾ ಅವರ ಪಾತ್ರವೇನು? (ಸಾಧಾರಣ )

**ಊ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿರಿ.**

26. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಸಾಮಾಜಿಕ ಮತ್ತು ಧಾರ್ಮಿಕವಾಗಿ ಉಂಟಾದ ಆಘಾತಗಳನ್ನು ವಿವರಿಸಿ. (ಕಠಿಣ )
27. 1857ರ ಹೋರಾಟದಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿಯ ಪಾತ್ರವೇನು? (ಸಾಧಾರಣ )
28. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಉಂಟಾದ ಪರಿಣಾಮಗಳನ್ನು ತಿಳಿಸಿ. (ಸಾಧಾರಣ )

**ಋ.29. ಭಾರತದ ನಕ್ಷೆಯನ್ನು ರಚಿಸಿ ಕೆಳಗಿನ ಸ್ಥಳಗಳನ್ನು ಗುರುತಿಸಿರಿ. (ಕಠಿಣ)**

1. ಮೀರತ್
2. ಝಾನ್ಸಿ
3. ಗೋರಖ್‌ಪುರ್
4. ಬ್ಯಾರಕ್‌ಪುರ್

| ಅಧ್ಯಾಯ – 17 | ಸ್ವಾತಂತ್ರ್ಯ ಚಳುವಳಿ |
|---|---|

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 13 | 1857ರ ಸಂಗ್ರಾಮ, ಸ್ವಾತಂತ್ರ್ಯ ಚಳುವಳಿಗೆ ಕಾರಣಗಳನ್ನು ಗುರುತಿಸಿ, ಸ್ವಾತಂತ್ರ್ಯಕ್ಕಾಗಿ ಆದ ತ್ಯಾಗಗಳನ್ನು ಪ್ರಶಂಸಿಸುವರು | 1,2,3,4,6,8,9,11,12,15,16,17,18, 19,20,21,22,23,24,25,26,32,33, 34,35,36,37,38,39,40,41,44,45, 48,49,50,51,52,55,56,57,58,59, 60,61,63,64,65,66,67,69,70,71, 72,73,74,75.76,77,78,79,80,81, 82,84,85,86,87,88,89,90,91,92, 93,94,97,98,99,102,103,104, 106,107,109,110,111,117,118, 120,122,125,126,127,128,129, 130,131,134,135,136. |
| 14 | ಸ್ವಾತಂತ್ರ್ಯದಲ್ಲಿ ಮಹಿಳೆಯರ ಪಾತ್ರವನ್ನು ಪ್ರಶಂಸಿಸುವರು | 27,28,29,30,31,53,54,62,95, 96,119,123,124,132. |
| 15 | ಮಂದಗಾಮಿ, ತೀವ್ರಗಾಮಿ ಮತ್ತು ಕ್ರಾಂತಿಕಾರಿಗಳ ಆಲೋಚನೆಗಳನ್ನು ಹೋಲಿಸುವರು. | 5,7,10,13,14,42,43,46,47,68,83, 100,101,105,108,112,113,114, 115,116,121,133. |

| ಕ್ರಮ ಸಂಖ್ಯೆ | ಪ್ರಶ್ನೆಗಳ ವಿಧ | ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | **60** |
| 2 | ಸಾಧಾರಣ | **69** |
| 3 | ಕಠಿಣ | **7** |
| ಒಟ್ಟು | | **136** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಭಾರತವನ್ನು ಏಕರೂಪ ಆಡಳಿತ ವ್ಯವಸ್ಥೆಗೆ ಒಳಪಡಿಸಿದವರು ಯಾರು? (ಸಾಧಾರಣ)

2. A) ಪೋರ್ಚುಗೀಸರು

B) ಡಚ್ಚರು

C) ಬ್ರಿಟಿಷರು

D) ಫ್ರೆಂಚರು

3. ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ಪ್ರತಿಪಾದಿಸಿದವರು ಯಾರು? (ಸಾಧಾರಣ)

A) ಬಾಲಗಂಗಾಧರ ತಿಲಕ್

B) ದಾದಾಭಾಯಿ ನವರೋಜಿ

C) ಗೋಪಾಲಕೃಷ್ಣ ಗೋಖಲೆ

D) ಲಾಲಾ ಲಜಪತ್ ರಾಯ್

4. ಭಾರತೀಯರನ್ನು ಅನಾಗರಿಕರೆಂದು ಕರೆದ ಯುರೋಪಿಯನ್ನರು ಯಾರು? (ಸಾಧಾರಣ)

A) ಬ್ರಿಟಿಷರು

B) ಫ್ರೆಂಚರು

C) ಡಚ್ಚರು

D) ಪೋರ್ಚುಗೀಸರು

5. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ವರ್ಷ ಯಾವುದು? (ಸಾಧಾರಣ)

A) 1880

B) 1882

C) 1885

D) 1890

6. ಪ್ರಾರ್ಥನೆ, ಭಿನ್ನಹ ಮತ್ತು ಪ್ರತಿಭಟನೆಯ ನೀತಿಯನ್ನು ಬ್ರಿಟಿಷರ ಮುಂದೆ ಅನುಸರಿಸಿದವರು ಯಾರು? (ಸಾಧಾರಣ)

A) ಮಂದಗಾಮಿಗಳು

B) ತೀವ್ರಗಾಮಿಗಳು

C) ಸಮಾಜವಾದಿಗಳು

D) ಕ್ರಾಂತಿಕಾರಿಗಳು

7. ಹಿಂದೂ ಮತ್ತು ಮುಸ್ಲಿಮರು ಪರಸ್ಪರ ರಕ್ಷಾಬಂಧನ ಕಟ್ಟಿಕೊಂಡು ಯಾವ ಘಟನೆಯನ್ನು ವಿರೋಧಿಸಿದರು? (ಸಾಧಾರಣ)

A) ರೌಲಟ್ ಕಾಯ್ದೆ

B) ಸೈಮನ್ ಆಯೋಗ

C) ಬಂಗಾಳ ವಿಭಜನೆ

D) ಯಾವುದೂ ಅಲ್ಲ

8. ಭಾರತೀಯ ಕ್ರಾಂತಿಕಾರಿಗಳನ್ನು ಬ್ರಿಟಿಷರು ಹೇಗೆ ಕರೆದರು? (ಸಾಧಾರಣ)

A) ಪರಿಸರವಾದಿಗಳು

B) ರಾಷ್ಟ್ರೀಯವಾದಿಗಳು

C) ಸಮಾಜವಾದಿಗಳು

D) ಭಯೋತ್ಪಾದಕರು

9. ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯರ ಮೂಲಮಂತ್ರವಾಗಿದ್ದ "ವಂದೇ ಮಾತರಂ" ಗೀತೆಯ ರಚನೆಕಾರರು ಯಾರು? (ಸಾಧಾರಣ)

A) ಬಂಕಿಮಚಂದ್ರ ಚಟರ್ಜಿ

B) ರವೀಂದ್ರನಾಥ ಟಾಗೋರ್

C) ಅರವಿಂದ ಘೋಷ್

D) ಬಿಪಿನ್ ಚಂದ್ರ ಪಾಲ್

10. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧಿವೇಶನದ ಅಧ್ಯಕ್ಷರು ಯಾರು? (ಸಾಧಾರಣ)

A) ಮಹಾತ್ಮ ಗಾಂಧೀಜಿ

B) ಜವಾಹರಲಾಲ್ ನೆಹರು

C) ದಾದಾಭಾಯಿ ನವರೋಜಿ

D) ಉಮೇಶ್ ಚಂದ್ರ ಬ್ಯಾನರ್ಜಿ

11. "ಪಂಜಾಬಿನ ಸಿಂಹ" ಎಂದೇ ಜನಪ್ರಿಯರಾದ ನಾಯಕ ಯಾರು? (ಸಾಧಾರಣ)

A) ಅರವಿಂದ ಘೋಷ್

B) ಬಾಲಗಂಗಾಧರ ತಿಲಕ್

C) ಬಿಪಿನ್ ಚಂದ್ರ ಪಾಲ್

D) ಲಾಲಾ ಲಜಪತ್ ರಾಯ್

12. ಬಂಗಾಳವನ್ನು ಮತೀಯ ಆಧಾರದ ಮೇಲೆ ಹಿಂದೂ ಮತ್ತು ಮುಸ್ಲಿಮರ ಎರಡು ಭಾಗಗಳಾಗಿ ವಿಭಜಿಸಿದ ಬ್ರಿಟಿಷ್ ವೈಸರಾಯ್ ಯಾರು? (ಸಾಧಾರಣ)

A) ಲಾರ್ಡ್ ಕರ್ಜನ್

B) ಲಾರ್ಡ್ ಮೌಂಟ್‌ಬ್ಯಾಟನ್

C) ಲಾರ್ಡ್ ವಿಲಿಯಂ ಬೆಂಟಿಂಕ್

D) ಲಾರ್ಡ್ ಡಲ್ಹೌಸಿ

13. "ಅಮರ್ ಸೋನಾರ್ ಬಾಂಗ್ಲಾ" ಗೀತೆಯು ಪ್ರತಿಬಿಂಬಿಸುವ ಅಂಶ ಯಾವುದು? (ಸಾಧಾರಣ)

A) ಸಾಮಾಜಿಕ ನೀತಿ

B) ಆರ್ಥಿಕ ನೀತಿ

C) ಭಾವೈಕ್ಯತೆ

D) ಯಾವುದೂ ಅಲ್ಲ

14. ಬ್ರಿಟಿಷ್ ಆಡಳಿತದಲ್ಲಿ ಭಾರತೀಯರು ಶಾಸನಸಭೆಗಳನ್ನು ಪ್ರವೇಶಿಸಲು ಕಾರಣರಾದವರು ಯಾರು? (ಸಾಧಾರಣ)

A) ಮಂದಗಾಮಿಗಳು

B) ತೀವ್ರಗಾಮಿಗಳು

C) ಕ್ರಾಂತಿಕಾರಿಗಳು

D) ಸಮಾಜವಾದಿಗಳು

15. ಸೆರೆಮನೆಯಲ್ಲಿ *ಗೀತಾ ರಹಸ್ಯ* ಕೃತಿಯನ್ನು ಬರೆದ ಸ್ವಾತಂತ್ರ್ಯ ಹೋರಾಟಗಾರ ಯಾರು? (ಸಾಧಾರಣ)

A) ಲಾಲಾ ಲಜಪತ್ ರಾಯ್

B) ಬಾಲಗಂಗಾಧರ ತಿಲಕ್

C) ಬಿಪಿನ್ ಚಂದ್ರ ಪಾಲ್

D) ಅರವಿಂದ ಘೋಷ್

16. ಮುಸ್ಲಿಮರಿಗೆ ಪ್ರತ್ಯೇಕ ಮತಕ್ಷೇತ್ರವನ್ನು ಕಲ್ಪಿಸಿದ ಕಾಯ್ದೆ ಯಾವುದು? (ಸಾಧಾರಣ)

A) 1909ರ ಕಾಯ್ದೆ

B) 1919ರ ಕಾಯ್ದೆ

C) 1935ರ ಕಾಯ್ದೆ

D) 1892ರ ಕಾಯ್ದೆ

17. ಸರ್ಕಾರಿ ವರದಿಯ ಪ್ರಕಾರ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು? (ಸಾಧಾರಣ)

A) 300

B) 349

C) 379

D) 489

18. 1899ರಲ್ಲಿ "ಮಿತ್ರ ಮೇಳ" ಎಂಬ ಗುಪ್ತ ಸಂಘಟನೆಯನ್ನು ಸ್ಥಾಪಿಸಿದವರು ಯಾರು? (ಸಾಧಾರಣ)

A) ಖುದಿರಾಮ್ ಬೋಸ್

B) ಚಂದ್ರಶೇಖರ ಆಜಾದ್

C) ಭಗತ್ ಸಿಂಗ್

D) ವಿನಾಯಕ ದಾಮೋದರ ಸಾವರ್ಕರ್

19. ಗಾಂಧೀಜಿಯವರ ಯಶಸ್ಸಿನ ಸೂತ್ರಗಳು ಯಾವುವು? (ಸಾಧಾರಣ)

A) ಸರಳತೆ

B) ಸಜ್ಜನಿಕೆ

C) ಸತ್ಯಸಂಧತೆ

D) ಮೇಲಿನ ಎಲ್ಲವೂ

20. ಗಾಂಧೀಜಿಯವರು ಕಾನೂನು ಪದವಿ ಪಡೆದ ದೇಶ ಯಾವುದು? (ಸಾಧಾರಣ)

A) ಬ್ರಿಟನ್

B) ಫ್ರಾನ್ಸ್

C) ಅಮೆರಿಕ (ನ್ಯೂಯಾರ್ಕ್)

D) ಕೆನಡಾ

21. ಗಾಂಧೀಜಿಯವರು ಭಾರತದ ರಾಜಕೀಯ ರಂಗವನ್ನು ಪ್ರವೇಶಿಸಿದ ವರ್ಷ ಯಾವುದು? (ಸಾಧಾರಣ)

A) 1915

B) 1916

C) 1919

D) 1920

22. ಕಾಂಗ್ರೆಸ್ ಮತ್ತು ಗಾಂಧೀಜಿಯವರು ಯಾವ ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದರು? (ಸಾಧಾರಣ)

A) ಮೊದಲನೆಯದು

B) ಎರಡನೆಯದು

C) ಮೂರನೆಯದು

D) ಮೇಲಿನ ಎಲ್ಲವೂ

23. "ಖುದಾಯಿ ಖಿದ್ಮತ್‌ಗಾರ" ಸಂಘವನ್ನು ಸ್ಥಾಪಿಸಿ "ಗಡಿನಾಡ ಗಾಂಧಿ" ಎಂದು ಪ್ರಸಿದ್ಧರಾದವರು ಯಾರು? (ಸಾಧಾರಣ)

A) ಮೌಲಾನಾ ಅಬುಲ್ ಕಲಾಂ ಆಜಾದ್

B) ಮಹಮ್ಮದ್ ಅಲಿ ಜಿನ್ನಾ

C) ಖಾನ್ ಅಬ್ದುಲ್ ಗಫಾರ್ ಖಾನ್

D) ಯಾವುದೂ ಅಲ್ಲ

24. ಬ್ರಿಟಿಷರು ಭಾರತ ಸರ್ಕಾರ ಕಾಯ್ದೆಯನ್ನು ಜಾರಿಗೆ ತಂದ ವರ್ಷ ಯಾವುದು? (ಸಾಧಾರಣ)

A) 1909

B) 1919

C) 1935

D) 1947

25. ತಾವೊಬ್ಬ ಸಮಾಜವಾದಿ ಎಂದು ಗುರುತಿಸಿಕೊಂಡರೂ ತಾತ್ವಿಕವಾಗಿ ಗಾಂಧೀಜಿಯೊಂದಿಗೆ ಇದ್ದವರು ಯಾರು? (ಸಾಧಾರಣ)

A) ಜವಾಹರಲಾಲ್ ನೆಹರು

B) ಜಯಪ್ರಕಾಶ್ ನಾರಾಯಣ್

C) ಸುಭಾಷ್ ಚಂದ್ರ ಬೋಸ್

D) ಆಚಾರ್ಯ ನರೇಂದ್ರ ದೇವ

26. 1934ರಲ್ಲಿ ಸ್ಥಾಪನೆಯಾದ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ ಮಹಾ ಕಾರ್ಯದರ್ಶಿ ಯಾರು? (ಸಾಧಾರಣ)

A) ಜವಾಹರಲಾಲ್ ನೆಹರು

B) ಆಚಾರ್ಯ ನರೇಂದ್ರ ದೇವ

C) ಜಯಪ್ರಕಾಶ್ ನಾರಾಯಣ್

D) ರಾಮಮನೋಹರ ಲೋಹಿಯಾ

27. ಆದಿವಾಸಿಗಳು ಮೂಲತಃ ಯಾವ ವೃತ್ತಿಯಲ್ಲಿ ತೊಡಗಿದ್ದರು? (ಸಾಧಾರಣ)

A) ಕೃಷಿಕರು

B) ಬೇಟೆಗಾರರು

C) ಮೀನುಗಾರರು

D) ಅಲೆಮಾರಿಗಳು

28. ರಾಣಿ ಅಬ್ಬಕ್ಕದೇವಿ ಯಾರ ವಿರುದ್ಧ ಹೋರಾಡಿ ಜಯ ಸಾಧಿಸಿದರು? (ಸಾಧಾರಣ)

A) ಬ್ರಿಟಿಷರು

B) ಫ್ರೆಂಚರು

C) ಪೋರ್ಚುಗೀಸರು

D) ಡಚ್ಚರು

29. ಮೈಸೂರು ಸಂಸ್ಥಾನದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿದ ಪ್ರಥಮ ಮಹಿಳೆ ಯಾರು? (ಸಾಧಾರಣ)

A) ಯಶೋಧರಮ್ಮ ದಾಸಪ್ಪ

B) ಬಳ್ಳಾರಿ ಸಿದ್ದಮ್ಮ

C) ಉಮಾಬಾಯಿ ಕುಂದಾಪುರ

D) ಕಮಲಾದೇವಿ ಚಟ್ಟೋಪಾಧ್ಯಾಯ

30. "ಗಾಂಧಿ ಉಪ್ಪನ್ನು ಕೊಳ್ಳಿ; ಇದರ ಬೆಲೆ ಆರು ತಿಂಗಳ ಶಿಕ್ಷೆ" ಎಂದು ಹೇಳುತ್ತಾ ಬಂಧನಕ್ಕೊಳಗಾದ ಮಹಿಳೆ ಯಾರು? (ಸಾಧಾರಣ)

A) ಬಳ್ಳಾರಿ ಸಿದ್ದಮ್ಮ

B) ಕಮಲಾದೇವಿ ಚಟ್ಟೋಪಾಧ್ಯಾಯ

C) ಉಮಾಬಾಯಿ ಕುಂದಾಪುರ

D) ಯಶೋಧರಮ್ಮ ದಾಸಪ್ಪ

31. ಯಶೋಧರಮ್ಮ ದಾಸಪ್ಪ ಅವರು ಸ್ವಾತಂತ್ರ್ಯ ಚಳುವಳಿಯ ಕುರಿತ ಲೇಖನಗಳನ್ನು ಗುಟ್ಟಾಗಿ ಮುದ್ರಿಸಿ ಯಾವ ಪತ್ರಿಕೆಯಲ್ಲಿ ಪ್ರಕಟಿಸಿದರು? (ಸಾಧಾರಣ)

A) ಕೇಸರಿ

B) ಮರಾಠ

C) ಜ್ವಾಲೆ

D) ರಕ್ತ

32. ಮರಾಠಿ ಭಾಷೆಯಲ್ಲಿ *ಸ್ವದೇಶಿ ವ್ರತ* ಎಂಬ ನಾಟಕವನ್ನು ರಚಿಸಿ ಸ್ವದೇಶಿ ತತ್ವದ ಮಹತ್ವವನ್ನು ಸಾರಿದವರು ಯಾರು? (ಸಾಧಾರಣ)

A) ಬಳ್ಳಾರಿ ಸಿದ್ದಮ್ಮ

B) ಸರೋಜಿನಿ ನಾಯ್ಡು

C) ಉಮಾಬಾಯಿ ಕುಂದಾಪುರ

D) ಅರುಣಾ ಆಸಫ್ ಅಲಿ

33. ಬ್ರಿಟಿಷ್ ಸರ್ಕಾರವು ಭಾರತಕ್ಕೆ ಕ್ಯಾಬಿನೆಟ್ ಆಯೋಗವನ್ನು ಕಳುಹಿಸಿದ ವರ್ಷ ಯಾವುದು? (ಸಾಧಾರಣ)

A) 1942

B) 1946

C) 1947

D) 1945

34. ಎರಡು ಶತಮಾನಗಳ ಕಾಲ ಭಾರತವನ್ನು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ದುರ್ಬಲಗೊಳಿಸಿದವರು ಯಾರು? (ಸಾಧಾರಣ)

A) ಪೋರ್ಚುಗೀಸರು

B) ಡಚ್ಚರು

C) ಬ್ರಿಟಿಷರು

D) ಫ್ರೆಂಚರು

35. ಜಿನ್ನಾ ಅವರು ಮಂಡಿಸಿದ 14 ಅಂಶಗಳ ಬೇಡಿಕೆಗಳನ್ನು ಯಾವ ಹೆಸರಿನಿಂದ ಕರೆಯುತ್ತಾರೆ? (ಸಾಧಾರಣ)

A) ದೆಹಲಿ ಘೋಷಣೆ

B) ಪುಣೆ ಘೋಷಣೆ

C) ಲಾಹೋರ್ ಘೋಷಣೆ

D) ಯಾವುದೂ ಅಲ್ಲ

36. ಸಿಂಗಾಪುರದಲ್ಲಿ ಸ್ವತಂತ್ರ ಭಾರತದ ಹಂಗಾಮಿ ಸರ್ಕಾರವನ್ನು ಸ್ಥಾಪಿಸಿದವರು ಯಾರು? (ಸಾಧಾರಣ)

A) ಭಗತ್ ಸಿಂಗ್

B) ಸುಭಾಷ್ ಚಂದ್ರ ಬೋಸ್

C) ಮೋಹನ್ ಸಿಂಗ್

D) ರಾಸ್ ಬಿಹಾರಿ ಬೋಸ್

37. ಸಾಮಾಜಿಕ ಅಸಮಾನತೆಯನ್ನು ತೊಲಗಿಸಲು ಸಂವಿಧಾನಾತ್ಮಕ ಮಾರ್ಗವೇ ಸಾಧನವೆಂದು ನಂಬಿದವರು ಯಾರು? (ಸಾಧಾರಣ)

A) ಮಹಾತ್ಮ ಗಾಂಧೀಜಿ

B) ಡಾ. ಬಿ.ಆರ್. ಅಂಬೇಡ್ಕರ್

C) ಸುಭಾಷ್ ಚಂದ್ರ ಬೋಸ್

D) ಜವಾಹರಲಾಲ್ ನೆಹರು

38. ಸಾ.ಶ. 1932ರಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ನಡುವೆ ನಡೆದ ಒಪ್ಪಂದ ಯಾವುದು? (ಸಾಧಾರಣ)

A) ಮೈಸೂರು ಒಪ್ಪಂದ

B) ಪುಣೆ ಒಪ್ಪಂದ

C) ಹೈದರಾಬಾದ್ ಒಪ್ಪಂದ

D) ದೆಹಲಿ ಒಪ್ಪಂದ

## ಆ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ

38. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ 1857 ರಲ್ಲಿ ನಡೆಯಿತು. (ಸುಲಭ)

39. ಮುಂಬೈಯಲ್ಲಿ ನಡೆದ ಕಾಂಗ್ರೆಸ್‌ನ ಮೊದಲ ಅಧಿವೇಶನದಲ್ಲಿ 72 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. (ಸುಲಭ)

40. ಮೊದಲನೇ ಮಹಾಯುದ್ಧ ಆರಂಭವಾದದ್ದು 1914 ರಲ್ಲಿ. (ಸುಲಭ)

41. 1885 ರಿಂದ 1905 ರ ಕಾಲಘಟ್ಟವನ್ನು ಮಂದಗಾಮಿಗಳ ಕಾಲ ಎಂದು ಕರೆಯಲಾಗಿದೆ. (ಸುಲಭ)
42. 1905 ರಿಂದ 1919 ರ ಕಾಲಾವಧಿಯನ್ನು ತೀವ್ರಗಾಮಿಗಳ ಕಾಲ ಎಂದು ಗುರುತಿಸಲಾಗಿದೆ. (ಸುಲಭ)
43. 1919 ರಿಂದ 1947 ರ ಕಾಲಾವಧಿಯನ್ನು ಗಾಂಧಿ ಯುಗ ಎಂದು ಕರೆಯಲಾಗಿದೆ. (ಸುಲಭ)
44. 1906 ರಲ್ಲಿ ಭಾರತ ಮುಸ್ಲಿಂ ಲೀಗನ್ನು ಢಾಕಾ ದಲ್ಲಿ ಸ್ಥಾಪಿಸಲಾಯಿತು. (ಸುಲಭ)
45. ಸ್ವಾತಂತ್ರ್ಯ ಹೋರಾಟದಲ್ಲಿ ನೇಣುಗಂಬ ಏರಿದ ಭಾರತದ ಮೊದಲ ಹುತಾತ್ಮ ಖುದಿರಾಮ್ ಬೋಸ್. (ಸುಲಭ)
46. "ಇಂಕ್ವಿಲಾಬ್ ಜಿಂದಾಬಾದ್" ಎಂಬ ಘೋಷಣೆಯನ್ನು ಭಗತ್ ಸಿಂಗ್ ಕೂಗಿದರು. (ಸುಲಭ)
47. ಪೋರಬಂದರಿನಲ್ಲಿ ಜನಿಸಿದ ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ. (ಸುಲಭ)
48. ಗಾಂಧೀಜಿಯವರ ಹೋರಾಟದ ವಿಧಾನವು ಸತ್ಯಾಗ್ರಹ ಎಂಬ ಹೆಸರಿನಿಂದ ಜನಪ್ರಿಯವಾಗಿದೆ. (ಸುಲಭ)
49. ಗಾಂಧೀಜಿ ಅಹಮದಾಬಾದ್‌ನಲ್ಲಿ ಸಾಬರಮತಿ ಆಶ್ರಮವನ್ನು 1917 ರಲ್ಲಿ ಸ್ಥಾಪಿಸಿದರು. (ಸುಲಭ)
50. ಜಯಪ್ರಕಾಶ್ ನಾರಾಯಣರು ಸಂಪೂರ್ಣ ಕ್ರಾಂತಿ ಎಂಬ ಆಂದೋಲನವನ್ನು ಹುಟ್ಟುಹಾಕಿದರು. (ಸುಲಭ)
51. ಚಂಪಾರಣ್ ಚಳುವಳಿಯ ಮೂಲಕ ಮಹಾತ್ಮ ಗಾಂಧೀಜಿ ಪ್ರಮುಖ ನಾಯಕರಾಗಿ ರೂಪಗೊಂಡರು. (ಸುಲಭ)
52. ಮಲಬಾರ್ ಪ್ರದೇಶದ ಮುಸ್ಲಿಮರನ್ನು ಮೊಪ್ಲರು (ಮಾಪಿಳರು) ಎಂದು ಕರೆಯುತ್ತಿದ್ದರು. (ಸುಲಭ)
53. ರಾಣಿ ಅಬ್ಬಕ್ಕ ದೇವಿ ಚೌಟ ಮನೆತನಕ್ಕೆ ಸೇರಿದ್ದರು. (ಸುಲಭ)
54. ಎಸ್. ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಸಮಾಜ ಕಲ್ಯಾಣ ಸಚಿವರಾಗಿ ಬಿ. ಬಸವಲಿಂಗಪ್ಪ ಸೇವೆ ಸಲ್ಲಿಸಿದರು. (ಸುಲಭ)
55. ಪ್ರತ್ಯೇಕ ಮುಸ್ಲಿಂ ದೇಶಕ್ಕಾಗಿ ಮಹಮ್ಮದ್ ಅಲಿ ಜಿನ್ನಾ ಅವರು ಪಟ್ಟು ಹಿಡಿದರು. (ಸುಲಭ)

56. ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರು. (ಸುಲಭ)
57. ಎರಡನೇ ಮಹಾಯುದ್ಧವು 1939 ರಿಂದ 1945 ರವರೆಗೆ ನಡೆಯಿತು. (ಸುಲಭ)
58. 1891 ಏಪ್ರಿಲ್ 14 ರಂದು ಮಾಹೋ ಎಂಬ ಗ್ರಾಮದಲ್ಲಿ ಜನಿಸಿದ ಭಾರತದ ಸಂವಿಧಾನದ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್. (ಸುಲಭ)
59. ಗಾಂಧೀಜಿಯವರಿಗೆ ರಾಜಕೀಯ ಸ್ವಾತಂತ್ರ್ಯ ಮೊದಲ ಆದ್ಯತೆಯಾಗಿದ್ದರೆ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಸಮಾಜದ ಸ್ವಾತಂತ್ರ್ಯ ಮೊದಲ ಆದ್ಯತೆಯಾಗಿತ್ತು. (ಸುಲಭ)
60. 1905ರ ಅಕ್ಟೋಬರ್ 16 ರಂದು ಬಂಗಾಳದಾದ್ಯಂತ "ರಾಷ್ಟ್ರೀಯ ಶೋಕ ದಿನ"ವನ್ನಾಗಿ ಆಚರಿಸಿದರು. (ಸಾಧಾರಣ)
61. ಸತ್ಯಾಗ್ರಹ ಪದದ ಅರ್ಥ ಸತ್ಯಕ್ಕಾಗಿ ಆಗ್ರಹ. (ಸುಲಭ)
62. 1938 ರಲ್ಲಿ ಯಶೋಧರಮ್ಮನವರು ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದರು. (ಸಾಧಾರಣ)
63. ಚೌರಿಚೌರ ಘಟನೆ 1922 ರಲ್ಲಿ ಸಂಭವಿಸಿತು. (ಸಾಧಾರಣ)
64. ಸಂಪೂರ್ಣ ಸ್ವರಾಜ್ಯ ನಿರ್ಣಯವು 1929ರ ಡಿಸೆಂಬರ್ 31 ರಂದು ಅಂಗೀಕರಿಸಲ್ಪಟ್ಟಿತು. (ಸಾಧಾರಣ)
65. ಭಾರತೀಯ ರಾಷ್ಟ್ರೀಯ ಸೇನೆ (ಐ.ಎನ್.ಎ.) ಯ ನಾಯಕತ್ವವನ್ನು ಸುಭಾಷ್ ಚಂದ್ರ ಬೋಸ್ ವಹಿಸಿದರು. (ಸಾಧಾರಣ)
66. ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಡಾ. ರಾಜೇಂದ್ರ ಪ್ರಸಾದ್. (ಸುಲಭ)

**ಇ. ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೇ ಪದಕ್ಕೆ ಸಂಬಂಧಿಸಿದ ಉತ್ತರ ಬರೆಯಿರಿ**

67. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ : ಎ.ಓ. ಹ್ಯೂಮ್ :: ಫಾರ್ವರ್ಡ್ ಬ್ಲಾಕ್ ಪಕ್ಷ : ಸುಭಾಷ್ ಚಂದ್ರ ಬೋಸ್. (ಸಾಧಾರಣ)
68. ಬಿಪಿನ್ ಚಂದ್ರ ಪಾಲ್ : *ನ್ಯೂ ಇಂಡಿಯಾ* :: ಅರವಿಂದ ಘೋಷ್ : ವಂದೇ ಮಾತರಂ. (ಸಾಧಾರಣ)
69. ಬಂಗಾಳ ವಿಭಜನೆ : 1905 :: ಬಂಗಾಳ ವಿಭಜನೆ ರದ್ದು : 1911. (ಸಾಧಾರಣ)

70. ನೈಟ್‌ಹುಡ್ ಪದವಿ : ರವೀಂದ್ರನಾಥ ಟಾಗೋರ್ :: ಕೈಸರ್-ಇ-ಹಿಂದ್ : ಮಹಾತ್ಮ ಗಾಂಧೀಜಿ. (ಸಾಧಾರಣ)
71. ಸ್ವಾತಂತ್ರ್ಯ ದಿನ : ಆಗಸ್ಟ 15 :: ಗಣರಾಜ್ಯ ದಿನ : ಜನವರಿ 26. (ಸಾಧಾರಣ)
72. 1917 : ಚಂಪಾರಣ್ ಸತ್ಯಾಗ್ರಹ :: 1919 : ರೌಲಟ್ ಸತ್ಯಾಗ್ರಹ. (ಸಾಧಾರಣ)
73. ದೇಶಬಂಧು : ಚಿತ್ತರಂಜನ ದಾಸ್ :: ನೇತಾಜಿ : ಸುಭಾಷ್ ಚಂದ್ರ ಬೋಸ್. (ಸಾಧಾರಣ)
74. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ : 1919 :: ಚೌರಿಚೌರ ದುರಂತ : 1922. (ಸಾಧಾರಣ)

**ಈ. 75. ಹೊಂದಿಸಿ ಬರೆಯಿರಿ (ಸಾಧಾರಣ)**

| ಅ | ಬ |
|---|---|
| 1. ಜಯಪ್ರಕಾಶ್ ನಾರಾಯಣ | ಅ. ಸೇವಾದಳ |
| 2. ಡಾ. ಬಿ.ಆರ್. ಅಂಬೇಡ್ಕರ್ | ಆ. ಹಿಂದೂ-ಮುಸ್ಲಿಂ ಏಕತೆಯ ರಾಯಭಾರಿ |
| 3. ಬಾಲಗಂಗಾಧರ ತಿಲಕ | ಇ. ಲೋಕಮಾನ್ಯ |
| 4. ಡಾ. ಎನ್.ಎಸ್. ಹರ್ಡೇಕರ | ಈ. ಸಂವಿಧಾನ ಶಿಲ್ಪಿ |
| 5. ಮಹಮ್ಮದ್ ಅಲಿ ಜಿನ್ನಾ | ಉ. ಲೋಕನಾಯಕ |

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

76. ಭಾರತೀಯರಿಗೆ ರಾಜಕೀಯವಾಗಿ ಪ್ರೇರಣೆಯಾದ ಯುರೋಪಿನ ಪರಿಕಲ್ಪನೆಗಳು ಯಾವುವು? *(ಸಾಧಾರಣ)*
77. ರಾಷ್ಟ್ರೀಯತೆ ಎಂದರೇನು? *(ಸುಲಭ)*
78. ಭಾರತದ "ಉಕ್ಕಿನ ಮನುಷ್ಯ" ಎಂದು ಖ್ಯಾತರಾದವರು ಯಾರು? *(ಸುಲಭ)*
79. ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರು ಯಾರಾಗಿದ್ದರು? *(ಸುಲಭ)*
80. ಬಾಲಗಂಗಾಧರ ತಿಲಕರು ಪ್ರಕಟಿಸಿದ ಪತ್ರಿಕೆಗಳಾವುವು? *(ಸುಲಭ)*
81. ಸೂರತ್ ಒಡಕು ಎಂದರೇನು? *(ಸುಲಭ)*
82. ಹೋಂ ರೂಲ್ ಚಳವಳಿಯನ್ನು ಆರಂಭಿಸಿದವರು ಯಾರು? *(ಸುಲಭ)*

83. ಭಾರತ ಸ್ವಾತಂತ್ರ್ಯ ಹೋರಾಟದ ಮೊದಲ ಕ್ರಾಂತಿಕಾರಿ ಎಂದು ಯಾರನ್ನು ಕರೆಯುತ್ತಾರೆ? *(ಸುಲಭ)*

84. ಗಾಂಧೀಜಿಯವರ ಹೋರಾಟದ ಅಸ್ತ್ರಗಳಾವುವು? *(ಸುಲಭ)*

85. ಗಾಂಧೀಜಿಯವರ ತಂದೆ-ತಾಯಿಯ ಹೆಸರೇನು? *(ಸುಲಭ)*

86. ಗಾಂಧೀಜಿಯವರು ದಕ್ಷಿಣ ಆಫ್ರಿಕಾಕ್ಕೆ ಹೋಗಿದ್ದು ಏಕೆ? *(ಸುಲಭ)*

87. ಗಾಂಧೀಜಿಯವರ ರಾಜಕೀಯ ಗುರು ಯಾರು? *(ಸುಲಭ)*

88. ಸೈಮನ್ ನಿಯೋಗವನ್ನು ಭಾರತೀಯರು ಯಾವ ಘೋಷಣೆಯಿಂದ ಬಹಿಷ್ಕರಿಸಿದರು? *(ಸುಲಭ)*

89. ಭೂದಾನ ಚಳವಳಿಯನ್ನು ಆರಂಭಿಸಿದವರು ಯಾರು? *(ಸುಲಭ)*

90. ಆದಿವಾಸಿ ದಂಗೆಗಳ ಪ್ರಮುಖ ಲಕ್ಷಣ ಯಾವುದು? *(ಸುಲಭ)*

91. ಪ್ರಮುಖ ಆದಿವಾಸಿ ಪಂಗಡಗಳಾವುವು? *(ಸುಲಭ)*

92. ಚಂಪಾರಣ್ ಚಳುವಳಿಯ ಮೂಲಕ ನಾಯಕರಾಗಿ ರೂಪಗೊಂಡವರು ಯಾರು? *(ಸುಲಭ)*

93. ಖೇಡಾ ರೈತ ಹೋರಾಟದ ಮೂಲಕ ರಾಜಕೀಯವಾಗಿ ಬೆಳೆದ ನಾಯಕರು ಯಾರು? *(ಸುಲಭ)*

94. ಮಾಪಿಳ್ಳೆಗಳು ದಂಗೆ ಏಳಲು ಮುಖ್ಯ ಕಾರಣವೇನು? *(ಸಾಧಾರಣ)*

95. ರಾಣಿ ಅಬ್ಬಕ್ಕ ಸ್ಮರಣಾರ್ಥವಾಗಿ ಉಳ್ಳಾಲದಲ್ಲಿ ಯಾವ ಉತ್ಸವವನ್ನು ಆಚರಿಸುತ್ತಾರೆ? *(ಸುಲಭ)*

96. ಬಳ್ಳಾರಿ ಸಿದ್ದಮ್ಮ ಗ್ರಾಮೀಣ ಬಡ ಮಹಿಳೆಯರ ಆರೋಗ್ಯವನ್ನು ಕಾಪಾಡಲು ಸ್ಥಾಪಿಸಿದ ಸಂಸ್ಥೆ ಯಾವುದು? *(ಸುಲಭ)*

97. ಭಾರತದ ಕೊನೆಯ ಬ್ರಿಟಿಷ್ ವೈಸರಾಯ್ ಯಾರು? *(ಸುಲಭ)*

98. ಪಾಕಿಸ್ತಾನ ದೇಶವು ಭಾರತದಿಂದ ಯಾವಾಗ ಪ್ರತ್ಯೇಕಗೊಂಡಿತು? *(ಸುಲಭ)*

99. ಎರಡು ರಾಷ್ಟ್ರಗಳ ಸಿದ್ಧಾಂತದ ಪ್ರತಿಪಾದಕರು ಯಾರು? *(ಸುಲಭ)*

100. "ನೀವು ರಕ್ತವನ್ನು ನೀಡಿದರೆ ನಾನು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತೇನೆ" ಎಂಬ ಘೋಷಣೆ ನೀಡಿದವರು ಯಾರು? *(ಸುಲಭ)*

101. "ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು; ನಾನು ಅದನ್ನು ಪಡೆದೇ ತೀರುತ್ತೇನೆ" ಎಂದು ಹೇಳಿದವರು ಯಾರು? *(ಸುಲಭ)*

102. INA ವಿಸ್ತರಿಸಿ ಬರೆಯಿರಿ. *(ಸುಲಭ)*

103. ಭಾರತದಲ್ಲಿದ್ದ ಇಂಗ್ಲೀಷ್ ಸಮುದಾಯ ಯಾವ ಮಸೂದೆಯನ್ನು ವಿರೋಧಿಸಿತು? *(ಸಾಧಾರಣ)*

104. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಯಾರ ಕನಸಿನ ಕೂಸಾಗಿತ್ತು? *(ಸುಲಭ)*

105. "ನಾವು ಸ್ವರಾಜ್ಯವನ್ನು ಹಕ್ಕಿನ ರೂಪದಲ್ಲಿ ಪಡೆಯುತ್ತೇವೆಯೇ ಹೊರತು ಭಿಕ್ಷೆಯ ರೂಪದಲ್ಲಿ ಅಲ್ಲ" ಎಂದು ಹೇಳಿದವರು ಯಾರು? *(ಸಾಧಾರಣ)*

106. ಬಂಗಾಳದಲ್ಲಿ ಸಾಮೂಹಿಕ ಪ್ರತಿಭಟನೆಯನ್ನು ಸಂಘಟಿಸಿದವರು ಯಾರು? *(ಸಾಧಾರಣ)*

107. ರೌಲಟ್ ಕಾಯ್ದೆ ಯಾವ ವರ್ಷ ಜಾರಿಗೆ ಬಂದಿತು? *(ಸುಲಭ)*

108. "ಕ್ರಾಂತಿಕಾರಿ ರಾಷ್ಟ್ರೀಯವಾದಿಗಳು" ಎಂದರೆ ಯಾರು? *(ಸುಲಭ)*

109. "ಭಾರತ ಬಿಟ್ಟು ತೊಲಗಿ" ಎಂಬ ನಿರ್ಣಯವನ್ನು ಯಾವ ದಿನದಂದು ಅಂಗೀಕರಿಸಲಾಯಿತು? *(ಸುಲಭ)*

110. "ಮಾಡು ಇಲ್ಲವೇ ಮಡಿ" ಎಂಬ ಘೋಷಣೆ ನೀಡಿದವರು ಯಾರು? *(ಸುಲಭ)*

**ಊ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

111. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಯಾವುದಾದರೂ ಎರಡು ಉದ್ದೇಶಗಳನ್ನು ಬರೆಯಿರಿ. *(ಸಾಧಾರಣ)*

112. ಪ್ರಮುಖ ಮಂದಗಾಮಿ ನಾಯಕರನ್ನು ಪಟ್ಟಿಮಾಡಿ. *(ಸಾಧಾರಣ)*

113. "ಲಾಲ್–ಬಾಲ್–ಪಾಲ್" ಎಂದೇ ಜನಪ್ರಿಯರಾದ ನಾಯಕರು ಯಾರು? *(ಸುಲಭ)*

114. ಬಾಲಗಂಗಾಧರ ತಿಲಕರು ಪರಿಚಯಿಸಿದ ಉತ್ಸವಗಳು ಯಾವುವು? *(ಸುಲಭ)*

115. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ಯಾವಾಗ ಸಂಭವಿಸಿತು? ಈ ಘಟನೆಗೆ ಕಾರಣವಾದ ಬ್ರಿಟಿಷ್ ಅಧಿಕಾರಿ ಯಾರು? *(ಸುಲಭ)*

116. ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿ ಹುತಾತ್ಮರಾದ ಮೂವರು ಭಾರತೀಯ ಹೋರಾಟಗಾರರು ಯಾರು? *(ಸುಲಭ)*

117. ಗಾಂಧೀಜಿಯವರು 1924 ರಿಂದ 1929 ರವರೆಗೆ ಕೈಗೊಂಡ ರಚನಾತ್ಮಕ ಕಾರ್ಯಗಳು ಯಾವುವು? *(ಸಾಧಾರಣ)*

118. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಡೆದ ಪ್ರಮುಖ ರೈತ ದಂಗೆಗಳನ್ನು ಪಟ್ಟಿ

ಮಾಡಿ. *(ಸಾಧಾರಣ)*

119. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಕಮಲಾದೇವಿ ಚಟ್ಟೋಪಾಧ್ಯಾಯ ಅವರಿಗೆ ದೊರೆತ ಪ್ರಶಸ್ತಿಗಳಾವುವು? *(ಸುಲಭ)*

120. ಅಸ್ಪೃಶ್ಯತೆಯ ವಿರುದ್ಧ ಅಂಬೇಡ್ಕರ್ ಅವರು ಹೋರಾಡಿದ ಪ್ರಮುಖ ಹೋರಾಟಗಳು ಯಾವುವು? *(ಸಾಧಾರಣ)*

121. ತೀವ್ರಗಾಮಿಗಳ ಬೆಳವಣಿಗೆಗೆ ಕಾರಣಗಳಾವುವು? *(ಸಾಧಾರಣ)*

122. ಗಾಂಧೀಜಿಯವರ ಜೀವನದ ಮೇಲೆ ಪ್ರಭಾವ ಬೀರಿದ ಪ್ರಮುಖ ಕೃತಿಗಳಾವುವು? *(ಸಾಧಾರಣ)*

123. ಉಳ್ಳಾಲದ ರಕ್ಷಣೆಯಲ್ಲಿ ಪೋರ್ಚುಗೀಸರ ವಿರುದ್ಧ ರಾಣಿ ಅಬ್ಬಕ್ಕ ದೇವಿಯ ಹೋರಾಟವನ್ನು ತಿಳಿಸಿರಿ. *(ಸಾಧಾರಣ)*

124. ಸ್ವಾತಂತ್ರ್ಯ ಹೋರಾಟಕ್ಕೆ ಉಮಾಬಾಯಿ ಕುಂದಾಪುರ ಅವರು ನೀಡಿದ ಕೊಡುಗೆಗಳನ್ನು ಪಟ್ಟಿಮಾಡಿ. *(ಸಾಧಾರಣ)*

125. ಗಾಂಧೀಜಿಯವರ ದಂಡಿ ಯಾತ್ರೆಯ ಪ್ರಾಮುಖ್ಯತೆ ಏನು? *(ಸಾಧಾರಣ)*

126. ಪ್ರಮುಖ ಆದಿವಾಸಿ ಮತ್ತು ರೈತ ಚಳವಳಿಗಳನ್ನು ಹೆಸರಿಸಿರಿ. *(ಸುಲಭ)*

**ಋ. ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ**

127. ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ಪಟ್ಟಿ ಮಾಡಿ. *(ಕಠಿಣ)*

128. ರೌಲಟ್ ಕಾಯ್ದೆ ಕುರಿತು ಬರೆಯಿರಿ. *(ಕಠಿಣ)*

129. ಪೂರ್ಣ ಸ್ವರಾಜ್ಯ ಘೋಷಣೆ ಕುರಿತು ಬರೆಯಿರಿ. *(ಕಠಿಣ)*

130. ನಾಗರಿಕ ಕಾನೂನು ಭಂಗ ಚಳುವಳಿಯನ್ನು ಸಂಕ್ಷಿಪ್ತವಾಗಿ ಬರೆಯಿರಿ. *(ಕಠಿಣ)*

131. "ಭಾರತ ಬಿಟ್ಟು ತೊಲಗಿ" ಚಳುವಳಿ ಕುರಿತು ವಿವರಿಸಿ. *(ಸಾಧಾರಣ)*

132. "ಬಹುಮುಖ ಪ್ರತಿಭೆಯವರಾಗಿದ್ದ ಕಮಲಾದೇವಿ ಚಟ್ಟೋಪಾಧ್ಯಾಯರು ಕರ್ನಾಟಕದ ಹೆಮ್ಮೆ" — ಸಮರ್ಥಿಸಿರಿ. *(ಕಠಿಣ)*

133. ಮಂದಗಾಮಿಗಳ ಬೇಡಿಕೆಗಳು ಏನಾಗಿದ್ದವು? *(ಕಠಿಣ)*

**ಎ. ಟಿಪ್ಪಣಿ ಬರೆಯಿರಿ**

134. ಡಾ. ಬಿ.ಆರ್. ಅಂಬೇಡ್ಕರ್ *(ಸಾಧಾರಣ)*

135. ಸುಭಾಷ್ ಚಂದ್ರ ಬೋಸ್ *(ಸಾಧಾರಣ)*

**ಏ. 136. ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ** *(ಕಠಿಣ)*

ಸೈಮನ್ ನಿಯೋಗ

1. ದಂಡಿ ಯಾತ್ರೆ
2. ಸ್ವತಂತ್ರ ಭಾರತದ ರಚನೆ
3. ಸೂರತ್ ಒಡಕು
4. ರೌಲಟ್ ಕಾಯ್ದೆ
5. ಪೂರ್ಣ ಸ್ವರಾಜ್ಯ ಘೋಷಣೆ
6. ಭಾರತ ಬಿಟ್ಟು ತೊಲಗಿ ಚಳುವಳಿ
7. ಮೋತಿಲಾಲ್ ನೆಹರು ವರದಿ

| ಅಧ್ಯಾಯ – 18 | ಕರ್ನಾಟಕದ ಏಕೀಕರಣ ಮತ್ತು ಗಡಿ ವಿವಾದಗಳು |
|---|---|

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 16 | ಕರ್ನಾಟಕದ ಏಕೀಕರಣದ ಹಾದಿ, ಗಡಿ ವಿವಾದಗಳು, ಸಮಾಜ ಮುಖಿ ಚಳುವಳಿಗಳು, ವಿವಿಧ ಸುಧಾರಣೆಗಳು ಮತ್ತು ಸಬಲೀಕರಣದ ಕ್ರಮಗಳನ್ನು ವಿವರಿಸುವರು. | 01 ರಿಂದ 43 |

| ಕ್ರ.ಸಂ | ಕಠಿಣತೆಯ ಮಟ್ಟ | ಒಟ್ಟು ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 24 |
| 2 | ಸಾಧಾರಣ | 15 |
| 3 | ಕಠಿಣ | 4 |
| ಒಟ್ಟು | | **43** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ಇತ್ತು ಎಂದು ಈ ಕೃತಿಯಲ್ಲಿ ವರ್ಣಿಸಲಾಗಿದೆ. (ಸಾಧಾರಣ)

A) ಗದಾಯುದ್ಧ B) ಕವಿರಾಜಮಾರ್ಗ C) ವಡ್ಡಾರಾಧನೆ D) ಶಾಂತಿಪುರಾಣ

2. ಕರ್ನಾಟಕದ ಈ ಭಾಗದ ಜನರು ಏಕೀಕರಣದ ಆರಂಭಿಕ ಹೆಜ್ಜೆಯನ್ನು ದೃಢವಾಗಿ ಇಟ್ಟರು. (ಸಾಧಾರಣ)

A) ಮುಂಬೈ ಕರ್ನಾಟಕದ ಜನರು

B) ಹೈದರಾಬಾದ್ ಕರ್ನಾಟಕದ ಜನರು

C) ಮದ್ರಾಸ ಕರ್ನಾಟಕದ ಜನರು

D) ಈ ಮೇಲಿನ ಎಲ್ಲವೂ ಸರಿ

3. ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದವರು. (ಸಾಧಾರಣ)

A) ಭಗತ್ ಸಿಂಗ್

B) ಜವಾಹರಲಾಲ್ ನೆಹರು

C) ಗಾಂಧೀಜಿ

D) ಬಾಲಗಂಗಾಧರ ತಿಲಕ

4. ಕರ್ನಾಟಕ ಏಕೀಕರಣ ಚಳುವಳಿಗೆ ಪ್ರೇರಣೆ ನೀಡಿದ ಅಂಶಗಳು. (ಸಾಧಾರಣ)

A) ದಿನಪತ್ರಿಕೆ

B) ವಾರಪತ್ರಿಕೆಗಳು

C) ಸಾಹಿತ್ಯ ಕೃತಿಗಳು

D) ಎಲ್ಲವೂ

5. ಸ್ವಾತಂತ್ರ್ಯೋತ್ತರದ ನಂತರ ಕನ್ನಡಿಗರನ್ನು ಒಗ್ಗೂಡಿಸಲು ನಡೆದ ಕರ್ನಾಟಕ ಏಕೀಕರಣ ಚಳುವಳಿಯ ಹಂತಗಳು. (ಸಾಧಾರಣ)

A) ಒಂದು

B) ಎರಡು

C) ಮೂರು

D) ನಾಲ್ಕು

6. 1973ರ ನವೆಂಬರ್ 2ರಂದು ಡಿ. ದೇವರಾಜ ಅರಸು ಅವರು ಮೈಸೂರು ರಾಜ್ಯವನ್ನು ಈ ಹೆಸರಿನಿಂದ ಮರುನಾಮಕರಣಗೊಳಿಸಿದರು. (ಸಾಧಾರಣ)

A) ಕಿತ್ತೂರು ಕರ್ನಾಟಕ

B) ಕಲ್ಯಾಣ ಕರ್ನಾಟಕ

C) ಕರ್ನಾಟಕ

D) ಮದ್ರಾಸ ಕರ್ನಾಟಕ

7. ಲೋಕಸಭೆಗೆ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆದ ನಂತರ ಉಗ್ರ ಚಳುವಳಿಯ ಮನೋಭಾವವನ್ನು ಹೊಂದಿ ನಿರ್ಮಾಣವಾದ ಪಕ್ಷ. (ಸಾಧಾರಣ)

A) ಕರ್ನಾಟಕ ವಿದ್ಯಾವರ್ಧಕ ಸಂಘ

B) ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್

C) ಕನ್ನಡ ಸಾಹಿತ್ಯ ಪರಿಷತ್ತು

D) ಕರ್ನಾಟಕ ಸಭಾ

**ಆ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

8. ಕನ್ನಡ ಸಾಹಿತ್ಯ ಪರಿಷತ್ತು ______ರಲ್ಲಿ ಸ್ಥಾಪನೆಯಾಯಿತು. (ಸುಲಭ)

9. ಕರ್ನಾಟಕ ಕುಲಪುರೋಹಿತ ಎಂದು __________ರನ್ನು ಕರೆಯುತ್ತಾರೆ. (ಸುಲಭ)

10. ರಾಜ್ಯ ಪುನರ್ವಿಂಗಡಣಾ ಆಯೋಗ _______ರಲ್ಲಿ ವರದಿಯನ್ನು ಸಲ್ಲಿಸಿತು. (ಸುಲಭ)

11. ಕೇಂದ್ರ ಸರ್ಕಾರವು ಮಹಾರಾಷ್ಟ್ರ ಮತ್ತು ಕರ್ನಾಟಕ ನಡುವಿನ ಗಡಿ ವಿವಾದವನ್ನು ಅಧ್ಯಯನ ಮಾಡಲು __________ ಸಮಿತಿಯನ್ನು ನೇಮಿಸಿತು. (ಸುಲಭ)

12. ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿ __________. (ಸುಲಭ)

13. 1947ರ ಮೊದಲು ಭಾರತ ದೇಶದಲ್ಲಿ _______ ಸಂಸ್ಥಾನಿಕ ರಾಜ್ಯಗಳಿದ್ದವು. (ಸುಲಭ)

ಇ. ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೇ ಪದಕ್ಕೆ ಸಂಬಂಧಿಸಿದ ಉತ್ತರ ಬರೆಯಿರಿ.

14. "ಬೇಡಲು ಕನ್ನಡ ದಾಸಯ್ಯ ಬಂದಿಹ" : ಶಾಂತಕವಿ :: "ಜಯಹೇ ಕರ್ನಾಟಕ ಮಾತೆ" : __________ (ಸಾಧಾರಣ)

15. ಹೈದರಾಬಾದ್ ಕರ್ನಾಟಕ : ಕಲ್ಯಾಣ ಕರ್ನಾಟಕ :: ಬಾಂಬೆ ಕರ್ನಾಟಕ : __________ (ಸಾಧಾರಣ)

16. ವಿಧಾನಸೌಧ : ಬೆಂಗಳೂರು :: ಸುವರ್ಣಸೌಧ : __________ (ಸಾಧಾರಣ)

17. ವಿಶಾಲ ಮೈಸೂರು ರಾಜ್ಯ ಉದಯ : 1956 :: ಕರ್ನಾಟಕ ಎಂದು ನಾಮಕರಣ : __________ (ಸಾಧಾರಣ)

**ಈ. ಹೊಂದಿಸಿ ಬರೆಯಿರಿ. (ಸಾಧಾರಣ)**

| ಅ | ಬ |
|---|---|
| 1. ಕರ್ನಾಟಕ ವಿದ್ಯಾವರ್ಧಕ ಸಂಘ | ಅ. 1924 |
| 2. ಬೆಳಗಾವಿ ಕಾಂಗ್ರೆಸ್ ಅಧಿವೇಶನ | ಬ. 1916 |
| 3. ಮಹಾಜನ್ ವರದಿ | ಕ. 1890 |
| 4. ಕರ್ನಾಟಕ ಸಭಾ | ಡ. 1966 |

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

19. ಯಾರ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಆರಂಭವಾಯಿತು? (ಸುಲಭ)

20. ಹುಯಿಲಗೋಳ ನಾರಾಯಣರಾವ್ ಅವರು ಯಾವ ಗೀತೆಯನ್ನು ರಚಿಸಿದರು? (ಸುಲಭ)

21. ಆಲೂರು ವೆಂಕಟರಾಯರು ರಚಿಸಿದ ಪುಸ್ತಕ ಯಾವುದು? (ಸುಲಭ)

22. ಕನ್ನಡದ ಮೊದಲ ರಾಷ್ಟ್ರಕವಿ ಯಾರು? (ಸುಲಭ)

23. ಯಾವ ಆಯೋಗದ ವರದಿಯ ಆಧಾರದ ಮೇಲೆ ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದಿತು? (ಸುಲಭ)

24. ಹೈದರಾಬಾದ್ ಸಂಸ್ಥಾನದಲ್ಲಿದ್ದ ಕನ್ನಡ ಜಿಲ್ಲೆಗಳನ್ನು ಹೆಸರಿಸಿ. (ಸುಲಭ)

25. ಕರ್ನಾಟಕ ರಾಜ್ಯ ಏಕೀಕರಣಗೊಂಡಾಗ ಇದ್ದ ಜಿಲ್ಲೆಗಳ ಸಂಖ್ಯೆ ಎಷ್ಟು? (ಸುಲಭ)

26. ವಿಶಾಲ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣ ಮಾಡಿದ ಮುಖ್ಯಮಂತ್ರಿ ಯಾರು? (ಸುಲಭ)

27. ಕಾಸರಗೋಡು ಪ್ರದೇಶವು ಕರ್ನಾಟಕಕ್ಕೆ ಸೇರಬೇಕೆಂದು ಹೋರಾಟ ಮಾಡಿ ಹೋರಾಟವನ್ನು ಜೀವಂತವಾಗಿ ಇಟ್ಟವರು ಯಾರು? (ಸುಲಭ)

28. ಭಾಷೆ ಮತ್ತು ಆಡಳಿತದ ಅನುಕೂಲದ ನೆಲೆಗಳಲ್ಲಿ ರಾಜ್ಯಗಳನ್ನು ರಚಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ ಆಯೋಗ ಯಾವುದು? (ಸುಲಭ)

29. ಕನ್ನಡದ ಎರಡನೇ ರಾಷ್ಟ್ರಕವಿ ಯಾರು? (ಸುಲಭ)

30. "ಕರ್ನಾಟಕದ ಕುಲಪುರೋಹಿತ" ಎಂದು ಯಾರನ್ನು ಕರೆಯುತ್ತಾರೆ? (ಸುಲಭ)

31. ಕರ್ನಾಟಕವು ಯಾವ ದಿನದಂದು ಏಕೀಕೃತವಾಯಿತು? (ಸುಲಭ)

32. ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿ ಯಾರು? (ಸುಲಭ)

33. ಭಾಷೆಯ ಆಧಾರದ ಮೇಲೆ ರಚನೆಯಾದ ಭಾರತದ ಮೊದಲ ರಾಜ್ಯ ಯಾವುದು? (ಸುಲಭ)

**ಊ. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ**.

34. ಕರ್ನಾಟಕ ಏಕೀಕರಣಕ್ಕೆ ಕೊಡುಗೆ ನೀಡಿದ ಸಂಘಟನೆಗಳನ್ನು ಹೆಸರಿಸಿ. (ಸುಲಭ)

35. ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ಮಹನೀಯರ ಪಟ್ಟಿ ಮಾಡಿ. (ಸುಲಭ)

36. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಪತ್ರಿಕೆಗಳನ್ನು ಹೆಸರಿಸಿ. (ಸುಲಭ)

37. ಕರ್ನಾಟಕವು ಯಾವ ಯಾವ ರಾಜ್ಯಗಳೊಂದಿಗೆ ಗಡಿ ವಿವಾದಗಳನ್ನು ಹೊಂದಿದೆ? (ಸುಲಭ)

38. ಕರ್ನಾಟಕದ 20 ಆಡಳಿತ ಘಟಕಗಳನ್ನು 5 ಘಟಕಗಳಾಗಿ ಪುನರ್ವಿಂಗಡಿಸಲಾಯಿತು. ಅವು ಯಾವುವು? (**ಕಠಿಣ)**

39. ಫಜಲ್ ಅಲಿ ಆಯೋಗದ ಯಾವ ಶಿಫಾರಸ್ಸುಗಳನ್ನು ಕನ್ನಡಿಗರು ಪ್ರತಿಭಟಿಸಿದರು? (**ಕಠಿಣ)**

**ಋ. ಈ ಕೆಳಗಿನ ಪ್ರಶ್ನೆಗಳಿಗೆ 4–5 ವಾಕ್ಯಗಳಲ್ಲಿ ಉತ್ತರಿಸಿ.**

40. ವಿಶಾಲ ಮೈಸೂರು ರಾಜ್ಯ ರಚನೆಯಾದಾಗ ಇದ್ದ ಜಿಲ್ಲೆಗಳು ಯಾವುವು? (**ಕಠಿಣ)**

41. ಪ್ರಸ್ತುತ ಕರ್ನಾಟಕ ರಾಜ್ಯದ ಜಿಲ್ಲೆಗಳ ಸಂಖ್ಯೆ ಎಷ್ಟು? ಅವುಗಳನ್ನು ಪಟ್ಟಿ ಮಾಡಿರಿ. (ಸಾಧಾರಣ)

**ಎ. ಈ ಕೆಳಗಿನವುಗಳಿಗೆ ಟಿಪ್ಪಣಿ ಬರೆಯಿರಿ.**

42. ಆಲೂರು ವೆಂಕಟರಾವ್ (**ಕಠಿಣ)**

43. ಫಜಲ್ ಅಲಿ ಆಯೋಗ **(ಕಠಿಣ)**

# ಅಧ್ಯಾಯ – 19 ಕರ್ನಾಟಕದ ಸಮಾಜಮುಖಿ ಚಳವಳಿಗಳು

J9X4S1

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 16 | ಕರ್ನಾಟಕದ ಏಕೀಕರಣದ ಹಾದಿ, ಗಡಿ ವಿವಾದಗಳು, ಸಮಾಜ ಮುಖಿ ಚಳುವಳಿಗಳು, ವಿವಿಧ ಸುಧಾರಣೆಗಳು ಮತ್ತು ಸಬಲೀಕರಣದ ಕ್ರಮಗಳನ್ನು ವಿವರಿಸುವರು. | 01 ರಿಂದ 41 |

| ಕ್ರ.ಸಂ | ಕಠಿಣತೆಯ ಮಟ್ಟ | ಒಟ್ಟು ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 26 |
| 2 | ಸಾಧಾರಣ | 12 |
| 3 | ಕಠಿಣ | 3 |
| ಒಟ್ಟು | | **41** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಕರ್ನಾಟಕದಲ್ಲಿ ಪರಿಸರ ಜಾಗೃತಿ ಬೆಳವಣಿಗೆಗಳು ಆರಂಭವಾದದ್ದು ಈ ಶತಮಾನದಲ್ಲಿ. (ಸಾಧಾರಣ)

   A) 13ನೇ ಶತಮಾನದ ಉತ್ತರಾರ್ಧ

   B) 19ನೇ ಶತಮಾನದ ಉತ್ತರಾರ್ಧ

   C) 20ನೇ ಶತಮಾನದ ಉತ್ತರಾರ್ಧ

   D) 21ನೇ ಶತಮಾನದ ಉತ್ತರಾರ್ಧ

2. ಪರಿಸರ ಚಳವಳಿ ಜಾಗತಿಕ ಮಟ್ಟದಲ್ಲಿ ಆರಂಭಗೊಂಡು ಕರ್ನಾಟಕವನ್ನು ತಲುಪಿದ್ದು. (ಸಾಧಾರಣ)

   A) 1970ರ ದಶಕದಲ್ಲಿ

   B) 1980ರ ದಶಕದಲ್ಲಿ

C) 1990ರ ದಶಕದಲ್ಲಿ

D) ಯಾವುದೂ ಇಲ್ಲ

3. "ಭೂಮಿಯು ಎಲ್ಲರ ಅವಶ್ಯಕತೆಗಳನ್ನು ಪೂರೈಸುತ್ತದೆ, ಆದರೆ ಅವರ ದುರಾಸೆಯನ್ನಲ್ಲ" ಎಂಬ ಹೇಳಿಕೆಯನ್ನು ಹೇಳಿದವರು. (ಸಾಧಾರಣ)

A) ಡಾ. ಅಂಬೇಡ್ಕರ್

B) ಗಾಂಧೀಜಿ

C) ನೆಹರು

D) ರಾಜಕುಮಾರ್

4. ಬೆಂಗಳೂರಿನಲ್ಲಿ ಅನ್ಯಭಾಷಿಕರ ಅಬ್ಬರ ಹೆಚ್ಚಾದಾಗ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಲು ನಡೆದ ಚಳವಳಿ ಯಾವುದು? (ಸಾಧಾರಣ)

A) ಗೋಕಾಕ್ ಚಳವಳಿ

B) ಪರಿಸರ ಚಳವಳಿ

C) ಕನ್ನಡ ಉಳಿಸಿ ಚಳವಳಿ

D) ದಲಿತ ಚಳವಳಿ

5. ದಲಿತ ಚಳವಳಿಯ ಬೀಜಮಂತ್ರಗಳು. (ಸಾಧಾರಣ)

A) ಶಿಕ್ಷಣ

B) ಸಂಘಟನೆ

C) ಹೋರಾಟ

D) ಮೇಲಿನ ಎಲ್ಲವೂ

6. ಪರಿಸರ ಸಂರಕ್ಷಣೆಯ ಪಾಠ ಹೇಳಿಕೊಟ್ಟ ನಿಸ್ವಾರ್ಥ ವೃಕ್ಷಮಾತೆ ಯಾರು? (ಸಾಧಾರಣ)

A) ಸಾಲುಮರದ ತಿಮ್ಮಕ್ಕ

B) ಉಮಾಬಾಯಿ ಕುಂದಾಪೂರ

C) ಅರುಣಾ ಅಸಫ್ ಅಲಿ

D) ಸರೋಜಿನಿ ನಾಯ್ಡು

7. ಭಾಷಾ ಸಮಿತಿಯು ಇವರ ಅಧ್ಯಕ್ಷತೆಯಲ್ಲಿ ರಚನೆಯಾಯಿತು. (ಸಾಧಾರಣ)

A) ಡಾ. ರಾಜಕುಮಾರ್

B) ವಿನಾಯಕ ಕೃಷ್ಣ ಗೋಕಾಕ್

C) ಆರ್. ಗುಂಡೂರಾವ್

D) ವಾಟಾಳ್ ನಾಗರಾಜ್

8. ಗೋಕಾಕ್ ವರದಿ ಅನುಷ್ಠಾನಗೊಂಡದ್ದು. (ಸಾಧಾರಣ)

A) 1970

B) 1975

C) 1980

D) 1982

9. "ಇತರರ ಅನುಭವವನ್ನು ನೀವು ಅರ್ಥಮಾಡಿಕೊಳ್ಳಲು ಸಾಧ್ಯವಿದೆ, ಆದರೆ ಆ ಅನುಭವವನ್ನು ನೀವು ಅನುಭವಿಸಲು ಸಾಧ್ಯವಿಲ್ಲ" ಎಂಬ ಹೇಳಿಕೆಯನ್ನು ಹೇಳಿದವರು. (ಸಾಧಾರಣ)

A) ಡಾ. ಅಂಬೇಡ್ಕರ್

B) ಆರ್. ಡಿ. ಲಿಯಾಂಗ್

C) ಗಾಂಧೀಜಿ

D) ಡಾ. ಸಿದ್ದಲಿಂಗಯ್ಯ

10. ಕರ್ನಾಟಕ ರಾಜ್ಯ ರೈತ ಸಂಘ ಈ ಜಿಲ್ಲೆಯಲ್ಲಿ ಆರಂಭಗೊಂಡಿತು. (ಸಾಧಾರಣ)

A) ರಾಯಚೂರು

B) ಬೆಳಗಾವಿ

C) ದಾವಣಗೆರೆ

D) ಶಿವಮೊಗ್ಗ

**ಆ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

11. ಭೂಮಿಯಲ್ಲಿರುವ ಜೈವಿಕ ಮತ್ತು ಅಜೈವಿಕ ಅಂಶಗಳೇ __________. (ಸುಲಭ)

12. ಸಾಲುಮರದ ತಿಮ್ಮಕ್ಕ __________ ಮರಗಳ ತಾಯಿ. (ಸುಲಭ)

13. ಚಿಪ್ಕೊ ಚಳುವಳಿಯಲ್ಲಿ ತಮ್ಮ ಜೀವನವನ್ನೇ ಮುಡುಪಾಗಿಟ್ಟವರು __________. (ಸುಲಭ)

14. ಅಂತರರಾಷ್ಟ್ರೀಯ ಮಹಿಳಾ ವರ್ಷಾಚರಣೆ __________ರಲ್ಲಿ ಪ್ರಾರಂಭವಾಯಿತು. (ಸುಲಭ)

15. ನಮ್ಮ ದೇಶದ ಬೆನ್ನೆಲುಬು ಎಂದು __________ರನ್ನು ಕರೆಯುತ್ತಾರೆ. (ಸುಲಭ)

16. "ದಲಿತ ಸೂರ್ಯ" ಎಂಬ ಕೀರ್ತಿಗೆ ಪಾತ್ರರಾದವರು __________. (ಸುಲಭ)

17. ಶಿವಮೊಗ್ಗದ ರೈತರು ಗೇಣಿಯನ್ನು ಅಳತೆ ಮಾಡಲು ಬಳಸುತ್ತಿದ್ದ ಸಾಧನ __________. (ಸುಲಭ)

18. ಸುಂದರಲಾಲ್ ಬಹುಗುಣರು ಪ್ರಾರಂಭಿಸಿದ ಚಳವಳಿ __________. (ಸುಲಭ)

**ಇ. ಹೊಂದಿಸಿ ಬರೆಯಿರಿ. (ಸಾಧಾರಣ)**

| ಅ | ಬ |
|---|---|
| 1. ಕಮಲಾಭಾಯಿ ಚಟ್ಟೋಪಾಧ್ಯಾಯ | ಅ. ಅಪ್ಪಿಕೊ ಚಳವಳಿ |
| 2. ಎಂ. ಡಿ. ನಂಜುಂಡಸ್ವಾಮಿ | ಬ. ಗೋಕಾಕ್ ಚಳವಳಿ |
| 3. ಡಾ. ಅಂಬೇಡ್ಕರ್ | ಕ. ಮಹಿಳಾ ಚಳವಳಿ |
| 4. ಡಾ. ರಾಜಕುಮಾರ್ | ಡ. ದಲಿತ ಚಳವಳಿ |
| 5. ಸುಂದರಲಾಲ್ ಬಹುಗುಣ | ಇ. ರೈತ ಚಳವಳಿ |

**ಈ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

20. ಚಿಪ್ಕೊ ಚಳವಳಿ ಅಥವಾ ಅಪ್ಪಿಕೊ ಚಳವಳಿ ಎಂದರೇನು? (ಸುಲಭ)

21. ಕರ್ನಾಟಕದಲ್ಲಿ ಬಿ.ಎ. ಆನರ್ಸ್ ಪದವಿ ಗಳಿಸಿದ ಮೊದಲ ಮಹಿಳೆ ಯಾರು? (ಸುಲಭ)

22. ಬೆಂಗಳೂರಿನ ಪ್ರಥಮ ಮಹಿಳಾ ಮೇಯರ್ ಆಗಿದ್ದವರು ಯಾರು? (ಸುಲಭ)

23. ಸಾಲುಮರದ ತಿಮ್ಮಕ್ಕ ಅವರಿಗೆ ದೊರೆತ ದೇಶದ ಉನ್ನತ ನಾಗರಿಕ ಸನ್ಮಾನ ಪ್ರಶಸ್ತಿ ಯಾವುದು? (ಸುಲಭ)

24. ಡಿ.ಎಸ್.ಎಸ್. ವಿಸ್ತರಿಸಿ ಬರೆಯಿರಿ. (ಸುಲಭ)

25. ಸಾಮಾಜಿಕ ಅರಣ್ಯ ಎಂದರೇನು? (ಸುಲಭ)

26. ದಲಿತರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆದ ಮೈಸೂರಿನ ಮಹಾರಾಜರು ಯಾರು? (ಸುಲಭ)

27. ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ನಾವು ಕಾಣುವ ಪ್ರಥಮ ರೈತ ಹೋರಾಟ ಎಲ್ಲಿ ನಡೆಯಿತು? (ಸುಲಭ)

28. ಭಾರತದ ಕೋಗಿಲೆ ಎಂದು ಯಾರನ್ನು ಕರೆಯುತ್ತಾರೆ? (ಸುಲಭ)

29. ತುಂಗಾ ಮೂಲವನ್ನು ಉಳಿಸಿ ಆಂದೋಲನ ಏಕೆ ಆರಂಭವಾಯಿತು? (ಸಾಧಾರಣ)

30. ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡಾ 50ರಷ್ಟು ಸ್ಥಾನವನ್ನು ಮಹಿಳೆಯರಿಗೆ ಕಾಯ್ದಿರಿಸುವ ಆದೇಶ ಹೊರಡಿಸಿದ ಮೊದಲ ರಾಜ್ಯ ಯಾವುದು? (ಸುಲಭ)
31. 1936ರಲ್ಲಿ ದಕ್ಷಿಣ ಭಾರತದ ದಲಿತ ನಾಯಕರಲ್ಲಿ ಪ್ರಸಿದ್ಧರಾದ ಯಾರ ಸಮ್ಮುಖದಲ್ಲಿ ಮೈಸೂರು ಅರಮನೆಗೆ ದಲಿತರ ಪ್ರವೇಶವಾಯಿತು? (ಸಾಧಾರಣ)

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

32. ಪ್ರಮುಖ ಪರಿಸರ ಚಳುವಳಿಗಳನ್ನು ಹೆಸರಿಸಿ. (ಸುಲಭ)
33. ನಾವೇಕೆ ಪ್ರಾಚೀನ ಕೆರೆಗಳನ್ನು ಉಳಿಸಬೇಕು? (ಕಠಿಣ)
34. ಗೋಕಾಕ್ ಚಳವಳಿಯ ಘೋಷಣೆಗಳನ್ನು ಪಟ್ಟಿ ಮಾಡಿ. (ಸಾಧಾರಣ)
35. ರೈತರ ಸಮಸ್ಯೆಗಳಿಗೆ ಹೋರಾಡಿದ ವಿವಿಧ ಸಂಘಟನೆಗಳನ್ನು ಹೆಸರಿಸಿ. (ಸುಲಭ)
36. ಕರ್ನಾಟಕದ ರೈತ ಚಳವಳಿಯ ಪ್ರಮುಖ ಮುಖಂಡರ ಹೆಸರನ್ನು ಬರೆಯಿರಿ. (ಸುಲಭ)
37. ಸಾಹಿತ್ಯದ ಮೂಲಕ ದಲಿತರ ಒಳಜಗತ್ತನ್ನು ದಲಿತೇತರಿಗೆ ತೆರೆದುಕೊಟ್ಟ ಸಾಹಿತಿಗಳು ಯಾರು? (ಸುಲಭ)
38. ದಲಿತ ಚಳವಳಿ ಏಕೆ ಪ್ರಾರಂಭವಾಯಿತು? (ಕಠಿಣ)

ಊ. ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ.

39. ಕರ್ನಾಟಕದ ಪ್ರಮುಖ ಸಮಾಜಮುಖಿ ಚಳುವಳಿಗಳಾವುವು? (ಸಾಧಾರಣ)
40. ಕರ್ನಾಟಕ ಇತಿಹಾಸದಲ್ಲಿ ದಲಿತ ಚಳವಳಿಯ ಮಹತ್ವ ಕುರಿತು ಬರೆಯಿರಿ. (ಸಾಧಾರಣ)
41. ದಲಿತ ಚಳವಳಿಯ ಸಾಧನೆಗಳನ್ನು ತಿಳಿಸಿ. (ಕಠಿಣ)

| ಅಧ್ಯಾಯ – 20 | ಕರ್ನಾಟಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ |
|---|---|

N1I7J6

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 16 | ಕರ್ನಾಟಕದ ಏಕೀಕರಣದ ಹಾದಿ, ಗಡಿ ವಿವಾದಗಳು, ಸಮಾಜ ಮುಖಿ ಚಳುವಳಿಗಳು, ವಿವಿಧ ಸುಧಾರಣೆಗಳು ಮತ್ತು ಸಬಲೀಕರಣದ ಕ್ರಮಗಳನ್ನು ವಿವರಿಸುವರು. | 01 ರಿಂದ 35 |

| ಕ್ರ.ಸಂ | ಕಠಿಣತೆಯ ಮಟ್ಟ | ಒಟ್ಟು ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 18 |
| 2 | ಸಾಧಾರಣ | 16 |
| 3 | ಕಠಿಣ | 1 |
| ಒಟ್ಟು | | **35** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಭೂ ಹಿಡುವಳಿಗಳಲ್ಲಿರುವ ಸಮಸ್ಯೆಗಳನ್ನು ಹೋಗಲಾಡಿಸಲು ಜಾರಿಗೊಳಿಸಲಾದ ಕ್ರಮಗಳನ್ನು ಹೀಗೆನ್ನುತ್ತಾರೆ. (ಸಾಧಾರಣ)

   A) ಸಾಮಾಜಿಕ ಸುಧಾರಣೆ

   B) ಭೂ ಸುಧಾರಣೆ

   C) ಆರ್ಥಿಕ ಸುಧಾರಣೆ

   D) ಧಾರ್ಮಿಕ ಸುಧಾರಣೆ

2. ಹಿಂದೆ ಭೂಮಾಲೀಕರ ಪರವಾದ ಕಾನೂನುಗಳು ಇದ್ದವೇ ವಿನಃ ಇವರ ಪರವಾಗಿ ಇರಲಿಲ್ಲ. (ಸಾಧಾರಣ)

   A) ಕೂಲಿ ಕಾರ್ಮಿಕರು

   B) ಜಮೀನ್ದಾರರು

C) ಗೇಣಿದಾರರು

D) ಯಾವುದೂ ಇಲ್ಲ

3. ಭೂ ಸುಧಾರಣೆಯ ಮೂಲಕ ಸಮಾಜವನ್ನು ರೂಪಿಸುವ ಪ್ರಯತ್ನವನ್ನು ಈ ದಶಕದಲ್ಲಿ ಕಾಣುತ್ತೇವೆ. (ಸಾಧಾರಣ)

A) 1970

B) 1980

C) 1990

D) 1950

4. ಜಮೀನ್ದಾರಿ ಪದ್ಧತಿಯನ್ನು ನಿರ್ಮೂಲನೆ ಮಾಡುವಲ್ಲಿ ಈ ಕಾನೂನು ನಿರ್ಣಾಯಕ ಪಾತ್ರ ವಹಿಸಿತು. (ಸಾಧಾರಣ)

A) 1955ರ ಭೂ ಸುಧಾರಣಾ ಕಾನೂನು

B) 1957ರ ಭೂ ಸುಧಾರಣಾ ಕಾನೂನು

C) 1974ರ ಭೂ ಸುಧಾರಣಾ ಕಾನೂನು

D) ಯಾವುದೂ ಅಲ್ಲ

5. ಭೂ ಹಿಡುವಳಿ ಬಗ್ಗೆ ಕ್ರಾಂತಿಕಾರಕ ಕಾನೂನನ್ನು ಕರ್ನಾಟಕದಲ್ಲಿ ಜಾರಿಗೊಳಿಸಿದ ಮುಖ್ಯಮಂತ್ರಿ ಯಾರು? (ಸುಲಭ)

A) ಎಸ್. ನಿಜಲಿಂಗಪ್ಪ

B) ಕೆಂಗಲ್ ಹನುಮಂತಯ್ಯ

C) ಡಿ. ದೇವರಾಜ ಅರಸ್

D) ಸಿದ್ದರಾಮಯ್ಯ

6. ಸಾ.ಶ. 1955ರಲ್ಲಿ ಬಲವಂತರಾಯ ಮೆಹತಾ ಸಮಿತಿಯು ಶಿಫಾರಸು ಮಾಡಿದ ಸ್ಥಳೀಯ ಆಡಳಿತದ ವ್ಯವಸ್ಥೆಯ ಹಂತಗಳು. (ಸಾಧಾರಣ)

A) ಒಂದು

B) ಎರಡು

C) ಮೂರು

D) ನಾಲ್ಕು

7. ಭೂ ಹಿಡುವಳಿ ಕಾನೂನಿನ ಪ್ರಕಾರ ಭೂಮಿಯ ಒಡೆಯರು. (ಸಾಧಾರಣ)

   A) ಜಮೀನ್ದಾರರು

   B) ಉಳುವವರು

   C) ಜನಪ್ರತಿನಿಧಿಗಳು

   D) ಯಾವುದೂ ಅಲ್ಲ

8. ಭಾರತದಲ್ಲಿಯೇ ಪ್ರಥಮವಾಗಿ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಕ ಮಾಡಿದ ರಾಜರು. (ಸಾಧಾರಣ)

   A) ಜಯಚಾಮರಾಜ ಒಡೆಯರು

   B) ಹತ್ತನೇ ಚಾಮರಾಜ ಒಡೆಯರು

   C) ಮುಮ್ಮಡಿ ಕೃಷ್ಣರಾಜ ಒಡೆಯರು

   D) ನಾಲ್ವಡಿ ಕೃಷ್ಣರಾಜ ಒಡೆಯರು

9. ಇನಾಂ ರದ್ದತಿ ಕಾಯ್ದೆ ಜಾರಿಗೆ ಬಂದ ವರ್ಷ. (ಸಾಧಾರಣ)

   A) 1977

   B) 1979

   C) 1982

   D) 1985

10. ಸ್ಥಳೀಯರಿಗೆ ಆಡಳಿತದಲ್ಲಿ ಭಾಗವಹಿಸುವ ಅಧಿಕಾರ ನೀಡುವ ವ್ಯವಸ್ಥೆ. (ಸಾಧಾರಣ)

   A) ಸಹಕಾರ ಸಂಘಗಳ ವ್ಯವಸ್ಥೆ

   B) ಸ್ತ್ರೀಶಕ್ತಿ ಸಂಘಗಳ ವ್ಯವಸ್ಥೆ

   C) ಪಂಚಾಯತ್ ರಾಜ್ ವ್ಯವಸ್ಥೆ

   D) ರಾಜ್ಯಗಳ ವ್ಯವಸ್ಥೆ

**ಆ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ತುಂಬಿರಿ.**

11. ಒಂದು ಎಕರೆಗೆ _________ ಗುಂಟೆಗಳು. (ಸುಲಭ)

12. ಬಿ. ಡಿ. ಜತ್ತಿಯವರು ಭಾರತದ _________ ಆಗಿದ್ದರು. (ಸುಲಭ)

13. ಸ್ವಾತಂತ್ರ್ಯಾನಂತರ ರಚಿಸಲಾದ ಪ್ರಥಮ ಹಿಂದುಳಿದ ವರ್ಗಗಳ ಆಯೋಗವು _________ ರಲ್ಲಿ ನೇಮಕವಾಯಿತು. (ಸುಲಭ)

14. 1921ರಲ್ಲಿ ________ ರಾಜ್ಯದಲ್ಲಿ ಪ್ರಥಮ ಮೀಸಲಾತಿ ಆಜ್ಞೆ ಜಾರಿಗೆ ಬಂತು. (ಸುಲಭ)
15. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಆಡಳಿತದ ________ ವ್ಯವಸ್ಥೆ ಎಂದು ಹೇಳಬಹುದು. (ಸುಲಭ)

**ಇ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

16. 1974ರಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಯಾರು? (ಸುಲಭ)
17. ಜಮೀನ್ದಾರಿ ಪದ್ಧತಿಯ ನಿರ್ಮೂಲನೆಯ ಭಾಗವಾಗಿ 1955ರಲ್ಲಿ ಯಾರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು? (ಸುಲಭ)
18. ಯಾರ ಅಧ್ಯಕ್ಷತೆಯಲ್ಲಿ 1918ರಲ್ಲಿ ಭಾರತದಲ್ಲಿ ಪ್ರಥಮ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಕ ಮಾಡಲಾಯಿತು? (ಸುಲಭ)
19. 1975ರಲ್ಲಿ ನೇಮಕವಾದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಯಾರು? (ಸುಲಭ)
20. ಪಂಚಾಯತ್ ಆಡಳಿತ ವ್ಯವಸ್ಥೆಯ ಹಂತಗಳು ಯಾವುವು? (ಸುಲಭ)
21. ಕರ್ನಾಟಕದ ಪಂಚಾಯತ್ ರಾಜ್ ವ್ಯವಸ್ಥೆಯ ರೂವಾರಿ ಯಾರು? (ಸುಲಭ)
22. ಮೈಸೂರು ಗ್ರಾಮ ಪಂಚಾಯಿತಿಗಳ ಅಧಿನಿಯಮವನ್ನು ಜಾರಿಗೊಳಿಸಿದ ವರ್ಷ ಯಾವುದು? (ಸುಲಭ)
23. ಹಾವನೂರು ಆಯೋಗದ ಪ್ರಕಾರ ಜಾತಿಗಳ ಹಿಂದುಳಿದಿರುವಿಕೆಯನ್ನು ಗುರುತಿಸಲು ಮಾನದಂಡವಾಗಿ ತೆಗೆದುಕೊಂಡ ಪರೀಕ್ಷೆ ಯಾವುದು? (ಸುಲಭ)
24. ಬಲವಂತರಾಯ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಯಾವ ವರ್ಷ ಸಮಿತಿ ರಚಿಸಲಾಯಿತು? (ಸಾಧಾರಣ)
25. ಭೂ ಸುಧಾರಣೆ ಎಂದರೇನು? (ಸುಲಭ)
26. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಭಾರತದಲ್ಲೇ ಪ್ರಥಮವಾಗಿ ನೇಮಕವಾದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಯಾರು? (ಸಾಧಾರಣ)

**ಈ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

27. ಕರ್ನಾಟಕದಲ್ಲಿ ಜಾರಿಯಾದ ಭೂ ಸುಧಾರಣೆಗಳು ಯಾವುವು? (ಸಾಧಾರಣ)
28. 1974ರ ಭೂ ಸುಧಾರಣಾ ಕಾಯ್ದೆಯ ಪ್ರಮುಖ ಅಂಶಗಳಾವುವು? (ಸಾಧಾರಣ)
29. ಆರ್ಥಿಕ ಹಿಡುವಳಿ ಎಂದರೇನು? (ಸುಲಭ)

30. ಸಹಕಾರಿ ಬೇಸಾಯ ಪದ್ಧತಿ ಎಂದರೇನು? (ಸುಲಭ)

31. ಕರ್ನಾಟಕದಲ್ಲಿ ರಚನೆಯಾದ ಪ್ರಮುಖ ಹಿಂದುಳಿದ ವರ್ಗಗಳ ಆಯೋಗಗಳನ್ನು ಪಟ್ಟಿ ಮಾಡಿ. (ಸಾಧಾರಣ)

32. ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರ ಚಳುವಳಿಯನ್ನು ಹುಟ್ಟುಹಾಕಿದ ಪ್ರಮುಖ ನಾಯಕರು ಯಾರು? (ಸುಲಭ)

33. ಭೂ ಸುಧಾರಣೆ ಕ್ರಮಗಳಿಂದಾದ ಉಪಯೋಗಗಳಾವುವು? (ಸಾಧಾರಣ)

**ಉ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿ.**

34. ಪಂಚಾಯತ್ ರಾಜ್ ವ್ಯವಸ್ಥೆ ಏಕೆ ಮಹತ್ವದ್ದಾಗಿದೆ? (ಕಠಿಣ)

35. ಒಂದು ಕುಟುಂಬ ಹೊಂದಬಹುದಾದ ಭೂಮಿಯ ಗರಿಷ್ಠ ಮಿತಿಯನ್ನು ಕರ್ನಾಟಕ ಸರ್ಕಾರವು ಏಕೆ ನಿಗದಿಪಡಿಸಿದೆ? (ಸಾಧಾರಣ)

| ಅಧ್ಯಾಯ – 21 | ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆ |
|---|---|

G9Z9G4

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 19 | ವಿಜ್ಞಾನದಿಂದ ತಂತ್ರಜ್ಞಾನ, ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿ ವಿವರಿಸುವರು ಮತ್ತು ಸುಸ್ಥಿರತೆಯ ಅಗತ್ಯತೆಯನ್ನು ಸಮರ್ಥಿಸುವರು | 4,6,14,15,16,17,18,19,20,25, 27,31,35,39,40,42 |
| 31 | ವಿಜ್ಞಾನದಿಂದ ತಂತ್ರಜ್ಞಾನ, ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿ ವಿವರಿಸುವರು ಮತ್ತು ಸುಸ್ಥಿರತೆಯ ಅಗತ್ಯತೆಯನ್ನು ಸಮರ್ಥಿಸುವರು | 1,2,3,5,7,8,9,10,11,12,13,21, 22,23,24,26,28,29,30,32,33, 34,36,37,38,41,43,44,45. |

| ಕ್ರ.ಸಂ | ಕಠಿಣತೆಯ ಮಟ್ಟ | ಒಟ್ಟು ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 22 |
| 2 | ಸಾಧಾರಣ | 20 |
| 3 | ಕಠಿಣ | 3 |
| **ಒಟ್ಟು** | | **45** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಅಂಚೆ ಮತ್ತು ತಂತಿ ವ್ಯವಸ್ಥೆಯು ಈ ಶತಮಾನದ ಕೊನೆಯವರೆಗೂ ಬಹುವಾಗಿ ಬಳಕೆಯಾಗುತ್ತಿದ್ದ ಸಂಪರ್ಕ ಮಾಧ್ಯಮವಾಗಿತ್ತು. (ಸಾಧಾರಣ)

   A) 17ನೇ

   B) 18ನೇ

   C) 19ನೇ

   D) 20ನೇ

2. ಅಕ್ಷರಸ್ಥರು ಹಾಗೂ ಅನಕ್ಷರಸ್ಥರನ್ನು ತಲುಪಿಸುವ ಪ್ರಭಾವಿ ಮಾಧ್ಯಮ ಇದಾಗಿದೆ. (ಸಾಧಾರಣ)

A) ಮೊಬೈಲ್

B) ದೂರದರ್ಶನ

C) ರೇಡಿಯೋ

D) ಯಾವುದೂ ಅಲ್ಲ

3. ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳು ಜಂಟಿಯಾಗಿ ಸೈಬರ್ ಪಾರ್ಕ್ ಯೋಜನೆಯನ್ನು ಪ್ರಾರಂಭಿಸಿದ್ದು. (ಸಾಧಾರಣ)

A) 1998

B) 1999

C) 2000

D) 2002

4. ಕರ್ನಾಟಕದಲ್ಲಿ ಜೈವಿಕ ತಂತ್ರಜ್ಞಾನ ಕೇಂದ್ರವು ಇಲ್ಲಿದೆ. (ಸಾಧಾರಣ)

A) ಬೆಳಗಾವಿ

B) ಬೀದರ್

C) ಮಂಗಳೂರು

D) ಕಾರವಾರ

5. 2011ರಲ್ಲಿ ಕರ್ನಾಟಕದಲ್ಲಿ ಕೃಷಿಯನ್ನು ಅವಲಂಬಿಸಿದವರ ಸಂಖ್ಯೆ (ಶೇಕಡಾ). (ಸಾಧಾರಣ)

A) 49

B) 50

C) 45

D) 48

6. ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶವು ಶೇ. ________ ರಷ್ಟಿದೆ. (ಸಾಧಾರಣ)

A) 15

B) 19

C) 21

D) 23

7. "ಗೃಹ ಕೈಗಾರಿಕೆಗಳೇ ದೇಶವನ್ನು ಪ್ರಗತಿಪಥದತ್ತ ಕೊಂಡೊಯ್ಯುವ ದೀವಟಿಗೆಗಳು" ಎಂದು ಹೇಳಿದವರು. (ಸಾಧಾರಣ)

   A) ಸ್ವಾಮಿ ವಿವೇಕಾನಂದರು

   B) ನೆಹರು

   C) ಗಾಂಧೀಜಿ

   D) ಡಾ. ಅಂಬೇಡ್ಕರ್

**ಆ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

8. ಬೆಂಗಳೂರನ್ನು ________ ನಗರ ಎಂದು ಕರೆಯುತ್ತಾರೆ. (ಸುಲಭ)
9. ಕನ್ನಡದಲ್ಲಿ ಪ್ರಕಟವಾದ ಮೊಟ್ಟಮೊದಲ ಪತ್ರಿಕೆ ________. (ಸುಲಭ)
10. ಜೈವಿಕ ತಂತ್ರಜ್ಞಾನದ ಪ್ರಸಿದ್ಧ ಸಂಸ್ಥೆ ಬಯೋಕಾನ್ ಅನ್ನು ________ ನಗರದಲ್ಲಿ ಸ್ಥಾಪಿಸಲಾಗಿದೆ. (ಸುಲಭ)
11. ಪ್ರಪಂಚದಲ್ಲಿ ಮೊಟ್ಟಮೊದಲ ಜೈವಿಕ ತದ್ರೂಪಿ ಸೃಷ್ಟಿಯಾದ ಪ್ರಾಣಿ ________. (ಸುಲಭ)
12. ಭಾರತದ ಬಹುತೇಕ ಕುಟುಂಬಗಳು ತಮ್ಮ ಬದುಕಿಗಾಗಿ ________ ಅವಲಂಬಿಸಿವೆ. (ಸುಲಭ)
13. ರೈತರಿಗೆ ತಿಳಿವಳಿಕೆ ನೀಡಲು ಬಾನುಲಿ ಮತ್ತು ದೂರದರ್ಶನದಲ್ಲಿ ________ ಕಾರ್ಯಕ್ರಮ ಪ್ರಸಾರವಾಗುತ್ತದೆ. (ಸುಲಭ)
14. ಕರ್ನಾಟಕ ಸರ್ಕಾರವು ________ ರಲ್ಲಿ ತನ್ನದೇ ಆದ ಕೈಗಾರಿಕಾ ನೀತಿಯನ್ನು ರೂಪಿಸಿತು. (ಸುಲಭ)
15. ಕರ್ನಾಟಕ ರಾಜ್ಯದ ಒಟ್ಟು ವಿಸ್ತೀರ್ಣವು ಸುಮಾರು ________ ಚ.ಕಿ.ಮೀ. ಆಗಿದೆ. (ಸುಲಭ)
16. ಕರ್ನಾಟಕವು ಸುಮಾರು ________ ಮಿಲಿಯನ್ ಹೆಕ್ಟೇರ್‌ಗಳಷ್ಟು ಭೂಮಿಯನ್ನು ಹೊಂದಿದೆ. (ಸಾಧಾರಣ)
17. ಕರ್ನಾಟಕದ ಒಟ್ಟು ಭೂಮಿಯಲ್ಲಿ ________ ಮಿಲಿಯನ್ ಹೆಕ್ಟೇರ್ ಪ್ರದೇಶ ಮಾತ್ರ ಸಾಗುವಳಿಗೆ ಯೋಗ್ಯವಾಗಿದೆ. (ಸಾಧಾರಣ)

18. ಕರ್ನಾಟಕದಲ್ಲಿ ಸಾಗುವಳಿಗೆ ಬಳಸಲು ಯೋಗ್ಯವಾದ ಪ್ರದೇಶವು ಒಟ್ಟು ಭೂಮಿಯ ಶೇ. ________ ರಷ್ಟಿದೆ. (ಸಾಧಾರಣ)
19. ಕರ್ನಾಟಕದಲ್ಲಿ ಕೃಷಿಯೇತರ ಭೂಮಿಯ ಪ್ರಮಾಣ ಶೇ. ________. (ಸಾಧಾರಣ)
20. ಕರ್ನಾಟಕದಲ್ಲಿ ಅರಣ್ಯ ಭೂಮಿಯ ಪ್ರಮಾಣ ಶೇ. ________. (ಸಾಧಾರಣ)

**ಇ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

21. ಸಂಪರ್ಕ ವ್ಯವಸ್ಥೆ ಎಂದರೇನು? (ಸುಲಭ)
22. ಪ್ರಾಚೀನ ಕಾಲದಲ್ಲಿ ಬಳಸುತ್ತಿದ್ದ ಸಂಪರ್ಕ ಮಾಧ್ಯಮಗಳಾವುವು? (ಸುಲಭ)
23. ಜೈವಿಕ ತಂತ್ರಜ್ಞಾನದ ಪಾರ್ಕ್‌ಗಳನ್ನು ಎಲ್ಲಿ ಸ್ಥಾಪಿಸಲಾಗಿದೆ? (ಸುಲಭ)
24. ಬೆಂಗಳೂರಿನ ಪ್ರಮುಖ ದೈತ್ಯ ಕಂಪನಿಗಳಾವುವು? (ಸುಲಭ)
25. ಮಣ್ಣಿನ ಸವಕಳಿ ಎಂದರೇನು? (ಸುಲಭ)
26. ಕೈಗಾರೀಕರಣ ಎಂದರೇನು? (ಸುಲಭ)
27. ನೈಸರ್ಗಿಕ ಸಂಪನ್ಮೂಲಗಳು ಯಾವುವು? (ಸುಲಭ)
28. ಮಾಹಿತಿ ತಂತ್ರಜ್ಞಾನ ಎಂದರೇನು? (ಸುಲಭ)
29. ಜೈವಿಕ ತಂತ್ರಜ್ಞಾನ ಎಂದರೇನು? (ಸುಲಭ)
30. ಪ್ರಪಂಚದ ಮೊಟ್ಟಮೊದಲ ತದ್ರೂಪಿ ಪ್ರಾಣಿಯನ್ನು ಸೃಷ್ಟಿಸಿದ ವಿಜ್ಞಾನಿ ಯಾರು? (ಸುಲಭ)
31. ಭೂ ವಿಸ್ತೀರ್ಣದ ದೃಷ್ಟಿಯಿಂದ ಕರ್ನಾಟಕವು ಭಾರತದಲ್ಲಿ ಎಷ್ಟನೇ ದೊಡ್ಡ ರಾಜ್ಯವಾಗಿದೆ? (ಸುಲಭ)
32. 2011ರ ಆರ್ಥಿಕ ಸಮೀಕ್ಷೆಯ ಪ್ರಕಾರ ಕರ್ನಾಟಕವು ಕೃಷಿ ಉತ್ಪಾದನೆಯಲ್ಲಿ ಎಷ್ಟನೇ ಸ್ಥಾನ ಪಡೆದಿದೆ? (ಸಾಧಾರಣ)

**ಈ. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

33. ಸಮೂಹ ಮಾಧ್ಯಮಗಳ ಪ್ರಮುಖ ಮೂರು ಗುಂಪುಗಳು ಯಾವುವು? (ಸುಲಭ)
34. ಸಮೂಹ ಮಾಧ್ಯಮಗಳು ದೇಶದ ಅಭಿವೃದ್ಧಿಯಲ್ಲಿ ವಹಿಸಿದ ಪಾತ್ರವನ್ನು ವಿಶ್ಲೇಷಿಸಿ. (ಕಠಿಣ)
35. ಕರ್ನಾಟಕ ಸರ್ಕಾರವು ಕೃಷಿ ಅಭಿವೃದ್ಧಿಗಾಗಿ ಕೈಗೊಂಡ ಕ್ರಮಗಳು ಯಾವುವು? (ಸಾಧಾರಣ)
36. ಕೈಗಾರಿಕೆಗಳ ಮೂರು ವರ್ಗಗಳನ್ನು ಹೆಸರಿಸಿ. (ಸುಲಭ)

37. ಜೈವಿಕ ತಂತ್ರಜ್ಞಾನದ ವಿವಿಧ ಶಾಖೆಗಳನ್ನು ಹೆಸರಿಸಿ. (ಸುಲಭ)
38. ಮಾಹಿತಿ ತಂತ್ರಜ್ಞಾನದ ಬಳಕೆಯಿಂದ ಪ್ರಯೋಜನ ಪಡೆದ ವಿವಿಧ ಕ್ಷೇತ್ರಗಳನ್ನು ತಿಳಿಸಿ. (ಸಾಧಾರಣ)
39. ಮಣ್ಣಿನ ಸವಕಳಿಗೆ ಎರಡು ಕಾರಣಗಳನ್ನು ತಿಳಿಸಿ. (ಸಾಧಾರಣ)
40. ಕರ್ನಾಟಕ ಸರ್ಕಾರವು ಕೃಷಿ ಉತ್ಪನ್ನಗಳ ಬೆಳವಣಿಗೆಗಾಗಿ ಕೈಗೊಂಡ ನೀರಾವರಿ ಯೋಜನೆಗಳು ಯಾವುವು? (ಸಾಧಾರಣ)
41. ಇಂದು ಎಲ್ಲಾ ಸಮುದಾಯಗಳನ್ನು ತಲುಪಿರುವ ಸಂಪರ್ಕ ಮಾಧ್ಯಮಗಳಾವುವು? (ಸುಲಭ)
42. ಸಾವಯವ ಕೃಷಿ ಪದ್ಧತಿಯ ಮಹತ್ವ ತಿಳಿಸಿ. (ಸಾಧಾರಣ)

**ಉ. ಈ ಕೆಳಗಿನ ಪ್ರಶ್ನೆಗಳಿಗೆ 4–5 ವಾಕ್ಯಗಳಲ್ಲಿ ಉತ್ತರಿಸಿ.**

43. ಕರ್ನಾಟಕದ ಪ್ರಮುಖ ಕೈಗಾರಿಕೆಗಳನ್ನು ಪಟ್ಟಿ ಮಾಡಿ. (ಸಾಧಾರಣ)
44. ಕೈಗಾರಿಕಾ ನೀತಿಯ ವ್ಯಾಪ್ತಿಗೊಳಪಡುವ ಅಂಶಗಳಾವುವು? (ಸಾಧಾರಣ)
45. ಕೈಗಾರಿಕೆಗಳು ಜನಸಮುದಾಯದ ಅಭಿವೃದ್ಧಿಗೆ ಹೇಗೆ ಪೂರಕವಾಗುತ್ತಿವೆ? (ಕಠಿಣ)

# ಪೌರನೀತಿ

## ಅಧ್ಯಾಯ – 22

## ನ್ಯಾಯಾಂಗ

N5Y8D6

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 29 | ನ್ಯಾಯಾಂಗದ ರಚನೆ, ಕಾರ್ಯ ಹಾಗೂ ಮಹತ್ವವನ್ನು ಪ್ರಶಂಸಿಸುವರು. | 01 ರಿಂದ 22 |

| ಕ್ರ.ಸಂ | ಕ್ಲಿಷ್ಟತೆಯ ಮಟ್ಟ | ಒಟ್ಟು ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 3 |
| 2 | ಸಾಧಾರಣ | 16 |
| 3 | ಕಠಿಣ | 3 |
| | ಒಟ್ಟು | 22 |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ನಮ್ಮ ದೇಶದ ಅತ್ಯುನ್ನತ ನ್ಯಾಯಾಲಯ ಇದಾಗಿದೆ. (ಸಾಧಾರಣ)

   A) ಉಚ್ಚ ನ್ಯಾಯಾಲಯ

   B) ಸರ್ವೋಚ್ಚ ನ್ಯಾಯಾಲಯ

   C) ಜಿಲ್ಲಾ ನ್ಯಾಯಾಲಯ

   D) ಮ್ಯಾಜಿಸ್ಟ್ರೇಟ್ ನ್ಯಾಯಾಲಯ

2. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿ ವಯಸ್ಸು ಇಷ್ಟಿದೆ. (ಸಾಧಾರಣ)

   A) 62 ವರ್ಷ

   B) 60 ವರ್ಷ

   C) 65 ವರ್ಷ

   D) 63 ವರ್ಷ

3. ನಮ್ಮ ದೇಶದಲ್ಲಿರುವ ಒಟ್ಟು ಉಚ್ಚ ನ್ಯಾಯಾಲಯಗಳ ಸಂಖ್ಯೆ ಇದಾಗಿದೆ. (ಸಾಧಾರಣ)

   A) 30 ನ್ಯಾಯಾಲಯಗಳು

   B) 28 ನ್ಯಾಯಾಲಯಗಳು

   C) 20 ನ್ಯಾಯಾಲಯಗಳು

   D) 25 ನ್ಯಾಯಾಲಯಗಳು

4. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರ ಇವರಿಗಿದೆ. (ಸಾಧಾರಣ)

   A) ಪ್ರಧಾನಮಂತ್ರಿಗಳು

   B) ರಾಷ್ಟ್ರಪತಿಗಳು

   C) ಉಪರಾಷ್ಟ್ರಪತಿಗಳು

   D) ಕೇಂದ್ರ ಕಾನೂನು ಸಚಿವರು

5. ಒಬ್ಬ ವ್ಯಕ್ತಿಯು ಒಂದು ಉಚ್ಚ ನ್ಯಾಯಾಲಯದಲ್ಲಿ 5 ವರ್ಷಗಳ ಕಾಲ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದ್ದರೆ, ಅವರು ಈ ಕೆಳಗಿನ ಯಾವ ನ್ಯಾಯಾಲಯದ ನ್ಯಾಯಾಧೀಶರಾಗಲು ಅರ್ಹತೆ ಪಡೆಯುತ್ತಾರೆ? (ಸಾಧಾರಣ)

   A) ಸರ್ವೋಚ್ಚ ನ್ಯಾಯಾಲಯ

   B) ಜಿಲ್ಲಾ ನ್ಯಾಯಾಲಯ

   C) ತಾಲೂಕು ನ್ಯಾಯಾಲಯ

   D) ನಗರ ನ್ಯಾಯಾಲಯ

6. ರಾಷ್ಟ್ರಮಟ್ಟದಲ್ಲಿ ಸರ್ವೋಚ್ಚ ನ್ಯಾಯಾಲಯ ಇರುವಂತೆ, ರಾಜ್ಯ ಮಟ್ಟದಲ್ಲಿರುವ ಅತ್ಯುನ್ನತ ನ್ಯಾಯಾಲಯ ಇದಾಗಿದೆ. (ಸಾಧಾರಣ)

   A) ನಗರ ನ್ಯಾಯಾಲಯ

   B) ಜಿಲ್ಲಾ ನ್ಯಾಯಾಲಯ

   C) ಉಚ್ಚ ನ್ಯಾಯಾಲಯ

   D) ತಾಲೂಕು ನ್ಯಾಯಾಲಯ

7. ಭಾರತದ ಸುಪ್ರೀಂ ಕೋರ್ಟ್ : ನವದೆಹಲಿ :: ಕರ್ನಾಟಕದ ಹೈಕೋರ್ಟ್ : _________. (ಸಾಧಾರಣ)

A) ಬೆಳಗಾವಿ

B) ಧಾರವಾಡ

C) ಕಲಬುರಗಿ

D) ಬೆಂಗಳೂರು

8. ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರ ಇವರಿಗಿದೆ. (ಸಾಧಾರಣ)

A) ಪ್ರಧಾನಮಂತ್ರಿಗಳು

B) ಕೇಂದ್ರ ಕಾನೂನು ಸಚಿವರು

C) ರಾಷ್ಟ್ರಪತಿಗಳು

D) ಉಪರಾಷ್ಟ್ರಪತಿಗಳು

9. ಹಣ, ಆಸ್ತಿ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ಸಿವಿಲ್ ನ್ಯಾಯಾಲಯವು ತೀರ್ಪು ನೀಡಿದರೆ, ಕೊಲೆ, ಕಳ್ಳತನ, ದರೋಡೆ ಮೊದಲಾದ ಪ್ರಕರಣಗಳ ಬಗ್ಗೆ ತೀರ್ಪು ನೀಡುವ ನ್ಯಾಯಾಲಯ ಇದಾಗಿದೆ. (ಸಾಧಾರಣ)

A) ಜಿಲ್ಲಾ ನ್ಯಾಯಾಲಯ

B) ಕ್ರಿಮಿನಲ್ (ದಂಡ) ನ್ಯಾಯಾಲಯ

C) ತಾಲೂಕು ನ್ಯಾಯಾಲಯ

D) ಮ್ಯಾಜಿಸ್ಟ್ರೇಟ್ ನ್ಯಾಯಾಲಯ

10. ಕಡಿಮೆ ಖರ್ಚಿನಲ್ಲಿ, ಶೀಘ್ರವಾಗಿ ಹಾಗೂ ಹೊಂದಾಣಿಕೆ ಮೂಲಕ ವ್ಯಾಜ್ಯಗಳನ್ನು ತೀರ್ಮಾನಿಸುವ ನ್ಯಾಯಾಲಯ ಇದಾಗಿದೆ. (ಸಾಧಾರಣ)

A) ನಗರ ನ್ಯಾಯಾಲಯ

B) ಉಚ್ಚ ನ್ಯಾಯಾಲಯ

C) ಲೋಕ ಅದಾಲತ್ (ಜನತಾ ನ್ಯಾಯಾಲಯ)

D) ಜಿಲ್ಲಾ ನ್ಯಾಯಾಲಯ

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

11. ಸರ್ವೋಚ್ಚ ನ್ಯಾಯಾಲಯದಲ್ಲಿ ಮುಖ್ಯ ನ್ಯಾಯಮೂರ್ತಿಯನ್ನು ಒಳಗೊಂಡು ಎಷ್ಟು ನ್ಯಾಯಮೂರ್ತಿಗಳು ಇರುತ್ತಾರೆ? (ಸಾಧಾರಣ)

12. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿ ವಯಸ್ಸು ಎಷ್ಟು? (ಸುಲಭ)
13. ಉಚ್ಚ ನ್ಯಾಯಾಲಯದ ಅಧೀನದಲ್ಲಿರುವ ನ್ಯಾಯಾಲಯಗಳು ಯಾವುವು? (ಸುಲಭ)
14. ನ್ಯಾಯ ನಿರ್ಣಯದ ವಿಳಂಬವನ್ನು ತಡೆಯುವುದು ಹೇಗೆ? (ಸುಲಭ)

**ಇ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

15. ಸರ್ವೋಚ್ಚ ನ್ಯಾಯಾಲಯದ ಕಾರ್ಯಗಳನ್ನು ತಿಳಿಸಿ. (ಸಾಧಾರಣ)
16. ನಮಗೆ ನ್ಯಾಯಾಲಯಗಳ ಅವಶ್ಯಕತೆ ಇದೆಯೇ? ವಿವರಿಸಿ. (ಕಠಿಣ)
17. ಸರ್ವೋಚ್ಚ ನ್ಯಾಯಾಲಯದ ಕುರಿತು ಟಿಪ್ಪಣಿ ಬರೆಯಿರಿ. (ಸಾಧಾರಣ)
18. ನ್ಯಾಯ ನಿರ್ಣಯದ ವಿಳಂಬವನ್ನು ತಡೆಯಲು ಜನತಾ ನ್ಯಾಯಾಲಯ (ಲೋಕ ಅದಾಲತ್) ಹೇಗೆ ಸಹಾಯಕವಾಗಿದೆ? (ಕಠಿಣ)
19. ರವಿಯು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಲು ಇಚ್ಛಿಸುತ್ತಾನೆ. ಹಾಗಾದರೆ ಅವನು ಹೊಂದಿರಬೇಕಾದ ಅರ್ಹತೆಗಳೇನು? (ಸಾಧಾರಣ)
20. ಅಧೀನ ನ್ಯಾಯಾಲಯಗಳ ಎರಡು ವಿಧಗಳು ಮತ್ತು ಅವುಗಳ ಕಾರ್ಯಗಳನ್ನು ತಿಳಿಸಿ. (ಸಾಧಾರಣ)
21. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಬೇಕಾದ ಅರ್ಹತೆಗಳು ಯಾವುವು? (ಸಾಧಾರಣ)
22. ಉಚ್ಚ ನ್ಯಾಯಾಲಯದ ಕಾರ್ಯಗಳು ಯಾವುವು? (ಸಾಧಾರಣ)

| ಅಧ್ಯಾಯ – 23 | ರಕ್ಷಣಾ ಪಡೆಗಳು |
|---|---|

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 30 | ಭಾರತದ ರಕ್ಷಣಾ ಪಡೆಗಳ ಕಾರ್ಯ ಹಾಗೂ ಪ್ರಾಮುಖ್ಯತೆಯನ್ನು ವರ್ಣಿಸಿ ಪ್ರಶಂಸಿಸುವರು | 01 ರಿಂದ 30 |

| ಕ್ರ.ಸಂ | ಕಠಿಣತೆಯ ಮಟ್ಟ | ಒಟ್ಟು ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 7 |
| 2 | ಸಾಧಾರಣ | 21 |
| 3 | ಕಠಿಣ | 2 |
| ಒಟ್ಟು | | **30** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ನಮ್ಮ ದೇಶದ ರಕ್ಷಣಾ ಪಡೆಗಳ ಸರ್ವೋಚ್ಚ ಅಧಿಕಾರವನ್ನು ಇವರಿಗೆ ನೀಡಲಾಗಿದೆ. (ಸಾಧಾರಣ)

   A) ರಾಷ್ಟ್ರಪತಿಗಳು

   B) ಉಪರಾಷ್ಟ್ರಪತಿಗಳು

   C) ಪ್ರಧಾನಮಂತ್ರಿಗಳು

   D) ಕೇಂದ್ರ ರಕ್ಷಣಾ ಸಚಿವರು

2. ಭಾರತದ ಭೂಸೇನೆಯ ಪ್ರಧಾನ ಕಚೇರಿ ಇರುವ ಸ್ಥಳ. (ಸಾಧಾರಣ)

   A) ಬೆಂಗಳೂರು

   B) ನವದೆಹಲಿ

   C) ಮುಂಬೈ

   D) ಕೊಲ್ಕತ್ತಾ

3. ಕಾರ್ಗಿಲ್ ಯುದ್ಧ ನಡೆದ ವರ್ಷ. (ಸಾಧಾರಣ)

A) 1997

B) 1996

C) 1999

D) 1998

4. ಭಾರತದ ರಕ್ಷಣಾ ಪಡೆಗಳ ಸರಿಯಾದ ಗುಂಪು. (ಸಾಧಾರಣ)

A) ಗಡಿ ಭದ್ರತಾ ಪಡೆ, ಗಡಿ ರಸ್ತೆಗಳ ಸಂಘಟನೆ

B) ಭೂಸೇನೆ, ನೌಕಾಪಡೆ ಮತ್ತು ವಾಯುಪಡೆ

C) ಕರಾವಳಿ ಪಹರೆ, ಕೇಂದ್ರ ಕೈಗಾರಿಕಾ ಭದ್ರತಾ ಪಡೆ

D) ನಾಗರಿಕ ಪೊಲೀಸ್ ಪಡೆಗಳು, ಗೃಹರಕ್ಷಕ ದಳ

5. ಭಾರತೀಯ ಭೂಸೇನೆಯ ಮುಖ್ಯಸ್ಥರನ್ನು ಹೀಗೆಂದು ಕರೆಯುತ್ತಾರೆ. (ಸಾಧಾರಣ)

A) ಆಡ್ಮಿರಲ್

B) ಕಮಾಂಡರ್

C) ಬ್ರಿಗೇಡಿಯರ್

D) ಜನರಲ್

6. ರಾಷ್ಟ್ರೀಯ ರಕ್ಷಣಾ ಕಾಲೇಜು : ನವದೆಹಲಿ :: ಭಾರತೀಯ ಮಿಲಿಟರಿ ಅಕಾಡೆಮಿ : ________ (ಸಾಧಾರಣ)

A) ಉದಕಮಂಡಲ

B) ಮುಂಬೈ

C) ಡೆಹ್ರಾಡೂನ್

D) ಪುಣೆ

7. ಸೀಬರ್ಡ್ ನೌಕಾನೆಲೆ ಈ ಕೆಳಗಿನ ರಾಜ್ಯದಲ್ಲಿ ಕಂಡುಬರುತ್ತದೆ. (ಸಾಧಾರಣ)

A) ಗೋವಾ

B) ಕೇರಳ

C) ಮಹಾರಾಷ್ಟ್ರ

D) ಕರ್ನಾಟಕ

8. ವಾಯುಪಡೆ : ಏರ್ ಚೀಫ್ ಮಾರ್ಷಲ್ :: ನೌಕಾಪಡೆ : _______. (ಸಾಧಾರಣ)

A) ಜನರಲ್

B) ಆಡ್ಮಿರಲ್

C) ಲೆಫ್ಟಿನೆಂಟ್

D) ಕಮಾಂಡರ್

9. ಆಡಳಿತದ ಅನುಕೂಲಕ್ಕಾಗಿ ವಾಯುಪಡೆಯನ್ನು ಹೀಗೆ ವಿಂಗಡಿಸಲಾಗಿದೆ. (ಸಾಧಾರಣ)

A) 8 ಕಮಾಂಡ್‌ಗಳು

B) 5 ಕಮಾಂಡ್‌ಗಳು

C) 6 ಕಮಾಂಡ್‌ಗಳು

D) 7 ಕಮಾಂಡ್‌ಗಳು

10. ಭಾರತ ದೇಶವು ಹೊಂದಿರುವ ಭೂಗಡಿ ಮತ್ತು ಜಲಗಡಿ ಪ್ರದೇಶ. (ಸಾಧಾರಣ)

A) 15,200 ಕಿ.ಮೀ. ಭೂಗಡಿ ಮತ್ತು 7,516.5 ಕಿ.ಮೀ. ಜಲಗಡಿ

B) 15,100 ಕಿ.ಮೀ. ಭೂಗಡಿ ಮತ್ತು 7,515.5 ಕಿ.ಮೀ. ಜಲಗಡಿ

C) 12,500 ಕಿ.ಮೀ. ಭೂಗಡಿ ಮತ್ತು 7,516.5 ಕಿ.ಮೀ. ಜಲಗಡಿ

D) 15,200 ಕಿ.ಮೀ. ಭೂಗಡಿ ಮತ್ತು 7,516.2 ಕಿ.ಮೀ. ಜಲಗಡಿ

11. ವಿಶ್ವದಲ್ಲಿ ಭಾರತದ ಭೂಸೇನೆಯ ಸ್ಥಾನ : 2ನೇ ಸ್ಥಾನ :: ವಾಯುಪಡೆಯ ಸ್ಥಾನ : _______. (ಸಾಧಾರಣ)

A) 5ನೇ ಸ್ಥಾನ

B) 8ನೇ ಸ್ಥಾನ

C) 4ನೇ ಸ್ಥಾನ

D) 6ನೇ ಸ್ಥಾನ

12. ಈ ಕೆಳಗಿನವುಗಳಲ್ಲಿ ಯಾವುದು ಪೂರಕ ರಕ್ಷಣಾ ಪಡೆಯಾಗಿದೆ? (ಸಾಧಾರಣ)

A) ಭೂಸೇನೆ

B) ಎನ್.ಸಿ.ಸಿ.

C) ಗೃಹರಕ್ಷಕ ದಳ

D) ಗಡಿ ಭದ್ರತಾ ಪಡೆ

13. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷರು. (ಸಾಧಾರಣ)

A) ಮುಖ್ಯಮಂತ್ರಿ

B) ರಾಷ್ಟ್ರಪತಿ

C) ಉಪರಾಷ್ಟ್ರಪತಿ

D) ಪ್ರಧಾನಮಂತ್ರಿ

14. ಪೊಲೀಸ್ ಪಡೆಗೆ ಪೂರಕವಾಗಿ ಕಾರ್ಯನಿರ್ವಹಿಸುವ ಪಡೆ. (ಸಾಧಾರಣ)

A) ಕರಾವಳಿ ಪಹರೆ

B) ಗಡಿ ಭದ್ರತಾ ಪಡೆ

C) ಗೃಹರಕ್ಷಕ ದಳ

D) ಗಡಿ ರಸ್ತೆಗಳ ಸಂಘಟನೆ

15. ಸರ್ಕಾರಿ ಹಾಗೂ ಖಾಸಗಿ ಕೈಗಾರಿಕಾ ಘಟಕಗಳು ಮತ್ತು ಪ್ರಯೋಗಾಲಯಗಳಿಗೆ ಭದ್ರತೆಯನ್ನು ಒದಗಿಸುವ ಸಂಸ್ಥೆ. (ಸಾಧಾರಣ)

A) ಗಡಿ ಭದ್ರತಾ ಪಡೆ

B) ಕರಾವಳಿ ಪಹರೆ

C) ಗೃಹರಕ್ಷಕ ದಳ

D) ಕೇಂದ್ರ ಕೈಗಾರಿಕಾ ಭದ್ರತಾ ಪಡೆ

16. ಎನ್.ಸಿ.ಸಿ.ಯ ಧ್ಯೇಯವಾಕ್ಯ ಇದಾಗಿದೆ. (ಸಾಧಾರಣ)

A) ಶಿಸ್ತು ಮತ್ತು ಒಗ್ಗಟ್ಟು

B) ತಮ್ಮ ಪ್ರಾಣ ಇರುವವರೆಗೆ ಕರ್ತವ್ಯ

C) ಮಾನವೀಯತೆ ಮತ್ತು ಸ್ವಯಂಸೇವೆ

D) ಆತ್ಮವಿಶ್ವಾಸ

**ಆ. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

17. ಮೂರು ರಕ್ಷಣಾ ಪಡೆಗಳು ________ ಹಬ್ಬಗಳಂದು ತಮ್ಮ ಸೇನಾ ಸಾಮರ್ಥ್ಯವನ್ನು ಪ್ರದರ್ಶಿಸುತ್ತವೆ. (ಸುಲಭ)

18. ನೌಕಾಪಡೆಯ ಮುಖ್ಯ ಕಚೇರಿ ________ ನಲ್ಲಿದೆ. (ಸುಲಭ)

19. ಗಡಿ ಭದ್ರತಾ ಪಡೆಯ ಧ್ಯೇಯವಾಕ್ಯ ________ ಆಗಿದೆ. (ಸುಲಭ)

20. ಮುಚ್ಚಿರುವ ರಸ್ತೆಗಳನ್ನು ತೆರವು ಮಾಡಿ ಸೈನಿಕ ಕಾರ್ಯಾಚರಣೆಗಳಿಗೆ ಸಹಾಯ ಮಾಡುವ ಸಂಘಟನೆ ________. (ಸುಲಭ)
21. ರಾಷ್ಟ್ರರಕ್ಷಣೆಯ ಹೊಣೆಗಾರಿಕೆಯನ್ನು ಮೂಡಿಸುವುದು ________ ಯ ಪ್ರಮುಖ ಗುರಿಯಾಗಿದೆ. (ಸುಲಭ)
22. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಧ್ಯೇಯವಾಕ್ಯ ________. (ಸುಲಭ)
23. ಭಾರತವು ಪ್ರಪಂಚದಲ್ಲಿ ________ ನೇ ದೊಡ್ಡ ವಾಯುಪಡೆಯನ್ನು ಹೊಂದಿದೆ. (ಸುಲಭ)

**ಇ. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

24. ರಕ್ಷಣಾ ಪಡೆಗಳ ಜವಾಬ್ದಾರಿಗಳು ಯಾವುವು? (ಸಾಧಾರಣ)
25. ಪೂರಕ ರಕ್ಷಣಾ ಪಡೆಗಳನ್ನು ಪಟ್ಟಿ ಮಾಡಿರಿ. (ಸಾಧಾರಣ)
26. ಸಹಾಯಕ ರಕ್ಷಣಾ ಸೇವೆಗಳು ಯಾವುವು? (ಸಾಧಾರಣ)
27. ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ ಕಾರ್ಯವೇನು? (ಸಾಧಾರಣ)
28. ರಕ್ಷಣಾ ಪಡೆಯ ವಿಭಾಗಗಳಾವುವು? (ಸಾಧಾರಣ)
29. ಭೂಸೇನೆಯ ಪ್ರಮುಖ ಕಾರ್ಯಗಳಾವುವು? (ಕಠಿಣ)
30. ಗಡಿ ರಸ್ತೆಗಳ ಸಂಘಟನೆಯ ಕಾರ್ಯಗಳಾವುವು? (ಕಠಿಣ)

| ಅಧ್ಯಾಯ – 24 | ಭಾರತ ಮತ್ತು ನೆರೆ ದೇಶಗಳು |
|---|---|

A8T4K2

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 32 | ನೆರೆದೇಶಗಳೊಂದಿಗೆ ಭಾರತ ಹೊಂದಿರುವ ರಾಜತಾಂತ್ರಿಕ ಸಂಬಂಧ, ಶಾಂತಿ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಹಕಾರದ ವಿಷಯಗಳನ್ನು ಅರ್ಥೈಸುವರು | 01 ರಿಂದ 22 |

| ಕ್ರ.ಸಂ | ಕ್ಲಿಷ್ಟತೆಯ ಮಟ್ಟ | ಒಟ್ಟು ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 6 |
| 2 | ಸಾಧಾರಣ | 14 |
| 3 | ಕಠಿಣ | 2 |
| ಒಟ್ಟು | | 22 |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಭಾರತವು ಏಷ್ಯಾ ಖಂಡದ ಈ ಭಾಗದಲ್ಲಿ ಕಂಡುಬರುತ್ತದೆ. (ಸಾಧಾರಣ)

   A) ಪೂರ್ವ ಭಾಗ

   B) ಉತ್ತರ ಭಾಗ

   C) ಪಶ್ಚಿಮ ಭಾಗ

   D) ದಕ್ಷಿಣ ಭಾಗ

2. ಈ ಕೆಳಗಿನ ದೇಶವು ಭಾರತದ ನೆರೆಯ ದೇಶವಲ್ಲ. (ಸಾಧಾರಣ)

   A) ಶ್ರೀಲಂಕಾ

   B) ಜಪಾನ್

   C) ನೇಪಾಳ

   D) ಚೀನಾ

3. ಶಿಮ್ಲಾ ಒಪ್ಪಂದ ಈ ವರ್ಷ ನಡೆಯಿತು. (ಸಾಧಾರಣ)

A) 1970

B) 1971

C) 1972

D) 1973

4. 1999ರಲ್ಲಿ ನಡೆದ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿದ್ದ ಭಾರತದ ಪ್ರಧಾನಮಂತ್ರಿ. (ಸಾಧಾರಣ)

A) ಇಂದಿರಾ ಗಾಂಧಿ

B) ಅಟಲ್ ಬಿಹಾರಿ ವಾಜಪೇಯಿ

C) ಮನಮೋಹನ್ ಸಿಂಗ್

D) ರಾಜೀವ್ ಗಾಂಧಿ

5. ಚೀನಾ ಅತಿಕ್ರಮಣದಿಂದಾಗಿ ನಿರಾಶ್ರಿತರಾಗಿ ಭಾರತಕ್ಕೆ ಬಂದ ಟಿಬೆಟಿಯನ್ನರಿಗೆ ಕರ್ನಾಟಕದ ಈ ಸ್ಥಳಗಳಲ್ಲಿ ನೆಲೆಗಳನ್ನು ಕಲ್ಪಿಸಲಾಗಿದೆ. (ಸಾಧಾರಣ)

A) ಮೈಸೂರು ಮತ್ತು ಬೇಲೂರು

B) ಮುಂಡಗೋಡ ಮತ್ತು ಕಾರವಾರ

C) ಮುಂಡಗೋಡ ಮತ್ತು ಬೈಲುಕುಪ್ಪೆ

D) ಮೈಸೂರು ಮತ್ತು ಮಂಗಳೂರು

6. ಸಾರ್ಕ್ ಸ್ಥಾಪನೆಯಾದ ವರ್ಷ. (ಸಾಧಾರಣ)

A) 1982

B) 1988

C) 1983

D) 1985

7. ಸಾರ್ಕ್ ಸದಸ್ಯತ್ವ ಪಡೆಯದ ದೇಶ. (ಸಾಧಾರಣ)

A) ಚೀನಾ

B) ಭಾರತ

C) ನೇಪಾಳ

D) ಶ್ರೀಲಂಕಾ

8. ಭಾರತದ ದಕ್ಷಿಣಕ್ಕೆ ಇರುವ ದ್ವೀಪ ರಾಷ್ಟ್ರ. (ಸಾಧಾರಣ)

A) ಜಪಾನ್

B) ಭೂತಾನ್

C) ಮಯನ್ಮಾರ್

D) ಶ್ರೀಲಂಕಾ

**ಆ. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

9. ಟಿಬೆಟಿನ ಧರ್ಮಗುರು _________. (ಸುಲಭ)

10. ಸಾರ್ಕ್‌ನ ಸದಸ್ಯ ರಾಷ್ಟ್ರಗಳ ಸಂಖ್ಯೆ _________. (ಸುಲಭ)

11. ಪಂಚಶೀಲ ಸೂತ್ರಕ್ಕೆ ಸಹಿ ಹಾಕಿದ ವರ್ಷ _________. (ಸುಲಭ)

12. ಭಾರತ ಮತ್ತು ಚೀನಾದ ಗಡಿ ರೇಖೆಯನ್ನು _________ ಎಂದು ಕರೆಯುತ್ತಾರೆ. (ಸುಲಭ)

13. ಚಿತ್ತಗಾಂಗ್ ಪರ್ವತ ಪ್ರದೇಶದಿಂದ ಭಾರತಕ್ಕೆ ವಲಸೆ ಬಂದ ನಿರಾಶ್ರಿತರು _________. (ಸುಲಭ)

14. SAARC ಇದರ ವಿಸ್ತೃತ ರೂಪ ____________________________________. (ಸಾಧಾರಣ)

15. ಅವಾಮಿ ಲೀಗ್ ವಿಮೋಚನಾ ಚಳವಳಿಯ ನೇತೃತ್ವ ವಹಿಸಿದವರು _________. (ಸಾಧಾರಣ)

**ಇ. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

16. ಭಾರತದ ನೆರೆ ದೇಶಗಳನ್ನು ಪಟ್ಟಿ ಮಾಡಿರಿ. (ಸಾಧಾರಣ)

17. ಸಾರ್ಕ್ ಸ್ಥಾಪನೆಯ ಉದ್ದೇಶಗಳನ್ನು ಬರೆಯಿರಿ. (ಸಾಧಾರಣ)

18. ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಸೌಹಾರ್ದತೆಗೆ ಬರುವ ಸಮಸ್ಯೆಗಳು ಯಾವುವು? (ಸಾಧಾರಣ)

19. ಸಾರ್ಕ್ ಸದಸ್ಯ ರಾಷ್ಟ್ರಗಳನ್ನು ಪಟ್ಟಿ ಮಾಡಿರಿ. (ಸಾಧಾರಣ)

20. ಚೀನಾ ಮತ್ತು ಭಾರತದ ನಡುವಿನ ಸಂಘರ್ಷಕ್ಕೆ ಮುಖ್ಯ ಕಾರಣಗಳಾವುವು? (ಸಾಧಾರಣ)

21. ಬಾಂಗ್ಲಾದೇಶ ಸ್ವಾತಂತ್ರ್ಯ ಪಡೆಯಲು ಭಾರತವು ವಹಿಸಿದ ಪಾತ್ರವನ್ನು ವಿಶ್ಲೇಷಿಸಿ. (ಕಠಿಣ)

22. 1962ರ ಭಾರತ–ಚೀನಾ ಯುದ್ಧದ ಪರಿಣಾಮಗಳೇನು? (ಕಠಿ

| ಅಧ್ಯಾಯ – 25 | ವಿಶ್ವಸಂಸ್ಥೆ |
|---|---|

W6A3F9

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 33 | ವಿಶ್ವಸಂಸ್ಥೆಯ ಮಹತ್ವ, ಆದರ್ಶಗಳು ಹಾಗೂ ಅದರ ಅಂಗಸಂಸ್ಥೆಗಳ ಕಾರ್ಯವಿಧಾನಗಳನ್ನು ಅಭಿವ್ಯಕ್ತಿಸುವರು. ಜಾಗತಿಕ ಶಾಂತಿ ಸ್ಥಾಪನೆಯಲ್ಲಿ ಭಾರತವು ನಿರ್ವಹಿಸಿದ ಪಾತ್ರವನ್ನು ಪ್ರಶಂಸಿಸುವರು. | 01 ರಿಂದ 28 |

| ಕ್ರ.ಸಂ | ಕ್ಲಿಷ್ಟತೆಯ ಮಟ್ಟ | ಒಟ್ಟು ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 7 |
| 2 | ಸಾಧಾರಣ | 16 |
| 3 | ಕಠಿಣ | 5 |
| ಒಟ್ಟು | | 28 |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ವಿಶ್ವಸಂಸ್ಥೆ ಸ್ಥಾಪನೆಯಾದ ವರ್ಷ. (ಸಾಧಾರಣ)

   A) ನವೆಂಬರ್ 24, 1945

   B) ಅಕ್ಟೋಬರ್ 24, 1945

   C) ಏಪ್ರಿಲ್ 24, 1945

   D) ಮಾರ್ಚ್ 24, 1945

2. ವಿಶ್ವಸಂಸ್ಥೆಯು ಹೊಂದಿರುವ ಅಂಗಗಳು. (ಸಾಧಾರಣ)

   A) 6

   B) 3

   C) 8

   D) 4

3. ವಿಶ್ವದಲ್ಲಿ ಶಾಂತಿ ಹಾಗೂ ಭದ್ರತೆಯನ್ನು ಕಾಪಾಡುವುದು ಇದರ ಜವಾಬ್ದಾರಿಯಾಗಿದೆ. (ಸಾಧಾರಣ)

   A) ಆರ್ಥಿಕ ಮತ್ತು ಸಾಮಾಜಿಕ ಮಂಡಳಿ

   B) ಮಹಾಸಭೆ

   C) ಭದ್ರುತಾ ಮಂಡಳಿ

   D) ಧರ್ಮದರ್ಶಿ ಮಂಡಳಿ

4. ಭದ್ರುತಾ ಮಂಡಳಿಯು ಎಷ್ಟು ತಾತ್ಕಾಲಿಕ ಸದಸ್ಯರನ್ನು ಹೊಂದಿದೆ? (ಸಾಧಾರಣ)

   A) 5

   B) 1

   C) 20

   D) 10

5. ಧರ್ಮದರ್ಶಿ ಮಂಡಳಿಯನ್ನು ಈ ಪ್ರದೇಶಗಳ ಮೇಲ್ವಿಚಾರಣೆಗಾಗಿ ರಚಿಸಲಾಗಿದೆ. (ಸಾಧಾರಣ)

   A) ವಿವಾದಾತ್ಮಕ ಪ್ರದೇಶಗಳು

   B) ಸ್ವತಂತ್ರ ದೊರೆಯದ ಪ್ರದೇಶಗಳು

   C) ಸ್ವತಂತ್ರ ಪ್ರದೇಶಗಳು

   D) ವಿಶ್ವಸ್ಥ ಪ್ರದೇಶಗಳು

6. ವಿಶ್ವಸಂಸ್ಥೆಯ ಪ್ರಧಾನ ಕಾರ್ಯಾಲಯ __________ ನಗರದಲ್ಲಿದೆ. (ಸಾಧಾರಣ)

   A) ವಾಷಿಂಗ್ಟನ್

   B) ಪ್ಯಾರಿಸ್

   C) ನ್ಯೂಯಾರ್ಕ್‌ನ ಲೇಕ್ ಸಕ್ಸೆಸ್

   D) ಹೇಗ್

7. ವಿಶ್ವಸಂಸ್ಥೆಯ ಸಂಸತ್ತಿನಂತೆ ಕಾರ್ಯನಿರ್ವಹಿಸುವ ಅಂಗ. (ಸಾಧಾರಣ)

   A) ಮಹಾಸಭೆ

   B) ಭದ್ರುತಾ ಮಂಡಳಿ

   C) ಪ್ರಧಾನ ಕಾರ್ಯಾಲಯ

   D) ಧರ್ಮದರ್ಶಿ ಮಂಡಳಿ

8. ಅಂತರರಾಷ್ಟ್ರೀಯ ನ್ಯಾಯಾಲಯದ ಮುಖ್ಯ ಕಚೇರಿ. (ಸಾಧಾರಣ)

   A) ಪ್ಯಾರಿಸ್

   B) ರೋಮ್

   C) ನ್ಯೂಯಾರ್ಕ್

   D) ಹೇಗ್

9. ಪ್ರಧಾನ ಕಾರ್ಯಾಲಯದ ಆಡಳಿತ ನಿರ್ವಹಣೆಯನ್ನು ಮಾಡುವ ಮುಖ್ಯ ಅಧಿಕಾರಿ. (ಸಾಧಾರಣ)

   A) ಅಧ್ಯಕ್ಷರು

   B) ಮಹಾ ಕಾರ್ಯದರ್ಶಿ

   C) ಅಧೀನ ಕಾರ್ಯದರ್ಶಿ

   D) ಕಾರ್ಯದರ್ಶಿ

10. ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯನ್ನು ಅಂಗೀಕರಿಸಿದ ವರ್ಷ. (ಸಾಧಾರಣ)

   A) ಡಿಸೆಂಬರ್ 10, 1949

   B) ನವೆಂಬರ್ 10, 1949

   C) ಡಿಸೆಂಬರ್ 10, 1948

   D) ನವೆಂಬರ್ 10, 1948

**ಆ. ಹೊಂದಿಸಿ ಬರೆಯಿರಿ. (ಸಾಧಾರಣ)**

| ಅ | ಬ |
|---|---|
| 1. ಯುನೆಸ್ಕೋ | ಅ. ನ್ಯೂಯಾರ್ಕ್ |
| 2. ಆಹಾರ ಮತ್ತು ಕೃಷಿ ಸಂಸ್ಥೆ (FAO) | ಆ. ಜಿನೀವಾ |
| 3. ವಿಶ್ವ ಆರೋಗ್ಯ ಸಂಸ್ಥೆ (WHO) | ಇ. ಪ್ಯಾರಿಸ್ |
| 4. ಯುನಿಸೆಫ್ (UNICEF) | ಈ. ರೋಮ್ |

**ಇ. ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.**

12. ಮಹಾಸಭೆಯು ವರ್ಷಕ್ಕೊಮ್ಮೆ _________ ತಿಂಗಳಲ್ಲಿ ಸಮಾವೇಶಗೊಳ್ಳುತ್ತದೆ. (ಸುಲಭ)
13. ವಿಶ್ವಸಂಸ್ಥೆಯ ಒಟ್ಟು ಸದಸ್ಯ ರಾಷ್ಟ್ರಗಳ ಸಂಖ್ಯೆ _________. (ಸುಲಭ)
14. _________ ದೇಶವು ವಿಶ್ವಸಂಸ್ಥೆಯ 193ನೇ ಸದಸ್ಯ ರಾಷ್ಟ್ರವಾಗಿದೆ. (ಸುಲಭ)
15. ಭದ್ರತಾ ಮಂಡಳಿಯ ಒಟ್ಟು ಸದಸ್ಯ ಬಲ _________. (ಸುಲಭ)
16. ನ್ಯೂಯಾರ್ಕ್ ಬಳಿಯ _________ ನಗರದಲ್ಲಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯಾಲಯವಿದೆ. (ಸುಲಭ)
17. ಪ್ರತಿ ವರ್ಷ _________ ರಂದು ವಿಶ್ವಸಂಸ್ಥೆಯ ದಿನವನ್ನು ಆಚರಿಸುತ್ತಾರೆ. (ಸುಲಭ)

**ಈ. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

18. ವಿಶ್ವಸಂಸ್ಥೆಯ ಸ್ಥಾಪನೆಗೆ ಮುಖ್ಯ ಪಾತ್ರ ವಹಿಸಿದ ಪ್ರಮುಖ ದೇಶಗಳ ಮುಖ್ಯಸ್ಥರನ್ನು ಹೆಸರಿಸಿ. (ಸುಲಭ)
19. ವಿಶ್ವಸಂಸ್ಥೆಯ ಮೂಲ ಉದ್ದೇಶಗಳನ್ನು ಪಟ್ಟಿ ಮಾಡಿರಿ. (ಸಾಧಾರಣ)
20. ವಿಶ್ವಸಂಸ್ಥೆಯ ಅಂಗಸಂಸ್ಥೆಗಳನ್ನು ಹೆಸರಿಸಿ. (ಸುಲಭ)
21. ವಿಶ್ವಸಂಸ್ಥೆಯ ಪ್ರಮುಖ ಸಾಧನೆಗಳನ್ನು ಪಟ್ಟಿ ಮಾಡಿರಿ. (ಕಠಿಣ)
22. ವಿಶ್ವಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಪ್ರಮುಖ ಭಾರತೀಯರನ್ನು ತಿಳಿಸಿರಿ. (ಸಾಧಾರಣ)
23. ವಿಟೋ ಎಂದರೇನು? ವಿಟೋ ಅಧಿಕಾರ ಯಾರಿಗಿದೆ? (ಸುಲಭ)
24. ವಿಶ್ವಸಂಸ್ಥೆಯ ವಿಶೇಷ ಸೇವಾ ಸಂಸ್ಥೆಗಳನ್ನು ಹೆಸರಿಸಿ. (ಕಠಿಣ)
25. ವಿಶ್ವಸಂಸ್ಥೆಯ ಆಡಳಿತ ಭಾಷೆಗಳನ್ನು ಪಟ್ಟಿ ಮಾಡಿರಿ. (ಕಠಿಣ)
26. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಶಾಶ್ವತ ಸದಸ್ಯ ರಾಷ್ಟ್ರಗಳು ಯಾವುವು? (ಸಾಧಾರಣ)
27. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾರ್ಯವನ್ನು ವಿವರಿಸಿರಿ. (ಕಠಿಣ)
28. ವಿಶ್ವಸಂಸ್ಥೆಯ ಎರಡು ಮಿತಿಗಳನ್ನು ತಿಳಿಸಿರಿ. (ಕಠಿಣ)

# ಭೂಗೋಳ ವಿಜ್ಞಾನ

## ಅಧ್ಯಾಯ – 26 ಆಸ್ಟ್ರೇಲಿಯಾ

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
|---|---|---|
| 22 | ಆಸ್ಟ್ರೇಲಿಯಾ, ಅಂಟಾರ್ಟಿಕಾ ಖಂಡಗಳ ಮೇಲ್ಮೈ ಲಕ್ಷಣಗಳು, ವಿಶಿಷ್ಟ ವಾಯುಗುಣ, ಸಸ್ಯ ಮತ್ತು ಪ್ರಾಣಿ ವರ್ಗಗಳ ನಡುವಿನ ಅಂತರ್ ಸಂಬಂಧವನ್ನು ವಿಶ್ಲೇಷಿಸುವರು | 02 ರಿಂದ 27 |
| 23 | ಭೌಗೋಳಿಕ ಸ್ಥಾನ ಮತ್ತು ಸನ್ನಿವೇಶವನ್ನು ನಕ್ಷೆಯ ಮೂಲಕ ಗುರುತಿಸುವರು. | 01 |

| ಕ್ರ.ಸಂ | ಕ್ಲಿಷ್ಟತೆಯ ಮಟ್ಟ | ಒಟ್ಟು ಪ್ರಶ್ನೆಗಳ ಸಂಖ್ಯೆ |
|---|---|---|
| 1 | ಸುಲಭ | 5 |
| 2 | ಸಾಧಾರಣ | 20 |
| 3 | ಕಠಿಣ | 2 |
| ಒಟ್ಟು | | 27 |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

1. ಭಾರತಕ್ಕಿಂತ 2 ಪಟ್ಟು ದೊಡ್ಡದು ಹಾಗೂ ಪ್ರಪಂಚದ 7ನೇ ಭೂಖಂಡವಿದು. (ಸಾಧಾರಣ)

   A) ಏಷ್ಯಾ

   B) ಯುರೋಪ್

   C) ಉತ್ತರ ಅಮೇರಿಕಾ

   D) ಆಸ್ಟ್ರೇಲಿಯಾ



2. ಆಸ್ಟ್ರೇಲಿಯಾ ಖಂಡಕ್ಕೆ ಇರುವ ಅನ್ವರ್ಥನಾಮವಿದು. (ಸಾಧಾರಣ)

A) ಹೊಸ ಭೂಖಂಡ

B) ಅತ್ಯಂತ ಸಮತಟ್ಟಾದ ಭೂಖಂಡ

C) ಮರಭೂಮಿಯ ಭೂಖಂಡ

D) ಮೇಲಿನ ಎಲ್ಲವೂ

3. ಆಸ್ಟ್ರೇಲಿಯಾ ಖಂಡದ ಅತಿ ದೊಡ್ಡ ಸರೋವರದ ಮೈದಾನವು ಈ ಆಕಾರದಲ್ಲಿದೆ. (ಸಾಧಾರಣ)

A) ತಟ್ಟೆ ಆಕಾರ

B) ಬಟ್ಟಲು ಆಕಾರ

C) ತಂಬಿಗೆ ಆಕಾರ

D) ಬೋಗೋಣಿ ಆಕಾರ

4. ಭಾರತ ದಖನ್ ಪ್ರಸ್ಥಭೂಮಿಯಷ್ಟೇ ಪುರಾತನವಾದ ಆಸ್ಟ್ರೇಲಿಯಾದ ಪ್ರದೇಶವಿದು. (ಸಾಧಾರಣ)

A) ಪೂರ್ವದ ಉನ್ನತ ಪ್ರದೇಶ

B) ಮಧ್ಯದ ತಗ್ಗು ಮೈದಾನ

C) ಪಶ್ಚಿಮದ ಪ್ರಸ್ಥಭೂಮಿ

D) ನದಿ ವ್ಯವಸ್ಥೆ

5. ಆಸ್ಟ್ರೇಲಿಯಾ ಖಂಡದಲ್ಲಿರುವ 'ಬ್ಲಾಕ್ ವುಡ್' ಎಂಬುದು ________. (ಸಾಧಾರಣ)

A) ಕಪ್ಪುಕಟ್ಟಿಗೆ

B) ಸಮುದ್ರ

C) ನದಿ

D) ಸರೋವರ

6. ಆಸ್ಟ್ರೇಲಿಯಾದ ಐರ್ ಸರೋವರದ ಪಶ್ಚಿಮದಲ್ಲಿ ಪ್ರಪಂಚದ ಅತಿದೊಡ್ಡ ಏಕ ಶಿಲೆಯಿದೆ. (ಸಾಧಾರಣ)

A) ಅಯರ್ಸ್ (ಉಲೂರು)

B) ಮುಕಾಂಬಾ



C) ಮರ್ಚಿಸನ್

D) ಐರ್

7. ಆಸ್ಟ್ರೇಲಿಯಾದಲ್ಲಿ ಋತುಕಾಲಗಳು ಉತ್ತರಗೋಳಾರ್ಧದ ವಿರುದ್ಧ ಅವಧಿಯಲ್ಲಿ ಏರ್ಪಡಲು ಕಾರಣ. (ಸಾಧಾರಣ)

   A) ಚಿಕ್ಕ ಭೂಖಂಡ

   B) ಅತ್ಯಂತ ಸಮತಟ್ಟಾದ ಖಂಡ

   C) ಹಿಮಾವೃತ ಖಂಡ

   D) ದಕ್ಷಿಣ ಗೋಳಾರ್ಧದಲ್ಲಿದೆ

8. ಈ ಕೆಳಗಿನವುಗಳಲ್ಲಿ ಆಸ್ಟ್ರೇಲಿಯಾದಲ್ಲಿ ಬೆಳೆಯದ ಮರ. (ಸಾಧಾರಣ)

   A) ಸಿಡಾರ್

   B) ತಾಳೆ

   C) ಬೀಚ್

   D) ಬಾಳೆ

9. 'ಕುಬ್ಜಹುಲ್ಲು' ಎಂಬುದು ಆಸ್ಟ್ರೇಲಿಯಾದಲ್ಲಿ ಕಂಡುಬರುವ ಈ ಬಗೆಯ ಸಸ್ಯವರ್ಗವಾಗಿದೆ. (ಸಾಧಾರಣ)

   A) ಕುರುಚಲು ಸಸ್ಯವರ್ಗ

   B) ಮರಭೂಮಿ ಸಸ್ಯವರ್ಗ

   C) ಹುಲ್ಲುಗಾವಲು ಸಸ್ಯವರ್ಗ

   D) ಉಷ್ಣವಲಯದ ಸಸ್ಯವರ್ಗ

10. ಸಸ್ತನಿ ಪ್ಲಾಟಿಪಸ್ ಕುರಿತು ತಪ್ಪಾದ ಮಾಹಿತಿ ಇದು. (ಸಾಧಾರಣ)

   A) ಮೊಟ್ಟೆ ಇಡುತ್ತದೆ

   B) ತುಪ್ಪಳವುಳ್ಳ ಚರ್ಮದ ಹೊದಿಕೆ ಹೊಂದಿದೆ

   C) ತನ್ನ ಮರಿಗಳಿಗೆ ಮೊಲೆಯುಣಿಸುತ್ತದೆ

   D) ಇದು ನವಿಲಿನಂತಹ ಸುಂದರವಾದ ಪಕ್ಷಿ

11.ಆಸ್ಟ್ರೇಲಿಯಾದಲ್ಲಿ ಕಂಡು ಬರುವ 'ಡಿಂಗೊ' ಎಂಬುದು ಒಂದು ________.

(ಸಾಧಾರಣ)



A) ವಲ್ಲಬಿ

B) ನೋಣ

C) ಎಕಿಡ್ನಾ

D) ಕಾಡುನಾಯಿ

12.ಆಸ್ಟ್ರೇಲಿಯಾದಲ್ಲಿ ಕೃಷಿ ಕ್ಷೇತ್ರ ಕಡಿಮೆ ಇರಲು ಕಾರಣ. (ಸಾಧಾರಣ)

A) ಮಳೆಯ ಅಭಾವ

B) ಕೃಷಿಯೋಗ್ಯ ಭೂಮಿಯ ಕೊರತೆ

C) ನೀರಾವರಿ ಕೊರತೆ

D) ಮೇಲಿನ ಎಲ್ಲವೂ

13.ಆಸ್ಟ್ರೇಲಿಯಾದ ಪ್ರಮುಖ ವೃತ್ತಿ ಇದಾಗಿದೆ. (ಸಾಧಾರಣ)

A) ವ್ಯವಸಾಯ

B) ಪಶು ಸಂಗೋಪನೆ

C) ಕುಂಬಾರಿಕೆ

D) ಮೇಲಿನ ಯಾವುದೂ ಅಲ್ಲ

14.ಆಸ್ಟ್ರೇಲಿಯಾದ ವಾಯುಗುಣ ಕುರಿತು ಹೇಳಿಕೆಗಳನ್ನು ಪರಿಶೀಲಿಸಿರಿ. (ಕಠಿಣ)

1.ಇಲ್ಲಿಯ ಚಂಡಮಾರುತವನ್ನು 'ವಿಲ್ಲಿವಿಲ್ಲಿಸ್' ಎನ್ನುವರು.

2.ಇಲ್ಲಿ ಮಳೆಯು ಮಾನ್ಸೂನ್ ಪ್ರಕಾರದಂತಿದೆ.

A) 2 ಮಾತ್ರ ಸರಿ

B) 1 ಮತ್ತು 2 ತಪ್ಪಾಗಿವೆ

C) 1 ಮಾತ್ರ ಸರಿ

D) 1 ಮತ್ತು 2 ಸರಿಯಾಗಿವೆ

15.ಆಸ್ಟ್ರೇಲಿಯಾದ ಕೃಷಿಯ ಕುರಿತು ಹೇಳಿಕೆಗಳನ್ನು ಪರಿಶೀಲಿಸಿರಿ. (ಕಠಿಣ)

1. ಇಲ್ಲಿ ಕೃಷಿ ಭೂಮಿ ಕಡಿಮೆ.

2. ಒಟ್ಟು ಜನಸಂಖ್ಯೆಯಲ್ಲಿ 44% ಭಾಗ ಜನರು ಮಾತ್ರ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ.

A) 1 ಮತ್ತು 2 ಸರಿಯಾಗಿವೆ

B) 1 ಮತ್ತು 2 ತಪ್ಪಾಗಿವೆ

C) 1 ಮಾತ್ರ ಸರಿ

D) 2 ಮಾತ್ರ ಸರಿ

16. ಆಸ್ಟ್ರೇಲಿಯಾವನ್ನು "ಅಪರೂಪದ ಪ್ರಾಣಿ ಪಕ್ಷಿಗಳ ನಾಡು" ಎನ್ನಲು ಕಾರಣ. (ಸಾಧಾರಣ)

A) ಜಗತ್ತಿನ ಎಲ್ಲಾ ಪಕ್ಷಿಗಳು ಇಲ್ಲಿವೆ

B) ಸುಮಾರು 60% ರಷ್ಟು ಇಲ್ಲಿನ ಪ್ರಾಣಿ-ಪಕ್ಷಿಗಳು ಪ್ರಪಂಚದಲ್ಲೆಲ್ಲೂ ಕಾಣುವುದಿಲ್ಲ

C) ಜಗತ್ತಿನ ಎಲ್ಲಾ ಪ್ರಾಣಿಗಳು ಇಲ್ಲಿವೆ

D) ಮೇಲಿನ ಎಲ್ಲವೂ ತಪ್ಪಾಗಿವೆ

17. ಆಸ್ಟ್ರೇಲಿಯಾದಲ್ಲಿ ಚಿನ್ನ ದೊರೆಯುವ ಪ್ರದೇಶ. (ಸಾಧಾರಣ)

A) ನ್ಯೂಸೌತ್ ವೇಲ್ಸ್

B) ವಿಕ್ಟೋರಿಯಾ

C) ಕ್ವೀನ್ಸ್‌ಲ್ಯಾಂಡ್

D) ಮೇಲಿನ ಎಲ್ಲವೂ



18. ಆಸ್ಟ್ರೇಲಿಯಾದ ನ್ಯೂಸೌತ್ ವೇಲ್ಸ್ : ತಾಮ್ರ :: ಕಾರ್ಪೆಂಟೇರಿಯ ಕೊಲ್ಲಿ : _______. (ಸುಲಭ)

A) ಮ್ಯಾಂಗನೀಸ್

B) ಚಿನ್ನ

C) ಯುರೇನಿಯಂ

D) ಕಬ್ಬಿಣ

19. ಆಸ್ಟ್ರೇಲಿಯಾದ ಜನಸಂಖ್ಯೆ ಕುರಿತ ಹೇಳಿಕೆಗಳನ್ನು ಪರಿಶೀಲಿಸಿರಿ. (ಸುಲಭ)

1. ನ್ಯೂಸೌತ್ ವೇಲ್ಸ್ ಅತಿ ಜನಭರಿತವಾದ ಪ್ರಾಂತ್ಯವಾಗಿದೆ.

2. ಉತ್ತರ ಪ್ರಾಂತ್ಯವು ಅತ್ಯಂತ ವಿರಳ ಜನರಿಂದ ಕೂಡಿದೆ.

A) 1 ಮಾತ್ರ ಸರಿ

B) 1 ಮತ್ತು 2 ತಪ್ಪಾಗಿವೆ

C) 1 ಮತ್ತು 2 ಸರಿಯಾಗಿವೆ

D) 2 ಮಾತ್ರ ಸರಿ

20. ಆಸ್ಟ್ರೇಲಿಯಾದಲ್ಲಿ ಗ್ರಾಮೀಣ ಜನಸಂಖ್ಯೆಗಿಂತ ನಗರ ಜನಸಂಖ್ಯೆಯ ಪ್ರಮಾಣ __________. (ಸಾಧಾರಣ)

A) ಕಡಿಮೆ

B) ಸಮ

C) ಹೆಚ್ಚು

D) ಮೇಲಿನ ಯಾವುದು ಅಲ್ಲ

21. ವಿಸ್ತೀರ್ಣ ಮತ್ತು ಜನಸಂಖ್ಯೆಗಳೆರಡರಲ್ಲಿಯೂ ಪ್ರಪಂಚದಲ್ಲಿಯೇ ಚಿಕ್ಕ ಭೂಖಂಡವಿದು. (ಸುಲಭ)

A) ಆಸ್ಟ್ರೇಲಿಯಾ

B) ಆಫ್ರಿಕಾ

C) ಅಂಟಾರ್ಟಿಕಾ

D) ಉತ್ತರ ಅಮೇರಿಕಾ

22. ಹವಳದ ದಿಣ್ಣೆಗಳು (ಗ್ರೇಟ್ ಬ್ಯಾರಿಯರ್ ರೀಫ್) ಈ ಭೂಖಂಡದಲ್ಲಿ ಹಬ್ಬಿವೆ. (ಸುಲಭ)

A) ಆಫ್ರಿಕಾ

B) ಅಮೇರಿಕ

C) ಆಸ್ಟ್ರೇಲಿಯಾ

D) ಮೇಲಿನ ಯಾವುದೂ ಅಲ್ಲ

**ಆ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

23. ಆಸ್ಟ್ರೇಲಿಯಾದ ಪ್ರಮುಖ ಕೈಗಾರಿಕೆಗಳನ್ನು ಪಟ್ಟಿ ಮಾಡಿರಿ. (ಸಾಧಾರಣ)
24. ಆಸ್ಟ್ರೇಲಿಯಾದ ಪ್ರಾಕೃತಿಕ ವಿಭಾಗಗಳನ್ನು ಪಟ್ಟಿ ಮಾಡಿರಿ. (ಸಾಧಾರಣ)
25. ಆಸ್ಟ್ರೇಲಿಯಾದ ಸ್ಥಾನವನ್ನು ತಿಳಿಸಿರಿ. (ಸಾಧಾರಣ)
26. ಹೊಸ ಭೂಖಂಡ ಎಂದರೇನು? (ಸುಲಭ)
27. ಆಸ್ಟ್ರೇಲಿಯಾವನ್ನು ಸಮತಟ್ಟಾದ ಭೂಖಂಡ ಎಂದು ಏಕೆ ಕರೆಯುತ್ತಾರೆ? (ಸಾಧಾರಣ)

| ಅಧ್ಯಾಯ – 27 | ಅಂಟಾರ್ಟಿಕಾ |
| --- | --- |

T8P6J6

| ಕ.ಫ.ಸಂ | ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆಗಳು |
| --- | --- | --- |
| 22 | ಆಸ್ಟ್ರೇಲಿಯಾ, ಅಂಟಾರ್ಟಿಕಾ ಖಂಡಗಳ ಮೇಲ್ಮೈ ಲಕ್ಷಣಗಳು, ವಿಶಿಷ್ಟ ವಾಯುಗುಣ, ಸಸ್ಯ ಮತ್ತು ಪ್ರಾಣಿ ವರ್ಗಗಳ ನಡುವಿನ ಅಂತರ್ ಸಂಬಂಧವನ್ನು ವಿಶ್ಲೇಷಿಸುವರು | 1,2,3,4,5,6,7,11,12,13,14 15,17,18,19,20,21,22,24, 25,29. |
| 24 | 'ಅಂಟಾರ್ಟಿಕಾ ಒಪ್ಪಂದ'ದ ಪ್ರಾಮುಖ್ಯತೆ ಮತ್ತು ಅಲ್ಲಿನ ಭಾರತದ ಸಂಶೋಧನಾ ಕೇಂದ್ರಗಳ ಕಾರ್ಯಗಳನ್ನು ಅರ್ಥೈಸುವರು | 8,9,10,16,23,26,27,28. |

| ಕ್ರ.ಸಂ | ಕ್ಲಿಷ್ಟತೆಯ ಮಟ್ಟ | ಒಟ್ಟು ಪ್ರಶ್ನೆಗಳ ಸಂಖ್ಯೆ |
| --- | --- | --- |
| 1 | ಸುಲಭ | 4 |
| 2 | ಸಾಧಾರಣ | 22 |
| 3 | ಕಠಿಣ | 3 |
| ಒಟ್ಟು | | 29 |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿರಿ.**

**1. ಅಂಟಾರ್ಟಿಕ ಖಂಡಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳಲ್ಲಿ ತಪ್ಪಾದ ಹೇಳಿಕೆಯಿದು. (ಸಾಧಾರಣ)**

A) ಇದರ ಭೂಮೇಲ್ಮೈ ಲಕ್ಷಣಗಳು ಬಹುಭಾಗ ಮಂಜುಗಡ್ಡೆ ಹಾಳೆಯಿಂದ ಮುಚ್ಚಿ ಹೋಗಿವೆ.

B) ಈ ಪದರು ಸುಮಾರು 2200 ಮೀಟರ್‌ಗಳಿಗಿಂತ ಹೆಚ್ಚು ಮಂದವಾಗಿದೆ.

C) ಈ ಖಂಡ ಎಲ್ಲಡೆಯೂ ಶ್ವೇತ ವರ್ಣಮಯವಾಗಿದೆ.

D) ಮೇಲಿನ ಎಲ್ಲವೂ ಸರಿ.

**2. ಅಂಟಾರ್ಟಿಕಾ ಖಂಡದಲ್ಲಿ ಜೀವಿಗಳ ಪೋಷಣೆ ಕಷ್ಟ. ಕಾರಣ (ಸಾಧಾರಣ)**

A) ಸಂಪೂರ್ಣ ಹಿಮಾವೃತವಾಗಿದೆ.

B) ಪ್ರತಿಕೂಲವಾದ ಶೀತ ಹವಾಮಾನದಿಂದ ಕೂಡಿದೆ.

C) ವರ್ಷದಲ್ಲಿ ಆರು ತಿಂಗಳು ಬೆಳಕು ಹಾಗೂ ಆರು ತಿಂಗಳು ಕತ್ತಲಿನಿಂದ ಕೂಡಿದೆ.

D) ಮೇಲಿನ ಎಲ್ಲವೂ ಸರಿ.

**3. ಅಂಟಾರ್ಟಿಕ ಖಂಡದ ಪ್ರತಿಕೂಲ ವಾಯುಗುಣವನ್ನು ನಿಭಾಯಿಸದ ಪ್ರಾಣಿ ಇದು. (ಸಾಧಾರಣ)**

A) ಆನೆ

B) ಪೆಂಗ್ವಿನ್

C) ತಿಮಿಂಗಲು

D) ಸೀಲ್

**4. 'ಸೀಲ್' ಪ್ರಾಣಿ ಅಳಿವಿನಂಚಿನಲ್ಲಿರುವುದಕ್ಕೆ ಕಾರಣ (ಸಾಧಾರಣ)**



A) ಸಂಪೂರ್ಣ ಹಿಮಾವೃತವಾಗಿದೆ.

B) ಪ್ರತಿಕೂಲವಾದ ಶೀತ ಹವಾಮಾನದಿಂದ ಕೂಡಿದೆ.

C) ವರ್ಷದಲ್ಲಿ ಆರು ತಿಂಗಳು ಬೆಳಕು ಹಾಗೂ ಆರು ತಿಂಗಳು ಕತ್ತಲಿನಿಂದ ಕೂಡಿದೆ.

D) ನಿರಂತರ ಬೇಟೆಯಿಂದಾಗಿ.

**5. 'ವೋಸ್ಟಾಕ್' ಸ್ಥಳಕ್ಕೆ ಸಂಬಂಧಿಸಿದಂತೆ ತಪ್ಪಾದ ಮಾಹಿತಿ ಯಾವುದು? (ಕಠಿಣ)**

A) ಇದು ದಕ್ಷಿಣ ಧ್ರುವಕ್ಕೆ ಸಮೀಪದಲ್ಲಿದೆ.

B) ಇದು ಉತ್ತರ ಧ್ರುವಕ್ಕೆ ಸಮೀಪದಲ್ಲಿದೆ.

C) ಪ್ರಪಂಚದಲ್ಲೇ ಅತ್ಯಂತ ಕಡಿಮೆ ಉಷ್ಣಾಂಶ ದಾಖಲಿಸುವ ಸ್ಥಳ.

D) ಇದು ಅಂಟಾರ್ಟಿಕಾ ಖಂಡದಲ್ಲಿದೆ.

**6. ಪೆಂಗ್ವಿನ್‌ಗಳಿಗೆ ಸಂಬಂಧಿಸಿದಂತೆ ತಪ್ಪಾದ ಮಾಹಿತಿ ಇದು. (ಸಾಧಾರಣ)**

A) ಅಂಟಾರ್ಟಿಕ ಖಂಡಕ್ಕೆ ಆಗಮಿಸುವ ಹಡಗುಗಳಿಗೆ ಮೊದಲು ಸ್ವಾಗತ ನೀಡುವವು ಆದಿಲೆ ಪೆಂಗ್ವಿನ್‌ಗಳು.



B) ಸಮುದ್ರ ತೀರದಲ್ಲಿ ಅಸಂಖ್ಯಾತ ಪೆಂಗ್ವಿನ್‌ಗಳು ವಾಸಿಸುತ್ತವೆ.

C) 'ರೂಕರಿ' ಇದು ಪೆಂಗ್ವಿನ್‌ಗಳು ಸಂತಾನಾಭಿವೃದ್ಧಿಗಾಗಿ ನಿರ್ಮಿಸಿಕೊಂಡ

ಕಲ್ಲು ಪೊಟರೆಗಳು.

D) ಪೆಂಗ್ವಿನ್‌ಗಳು ಅತ್ಯಂತ ಜೋರಾಗಿ ಹಾರಬಲ್ಲ ಪಕ್ಷಿಗಳು.

**7. ಅಂಟಾರ್ಟಿಕ ಖಂಡದ ಪ್ರಮುಖ ಅಂಶಗಳಲ್ಲಿ ತಪ್ಪಾದ ಅಂಶವಿದು. (ಸಾಧಾರಣ)**

A) ಅಮೇರಿಕಾದ ನೌಕಾಪಡೆಯ ಮುಖ್ಯಸ್ಥ ಚಾರ್ಲ್ಸ್ ವಿಲ್ಸ್ ಈ ಖಂಡವನ್ನು ಸಂಶೋಧಿಸಿದನು.

B) ಬ್ರಿಟನ್ನಿನ ಜೇಮ್ಸ್ ಕ್ಲಾರ್ಕ್ ರಾಸ್ ಈ ಖಂಡದ ರಾಸ್ ಸಮುದ್ರವನ್ನು ಪತ್ತೆ ಹಚ್ಚಿದನು.

C) ಇಂಗ್ಲೆಂಡಿನ ರಾಬರ್ಟ್ ಫಾಲ್ಕನ್ ಸ್ಕಾಟ್ ರಾಸ್ ಸಮುದ್ರವನ್ನು ದಾಟುವುದರಲ್ಲಿ ಯಶಸ್ವಿಯಾದನು.

D) ಮೇಲಿನ ಎಲ್ಲವೂ ಸರಿ.

**8. ಅಂಟಾರ್ಟಿಕ ಖಂಡವನ್ನು ಕೇವಲ ವೈಜ್ಞಾನಿಕ ಸಂಶೋಧನೆಗಾಗಿ ಇರಿಸಿಕೊಳ್ಳಲು ಮಾಡಿಕೊಂಡ ಒಪ್ಪಂದಕ್ಕೆ ಸಹಿ ಹಾಕದ ರಾಷ್ಟ್ರ. (ಸಾಧಾರಣ)**

A) ಅರ್ಜೆಂಟೀನಾ

B) ಭಾರತ

C) ನಾರ್ವೆ

D) ಅಮೇರಿಕಾ

**9. ಅಂಟಾರ್ಟಿಕಕ್ಕೆ ಸಂಬಂಧಿಸಿದಂತೆ ಭಾರತದ ಅಂಶಗಳನ್ನು ಪರಿಶೀಲಿಸಿರಿ. (ಕಠಿಣ)**

A) ಅಂಟಾರ್ಟಿಕದಲ್ಲಿ ಭಾರತ ಸ್ಥಾಪಿಸಿದ ಮೊದಲ ಸಂಶೋಧನಾ ಕೇಂದ್ರ 'ದಕ್ಷಿಣ ಗಂಗೋತ್ರಿ'.

B) ಅಂಟಾರ್ಟಿಕದಲ್ಲಿ ಭಾರತ ಸ್ಥಾಪಿಸಿದ ದ್ವಿತೀಯ ಸಂಶೋಧನಾ ಕೇಂದ್ರ 'ಮೈತ್ರಿ'.

C) 'ಭಾರತಿ' ಎಂಬುದು ಭಾರತ ಸ್ಥಾಪಿಸಿದ ತೃತೀಯ ಸಂಶೋಧನಾ ಕೇಂದ್ರ.

D) ಮೇಲಿನ ಎಲ್ಲವೂ ಸರಿ.

**10. ವಾಷಿಂಗ್ಟನ್ ಡಿ.ಸಿ.ಯಲ್ಲಿ ಆದ ಅಂಟಾರ್ಟಿಕ ಒಪ್ಪಂದದ ಉದ್ದೇಶ. (ಸಾಧಾರಣ)**

A) ಈ ಖಂಡ ವೈಜ್ಞಾನಿಕ ಸಂಶೋಧನೆಗೆ ಮಾತ್ರ ಮೀಸಲು.

B) ಸಂಶೋಧನೆಗೆ ಬರುವವರು ಹೊರಜೀವಿ ಪ್ರಭೇದಗಳನ್ನು ತರಬಾರದು.

C) ಪರಮಾಣು ಶಸ್ತ್ರಾಸ್ತ್ರಗಳನ್ನು ಪರೀಕ್ಷಿಸಬಾರದು.

D) ಮೇಲಿನ ಎಲ್ಲವೂ ಸರಿ.

**11. ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿರಿ. (ಕಠಿಣ)**

1. ಅಂಟಾರ್ಟಿಕ ಖಂಡವನ್ನು ಸುತ್ತಲೂ ಜಲರಾಶಿಗಳು ಆವರಿಸಿವೆ.
2. ಇದು ಪ್ರತ್ಯೇಕ ಜಲರಾಶಿಯಲ್ಲ. ಹಿಂದೂ ಮಹಾಸಾಗರ ಹಾಗೂ ಪೆಸಿಫಿಕ್ ಮಹಾಸಾಗರಗಳು ಒಂದುಗೂಡುವ ಭಾಗವಾಗಿದೆ.

A) 1 ಮತ್ತು 2 ಸರಿಯಾಗಿವೆ

B) 1 ಮತ್ತು 2 ತಪ್ಪಾಗಿವೆ

C) 1 ಮಾತ್ರ ಸರಿ

D) 2 ಮಾತ್ರ ಸರಿ

**12. ಶಿಕ್ಷಕರು  ಅಂಟಾರ್ಟಿಕಾ ಖಂಡದ ಕುರಿತು ಪಾಠ ಮಾಡುವಾಗ  ಈ ಖಂಡವನ್ನು ಹೀಗೆಂದು ಕರೆಯುವರು ಎಂದರು. (ಸಾಧಾರಣ )**



A) ಶ್ವೇತಖಂಡ

B) ಹಿಮದ ಮರುಭೂಮಿ

C) ಶೀತಲಖಂಡ

D) ಮೇಲಿನ ಎಲ್ಲವೂ

**13. ಪೂರ್ವ ಅಂಟಾರ್ಟಿಕವನ್ನು 'ಗ್ರೇಟರ್ ಅಂಟಾರ್ಟಿಕ' ಎನ್ನಲು ಕಾರಣ. (ಸಾಧಾರಣ)**

A) ಅಟ್ಲಾಂಟಿಕ್ ಮತ್ತು ಹಿಂದೂ ಮಹಾಸಾಗರಗಳ ಕಡೆಗೆ ಮುಖವಾಗಿದೆ.

B) ಅಟ್ಲಾಂಟಿಕ್ ಮತ್ತು ಹಿಂದೂ ಮಹಾಸಾಗರಗಳು ಈ ಖಂಡದ ಅರ್ಧಕ್ಕೂ ಹೆಚ್ಚಿನ ಭಾಗವನ್ನು ಆವರಿಸಿವೆ.

C) ಜನವಸತಿ ಕಡಿಮೆ ಇರುವ ಕಾರಣ.

D) A ಮತ್ತು B ಎರಡೂ ಸರಿ.

**14. ಅಂಟಾರ್ಟಿಕ ಖಂಡದಲ್ಲಿ ಜೀವಿಗಳ ಪೋಷಣೆ ಕಷ್ಟ. ಕಾರಣ ಪರಿಶೀಲಿಸಿರಿ. (ಕಠಿಣ)**

1. ಈ ಖಂಡವು ಹಿಮಾವೃತವಾಗಿದ್ದು, ಪ್ರತಿಕೂಲವಾದ ಶೀತ ಹವಾಮಾನದಿಂದ ಕೂಡಿದೆ.
2. ವರ್ಷದಲ್ಲಿ 6 ತಿಂಗಳು ಕತ್ತಲು ಮತ್ತು 6 ತಿಂಗಳು ಬೆಳಕಿನಿಂದ ಕೂಡಿದೆ.

A) 1 ಮಾತ್ರ ಸರಿ

B) 1 ಮತ್ತು 2 ತಪ್ಪಾಗಿವೆ

C) 1 ಮತ್ತು 2 ಸರಿಯಾಗಿವೆ

D) 2 ಮಾತ್ರ ಸರಿ

**15. ಶಿಕ್ಷಕರು ಪಾಠ ಮಾಡುವಾಗ ನೀರು ಅತ್ಯಮೂಲ್ಯ .ಪ್ರಪಂಚದ 90% ಭಾಗದ ಸಿಹಿ ನೀರು ಈ ಖಂಡದಲ್ಲಿ ಮಂಜುಗಡ್ಡೆಯ ರೂಪದಲ್ಲಿದೆ ಎಂದರು. (ಸಾಧಾರಣ )**




A) ಏಷ್ಯಾ

B) ಯುರೋಪ್

C) ಅಂಟಾರ್ಟಿಕ

D) ಆಸ್ಟ್ರೇಲಿಯಾ

**16. ರಾಜು ತನ್ನ ಸ್ನೇಹಿತನಿಗೆ ಈ ಖಂಡ ಜನವಸತಿಗೆ ಯೋಗ್ಯವಾಗಿಲ್ಲ, ಬದಲಾಗಿ ಇದು ಕೇವಲ ವೈಜ್ಞಾನಿಕ ಸಂಶೋಧನೆಗಾಗಿ ಮೀಸಲಿರಿಸಿದ ಖಂಡ ಎಂದನು. (ಸಾಧಾರಣ)**



A) ಏಷ್ಯಾ

B) ಅಂಟಾರ್ಟಿಕ

C) ಯುರೋಪ್

D) ಉತ್ತರ ಅಮೇರಿಕಾ

**17. ಗುರುಗಳು ಅಂಟಾರ್ಟಿಕದಲ್ಲಿ ಜೀವಿಗಳ ಪೋಷಣೆ ಬಲು ಕಷ್ಟ ,ಇಲ್ಲಿನ ಪ್ರಮುಖ ಸಸ್ಯಗಳು ಇವಾಗಿವೆ ಎಂದರು (ಸಾಧಾರಣ)**

A) ಪಾಚಿ

B) ಶಿಲಾವಲ್ಕ

C) ಹಾವಸೆ

D) ಮೇಲಿನ ಎಲ್ಲವೂ

**18. ಅಂಟಾರ್ಟಿಕದಲ್ಲಿನ ಪ್ರತಿಕೂಲ ವಾಯುಗುಣವನ್ನು ನಿಭಾಯಿಸಬಲ್ಲ ಈ ಪ್ರಾಣಿಗಳು ಮಾತ್ರ ಜೀವಿಸುತ್ತವೆ ಎಂದು ವಿದ್ಯಾರ್ಥಿಗಳು ವರ್ಗಕೋಣೆಯಲ್ಲಿ ಚರ್ಚಿಸುತ್ತಿದ್ದರು (ಸಾಧಾರಣ)**

A) ಪೆಂಗ್ವಿನ್

B) ತಿಮಿಂಗಲು

C) ಸೀಲ್ ಮತ್ತು ಕ್ರಿಲ್ ಮೀನು

D) ಮೇಲಿನ ಎಲ್ಲವೂ

**19. ಪ್ರಪಂಚದ 5ನೇ ದೊಡ್ಡ ಭೂಖಂಡ. (ಸುಲಭ)**

A) ಆಸ್ಟ್ರೇಲಿಯಾ

B) ಆಫ್ರಿಕಾ

C) ಅಂಟಾರ್ಟಿಕಾ

D) ಉತ್ತರ ಅಮೇರಿಕಾ

**ಆ. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

20. ಅಂಟಾರ್ಟಿಕ ಖಂಡಕ್ಕೆ ಇರುವ ಸಮೀಪದ ಭೂಭಾಗ __________
21. ಅಂಟಾರ್ಟಿಕ ಖಂಡವನ್ನು ಶೋಧಿಸಿದವರು __________
22. ದಕ್ಷಿಣ ಕಾಂತ ಧ್ರುವ ಕಂಡುಹಿಡಿದವನು __________
23. ಅಂಟಾರ್ಟಿಕದಲ್ಲಿ ಭಾರತೀಯ ತಂಡ ಸ್ಥಾಪಿಸಿದ ಮೊದಲ ಸಂಶೋಧನಾ ಕೇಂದ್ರ __________

**ಇ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

24. ಅಂಟಾರ್ಟಿಕಾ ಖಂಡದ ಸಸ್ಯವರ್ಗವನ್ನು ಪಟ್ಟಿ ಮಾಡಿರಿ.
25. ಅಂಟಾರ್ಟಿಕ ಖಂಡದ ವಿಸ್ತೀರ್ಣ ತಿಳಿಸಿರಿ.
26. ಅಂಟಾರ್ಟಿಕಾ ಖಂಡದ ಒಪ್ಪಂದದ ಉದ್ದೇಶವೇನು?
27. ಅಂಟಾರ್ಟಿಕದಲ್ಲಿರುವ ಭಾರತದ ಸಂಶೋಧನಾ ಕೇಂದ್ರಗಳನ್ನು ಪಟ್ಟಿ ಮಾಡಿರಿ.
28. ಅಂಟಾರ್ಟಿಕ ಒಪ್ಪಂದದ 5 ಸದಸ್ಯ ರಾಷ್ಟ್ರಗಳನ್ನು ಹೆಸರಿಸಿರಿ.
29. ಅಂಟಾರ್ಟಿಕಾ ಖಂಡಕ್ಕೆ ಇರುವ ಬೇರೆ ಬೇರೆ ಹೆಸರುಗಳನ್ನು ಪಟ್ಟಿ ಮಾಡಿರಿ.

*****

# ಮಾದರಿ ಉತ್ತರಗಳು

## ಅಧ್ಯಾಯ-1 ಜಗತ್ತಿನ ಪ್ರಮುಖ ಘಟನೆಗಳು

ಅ)

1. A. ಪೋಪರು
2. B. ಖುರಾನ್
3. B. ತೈಮೂರ್
4. D. ಟರ್ಕರು
5. A. ಕುಬ್ಲಾಯ್ ಖಾನ್
6. B. ಜೆರೂಸಲಮ್
7. A. ಯೇಸುಕ್ರಿಸ್ತ
8. B. ಮಹಮ್ಮದ್ ಪೈಗಂಬರ್
9. C. ಬೈಬಲ್
10. D. ಮೇರಿ

ಆ)

11. ಯೇಸುಕ್ರಿಸ್ತ
12. ರೋಮನ್ ಕ್ಯಾಥೋಲಿಕ್ ಚರ್ಚ್
13. ಸಂದೇಶ
14. ಖಲೀಫ
15. ರೋಮ್
16. ಹಿಜಿರಾ
17. ಶಿಲುಬೆ
18. ಮೆಕ್ಕಾ

ಇ)

19. ಕ್ರೈಸ್ತ ಧರ್ಮ

20. ರಕ್ಷಕ

21. ಮೇರಿ

22. ಶಾಂತಿ/ಶರಣಾಗತಿ

23. ಅರಬ್ಬರು

ಈ)

24. ರೋಮನ್ ಸಾಮ್ರಾಜ್ಯ

25. 12 ಜನ

26. ಖದೀಜಾ

27. ಪರ್ಷಿಯನ್ ಭಾಷೆ

28. ಅಬ್ದುಲ್ಲಾ

29. ಮಧ್ಯೆ ಏಷ್ಯಾದ ತುರ್ಕಿಸ್ತಾನ್ (ತುರ್ಕ್ ಮೆನಿಸ್ತಾನ)

30. ಹಿರಾ

31. ಮಧ್ಯ ಏಷ್ಯಾ

32. ಪಶು ಪಾಲನೆ

33. ಗತಕಾಲದ ಸಂಗತಿಗಳನ್ನು ಕ್ರಮಬದ್ಧವಾಗಿ ತಿಳಿಸುವುದೇ ಇತಿಹಾಸ.

34. ತುರ್ಕಿಸ್ತಾನ

ಉ)

35. . ಯೇಸುವಿನ ಬೋಧನೆಗಳು

- ನಾವೆಲ್ಲ ದೇವರ ಮಕ್ಕಳು; ನಾವೆಲ್ಲ ಸಹೋದರರು ಎಂದು ಯೇಸು ಸಾರಿ ಹೇಳಿದರು.
- ಪಾಪಗಳನ್ನು ಮಾಡದೆ ಶುದ್ಧ ಜೀವನ ನಡೆಸಬೇಕೆಂದು ಬೋಧಿಸಿದರು.
- " ನಿಮ್ಮ ನೆರೆಯವರನ್ನು ನಿಮ್ಮಂತೆ ಪ್ರೀತಿಸಿ".
- ಮಾನವ ಸೇವೆಯೇ ದೇವರ ಸೇವೆ ಎಂದರು.

36. ಇಸ್ಲಾಮಿನ ಬೋಧನೆಗಳು

- ದೇವನೊಬ್ಬನೆ, ಏಕದೇವತಾರಾಧನೆ ಇಸ್ಲಾಮಿನ ಮೂಲಭೂತ ತತ್ವ.
- ಪ್ರವಾದಿ ಮಹಮ್ಮದ್ ದೇವರ ಪ್ರವಾದಿ ಅಥವಾ ಸಂದೇಶವಾಹಕರು.
- ದೇವನು ನಿರಾಕಾರ ಸ್ವರೂಪಿ ಎಂಬುದು ಇಸ್ಲಾಮಿನ ವಿಶ್ವಾಸ.

- ಪ್ರತಿಯೊಬ್ಬ ಮುಸಲ್ಮಾನರು ದೇವರ ಸೇವಕನಾಗಬೇಕು,ಪ್ರಾಮಾಣಿಕನಾಗಿರಬೇಕು.

37. ಪ್ಯಾಲೆಸ್ತೈನ್ ಸಟೋಮನ್ ಟರ್ಕರ ವಶದಲ್ಲಿದ್ದರೂ ಕ್ರೈಸ್ತರು ಬಹುಕಾಲದಿಂದ ಅಲ್ಲಿಗೆ ಯಾತ್ರೆಗಾಗಿ ಹೋಗಿ ಬರುತ್ತಿದ್ದರು. ಟರ್ಕರು ಜೆರೂಸಲಮ್ ಯಾತ್ರಿಗಳ ಮೇಲೆ ನಿಷೇಧ ಹೇರಿದ್ದು ಈ ಯುದ್ಧಗಳಿಗೆ ಮೂಲ ಕಾರಣವಾಗಿತ್ತು.

38. ಧರ್ಮ ಯುದ್ಧಗಳ ಪರಿಣಾಮಗಳು.

- ಒಟ್ಟಿನಲ್ಲಿ ಪವಿತ್ರ ಭೂಮಿಯನ್ನು ವಶಪಡಿಸಿಕೊಳ್ಳುವುದರಲ್ಲಿ ಕ್ರೈಸ್ತರು ಈ ಫಲರಾದರು.
- ಯುರೋಪ್ ಮತ್ತು ಏಷ್ಯಾದೊಳಗಿನ ಸಂಪರ್ಕ ಹಾಗೂ ವ್ಯಾಪಾರ ಸಂಬಂಧಗಳು ವೃದ್ಧಿಗೊಂಡವು.

39. ಯಹೂದಿಗಳು, ಕ್ರೈಸ್ತರು ಮತ್ತು ಮುಸಲ್ಮಾನರಿಗೆ ಪ್ಯಾಲೆಸ್ತೈನ ಹಾಗೂ ಅದರ ರಾಜಧಾನಿ ಜೆರೂಸಲಮ್ ಪವಿತ್ರ ಭೂಮಿಯಾಗಿತ್ತು. ಇದನ್ನು ವಶಪಡಿಸಿಕೊಳ್ಳುವುದಕ್ಕಾಗಿ ಕ್ರೈಸ್ತರು ಮತ್ತು ಮುಸಲ್ಮಾನರು ಒಂಭತ್ತು ಬಾರಿ ಯುದ್ಧಗೈದರು. ಈ ಯುದ್ಧಗಳನ್ನು ಇತಿಹಾಸದಲ್ಲಿ ರಿಲಿಜಸ್ ಯುದ್ಧಗಳು (ಕ್ರೂಸೇಡ್ಸ್) ಎನ್ನುತ್ತಾರೆ.

ಊ.

40. ಚಂಗಿಸ್ ಖಾನ್:

- ಮಂಗೋಲರನ್ನು ಚಂಗಿಸ್ ಖಾನ್ ಒಂದುಗೂಡಿಸಿ ಏಷ್ಯದಲ್ಲಿ ವಿಶಾಲವಾದ ಸಾಮ್ರಾಜ್ಯವನ್ನು ಕಟ್ಟಿದನು.
- ಆದರೆ ಈತನು ಮಾಡಿರುವ ಅಮಾನುಷ ಕೃತ್ಯಗಳು ಇತಿಹಾಸವನ್ನು ಓದುವವರ ಮೈ ನಡುಗಿಸುವಂತಹವು.

41. ಅಟೋಮನ್ ಟರ್ಕರು

- ಅಲೆಮಾರಿ ಜನಾಂಗಕ್ಕೆ ಸೇರಿದ ಟರ್ಕರ ಮೂಲಸ್ಥಾನ ಮಧ್ಯ ಏಷ್ಯದ ತುರ್ಕಿಸ್ತಾನ (ಈಗಿನ ತುರ್ಕ್‌ಮೆನಿಸ್ತಾನ).
- ಇವರು ಇಸ್ಲಾಂ ಅನುಯಾಯಿಗಳಾದರು.
- ಕುಬ್ಲಾಯ್ ಖಾನನ ಸಾಮ್ರಾಜ್ಯ ಅವನತಿ ಕಂಡ ಬಳಿಕ, ಟರ್ಕರು ಸುತ್ತಮುತ್ತಲಿನ ವಿಶಾಲವಾದ ಪ್ರದೇಶಗಳನ್ನು ಆಕ್ರಮಿಸಿಕೊಂಡರು.

- . 'ಅಟೋಮನ್' ಎಂಬ ಮಿಲಿಟರಿ ರಾಜ್ಯವನ್ನು ಕಟ್ಟಿದರು.
- ಭಾರತದ ಮೇಲೆ ಆಕ್ರಮಣ ನಡೆಸಿದರು.

42.ತೈಮೂರ್:

- ಕಾಲಗತಿಯಲ್ಲಿ ಅವನತಿ ಕಂಡ ಕುಬ್ಲಾಯ್ ಖಾನನ ಸಾಮ್ರಾಜ್ಯವನ್ನು ತೈಮೂರ್ ಮತ್ತೊಮ್ಮೆ ಕಟ್ಟಿದನು.
- ಪರ್ಷಿಯ, ಇರಾಕ್, ಸಿರಿಯ, ಅಫ್‌ಘಾನಿಸ್ತಾನ ಹಾಗೂ ರಷ್ಯದ ಅನೇಕ ಭಾಗಗಳನ್ನು ಆಕ್ರಮಣ ಮಾಡಿ, ವಿಶಾಲ ಸಾಮ್ರಾಜ್ಯವನ್ನು ಕಟ್ಟಿದ.
- ಭಾರತವನ್ನು ಆಕ್ರಮಣ ಮಾಡಿ ಮೊಗಲ್ (ಮಂಗೋಲ್)ರಾಜ್ಯವನ್ನು ಸ್ಥಾಪಿಸಿದ,
- ಬಾಬರ್ ಇದೇ ಸಂತತಿಯವನು.

43. ಕುಬ್ಲಾಯ್ ಖಾನ್:

- ಕುಬ್ಲಾಯ್ ಖಾನ್ ಚಂಗಿಸ್ ಖಾನನ ಮೊಮ್ಮಗ.
- ಚೀನಾ ದೇಶದ ಚಕ್ರವರ್ತಿಯಾಗಿ ಕುಬ್ಲಾಯ್ ಖಾನ್ ಮೆರೆದನು.
- ಉತ್ತಮ ಆಡಳಿತಗಾರ, ದಯಾಳು ಸಾಮ್ರಾಟ.
- ಇವನು ಅನೇಕ ಜನಪರ ಕಾಮಗಾರಿಗಳನ್ನು ಕೈಗೊಂಡನು.
- ಕ್ಷಾಮಗಳು ತಲೆದೋರಿದಾಗ ಹಸಿದವರಿಗೆ ಅನ್ನದಾನ ಮಾಡಿದನು.
- ಕಲೆ ಮತ್ತು ವಿದ್ವಾಂಸರಿಗೆ ಪ್ರೋತ್ಸಾಹ ನೀಡಿದನು.

**ಋ.**

44.ಯೇಸುಕ್ರಿಸ್ತನ ಜೀವನ:

- ಎಯೇಸು ಬೆತ್ರಹೆಂ (ಇಸ್ರೇಲ್) ಎಂಬಲ್ಲಿ ಮೇರಿ ಎಂಬಾಕೆಯ ಮಗನಾಗಿ ಜನಿಸಿದರು.
- ಅವರಿಗೆ ಸುಮಾರು ಮೂವತ್ತು ವರ್ಷವಾದಾಗ ಮನೆಯಿಂದ ಹೊರಟು ಬಡವರು ಮತ್ತು ದೀನರ ಸೇವೆ ಮಾಡತೊಡಗಿದರು.
- ಕರುಣೆಯೇ ಧರ್ಮದ ಮೂಲವೆಂದು, ಕತೆಗಳ ಮೂಲಕ ಉದಾಹರಣೆ ನೀಡಿ ಉಪದೇಶ ಮಾಡುತ್ತಿದ್ದರು
- .ಯೇಸುವಿನ ಅನುಯಾಯಿಗಳು ಹೆಚ್ಚಿದಂತೆ ಅವರ ವಿರೋಧಿಗಳ ಸಂಖ್ಯೆಯೂ ಹೆಚ್ಚಿತು.
- ಧಾರ್ಮಿಕ ಮುಂದಾಳುಗಳು ಯೇಸುವನ್ನು ವಿರೋಧಿಸಿದರು.

- ಯೇಸು ರಾಜದ್ರೋಹಿಯೆಂಬ ತಪ್ಪು ಹೊರಿಸಿ, ಅವರನ್ನು ಶಿಲುಬೆಗೆ ಏರಿಸಿದರು.

45. ಪ್ರವಾದಿ ಮಹಮ್ಮದರ ಜೀವನ:

- ಮಹಮ್ಮದರ ತಂದೆ ಅಬ್ದುಲ್ಲಾ, ತಾಯಿ ಅಮೀನಾ.
- ಅವರು ಹುಟ್ಟುವುದಕ್ಕೆ ಮುನ್ನವೇ ತಂದೆಯನ್ನು ಕಳೆದುಕೊಂಡಿದ್ದರು.
- ಪ್ರಾರಂಭದಲ್ಲಿ ಅವರು ಚಿಕ್ಕಪ್ಪನಿಗೆ ವ್ಯಾಪಾರದಲ್ಲಿ ನೆರವಾಗತೊಡಗಿದರು.
- ಮುಂದೆ, ಖದೀಜಾ ಎಂಬ ವಿಧವೆಯೊಬ್ಬಳು ಇವರನ್ನು ತನ್ನ ವ್ಯಾಪಾರದ ಪ್ರತಿನಿಧಿಯಾಗಿ ನೇಮಿಸಿಕೊಂಡಳು.
- ಮಹಮ್ಮದರ ಸರಳತೆ ಮತ್ತು ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡು ಅವರನ್ನು ಮದುವೆಯಾದರು.
- ತಮ್ಮ ನಲ್ವತ್ತನೆಯ ವಯಸ್ಸಿನಲ್ಲಿ ಹಿರಾ ಗುಹೆಯಲ್ಲಿ ಪ್ರಾರ್ಥನೆ ಮತ್ತು ಧ್ಯಾನ ನಿರತರಾಗಿದ್ದಾಗ ಇವರಿಗೆ ಪ್ರವಾದಿತ್ವ ದೊರೆಯಿತು.
- ಈ ಸಂದೇಶಗಳನ್ನೊಳಗೊಂಡ ಗ್ರಂಥವೇ 'ಖುರಾನ್' ಇದು ಅರೆಬಿಕ್ ಭಾಷೆಯಲ್ಲಿದೆ.

46. ಇಸ್ಲಾಮಿನ ಐದು ಆಧಾರ ಸ್ತಂಭಗಳು:

- ಏಕದೇವ ವಿಶ್ವಾಸ ಮತ್ತು ಪ್ರವಾದಿ ಮಹಮ್ಮದರು ದೇವನ ಅಂತಿಮ ಪ್ರವಾದಿ.
- ನಿಗದಿತ ಸಮಯದಲ್ಲಿನ ಐದು ಹೊತ್ತಿನ ನಮಾಝನ್ನು ನಿರ್ವಹಿಸುವುದು.
- ಕಡ್ಡಾಯ ಝಕಾತ್ (ದಾನ) ನೀಡುವುದು.
- ರಂಜಾನ್ ತಿಂಗಳಿನಲ್ಲಿ ಹಗಲು ಪೂರ್ತಿ ಉಪವಾಸ ವ್ರತಾಚರಣೆ.
- ಆರ್ಥಿಕವಾಗಿ ಸಂಪನ್ನರು ಮತ್ತು ಆರೋಗ್ಯ ಹೊಂದಿರುವವರು ಜೀವಮಾನದಲ್ಲಿ ಒಂದು
- ಬಾರಿಯಾದರೂ ಪವಿತ್ರ ಹಜ್ ಯಾತ್ರೆ ಮಾಡುವುದು.

47. ಭಾರತದಲ್ಲಿರುವ ವಿವಿಧ ಧರ್ಮಗಳ ಪಟ್ಟಿ: ಭಾರತವು ಸರ್ವಧರ್ಮ ಸಮನ್ವಯದ ನಾಡಾಗಿದ್ದು, ಇಲ್ಲಿ ಅನೇಕ ಧರ್ಮಗಳ ಜನರು ಸೌಹಾರ್ದತೆಯಿಂದ ಬಾಳುತ್ತಿದ್ದಾರೆ. ಪ್ರಮುಖ ಧರ್ಮಗಳೆಂದರೆ:

1. ಹಿಂದೂ ಧರ್ಮ
2. ಇಸ್ಲಾಂ ಧರ್ಮ

3. ಕ್ರಿಶ್ಚಿಯನ್ ಧರ್ಮ (ಕ್ರೈಸ್ತ ಧರ್ಮ)
4. ಸಿಖ್ ಧರ್ಮ
5. ಬೌದ್ಧ ಧರ್ಮ
6. ಜೈನ ಧರ್ಮ
7. ಪಾರ್ಸಿ ಧರ್ಮ (ಜೋರಾಸ್ಟ್ರಿಯನ್ ಧರ್ಮ)
8. ಯಹೂದಿ ಧರ್ಮ (ಜುಡಾಯಿಸಂ)

48. ಕ್ಯಾಲೆಂಡರ್‌ನಲ್ಲಿ ಕಂಡುಬರುವ ವಿವಿಧ ಧಾರ್ಮಿಕ ಹಬ್ಬಗಳ ಪಟ್ಟಿ:

- ಯುಗಾದಿ / ಸಂಕ್ರಾಂತಿ
- ಗಣೇಶ ಚತುರ್ಥಿ
- ದಸರಾ (ವಿಜಯದಶಮಿ)
- ದೀಪಾವಳಿ
- ಮಹಾ ಶಿವರಾತ್ರಿ
- ಕೃಷ್ಣ ಜನ್ಮಾಷ್ಟಮಿ
- ಈದ್-ಉಲ್-ಫಿತರ್ (ರಂಜಾನ್)
- ಮೊಹರಂ
- ಕ್ರಿಸ್‌ಮಸ್ (ಯೇಸು ಕ್ರಿಸ್ತರ ಜನ್ಮದಿನ)
- ಗುಡ್ ಫ್ರೈಡೇ (ಶುಭ ಶುಕ್ರವಾರ)

**ಎ.**

49. ಅರಬ್ಬರ ಕೊಡುಗೆಗಳು :

- ಅರಬ್ಬರು ಗ್ರೀಕ್, ರೋಮನ್ ಮತ್ತು ಭಾರತೀಯ ಜ್ಞಾನವಿಜ್ಞಾನಗಳನ್ನು ಅರಗಿಸಿಕೊಂಡು ತಮ್ಮ ನಾಗರಿಕತೆಯನ್ನು ಶ್ರೀಮಂತಗೊಳಿಸಿದರು.
- ಬಾಗ್ದಾದ್ ಅವರ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು.
- ಅರಬ್ಬರು ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು.
- 'ಅರೇಬಿಯನ್ ನೈಟ್ಸ್', ಉಮ್ಮರ್ ಖಯ್ಯಾಮನ 'ರುಬಾಯತ್' ಮತ್ತು ಫರ್ದೂಸಿಯ 'ಷಾನಾಮ' ಇವು ಪರ್ಷಿಯನ್ ಭಾಷೆಯ ಶ್ರೇಷ್ಠ ಕೃತಿಗಳು.

- ಅರಬ್ಬರು ಬೀಜಗಣಿತ, ರಸಾಯನಶಾಸ್ತ್ರ, ಮತ್ತು ಖಗೋಳಶಾಸ್ತ್ರಗಳಿಗೆ ಮಹತ್ವದ ಕೊಡುಗೆಯನ್ನಿತ್ತರು.
- ಭಾರತೀಯರಿಂದ ಶೂನ್ಯವೂ ಶೂನ್ಯವೂ (ಝೀರೊ) ಸೇರಿದಂತೆ ಅಂಕೆಗಳ ಬಳಕೆ ಅರಿತುಕೊಂಡರು. ಅವುಗಳನ್ನು ಪಾಶ್ಚಾತ್ಯ ದೇಶಗಳಿಗೂ ಮುಟ್ಟಿಸಿದರು.
- ಅರಬ್ಬರು ಭವ್ಯವಾದ ಅರಮನೆ, ಮಸೀದಿ, ಗಂಥಾಲಯ ಮತ್ತು ಆಸತ್ರೆಗಳನ್ನು ಕಡೆ ಅವರ ಭವ್ಯ ಮ್ಮ ಶ್ರೀ ನ್ಯ ನಿರ್ಮಾಣ ಮಾಡಿದರು.
- ಮೆಕ್ಕ, ಮದೀನ ಮದೀನಾ, ಬಾಗ್ದಾದ್, ಜೆರೂಸಲಮ್ ಮುಂತಾದ ಕೊಡುಗೆಯಾಗಿದೆ. ಮಸೀದಿಗಳಿವೆ.
- 'ಯುನಾನಿ' ಎಂಬ ವೈದ್ಯಪದ್ಧತಿ ಅರಬ್ಬರ ಕೊಡುಗೆಯಾಗಿದೆ.

# ಅಧ್ಯಾಯ-2  ಮಧ್ಯಯುಗದ ಯುರೋಪ್

**2.1**

ಅ.

1. A. 1400-1600.
2. C. ಪುನರುಜ್ಜಿವನ ಚಳುವಳಿ
3. A. ಗ್ರೀಕ್ & ಲ್ಯಾಟಿನ್
4. B. ಜಾನ್ ಗುಟೆನ್ ಬರ್ಗ್
5. A. ಪೆಟ್ರಾರ್ಕ್
6. B. ಡೊನಾಟೆಲ್ಲೊ
7. D. ವಿಲಿಯಮ್ ಷೇಕ್ಸಪಿಯರ್
8. D. ವಿಲಿಯಮ್ ಷೇಕ್ಸಪಿಯರ್
9. C. ವಿಲಿಯಂ ಹಾರ್ವೆ
10. B. ಲಿಯೊನಾರ್ಡೊ-ದ-ವಿಂಚಿ

ಆ.

11. ರಿನೈಸಾನ್ಸ್  ಅಥವಾ ಮರು ಹುಟ್ಟು
12. ಸೃಜನಶೀಲ
13. ಇಟಲಿ
14. ಮೊಹಮ್ಮದ
15. ಸರ್ವಾಂಟೆ
16. ಮೋಸೆಸ್ ಪ್ರತಿಮೆ
17. ಟಾಲೆಮಿ
18. ಸಂತ್ ಪೀಟರ್ ಚರ್ಚ್
19. ಇಟಲಿಯಲ್ಲಿ
20. . ಲಿಯೊನಾರ್ಡೊ ದ ವಿಂಚಿ  ಮತ್ತು ಮೈಕೆಲೆಂಜೆಲೊ

ಇ.

21. ಡೆಕಮೆರನ್

22. ಸರ್ ಐಸಾಕ್ ನ್ಯೂಟನ್
23. ಲಂಡನ
24. ಮೈಕಲೆಂಜೆಲೊ
25. ಟಾಲೆಮಿ
26. ಗೆಲಿಲಿಯೋ

ಈ. 27.

ಮೋಸೆಸ್ ಪ್ರತಿಮೆ

ಮೊನಾಲಿಸಾ

ಡೆವಿಡ್ ಪ್ರತಿಮೆ

ದ ಡಿವೈನ್ ಕಾಮಿಡಿ

ಕಿಂಗ್ ಲಿಯರ್

ಉ.

28. ಸುಮಾರು 15 ಮತ್ತು 16ನೇ ಶತಮಾನದಲ್ಲಿ ಯುರೋಪಿನ ಸಾಹಿತ್ಯ ಕಲೆ ವಾಸ್ತು ಶಿಲ್ಪ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಾದ ಹಲವಾರು ಬೆಳವಣಿಗೆಗಳನ್ನು ಸೂಚಿಸುವುದಕ್ಕೆ ಪುನರುಜ್ಜೀವನ ಎನ್ನುವರು.
29. ಕೋಪರ್ನಿಕಸ್
30. ನೈಟ್ಸ್ ಅಥವಾ ಸರದಾರ
31. ಇಹಲೋಕದ ವಿಷಯಗಳ ಬಗ್ಗೆ ತೀವ್ರ ಒಲವು ತಳೆಯಲಾಯಿತು
32. ಇಸ್ತಾಂಬೂಲ್
33. ವಿಲಿಯಮ್ ಷೇಕ್ಸಪಿಯರ್ ಇಂಗ್ಲೆಂಡ್ ದೇಶದ ಜಗತ್ಪ್ರಸಿದ್ದ ಕವಿ ಮತ್ತು ನಾಟಕಕಾರ.
34. ಮಾರ್ಕೋ ಪೋಲೊ ಭಾರತ ಸೇರಿದಂತೆ ಏಷ್ಯಾದ ದೇಶಗಳಿಗೆ ಭೇಟಿ ನೀಡಿದ ಇಟಲಿ ದೇಶದ ಪ್ರಖ್ಯಾತ ಪ್ರವಾಸಿ

ಊ

35. ಮಾನವತಾವಾದ ಮತ್ತು ವೈಚಾರಿಕತೆ,

36. ಪ್ರಪಂಚದ ಎಲ್ಲಾ ಆಗುಹೋಗುಗಳಲ್ಲಿ ಮಾನವನ ಪಾತ್ರವೇ ಅತಿ ಪ್ರಧಾನ ಎಂಬ ಭಾವನೆಯೇ ಮಾನವತಾವಾದ.
37. ಪ್ರತಿಯೊಂದು ವಿಷಯವನ್ನು ಪೂರ್ವಗ್ರಹವಿಲ್ಲದೆ ವಿಚಾರ ಮತ್ತು ತರ್ಕದ ನೆಲೆಯಲ್ಲಿ ನೋಡುವುದು.ಸತ್ಯವೆಂದು ಕಂಡು ಬಂದರೆ ಮಾತ್ರ ಒಪ್ಪಿಕೊಳ್ಳುವುದು.
38. 'ಜೂಲಿಯಸ್ ಸೀಜರ್', 'ರೋಮಿಯೋ ಜ್ಯೂಲಿಯಟ್', 'ಕಿಂಗ್ ಲಿಯರ್', 'ಮ್ಯಾಕ್‌ಬೆತ್' ಇವೇ ಮುಂತಾದವು.
39. ಪೆಟ್ರಾರ್ಕ್,ಡಾಂಟೆ,ಬೋಕಾಷಿಯೋ,ಜಾನ್ ಕ್ಯಾಲ್ವಿನ್,ಸರ್ವಾಂಟೆ,ವಿಲಿಯಂ ಷೇಕ್ಸಪಿಯರ್
40. ಕೋಪರ್ನಿಕಸ್,ಕೆಪ್ಲರ್,ಗೆಲಿಲಿಯೊ,ಐಸಾಕ್ ನ್ಯೂಟನ್,ವಿಲಿಯಂ ಹಾರ್ವೆ,ವೆಸಾಲಿಯಸ್,

ಋ.

41. ಲಿಯೋನಾರ್ಡೋ-ದ-ವಿಂಚಿಯು ಬಹುಮುಖ ಪ್ರತಿಭಾವಂತ ಏಕೆಂದರೆ

- ದ ವಿಂಚಿಯು ಎಲ್ಲ ಕಾರ್ಯಕ್ಷೇತ್ರಗಳಲ್ಲಿಯೂ ತನ್ನ ಸಮಕಾಲೀನರನ್ನು ಮೀರಿ ನಿಂತಿದ್ದ.
- ಆತನು ಹಾರುವಯಂತ್ರ, ಸಬ್‌ಮೆರಿನ್, ಪ್ಯಾರಾಚೂಟ್ ಮತ್ತು ಬ್ಯಾಂಕರ್ ಇವುಗಳ ವಿನ್ಯಾಸವನ್ನು ತಯಾರಿಸಿದ್ದನು. ಆದರೆ ಆತನ ವೈಜ್ಞಾನಿಕ ಸಾಧನೆಗಳು ಬಹುಕಾಲ ಬೆಳಕಿಗೆ ಬಾರದೆ ಅಜ್ಞಾತವಾಗಿಯೇ ಉಳಿದವು.
- ಆತನು ಓರ್ವ ಮಹಾನ್ ವಾಸ್ತುಶಿಲ್ಪಿಯೂ ಆಗಿದ್ದು ಇಟಲಿಯಲ್ಲಿ ಕಾಲುವೆಗಳನ್ನೂ ರಕ್ಷಣಾಕೋಟೆಗಳನ್ನೂ ನಿರ್ಮಿಸಿದ.
- ಸಂಗೀತ ಮತ್ತು ತತ್ವಶಾಸ್ತ್ರಗಳಲ್ಲಿಯೂ ಆತನಿಗೆ ಪ್ರೌಢಿಮೆಯಿತ್ತು.
- ಇವನು ಏಕ ಕಾಲದಲ್ಲಿ ಎರಡೂ ಕೈಗಳಿಂದ ಬರೆಯಬಲ್ಲವನಾಗಿದ್ದನೆಂದು ಹೇಳಲಾಗುತ್ತದೆ.

42. ಪುನರುಜ್ಜೀವನದ ಕಾರಣಗಳು

- ವಿಚಾರ ಸ್ವಾತಂತ್ರ್ಯವೇ ಪುನರುಜ್ಜೀವನದ ಪ್ರಧಾನ ಕಾರಣವಾಗಿತ್ತು.
- ಕಾನ್‌ಸ್ಟಂಟಿನೋಪಲ್ ನಗರದ ಮೇಲೆ ಆಕ್ರಮಣ,

- ಭೌಗೋಳಿಕ ಅನ್ವೇಷಣೆಗಳ ಪ್ರಭಾವ,
- ಮುದ್ರಣಯಂತ್ರದ ಶೋಧ,
- ಶಿಕ್ಷಣದ ಪ್ರಸಾರಣ,
- ಊಳಿಗಮಾನ್ಯ ಪದ್ಧತಿಯ ಅವನತಿ ಮುಂತಾದವು.

43. ಸಾಹಿತ್ಯಕ್ಷೇತ್ರಕ್ಕೆ ಪುನರುಜ್ಜೀವನ ನೀಡಿರುವ ಕೊಡುಗೆಗಳು:

- ಪುನರುಜ್ಜೀವನ ಕಾಲದಲ್ಲಿ ದೇಶಭಾಷೆ ಅಥವಾ ಸ್ಥಳೀಯ ಭಾಷೆಗಳಲ್ಲಿ ಸಾಹಿತ್ಯ ರಚನೆಗೊಂಡಿತು. ಪರಿಣಾಮವಾಗಿ ಜನರ ಆಡುಭಾಷೆಗಳು ವಿಕಾಸ ಹೊಂದಿದವು.
- ಪೆಟ್ರಾರ್ಕ್ ನ ಭಾವಗೀತೆ ಮತ್ತು ಕಾವ್ಯಗಳು ಪ್ರಸಿದ್ಧ. ಯುವ ಸಾಹಿತಿಗಳು ಈತನಿಂದ ಪಡೆದ ಸ್ಫೂರ್ತಿ ಗಮನಾರ್ಹವಾದುದು.
- ಡಾಂಟೆ ಇಟಲಿಯ ಮಹಾಕವಿ. 'ದ ಡಿವೈನ್ ಕಾಮಿಡಿ' ಆತನ ಮಹಾಕಾವ್ಯ.
- ಬೊಕಾಷಿಯೊ ಒಬ್ಬ ಕುಶಲ ಕತೆಗಾರ. 'ಡೆಕಮೆರನ್' ಆತನ ಶ್ರೇಷ್ಠ ಸಾಹಿತ್ಯ ಕೃತಿ.
- ಫ್ರೆಂಚ್ ಗದ್ಯ ಸಾಹಿತ್ಯಕ್ಕೆ ಒಂದು ಹೊಸ ಶೈಲಿಯನ್ನು ಕೊಟ್ಟವನೆಂದರೆ ಮತಸುಧಾರಕನಾದ ಜಾನ್ ಕ್ಯಾಲ್ವಿನ್.
- ಸರ್ವಾಂಟೆ ಸ್ಪೇನ್ ದೇಶದ ಪುನರುಜ್ಜೀವನ ಕಾಲದ ಮುಖ್ಯ ಸಾಹಿತಿ. ಈತನು ತನ್ನ 'ಡಾನ್ ಕ್ವಿಹೋಟೆ' ಎಂಬ ಪ್ರಸಿದ್ಧ ಸಾಹಿತ್ಯ ಕೃತಿಯಲ್ಲಿ ಮಧ್ಯ ಯುಗದ ಸರದಾರರನ್ನು (knights) ಗೇಲಿ ಮಾಡಿದನು.
- ಇಂಗ್ಲಿಷ್ ನಾಟಕಕಾರರಲ್ಲಿ ವಿಲಿಯಮ್ ಷೇಕ್ಸ್‌ಪಿಯರ್ ಪ್ರಮುಖನು. 'ಜೂಲಿಯಸ್ ಸೀಜರ್', 'ರೋಮಿಯೋ ಜ್ಯೂಲಿಯಟ್', 'ಕಿಂಗ್ ಲಿಯರ್', 'ಮ್ಯಾಕ್‌ಬೆತ್' ಇವೇ ಮುಂತಾದವು ಈತನ ನಾಟಕಗಳು.

44.ಕಾನ್‌ಸ್ಟಂಟಿನೋಪಲ್ ನಗರದ ಮೇಲಿನ ಆಕ್ರಮಣ:

- 15ನೇ ಶತಮಾನದ ಮಧ್ಯಭಾಗದಲ್ಲಿ (ಸಾ.ಶ. 1453) ಟರ್ಕರ ಸುಲ್ತಾನ ಮೊಹಮ್ಮದನು ಪೂರ್ವ ರೋಮನ್ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಕಾನ್‌ಸ್ಟಂಟಿನೋಪಲ್ ನಗರದ ಮೇಲೆ ಆಕ್ರಮಣ ನಡೆಸಿದನು.
- ಆಕ್ರಮಣದಲ್ಲಿ ಟರ್ಕರು ಚಕ್ರವರ್ತಿ ಕಾನ್‌ಸ್ಟಂಟೈನ್‌ನಿಂದ ಈ ನಗರವನ್ನು ವಶಪಡಿಸಿಕೊಂಡರು.

- ಗಮನಿಸಬೇಕಾದ ಅಂಶವೆಂದರೆ, ಸಾ.ಶ. 1453ಕ್ಕಿಂತ ಹಿಂದೆ ಹನ್ನೊಂದು ಶತಮಾನಗಳ ಕಾಲ ಈ ನಗರವು ಪ್ರಸಿದ್ಧ ಜ್ಞಾನಾರ್ಜನೆಯ ಕೇಂದ್ರವಾಗಿತ್ತು ಪರಿಣಾಮ
- ಅರಬ್ಬರಲ್ಲಿದ್ದಂತೆ ಟರ್ಕರಲ್ಲಿ ಉದಾರ ಮನೋಭಾವವಿರಲಿಲ್ಲ. ಕಲಿಕೆಯ ಬಗ್ಗೆ ಗೌರವವಿರಲಿಲ್ಲ.
- ಆ ನಗರದಲ್ಲಿದ್ದ ವಿದ್ವಾಂಸರು ಟರ್ಕರ ಭೀತಿಯಿಂದ ತಮ್ಮಲ್ಲಿದ್ದ ಅಮೂಲ್ಯ ಗ್ರೀಕ್ ಮತ್ತು ಲ್ಯಾಟಿನ್ ಗ್ರಂಥಗಳೊಂದಿಗೆ ಇಟಲಿ ಮತ್ತು ಯುರೋಪಿನ ಇನ್ನಿತರ ಭಾಗಗಳಿಗೆ ಪಲಾಯನ ಗೈದರು.
- ಇಟಲಿಯ ವಿವಿಧ ನಗರಗಳಲ್ಲಿ ನೆಲೆಸಿದ ಅವರು ಪ್ರಾಚೀನ ಜ್ಞಾನಪ್ರಚಾರ ಮಾಡತೊಡಗಿದರು.
- ಹೀಗೆ ಕಲಿಕೆಯು ಕಾನ್‌ಸ್ಟಂಟಿನೋಪಲಿನಿಂದ ಇಟಲಿಗೆ ಸ್ಥಳಾಂತರಗೊಂಡಿತು.
- ಇದು ಪುನರುಜ್ಜೀವನಕ್ಕೆ ಪ್ರೇರಣೆ ನೀಡಿತು.

45.ಮುದ್ರಣಯಂತ್ರ ಪುನರುಜ್ಜೀವನಕ್ಕೆ ಹೀಗೆ ಕಾರಣವಾಯಿತು.

- ಹದಿನೈದನೆಯ ಶತಮಾನದಲ್ಲಿ ಕಂಡುಹಿಡಿಯಲಾದ ಮುದ್ರಣಯಂತ್ರವು ಜ್ಞಾನಪ್ರಸಾರ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದಿತು.
- ಹಿಂದೆ ಒಬ್ಬನಿಗೆ ಒಂದು ವರ್ಷದಲ್ಲಿ ಕೇವಲ ಎರಡು ಪುಸ್ತಕಗಳನ್ನು ಮಾತ್ರ ಪ್ರತಿ ಮಾಡಲು ಸಾಧ್ಯವಾಗುತ್ತಿತ್ತು.
- ಮುದ್ರಣಯಂತ್ರದ ಸಹಾಯದಿಂದ ಒಂದೇ ವರ್ಷದಲ್ಲಿ ಪುಸ್ತಕವೊಂದರ 24,000 ಪ್ರತಿಗಳನ್ನು ಮುದ್ರಿಸಬಹುದಾಗಿತ್ತು.
- ಮುದ್ರಿತ ಪುಸ್ತಕಗಳ ಬೆಲೆ ಕಡಿಮೆಗೊಂಡು ಅವುಗಳಿಗೆ ಬೇಡಿಕೆ ಹೆಚ್ಚಿತು.
- ಮುದ್ರಣವು ಕೈಬರಹಕ್ಕಿಂತ ಹೆಚ್ಚು ಸ್ಪಷ್ಟವೂ ಸುಂದರವೂ ಆಯಿತು.
- ಓದುವ ಆಸಕ್ತಿ ಇದ್ದವರೆಲ್ಲರಿಗೂ ಸುಲಭವಾಗಿ ಪ್ರತಿಗಳು ದೊರೆಯುವಂತಾಯ್ತು.

46.ವಾಸ್ತು, ಮೂರ್ತಿಶಿಲ್ಪ ಮತ್ತು ಚಿತ್ರಕಲೆಗೆ ಅದು ನೀಡಿದ ಕೊಡುಗೆಗಳು:

- ಪುನರುಜ್ಜೀವನದ ವಾಸ್ತು ಸೌಂದರ್ಯವನ್ನು ನಾವು ರೋಮಿನ ಸಂತ ಪೀಟರ ಚರ್ಚ್, ಲಂಡನಿನ ಸಂತ ಪಾಲ್ ಚರ್ಚ್ ಮುಂತಾದ ಚರ್ಚ್‌ಗಳಲ್ಲಿ ಕಾಣಬಹುದಾಗಿದೆ.

- ಪುನರುಜ್ಜೀವನದ ವಾಸ್ತುಶಿಲ್ಪಗಳು ಮಧ್ಯ ಯುಗದ ಅಲಂಕರಣದ ಮತ್ತು ಆಡಂಬರದ ಗಾಥಿಕ್ ಶೈಲಿಯನ್ನು ಕೈಬಿಟ್ಟು, ಚೂಪಾದ ಮೊನೆಯುಳ್ಳ ಕಮಾನುಗಳ ಬದಲು ದುಂಡದಾದ ಕಮಾನುಗಳನ್ನು ಬಳಸಿದರು.
- ಡೊನಾಟೆಲ್ಲೊ ಆ ಕಾಲದ ಮಹಾನ್ ಶಿಲ್ಪಿ. ಈತನು ನಿರ್ಮಿಸಿದ 'ಡೇವಿಡ್ ಪ್ರತಿಮೆ' ಶ್ರೇಷ್ಠವಾಗಿದೆ. ಹಾಗೆಯೇ ಮೈಕೆಲೆಂಜೆಲೊ ನಿರ್ಮಿಸಿದ 'ಮೋಸೆಸ್ ಪ್ರತಿಮೆ' ಭವ್ಯವಾಗಿದೆ.
- ಇಟಲಿಯಲ್ಲಿ ಹದಿನಾರನೆಯ ಶತಮಾನದಲ್ಲಿ ಹಲವಾರು ಪ್ರತಿಭಾವಂತ ಚಿತ್ರಕಾರರಿದ್ದರು.
- ಅವರಲ್ಲಿ ಲಿಯೊನಾರ್ಡೊ-ದ-ವಿಂಚಿ ಮತ್ತು ಮೈಕೆಲೆಂಜೆಲೊ ಗಮನಾರ್ಹರು.
- ಲಿಯೊನಾರ್ಡೊ-ದ-ವಿಂಚಿ ಅದ್ಭುತ ಚಿತ್ರಕಾರ, ಮೂರ್ತಿಶಿಲ್ಪಿ, ವಿಜ್ಞಾನಿ, ಇಂಜಿನಿಯರ್, ವಾಸ್ತುಶಿಲ್ಪಿ ಮತ್ತು ಗಣಿತಶಾಸ್ತ್ರಜ್ಞ, 'ವರ್ಜಿನ್ ಆನ್ ದಿ ರಾಕ್ಸ್', 'ದಿ ಲಾಸ್ಟ್ ಸಪ್ಪರ್' ಮತ್ತು 'ಮೊನಾಲಿಸಾ' ಆತನ ಪ್ರಸಿದ್ಧ ವರ್ಣಚಿತ್ರಗಳು.

47.ಪುನರುಜ್ಜೀವನ ಕಾಲದಲ್ಲಿ ವಿಜ್ಞಾನ ಕ್ಷೇತ್ರದಲ್ಲಾದ ಪ್ರಗತಿ:

- ಪುನರುಜ್ಜೀವನ ಕಾಲದಿಂದಲೇ ಆಧುನಿಕ ವಿಜ್ಞಾನದ ಬೆಳವಣಿಗೆ ಪ್ರಾರಂಭವಾಯಿತು ಎನ್ನಬಹುದು.
- ಪೋಲೆಂಡಿನ ಕೋಪರ್ನಿಕಸನು ಸೂರ್ಯನ ಸುತ್ತ ತಿರುಗುವ ಹಲವಾರು ಗ್ರಹಗಳಲ್ಲಿ ಭೂಮಿಯು ಒಂದಾಗಿದೆಯೆಂದು ತಿಳಿದಿದ್ದನು. ಆತನ ಸಂಶೋಧನೆಯು ಆ ಕಾಲದ ಚರ್ಚಿನ ನಂಬಿಕೆಗಳಿಗೆ ವಿರುದ್ಧವಾಗಿದ್ದುದರಿಂದ ಅದನ್ನು ಗ್ರಂಥರೂಪದಲ್ಲಿ ಪ್ರಕಟಿಸಲು ಸಾಧ್ಯವಾಗಲಿಲ್ಲ.
- ಮುಂದೆ, ಜರ್ಮನಿಯ ಗಣಿತಶಾಸ್ತ್ರಜ್ಞ ಕೆಪ್ಲರ್ ಎಂಬುವನು ಕೋಪರ್ನಿಕಸನ ವಾದವನ್ನು ಪ್ರಾಯೋಗಿಕವಾಗಿ ಸಾಧಿಸಿ ತೋರಿಸಿದನು.
- ಇಟಲಿಯ ಖಗೋಳ ಶಾಸ್ತ್ರಜ್ಞನಾದ ಗೆಲಿಲಿಯೊ ದೂರದರ್ಶಕವನ್ನು ಕಂಡುಹಿಡಿದನು. ಇವನು ಕೋಪರ್ನಿಕಸನ ವಾದವನ್ನು ಬಲವಾಗಿ ಪ್ರತಿಪಾದಿಸಿದನು.
- ಆದುದರಿಂದ ಆ ಕಾಲದ ಸಂಪ್ರದಾಯಿಕ ಚರ್ಚ್ ಇವನನ್ನು ಬಂಧಿಸಿ ಚರ್ಚಿನ ನ್ಯಾಯಾಲಯಕ್ಕೆ(ಇನ್‌ಕ್ವಿಜಿಷನ್) ಒಳಪಡಿಸಿತು. ಬಲವಂತದ ತಪ್ಪೊಪ್ಪಿಗೆ ನಂತರ ಗೆಲಿಲಿಯೊನನ್ನು ಬಿಡುಗಡೆ ಮಾಡಿತು.

- ಇಂಗ್ಲೆಂಡಿನ ಸರ್ ಐಸಾಕ್ ನ್ಯೂಟನನು ನೆಲದಿಂದ ಮೇಲಕ್ಕೆ ಏರಿದ ವಸ್ತುಗಳು ಪುನಃ ಕೆಳಗೆ ಬೀಳಲು 'ಗುರುತ್ವಾಕರ್ಷಣ' ಬಲವೇ ಕಾರಣ ಎಂಬುದನ್ನು ತೋರಿಸಿಕೊಟ್ಟನು.
- ವಿಲಿಯಂ ಹಾರ್ವೆಯು (ಸಾ.ಶ. 1478-1557) ಮಾನವ ದೇಹದಲ್ಲಿನ ರಕ್ತಪರಿಚಲನೆಯ ಕ್ರಮವನ್ನು ತೋರಿಸಿಕೊಟ್ಟನು.
- ವೆಸಾಲಿಯಸ್ ಎಂಬ ಬೆಲ್ಜಿಯಮ್ ವಿಜ್ಞಾನಿಯು ದೇಹದಲ್ಲಿ ರಕ್ತಸಂಚಾರದ ಬಗ್ಗೆ ಅಮೂಲ್ಯ ಗ್ರಂಥವನ್ನು ಪ್ರಕಟಿಸಿದನು. ಈ ಚಿಂತನೆ ಆಗಿನ ಸಂಪ್ರದಾಯವಾದಿಗಳ ನಂಬುಗೆಯನ್ನು ಪ್ರಶ್ನಿಸಿದ್ದಕ್ಕಾಗಿ ಆತನನ್ನು ಮರಣದಂಡನೆಗೆ ಗುರಿಪಡಿಸಲಾಯಿತು.
- ಗೆಲಿಲಿಯೊ ತನ್ನ ಪ್ರಯೋಗಗಳ ಮೂಲಕ ವಿವಿಧ ತೂಕದ ವಸ್ತುಗಳನ್ನು ಏಕಕಾಲದಲ್ಲಿ ಸಮಾನ ಎತ್ತರದಿಂದ ಕೈಬಿಟ್ಟಾಗ ಒಂದೇ ಸಮಯಕ್ಕೆ ಅವು ಭೂಮಿಯನ್ನು ತಲಪುತ್ತವೆ ಎಂದು ಸಾಬೀತುಗೊಳಿಸಿದನು.

48. ಧಾರ್ಮಿಕ ಸುಧಾರಣಾ ಚಳವಳಿಯಲ್ಲಿ ಮಾರ್ಟಿನ್ ಲೂಥರ್ ಅವರ ಪಾತ್ರ ಹೀಗಿದೆ:

1. ಕ್ರಿ.ಶ. 1517 ರಲ್ಲಿ ವಿಟನ್‌ಬರ್ಗ್ ಚರ್ಚ್‌ನ ಬಾಗಿಲಿಗೆ "95 ಪ್ರಬಂಧಗಳು" ಎಂಬ ಪತ್ರವನ್ನು ಹಚ್ಚುವ ಮೂಲಕ, ಕ್ಯಾಥೋಲಿಕ್ ಚರ್ಚ್‌ನ 'ಪಾಪನಿವೇದನಾ ಪತ್ರಗಳ' ಮಾರಾಟವನ್ನು ತೀವ್ರವಾಗಿ ವಿರೋಧಿಸಿದರು.
2. ಲ್ಯಾಟಿನ್‌ನಲ್ಲಿದ್ದ ಬೈಬಲ್ ಅನ್ನು ಸಾಮಾನ್ಯ ಜನರ ಭಾಷೆಯಾದ ಜರ್ಮನ್‌ಗೆ ಅನುವಾದಿಸಿ, ಧರ್ಮಗ್ರಂಥವು ಪ್ರತಿಯೊಬ್ಬರಿಗೂ ತಲುಪುವಂತೆ ಮಾಡಿದರು.
3. ಚರ್ಚ್‌ಗೆ ಹಣ ನೀಡುವುದರಿಂದಲ್ಲ, ಬದಲಿಗೆ ದೇವರ ಮೇಲಿನ ನಂಬಿಕೆಯಿಂದ ಮಾತ್ರ ಮುಕ್ತಿ ಸಾಧ್ಯ ಎಂದು ಪ್ರತಿಪಾದಿಸಿದರು.
4. ಪೋಪ್ ಮತ್ತು ಚರ್ಚ್‌ನ ಏಕಸ್ವಾಮ್ಯವನ್ನು ಪ್ರಶ್ನಿಸಿದ ಇವರ ಹೋರಾಟವು, ಕ್ರಿಶ್ಚಿಯನ್ ಧರ್ಮದಲ್ಲಿ 'ಪ್ರೊಟೆಸ್ಟಂಟ್' ಎಂಬ ಹೊಸ ಪಂಥದ ಉದಯಕ್ಕೆ ಕಾರಣವಾಯಿತು.
5. ಈ ಮೂಲಕ ಯುರೋಪ್‌ನಲ್ಲಿ ಮಹತ್ವದ ವೈಚಾರಿಕ ಹಾಗೂ ಧಾರ್ಮಿಕ ಕ್ರಾಂತಿಯನ್ನು ಸೃಷ್ಟಿಸಿದರು.

**2.2**

ಅ.

1. D. 'ಎ' ಮತ್ತು 'ಬಿ' ಎರಡು ಸರಿ.
2. A. ಜಾನ್ ವೈಕ್ಲಿಫ್
3. C. ಜಾನ್ ಹಸ್
4. B. ಪಾಪ ಕ್ಷಮಾಪಣಾ ಪತ್ರ
5. A. ಜರ್ಮನ್
6. B. ಇಗ್ನೋಶಿಯಸ್ ಲೊಯೊಲ

ಆ.

7. ಸಂತ ಅಗಸ್ಟಿನ್
8. ಜರ್ಮನ್
9. ಜೆಸ್ಯುಯಿಟರು

ಇ.

10. ಮಾರ್ಟಿನ್ ಲೂಥರ್ ಕಿಂಗ್
11. ವಿಟೆನ್ ಬರ್ಗ್ ಚರ್ಚಿನ ಹೆಬ್ಬಾಗಿಲಿಗೆ ಹಚ್ಚಿದನು
12. ಪ್ರೊಟೆಸ್ಟೆಂಟ್ಸ್
13. ಇಗ್ನೇಶಿಯಸ್ ಲಯೋಲ
14. ತನ್ನ ಆಂತರಿಕ ಸುಧಾರಣೆಗಾಗಿ ಕ್ಯಾಥೋಲಿಕ್ ಚರ್ಚ್ ನಡೆಸಿದ ಎಲ್ಲಾ ಪ್ರಯತ್ನಗಳನ್ನು ಪ್ರತಿ ಸುಧಾರಣೆ ಎನ್ನುವರು.

ಈ.

15.ಕ್ರೈಸ್ತರಲ್ಲಿ ಅನೇಕ ಪಂಗಡಗಳಾಗಲು ಕಾರಣ

- ಮಧ್ಯಯುಗದ ರೋಮನ್ ಕ್ಯಾಥೋಲಿಕ್ ಚರ್ಚ್ ಸಮಾಜದ ಮೇಲೆ ಹಿಡಿತ ಸಾಧಿಸಿ ಹಲವಾರು ತಪ್ಪಾದ ನಿರ್ಧಾರಗಳನ್ನು ಜನರ ಮೇಲೆ ಹೇರಿತು.
- ಚರ್ಚಿನ ಅಧಿಕಾರಿಗಳು ಸರಳ ಧಾರ್ಮಿಕ ಜೀವನವನ್ನು ನಡೆಸುವ ಬದಲು ಐಷಾರಾಮಿ ಜೀವನ ನಡೆಸುತ್ತಿದ್ದರು.

- ಪಾಪ ಕ್ಷಮಾಪನ ಪತ್ರಗಳ ಮಾರಾಟ.
- ರಾಜರು ಮತ್ತು ಪೋಪರ ಕಲಹಗಳು

16.ಪ್ರೊಟೆಸ್ಟ ಪಂಗಡದ ಉದಯದಿಂದ ಕ್ಯಾಥೋಲಿಕ್ ಚರ್ಚಿನ ಮೇಲೆ ಆದ ಪರಿಣಾಮ.

- ಕ್ಯಾಥೋಲಿಕ್ ಚರ್ಚಿನ ಬಗ್ಗೆ ಜನರಲ್ಲಿ ಅನುಮಾನಗಳು ಉಂಟಾದವು.
- ಜನರು ಚರ್ಚಿನಿಂದ ದೂರ ಸರಿಯಲಾರಂಭಿಸಿದರು.
- ರೋಮನ್ ಕ್ಯಾಥೋಲಿಕರು ತಮ್ಮ ಚರ್ಚಿನಲ್ಲಿ ಸುಧಾರಣೆಗಳ ಅವಶ್ಯಕತೆಯನ್ನು ಮನಗಂಡರು.
- ಕ್ಯಾಥೋಲಿಕ್ ಚರ್ಚನ್ನು ಶುದ್ಧೀಕರಿಸಿ ಅದನ್ನು ಬಲಪಡಿಸಲು ಪ್ರತಿ ಸುಧಾರಣೆ ಎಂಬ ಚಳುವಳಿ ಪ್ರಾರಂಭವಾಯಿತು.

17.ಧಾರ್ಮಿಕ ಸುಧಾರಣಾ ಚಳುವಳಿಯ ಪರಿಣಾಮಗಳು

- ಕ್ರೈಸ್ತ ಮತದ ಅನುಯಾಯಿಗಳು ಕ್ಯಾಥೋಲಿಕರು ಮತ್ತು ಪ್ರಾಟೆಸ್ಟಂಟ್ ಎಂಬ ಎರಡು

  ಮುಖ್ಯ ಪಂಗಡಗಳಾಗಿ ವಿಭಜನೆಯಾದರು.

- ರೋಮನ್ ಕ್ಯಾಥೋಲಿಕ್ ಚರ್ಚಿನಲ್ಲಿ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅವ್ಯವಹಾರಗಳು ಕೊನೆಗೊಂಡವು.
- ಅಧಿಕಾರಕ್ಕಾಗಿ ಪೋಪ್ ಮತ್ತು ರಾಜರ ನಡುವಿನ ಸಂಘರ್ಷದಲ್ಲಿ ಕ್ರಮೇಣ ರಾಜರು ಪ್ರಬಲರಾದರು.

ಉ.

18.ಮಾರ್ಟಿನ್ ಲೂಥರ್

ಸುಧಾರಣಾ ಚಳವಳಿಯನ್ನು ಆರಂಭಿಸಿದ ನಾಯಕ.ಈತನು ಸಂತ ಆಗಸ್ಟಿನ್ ಚರ್ಚಿನ ಪಾದ್ರಿಯಾಗಿದ್ದನು. ರೋಮ್ ಪಟ್ಟಣದಲ್ಲಿ ಪೋಪ್ ಮತ್ತು ಪಾದ್ರಿಗಳ ವೈಭೋಗದ ಜೀವನ ಶೈಲಿಯನ್ನು ಗಮನಿಸಿದ ಲೂಥರ್ ಚರ್ಚಿನ ವಿರುದ್ಧ ತಿರುಗಿ ಬಿದ್ದನು. ಅವನು ಪಾಪಕ್ಷಮಾಪಣ ಪತ್ರಗಳನ್ನು ಕುರಿತು ತೊಂಬತ್ತೈದು ಹೇಳಿಕೆಗಳನ್ನು ಬರೆದು ವಿಟೆನ್‌ಬರ್ಗ್ ಚರ್ಚಿನ ಹೆಬ್ಬಾಗಿಲಿಗೆ ಹಚ್ಚಿ ಜನರಲ್ಲಿ ಜಾಗೃತಿ ಮೂಡಿಸಿದನು. ಲೂಥರ್ ಬೈಬಲನ್ನು ಜರ್ಮನ್ ಭಾಷೆಗೆ ಭಾಷಾಂತರಿಸಿದ್ದರಿಂದ ಅದು ಸಾಮಾನ್ಯ ಜನರೆಲ್ಲರಿಗೂ ದೊರೆಯುವಂತಾಯಿತು. ಚರ್ಚಿನ ಧಾರ್ಮಿಕ ಸೇವೆಗಳಲ್ಲಿ ಲ್ಯಾಟಿನ್ ಭಾಷೆಯ ಬದಲಾಗಿ

ಜರ್ಮನ್ ಭಾಷೆ ಬಳಸಲಾರಂಭಿಸಿದನು.ಪೋಪರು ಲೂಥರನನ್ನು ಶಿಕ್ಷೆಗೆ ಗುರಿಪಡಿಸಲು ರೋಮಿನ ರಾಜನಿಗೆ ಆಜ್ಞಾಪಿಸಿದರು.ಆದರೆ ಲೂಥರನಿಗೆ ಅನೇಕ ರಾಜರ ಬೆಂಬಲವಿದ್ದುದರಿಂದ ಯಾವುದೇ ಶಿಕ್ಷೆ ವಿಧಿಸಲು ಸಾಧ್ಯವಾಗಲಿಲ್ಲ.

19.ಮಾರ್ಟಿನ್ ಲೂಥರ್ ಜರ್ಮನಿಯಲ್ಲಿ ಚರ್ಚಿನ ಭ್ರಷ್ಟಾಚಾರ ಹಾಗೂ ಪೋಪ್ ಮತ್ತು ಪಾದ್ರಿಗಳ ವೈಭೋಗದ ಜೀವನ ಶೈಲಿಯ ವಿರುದ್ಧ ತಿರುಗಿಬಿದ್ದು ಧಾರ್ಮಿಕ ಸುಧಾರಣಾ ಚಳುವಳಿಯನ್ನು ಆರಂಭಿಸಿದರು.ಇವರು ಚರ್ಚಿನ ಪಾಪಕ್ಷಮಾಪಣಾ ಪತ್ರಗಳನ್ನು ವಿರೋಧಿಸಿ 95 ಹೇಳಿಕೆಗಳನ್ನು ಬರೆದು ವಿಟೆನ್‌ಬರ್ಗ್ ಚರ್ಚಿನ ಹೆಬ್ಬಾಗಿಲಿಗೆ ಹಚ್ಚುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು.ಸಾಮಾನ್ಯ ಜನರಿಗೂ ಧರ್ಮಗ್ರಂಥ ಲಭ್ಯವಾಗುವಂತೆ ಮಾಡಲು ಇವರು ಬೈಬಲನ್ನು ಜರ್ಮನ್ ಭಾಷೆಗೆ ಭಾಷಾಂತರಿಸಿದರು ಮತ್ತು ಧಾರ್ಮಿಕ ಸೇವೆಗಳಲ್ಲಿ ಲ್ಯಾಟಿನ್ ಬದಲಿಗೆ ಜರ್ಮನ್ ಭಾಷೆ ಬಳಸಲಾರಂಭಿಸಿದರು.ಇವರ ಈ ಹೋರಾಟ ಮತ್ತು ಅನುಯಾಯಿಗಳಿಂದಾಗಿ ಕ್ರೈಸ್ತ ಧರ್ಮದಲ್ಲಿ "ಪ್ರೊಟೆಸ್ಟಂಟ್" ಎಂಬ ಹೊಸ ಪಂಗಡ ಉದಯಿಸಿ ಜಗತ್ತಿನಾದ್ಯಂತ ಹರಡಿತು.

**2.3**

ಅ.

1. A. ಪೋರ್ಚುಗೀಸರು
2. B. ಹೆನ್ರಿ ದ ನ್ಯಾವಿಗೇಟರ್
3. D. 'P' ಮತ್ತು 'S' ಎರಡೂ ಸರಿ
4. A. ವಾಸ್ಕೋಡಿಗಾಮಾ
5. A. ಪೋರ್ಚುಗೀಸ
6. B. ಕ್ರಿಸ್ಟೋಫರ್ ಕೊಲಂಬಸ್
7. C. ಫರ್ಡಿನೆಂಡ್ ಮೆಗಲನ್

ಆ.

8. ಸ್ಕೂಲ್ ಆಫ್ ನ್ಯಾವಿಗೇಶನ್
9. ಸಾ.ಶ.1498

10. ಕಾಪ್ಪಾಡ್

11. ಬಾರ್ತಲೋಮಿಯೊ ಡಯಾಸ್

ಇ. 12.

ಕಲ್ಲಿಕೋಟೆ

ಬಹಮಸ್ ದ್ವೀಪ

ಬ್ರೆಜಿಲ್

ಅಮೆರಿಕಾ

ಪ್ರಥಮವಾಗಿ ಭೂಪ್ರದಕ್ಷಣೆ ಹಾಕಿದ ನಾವಿಕ

ದಕ್ಷಿಣ ಆಫ್ರಿಕಾದ ದಕ್ಷಿಣ ತುದಿ

ಈ.

13. ಪೋರ್ಚುಗೀಸ್ ರಾಜಕುಮಾರ ಹೆನ್ರಿ.

14. 'ಕೇಫ್ ಆಫ್ ಸ್ಟಾರ್ಮ್' (ಬಿರುಗಾಳಿಯ ಭೂಶಿರ)

15. ಸ್ಪೇನ್

16. ರೆಡ್ ಇಂಡಿಯನ್ಸ್

17. ಕೆಬ್ರಾಲ್

18. ವಿಕ್ಟೋರಿಯಾ

19. ಭಾರತ ಮತ್ತು ಚೀನಾ

ಉ.

20. ಯುರೋಪಿಯನ್ನರು ತಮ್ಮ ಕುತೂಹಲ, ವ್ಯಾಪಾರಿ ಹಾಗೂ ಸಾಹಸಿ ಪ್ರವೃತ್ತಿಗಳಿಂದ ಹೊಸ ಭೂಭಾಗಗಳನ್ನು ಅನ್ವೇಷಣೆ ಮಾಡಿದರು. ಇದನ್ನು ಭೌಗೋಳಿಕ ಅನ್ವೇಷಣೆಗಳು ಎಂದು ಕರೆಯುವರು.

21. ಕೇಸರಿ, ಸಾಗವಾನಿ, ಹತ್ತಿಬಟ್ಟೆ, ಹುಣಸೆಹಣ್ಣು, ಕರಿಮೆಣಸು, ಲವಂಗ, ದಾಲ್ಚಿ, ಶ್ರೀಗಂಧ ಕಸ್ತೂರಿ, ಏಲಕ್ಕಿ, ವಜ್ರ ಮತ್ತು ಜಾಯಪತ್ರೆ,

22. ಯುರೋಪಿಯನ್ನರು ವೆಸ್ಟ್ ಇಂಡಿಸ್, ಮೆಕ್ಸಿಕೊ, ಪೆರು ಹಾಗೂ ಬ್ರೆಜಿಲ್ ಮೂಲನಿವಾಸಿಗಳನ್ನು ಗುಲಾಮರನ್ನಾಗಿ ಮಾಡಿಕೊಂಡರು.

23. ವಸಾಹತು ಎಂದರೆ ಒಂದು ದೇಶ ಮತ್ತೊಂದು ದೇಶದ ಭೂಭಾಗದ ಮೇಲೆ ಹೊಂದಿರುವ ರಾಜಕೀಯ ಹಾಗೂ ಆರ್ಥಿಕ ನಿಯಂತ್ರಣವಾಗಿದೆ.

ಊ.

24. ಭೌಗೋಳಿಕ ಅನ್ವೇಷಣೆಗಳಿಗೆ ಕಾರಣವಾದ ಅಂಶಗಳು

- ಕಾನ್ ಸ್ಟಂಟಿನೋಪಲ್ ನಗರದ ಮೇಲಿನ  ಆಕ್ರಮಣ: ಸಾ.ಶ.1453ರಲ್ಲಿ ಟರ್ಕರು ಕಾನ್‌ಸ್ಟಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರದ ಮೂಲಕ ನಡೆಯುತ್ತಿದ್ದ ಯುರೋಪಿಯನ್ನರ ವ್ಯಾಪಾರಕ್ಕೆ ಅಡ್ಡಿಯುಂಟಾಯಿತು. ಆದುದರಿಂದ ಯುರೋಪಿಯನ್ನರು ಪೂರ್ವದ ಏಷ್ಯ ದೇಶಗಳಿಗೆ ಹೊಸ ಸಮುದ್ರ ಮಾರ್ಗ ಕಂಡುಹಿಡಿಯುವುದು ಅನಿವಾರ್ಯವಾಯಿತು.

- ಮಾರ್ಕೋಪೋಲೊವಿನ ವರದಿ: ಏಷ್ಯದ ದೇಶಗಳಿಗೆ (ಭಾರತ, ಚೀನ) ಭೇಟಿ ನೀಡಿದ ಮಾರ್ಕೋಪೋಲೊ ತನ್ನ ವರದಿಯಲ್ಲಿ ಏಷ್ಯದ ದೇಶಗಳು ಅಪಾರ ಸಂಪತ್ತಿನಿಂದ ಕೂಡಿವೆಯೆಂಬುದಾಗಿ ವಿವರಿಸಿದ್ದನು. ಅವನ ವರದಿಯು ಯುರೋಪಿನ ವರ್ತಕರಲ್ಲಿ ಆಸಕ್ತಿ ಕೆರಳಿಸಿತು.

- ಏಷ್ಯದ ಪದಾರ್ಥಗಳಿಗೆ ಬೇಡಿಕೆ: ಏಷ್ಯದ ದೇಶಗಳ ಸರಕುಗಳು ಮತ್ತು ಸಾಂಬಾರ ಪದಾರ್ಥಗಳಿಗೆ ಯುರೋಪಿನಲ್ಲಿ ಭಾರಿ ಬೇಡಿಕೆಯಿತ್ತು.ಯುರೋಪಿನಲ್ಲಿ ಬೇಡಿಕೆಯಿದ್ದ ಭಾರತದ ವಸ್ತುಗಳೆಂದರೆ ಕೇಸರಿ, ಸಾಗುವಾನಿ, ಹತ್ತಿ ಬಟ್ಟೆ, ಹುಣಸೆಹಣ್ಣು, ಕರಿಮೆಣಸು, ಲವಂಗ, ದಾಲ್ಚಿನ್ನಿ, ಶ್ರೀಗಂಧ, ಕಸ್ತೂರಿ. ಏಲಕ್ಕಿ, ವಜ್ರ ಮತ್ತು ಜಾಯಪತ್ರೆ.
- ವೈಜ್ಞಾನಿಕ ಆವಿಷ್ಕಾರ: ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ನಕ್ಷತ್ರೋನ್ನತಿ
ಮಾಪಕ (ಆಸ್ಟ್ರೋಲ್ಯಾಬ್), ನಕ್ಷೆಗಳು ಮತ್ತು ಕ್ಯಾರವೆಲ್ ಎಂಬ ಬೃಹತ್ ಹಾಯಿಹಡಗುಗಳು ಸಮುದ್ರಯಾನದಲ್ಲಿ ಪರಿಣಮಿಸಿದವು.

- ಮತೀಯ ಪ್ರೇರಣೆ: ಕ್ರೈಸ್ತ ಮತಪ್ರಚಾರಕರು ಮತಪ್ರಚಾರಕ್ಕಾಗಿ ಏಷ್ಯ ಮತ್ತು ಆಫ್ರಿಕದತ್ತ ದೃಷ್ಟಿ ಹಾಯಿಸಿದರು.

25. ಭೌಗೋಳಿಕ ಅನ್ವೇಷಣೆಯಿಂದಾದ ಪರಿಣಾಮಗಳು:

- ಭೌಗೋಳಿಕ ಅನ್ವೇಷಣೆಗಳು ಕೇವಲ ಯುರೋಪಿನ ನಾಗರಿಕತೆಯ ಮೇಲೆ ಮಾತ್ರವಲ್ಲದೆ ಏಷ್ಯ, ಆಫ್ರಿಕ ಹಾಗೂ ಅಮೇರಿಕದ ಜನತೆ ಹಾಗೂ ಸಂಸ್ಕೃತಿಗಳ ಮೇಲೂ ಗಾಢ ಪ್ರಭಾವ ಬೀರಿದವು.
- ವಾಣಿಜ್ಯದ ವಿಸ್ತರಣೆ: ಹೊಸತಾಗಿ ಶೋಧಿಸಲಾದ ಭೂಪ್ರದೇಶಗಳನ್ನು ಯುರೋಪಿಯನ್ನರು ತಮ್ಮ ವಾಣಿಜ್ಯ ವಸಾಹತುಗಳನ್ನಾಗಿ ಪರಿವರ್ತಿಸಿಕೊಂಡರು.

ಇದರಿಂದ ಜಾಗತಿಕ ವ್ಯಾಪಾರ ವ್ಯಾಪಕವಾಗಿ ವಿಸ್ತರಿಸಿತು. ಏಷ್ಯದ ಸಾಮಗ್ರಿಗಳು ಯೂರೋಪಿನಲ್ಲಿ ವಿಶಾಲ ಮಾರುಕಟ್ಟೆ ಗಳಿಸಿದವು. ಈ ವ್ಯಾಪಾರ ಚಟುವಟಿಕೆಗಳಿಂದ ಬರುತ್ತಿದ್ದ ಲಾಭವೆಲ್ಲವೂ ಐರೋಪ್ಯರದಾಗಿತ್ತು

- .ಗುಲಾಮರ ವ್ಯಾಪಾರ: ಯುರೋಪಿಯನ್ನರು ವೆಸ್ಟ್ ಇಂಡಿಸ್, ಮೆಕ್ಸಿಕೊ, ಪೆರು ಹಾಗೂ ಬ್ರೆಜಿಲ್ ಮೂಲನಿವಾಸಿಗಳನ್ನು ಗುಲಾಮರನ್ನಾಗಿ ಮಾಡಿಕೊಂಡರು.ಕ್ರಮೇಣ ಗುಲಾಮರನ್ನು ಸರಕುಗಳಂತೆ ಮಾರಲಾಯಿತು. ಮುಂದೆ 'ಗುಲಾಮರ ವ್ಯಾಪಾರ'ದ ದಂಧೆ ಅಮಾನವೀಯ ಹಂತವನ್ನು ತಲುಪಿತು. ಗುಲಾಮರನ್ನು ಕಠಿಣವಾಗಿ ದುಡಿಸಿ ಕ್ರೂರವಾಗಿ ನಡೆಸಿಕೊಳ್ಳಲಾಗುತ್ತಿತ್ತು.
- ಕ್ರಿಶ್ಚಿಯನ್ ತತ್ವಗಳ ಪ್ರಸಾರ: ಈ ಬೆಳವಣಿಗೆ ಕ್ರಿಶ್ಚಿಯನ್ ತತ್ವಗಳನ್ನು ಜಗತ್ತಿನಾದ್ಯಂತ ಹರಡಲು ಕಾರಣವಾಯಿತು. ಮುಂದೆ ವಸಾಹತು ವ್ಯವಸ್ಥೆ ರೂಪುಗೊಳ್ಳುವಲ್ಲಿ ಈ ಬೆಳವಣಿಗೆ ಮಹತ್ವದ ಪಾತ್ರವನ್ನು ನಿರ್ವಹಿಸಿತು.
- ರಾಜಕೀಯ ಪರಿಣಾಮ: ಐರೋಪ್ಯ ದೇಶಗಳೊಳಗೆ ವಸಾಹತುಗಳ ಸ್ವಾಧೀನಕ್ಕಾಗಿ ಮತ್ತು ಅಲ್ಲಿನ ಸಂಪತ್ತಿಗಾಗಿ ತೀವ್ರ ಪೈಪೋಟಿ ನಡೆಯಿತು. ಯುರೋಪಿನ ದೇಶಗಳು ಏಷ್ಯ, ಆಫ್ರಿಕ ಮತ್ತು ಅಮೇರಿಕ ಖಂಡಗಳಲ್ಲಿ ತಮ್ಮ ವಸಾಹತು ನೆಲೆಗಳನ್ನು ಸ್ಥಾಪಿಸಿಕೊಂಡವು.

26.ಟಿಪ್ಪಣಿಗಳ ಉತ್ತರಗಳನ್ನು ವಿದ್ಯಾರ್ಥಿಗಳ ಅಭಿವ್ಯಕ್ತಿಯಂತೆ ಮೌಲ್ಯೀಕರಿಸುವುದು.

## ಅಧ್ಯಾಯ-3 ಭಾರತಕ್ಕೆ ಐರೋಪ್ಯರ ಆಗಮನ

**ಅ.**

1. A) 1498 ಮೇ 17
2. C) ಸಾ.ಶ 1602
3. A) ರಾಣಿ ಎಲಿಜಬೆತ್
4. D) ಫ್ರೆಂಚರು
5. A) ಫ್ರಾನ್ಸಿಸ್ಕೋ-ಡಿ-ಅಲ್ಮೆಡಾ
6. ಪಾಂಡಿಚೇರಿ
7. ಪುಲಿಕಾಟ
8. ಪೋರ್ಚುಗೀಸ
9. ನೇದರಲ್ಯಾಂಡ
10. ಫ್ರೆಂಚ
11. ಅಲ್ಬುಕರ್ಕ ನು ಬಿಜಾಪುರ ಸುಲ್ತಾನನಿಂದ ಗೋವಾ ವಶಪಡಿಸಿಕೊಂಡಿದ್ದು (1510)
12. ಬ್ರಿಟಿಷ್ ಈಸ್ಟ ಇಂಡಿಯಾ ಕಂಪನಿ ಸ್ಥಾಪನೆ (1600)
13. ಡಚ್ ಈಸ್ಟ ಇಂಡಿಯಾ ಕಂಪನಿ ಸ್ಥಾಪನೆ (1609)
14. ಫ್ರೆಂಚ ಈಸ್ಟ ಇಂಡಿಯಾ ಕಂಪನಿ ಸ್ಥಾಪನೆ ( 1664)
15. ಗೋವಾ ಪೋರ್ಚುಗೀಸರಿಂದ ವಿಮೋಚನೆಹಗೊಂಡಿದ್ದು(1961)

ಈ.

16. 1. ಪೋರ್ಚುಗೀಸರು — ಈ. ಗೋವಾ

2. ಡಚ್ಚರು — ಇ. ಪುಲಿಕಾಟ್

3. ಫ್ರೆಂಚರು — ಅ. ಪಾಂಡಿಚೇರಿ

4. ಬ್ರಿಟಿಷರು — ಆ. ಕೋಲ್ಕತ್ತಾ

ಉ.

**17.** ಬ್ರಿಟಿಷರು ಪಡೆದ ಸುಂಕರಹಿತ ವ್ಯಾಪಾರದ ಪರವಾನಗಿ ಪತ್ರಗಳನ್ನು ದಸ್ತಕಗಳು ಎಂದು  ಕರೆಯುತ್ತಾರೆ.

18. ಫ್ರೆಂಚರ ಪ್ರಮುಖ ವ್ಯಾಪಾರ ಕೇಂದ್ರಗಳು:

- ಪಾಂಡಿಚೇರಿ
- ಮಚಲಿಪಟ್ಟಣ
- ಕಲ್ಲಿಕೋಟೆ
- ಕಾರೈಕಲ್
- ಚಂದ್ರನಗರ

19. ಫ್ರೆಂಚರು ಮತ್ತು ಬ್ರಿಟಿಷರ ನಡುವೆ ನಡೆದ ಯುದ್ಧಗಳು ಕರ್ನಾಟಿಕ್ ಯುದ್ಧಗಳು.

20. ಭಾರತದಲ್ಲಿ ಹದಗೆಟ್ಟ ರಾಜಕೀಯ ಪರಿಸ್ಥಿತಿಯು ಇಂಗ್ಲೀಷರು ರಾಜಕೀಯ ಸಾರ್ವಭೌಮತ್ವ ಸ್ಥಾಪಿಸಲು ಕಾರಣವಾಯಿತು.

21. ಬ್ರಿಟಿಷರಿಗೆ ದಸ್ತಕಗಳನ್ನು ನೀಡಿದ ಮೊಘಲ್ ಚಕ್ರವರ್ತಿ ಫರೂಖ್ ಸಿಯಾರ್.

22. ಭಾರತಕ್ಕೆ ಮೊದಲು ಬಂದ ಯುರೋಪಿಯನ್ನರು – ಪೋರ್ಚುಗೀಸರು.

23. ವಾಸ್ಕೋಡಗಾಮ ಭಾರತಕ್ಕೆ ಬಂದ ವರ್ಷ – 1498.

24. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ದಿನಾಂಕ – 31 ಡಿಸೆಂಬರ್ 1600.

25. ಫ್ರೆಂಚರ ಪ್ರಮುಖ ವ್ಯಾಪಾರ ಕೇಂದ್ರಗಳು:

- ಪಾಂಡಿಚೇರಿ
- ಮಚಲಿಪಟ್ಟಣ
- ಕಲ್ಲಿಕೋಟೆ
- ಮಾಹೆ
- ಕಾರೈಕಲ್
- ಚಂದ್ರನಗರ

ಊ.

26. ಬ್ರಿಟಿಷರ ವ್ಯಾಪಾರಿ ಕೋಠಿಗಳು

ಬ್ರಿಟಿಷರು ಭಾರತದಲ್ಲಿ ಕೆಳಗಿನ ಪ್ರಮುಖ ನಗರಗಳಲ್ಲಿ ವ್ಯಾಪಾರಿ ಕೋಠಿಗಳನ್ನು ಸ್ಥಾಪಿಸಿದರು.

- ಮದ್ರಾಸ್
- ಕಲ್ಕತ್ತಾ
- ಮುಂಬೈ
- ಅಹ್ಮದಾಬಾದ್
- ಆಗ್ರಾ
- ಬ್ರೋಚ್

27. ಆಗ್ನೇಯ ಏಷ್ಯಾದ ಪ್ರಮುಖ ದ್ವೀಪ ರಾಷ್ಟ್ರಗಳು

- ಇಂಡೋನೇಷಿಯಾ
- ಮಲುಕ್ಕಾ
- ಥೈಲ್ಯಾಂಡ್
- ಫಿಲಿಪ್ಪೈನ್ಸ್
- ಕಾಂಬೋಡಿಯಾ

28. ಯುರೋಪಿಯನ್ನರ ಮೂಲ ಉದ್ದೇಶಗಳು

- ಪೂರ್ವ ದೇಶಗಳೊಂದಿಗೆ ವ್ಯಾಪಾರದ ಏಕಸ್ವಾಮ್ಯತೆ ಸಾಧಿಸುವುದು.
- ವಸಾಹತು ಸಾಮ್ರಾಜ್ಯ ನಿರ್ಮಿಸುವುದು.
- ಕ್ರೈಸ್ತ ಧರ್ಮದ ಪ್ರಚಾರ ಮಾಡುವುದು.

29. ಪೋರ್ಚುಗೀಸರ ಏಳಿಗೆಗೆ ಕಾರಣಗಳು

- ಕಲ್ಲಿಕೋಟೆಯ ದೊರೆ ಜಾಮೋರಿನ್ ವಾಸ್ಕೋಡಗಾಮನಿಗೆ ವ್ಯಾಪಾರಕ್ಕೆ ಅನುಮತಿ ನೀಡಿದನು.
- ಅಲ್ಬುಕರ್ಕನು ವಿಜಯಪುರದ ಸುಲ್ತಾನನಿಂದ ಗೋವಾವನ್ನು ವಶಪಡಿಸಿಕೊಂಡನು.
- ನಂತರದ ಗವರ್ನರ್‌ಗಳು ದಿಯು, ದಮನ, ಮುಂಬೈ, ಸಾಲ್ಸೆಟ್ ಹಾಗೂ ಬೆಸ್ಸೀನ್ ಪ್ರದೇಶಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿದರು.

30. ಡೂಪ್ಲೆಯ ಸಾಧನೆಗಳು

- ಡೂಪ್ಲೆ ಫ್ರೆಂಚರ ಅತ್ಯಂತ ಚಾಣಾಕ್ಷ ಗವರ್ನರ್ ಆಗಿದ್ದನು.
- ಹೈದರಾಬಾದ್ ಮತ್ತು ಕರ್ನಾಟಕದಲ್ಲಿ ಫ್ರೆಂಚರ ಪ್ರಭಾವವನ್ನು ಹೆಚ್ಚಿಸಿದನು.

31. ಪೋರ್ಚುಗೀಸರ ಅವನತಿಗೆ ಕಾರಣಗಳು

- ಡಚ್ಚರು ಮತ್ತು ಇಂಗ್ಲೀಷರ ನೌಕಾಪಡೆಗಳು ಹೆಚ್ಚು ಬಲಿಷ್ಠವಾಗಿದ್ದವು.
- ಅಧಿಕಾರಿಗಳ ಭ್ರಷ್ಟಾಚಾರ.
- ನೌಕರರ ಸ್ವಾಮಿನಿಷ್ಠೆ ಕುಂದಿತು.
- ಬಲವಂತದ ಮತಾಂತರ.
- ವಿಜಯನಗರ ಸಾಮ್ರಾಜ್ಯದ ಪತನದಿಂದ ವ್ಯಾಪಾರ ಕುಂಠಿತವಾಯಿತು.

ಋ.

32. ಡಚ್ಚರ ವ್ಯಾಪಾರ ಕೇಂದ್ರಗಳು

- 1602ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾಯಿತು.
- ಪುಲಿಕಾಟ್ ಇವರ ರಾಜಧಾನಿಯಾಗಿತ್ತು.
- ಪ್ರಮುಖ ವ್ಯಾಪಾರ ಕೇಂದ್ರಗಳು:
    - ಆಗ್ರಾ
    - ಮಚಲಿಪಟ್ಟಣ
    - ಸೂರತ್
    - ಕಾರೈಕಲ್

- ನಾಗಪಟ್ಟಣಂ
- ಕೊಚ್ಚಿ

33. ಫ್ರೆಂಚರ ಅವನತಿಗೆ ಕಾರಣಗಳು

- ಫ್ರಾನ್ಸ್ ಸರ್ಕಾರದ ಪೂರ್ಣ ಬೆಂಬಲದ ಕೊರತೆ.
- ಫ್ರಾನ್ಸಿನ ರಾಜಕೀಯ ಗೊಂದಲ ಮತ್ತು ಕ್ರಾಂತಿಗಳು.
- ಬ್ರಿಟಿಷರ ಬಲಿಷ್ಠ ನೌಕಾಪಡೆ.

ಎ.

34. ಈಸ್ಟ್ ಇಂಡಿಯಾ ಕಂಪನಿ

- ಬ್ರಿಟಿಷರ ಖಾಸಗಿ ಕಂಪನಿಯಾಗಿತ್ತು.
- 1600ರಲ್ಲಿ ಸ್ಥಾಪನೆಯಾಯಿತು.
- ರಾಣಿ ಎಲಿಜಬೆತ್ ವ್ಯಾಪಾರಕ್ಕೆ ಅನುಮತಿ ನೀಡಿದಳು.
- ಸೂರತ್ ಬಂದರನ್ನು ಮೊದಲ ವ್ಯಾಪಾರ ಕೇಂದ್ರವನ್ನಾಗಿಸಿಕೊಂಡರು.
- ಸರ್ ಥಾಮಸ್ ರೋ ಜಹಾಂಗೀರನ ಆಸ್ಥಾನಕ್ಕೆ ಭೇಟಿ ನೀಡಿ ವ್ಯಾಪಾರದ ಅನುಮತಿ ಪಡೆದನು.
- ಆಗ್ರಾ, ಬ್ರೋಚ್, ಅಹ್ಮದಾಬಾದ್, ಮದ್ರಾಸ್, ಕಲ್ಕತ್ತಾ ಹಾಗೂ ಮುಂಬೈಗಳಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿದರು.
- ಫರುಖ್ ಸಿಯಾರ್‌ನಿಂದ ದಸ್ತಕಗಳನ್ನು ಪಡೆದರು.
- ಕೋಟೆಗಳನ್ನು ನಿರ್ಮಿಸಿ ಸೈನಿಕರನ್ನು ನೇಮಿಸಿದರು.
- ಬ್ರಿಟಿಷರ ಸೇನಾಬಲವು ಕ್ರಮೇಣ ಬಲಿಷ್ಠವಾಯಿತು.

35. ಡಚ್ ಈಸ್ಟ್ ಇಂಡಿಯಾ ಕಂಪನಿ

- ಪೋರ್ಚುಗೀಸರ ನಂತರ ಭಾರತಕ್ಕೆ ಬಂದರು.
- ಇವರ ದೇಶ – ನೇದರ್ಲ್ಯಾಂಡ್.
- 1602ರಲ್ಲಿ ಸ್ಥಾಪನೆಯಾಯಿತು.

- ಪುಲಿಕಾಟ್ ರಾಜಧಾನಿಯಾಗಿತ್ತು.
- ಪ್ರಮುಖ ವ್ಯಾಪಾರ ಕೇಂದ್ರಗಳು:
    - ಆಗ್ರಾ
    - ಮಚಲಿಪಟ್ಟಣ
    - ಸೂರತ್
    - ಕಾರ್ೈಕಲ್
    - ನಾಗಪಟ್ಟಣಂ
    - ಕೊಚ್ಚಿ
- ನಂತರ ಆಗ್ನೇಯ ಏಷ್ಯಾದ ಕಡೆ ಹೆಚ್ಚು ಗಮನ ಹರಿಸಿದರು.

ಏ.

**36.** ಯುರೋಪಿಯನ್ನರ ವ್ಯಾಪಾರಿ ಕೋಠಿಗಳ ಪಟ್ಟಿ

| ಪೋರ್ಚುಗೀಸರು | ಡಚ್ಚರು | ಫ್ರೆಂಚರು | ಬ್ರಿಟಿಷರು |
|---|---|---|---|
| ಗೋವಾ | ಆಗ್ರಾ | ಪಾಂಡಿಚೇರಿ | ಸೂರತ್ |
| ದಿಯು | ಮಚಲಿಪಟ್ಟಣ | ಮಚಲಿಪಟ್ಟಣ | ಆಗ್ರಾ |
| ದಮನ | ಸೂರತ್ | ಕಲ್ಲಿಕೋಟೆ | ಅಹ್ಮದಾಬಾದ್ |
| ಸಾಲ್ಸೆಟ್ | ಕಾರ್ೈಕಲ್ | ಮಾಹೆ | ಬ್ರೋಚ್ |
| ಮುಂಬೈ | ನಾಗಪಟ್ಟಣಂ | ಕಾರ್ೈಕಲ್ | ಮದ್ರಾಸ್ |
| ಬೆಸ್ಸೀನ್ | ಕೊಚ್ಚಿ | ಚಂದ್ರನಗರ | ಕಲ್ಕತ್ತಾ |
| ಚೌಲ್ | | | ಮುಂಬೈ |
| ಸಾನ್ ಥೋಮ್ | | | |

## ಅಧ್ಯಾಯ-4 ಹದಿನೆಂಟನೇ ಶತಮಾನದ ಭಾರತ (ಸಾ.ಶ. 1707-1757)

ಅ.

| | | | | | | | | |
|---|---|---|---|---|---|---|---|---|
| 1.D | 2.D | 3.A | 4.B | 5.D | 6.C | 7.A | 8.B | 9.A |
| 10.B | 11.C | 12.D | 13.B | 14.C | 15.D | 16.A | 17.B | 18.A |
| 19.D | 20.B | 21.C | 22.D | 23.A | 24.B | 25.C | 26.D | 27.A |
| 28.C | 29.A | 30.B | 31.C | 32.C | | | | |

ಆ.

33. ಬ್ರಿಟಿಷರು
34. ಪೇಶ್ವೆ
35. ಬಾಲಾಜಿ ವಿಶ್ವನಾಥ
36. ಬ್ರಿಟಿಷರು ಮತ್ತು ಸಿರಾಜ್ ಉದ್ದೌಲನ
37. ಮರಾಠರು ಮತ್ತು ಅಫಘ್ಘರ ದಾಳಿಕೋರ ಅಹಮದ್ ಷಾ
38. ಕೋರ ಮಂಡಲ ತೀರ (ತಮಿಳುನಾಡು,ಆಂಧ್ರ ಪ್ರದೇಶದ ತೀರ)
39. ಸಿರಾಜ –ಉದ್-ದೌಲ
40. ಮೀರ್ ಜಾಫರ್
41. ಅರ್ಕಾಟ್-ಇಂಗ್ಲೀಷರು, ಫ್ರೆಂಚರು-ಹೈದರಾಬಾದ್

ಇ.

42. ಒಂದನೇ ಬಾಜಿರಾವ್ ನ ಸಾಧನೆಗಳು
    - ಬಾಜಿರಾವ್ ನು ಬಲಿಷ್ಟ ರಾಜತಂತ್ರ ನಿಪುಣನಾಗಿದ್ದನು.
    - ಭಾರತದಲ್ಲಿ ಬೃಹತ್ ಸಾಮ್ರಾಜ್ಯ ಕಟ್ಟುವ ಯೋಜನೆ ಹೊಂದಿದ್ದನು.
    - ಹೈದರಾಬಾದ,ಮಾಳ್ವ,ಗುಜರಾತ್ ಮತ್ತು ಬುಂದೇಲ ಖಂಡ ವಶಪಡಿಸಿಕೊಂಡನು.
    - ದಿಲ್ಲಿ ಮೇಲೆ ಸೇನೆ ಸಮೇತ ಆಕ್ರಮಣ ಮಾಡಿದನು.
    - 'ಎರಡನೇ ಶಿವಾಜಿ' ಎಂಬ ಕೀರ್ತಿಗೆ ಪಾತ್ರನಾದನು.
43. ಪ್ಲಾಸಿ ಕದನಕ್ಕೆ ಕಾರಣಗಳು

- ಸಿರಾಜನ ಅನುಮತಿ ಇಲ್ಲದೆ ಬ್ರಿಟಿಷರು ಕಲ್ಕತ್ತಾದ ಪೋರ್ಟ ವಿಲಿಯಂನ್ನು ಬಲಪಡಿಸಿದರು.
- ಬ್ರಿಟಿಷರು ವ್ಯಾಪಾರದ ರಿಯಾಯಿತಿಯನ್ನು ದುರುಪಯೋಗ ಮಾಡುತ್ತಿದ್ದರು.
- ಬ್ರಿಟಿಷರು ಕುತಂತ್ರ ಮಾಡುತ್ತಿದ್ದಾರೆಂದು ಸಿರಾಜನು ಭಾವಿಸಿದನು.
- ಸಿರಾಜನು ಇಂಗ್ಲೀಷರ ಕೋಠಿಗಳನ್ನು ಸ್ವಾದೀನ ಪಡಿಸಿಕೊಂಡರು.

44. ಬಾಲಾಜಿ ಬಾಜಿರಾವ್ ( ಸಾ.ಶ 1740-1761)

- ದಕ್ಷಿಣ ಹಾಗೂ ಉತ್ತರ ಭಾರತದಲ್ಲಿ ಮರಾಠ ಸಾಮ್ರಾಜ್ಯ ವಿಸ್ತರಿದನು.
- ಪಂಜಾಬ,ಒಡಿಸ್ಸಾ,ತಮಿಳುನಾಡಿನ ಪ್ರದೇಶಗಳನ್ನು ವಶಪಡಿಸಿಕೊಂಡನು. ಹೀಗೆ ಮರಾಠರ ಪ್ರಾಬಲ್ಯದಲ್ಲಿ ಬಾಲಾಜಿ ಬಾಜಿರಾವ್ ನು ಪ್ರಮುಖ ಪಾತ್ರ ವಹಿಸಿದ್ದಾನೆ.

45. ಕರ್ನಾಟಿಕ್ ಯುದ್ಧಗಳಿಗೆ ಕಾರಣಗಳು-

- ಕರ್ನಾಟಿಕ್ ಪ್ರದೇಶವು ಸಂಪತ್ಭರಿತವಾಗಿತ್ತು.
- ಬ್ರಿಟಿಷರು ಮತ್ತು ಫ್ರೆಂಚರ ನಡುವಿನ ವ್ಯಾಪಾರದ ಪೈಪೋಟಿ

46. ಮರಾಠರ 3 ಜನ ಪೇಶ್ವೆಗಳು

- ಬಾಲಾಜಿ ವಿಶ್ವನಾಥ ( ಸಾ.ಶ 1713-1720)
- ಒಂದನೇ ಬಾಜಿರಾವ್ ( ಸಾ. ಶ 1720 -1740)
- ಬಾಲಾಜಿ ಬಾಜಿರಾವ್ (ಸಾ.ಶ 1740-1761)

ಈ.

47. ಫ್ರೆಂಚರ ಸೋಲಿಗೆ ಕಾರಣವಾದ ಅಂಶಗಳು

- ಫ್ರೆಂಚರು ವ್ಯಾಪಾರ ನೀರ್ಲಕ್ಷಿಸಿ ರಾಜಕೀಯದಲ್ಲಿ ಆಸಕ್ತಿ ತೋರಿದರು.
- ಇಂಗ್ಲೀಷ ನೌಕಾಪಡೆ ಪ್ರಬಲವಾಗಿತ್ತು.
- ಇಂಗ್ಲೀಷ ಅಧಿಕಾರಿಗಳಲ್ಲಿ ಪರಸ್ಪರ ಸಹಕಾರವಿತ್ತು.
- ಇಂಗ್ಲೀಷ ಈಸ್ಟ ಇಂಡಿಯಾ ಕಂಪನಿ ಖಾಸಗಿ ಕಂಪನಿಯಾಗಿದ್ದು ಸ್ವತಂತ್ರ್ಯವಾಗಿತ್ತು.

- ಫ್ರೆಂಚ ಈಸ್ಟ್ ಇಂಡಿಯಾ ಕಂಪನಿ ಸರ್ಕಾರಿ ಸ್ವಾಮ್ಯದ್ದಾಗಿತ್ತು.

48. ಪ್ಲಾಸಿ ಕದನದ ಪರಿಣಾಮಗಳು

- ಮೀರ ಜಾಫರ್ ಬಂಗಾಳದ ನವಾಬನಾದನು.
- ಮೀರ್ ಜಾಫರ್ ಬ್ರಿಟಿಷರ ಕೈಗೊಂಬೆಯಾದನು.
- ಕಂಪನಿ ಇಪ್ಪತ್ತ ನಾಲ್ಕು ಪರಗಣವೆಂಬ ಜಿಲ್ಲೆಯ ಜಮೀನ್ದಾರಿ ಹಕ್ಕನ್ನು ಪಡೆಯಿತು.
- ಪ್ಲಾಸಿ ಕದನವು ಬಕ್ಸಾರ ಕದನಕ್ಕೂ ಕಾರಣವಾಯಿತು.
- ವ್ಯಾಪಾರಿಗಳಾದ ಬ್ರಿಟಿಷರು ಆಡಳಿತ ನಡೆಸಲು ಪ್ರಾರಂಭಿಸಿದರು.
- ಪ್ಲಾಸಿ ಕದನವು ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಗೆ ಕಾರಣವಾಯಿತು.

ಉ.

49. ಭಾರತದಲ್ಲಿ ಬ್ರಿಟಿಷರ ಏಳಿಗೆಗೆ ಕರ್ನಾಟಿಕ್ ಕದನಗಳು ಭೂಮಿಕೆಯಾದವು

- ಮೊಗಲ ಸಾಮ್ರಾಜ್ಯದ ಒಂದು ಪ್ರಾಂತ್ಯ ಕರ್ನಾಟಿಕ್ ಆಗಿತ್ತು.
- ಇದು ಕೋರಮಂಡಲ ತೀರದ ಹಿನ್ನಾಡು ಅತ್ಯಂತ ಸಂಪತ್ಭರಿತವಾಗಿತ್ತು.
- ಭಾರತದಲ್ಲಿ ವ್ಯಾಪಾರದ ನಿಯಂತ್ರಣಕ್ಕಾಗಿ ಫ್ರೆಂಚರು ಮತ್ತು ಬ್ರಿಟಿಷರ ನಡುವೆ ಪೈಪೋಟಿಯು ಕದನಕ್ಕೆ ದಾರಿ ಮಾಡಿಕೊಟ್ಟಿತು.
- ಈ ಕದನಗಳೇ ಮೂರು ಕರ್ನಾಟಿಕ್ ಕದನಗಳಾಗಿವೆ
- ಈ ಸಂಪತ್ಭರಿತ ಪ್ರದೇಶದ ನಿಯಂತ್ರಣ ಹಾಗೂ ವ್ಯಾಪಾರವೇ ಬ್ರಿಟಿಷ ಹಾಗೂ ಫ್ರೆಂಚರ ನಡುವಿನ ಕದನಗಳಿಗೆ ಕಾರಣವಾಗಿತ್ತು.
- ಆದ್ದರಿಂದ ಕರ್ನಾಟಿಕ್ ಪ್ರದೇಶವೆ ಕರ್ನಾಟಿಕ್ ಕದನ ಗಳಿಗೆ ಭೂಮಿಕೆಯಾಗಿದ್ದವು ಎಂದು ಹೇಳಬಹುದು.

50. 18 ನೇ ಶತಮಾನ ಮರಾಠರ ಪರಮಾಧಿಕಾರದ ಕಾಲ-

- ಮೊಘಲರ ಅವನತಿ ಕಾಲದಲ್ಲಿ 18ನೇ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದವರು ಮರಾಠರಾಗಿದ್ದಾರೆ.
- ಮರಾಠ ರಾಜ್ಯದ ಸ್ಥಾಪಕ ಶಿವಾಜಿಯಾಗಿದ್ದಾರೆ

- ಮೊಘಲರು ಹಾಗೂ ಬಹಮನಿಯ ರಾಜ್ಯಗಳ ಉಚ್ಛ್ರಾಯ ಕಾಲದಲ್ಲಿದ್ದಾಗ ಪರ್ಯಾಯವಾಗಿ ಸ್ವತಂತ್ರ್ಯ ರಾಜ್ಯ ಕಟ್ಟಿ ಯಶಸ್ವಿಯಾದವರು ಶಿವಾಜಿಯಾಗಿದ್ದಾರೆ.
- ಶಿವಾಜಿಯು ಆಸ್ಥಾನದಲ್ಲಿ 'ಅಷ್ಟ ಪ್ರಧಾನ'ರೆಂಬ 8ಜನ ಮಂತ್ರಿಗಳನ್ನು ನೇಮಿಸಿದ್ದನು.
- ಪೇಶ್ವೆ ಪ್ರಧಾನಮಂತ್ರಿಯಾಗಿದ್ದನು.
- ಪೇಶ್ವೆ ನೇತೃತ್ವದಲ್ಲಿ ಭಾರತ ಒಂದು ಬೃಹತ್ ರಾಜಕೀಯ ಹಾಗೂ ಮಿಲಿಟರಿ ಶಕ್ತಿಯಾಗಿ ಹೊರಹೊಮ್ಮಿದರು.
- ಬಾಲಾಜಿ ವಿಶ್ವನಾಥ,ಒಂದನೇ ಬಾಜಿರಾವ್,ಬಾಲಾಜಿ ಬಾಜಿರಾವ್ ಪ್ರಮುಖ ಶ್ರೇಷ್ಠ ಪೇಶ್ವೆಗಳಾಗಿದ್ದಾರೆ.
- ಸುಮಾರು ಸಾ.ಶ 1713-1818 ಇದು ಮರಾಠರ ಪ್ರಾಬಲ್ಯದ ಕಾಲವಾಗಿತ್ತು.
- 7 ಜನ ಪೇಶ್ವೆಗಳು ಭಾರತವನ್ನಾಳಿದರು.
- ಮರಾಠರು ಬ್ರಿಟಿಷರು ಹಾಗೂ ಮೊಘಲರನ್ನು ಎದುರಿಸಿ ಭಾರತದಲ್ಲಿ ಹಿಂದೂ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದರು.
- ಆದ್ದರಿಂದ 18 ನೇ ಶತಮಾನದ ಕಾಲವನ್ನು ಮರಾಠರ ಪರಮಾಧಿಕಾರದ ಕಾಲ ಎನ್ನುವರು.

## ಅಧ್ಯಾಯ-5 ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆ (ಸಾ.ಶ 1758-1856)

ಅ.

| | | | | | | |
|---|---|---|---|---|---|---|
| 1.A | 2.A | 3.B | 4.A | 5.C | 6.A | 7.B |
| 8.D | 9.C | 10.A | 11.B | 12.D | 13.A | 14.B |
| 15.C | 16.D | 17.B | 18.A | 19.C | 20.B | 21.C |

ಆ.

22. ಸಾ.ಶ 1848

23. ಬೂಕಂದಾಯವನ್ನು ಸಂಗ್ರಹಿಸುವ ಹಕ್ಕು

24. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ದಿವಾನಿ ಹಕ್ಕಿನ ಮೂಲಕ ಬಂಗಾಳದಲ್ಲಿ ಅಧಿಕೃತ ಸಾರ್ವಭೌಮತ್ವ ಪಡೆಯಿತು.

25.ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯನ್ನು ಬ್ರಿಟಿಷ್ ಸರ್ಕಾರ ತನ್ನ ಹತೋಟಿಯಲ್ಲಿಟ್ಟುಕೊಳ್ಳುವುದಕ್ಕಾಗಿ ರೆಗ್ಯುಲೇಟಿಂಗ್ ಆ್ಯಕ್ಟ

26.ಕಲ್ಕತ್ತಾ

27. 4

28. ಸಿಖ್ಖರನ್ನು ಒಗ್ಗೂಡಿಸಿ ಪ್ರಬಲ ರಾಜಕೀಯ ಶಕ್ತಿಯಾಗಿ ಮಾರ್ಪಡಿಸಿದ ಮತ್ತು ಪಂಜಾಬ್ ರಾಜ್ಯವನ್ನಾಳಿದ ಆಧುನಿಕ ಭಾರತದ ಒಬ್ಬ ಸ್ಮರಣೀಯ ಮಹಾರಾಜ.

29.ಪಂಜಾಬ

30. ದತ್ತು ಸ್ವೀಕಾರ

31.ದತ್ತು ಮಕ್ಕಳಿಗೆ ಹಕ್ಕಿಲ್ಲ ಮತ್ತು ಸಹಾಯಕ ಸೈನ್ಯ ಪದ್ಧತಿ

32. ಮೊಘಲ್ ಚಕ್ರವರ್ತಿ ಎರಡನೇ ಷಾ ಆಲಂ

ಇ. 33.

1.ವೆಲ್ಲೆಸ್ಲಿ

2.ಡಾಲಹೌಸಿ

3.ದಿವಾನಿ ಹಕ್ಕು

4.ಸಾ.ಶ 1764

5.ಸಾ.ಶ 1857

ಈ.

34.

- ಬ್ರಿಟಿಷರು ಭಾರತೀಯ ರಾಜರನ್ನು ಬಲವಂತವಾಗಿ ಈ ಪದ್ಧತಿಗೆ ಒಳಪಡಿಸಿದರು.
- ಬ್ರಿಟಿಷ್ ಸೈನ್ಯವನ್ನು ಭಾರತೀಯ ರಾಜ ತನ್ನ ಆಸ್ಥಾನದಲ್ಲಿಟ್ಟುಕೊಂಡು ಅದರ ಸಂಪೂರ್ಣ ವೆಚ್ಚ ಭರಿಸಬೇಕಿತ್ತು.
- ಇಲ್ಲವೇ ಭೂಭಾಗವೊಂದನ್ನುಬ್ರಿಟಿಷರಿಗೆ ಹಸ್ತಾಂತರಿಸಬೇಕಿತ್ತು.

ಹೀಗೆ ಭಾರತದ ಅನೇಕ ರಾಜ್ಯಗಳು ಬ್ರಿಟಿಷರ ಹತೋಟಿಗೆ ಬಂದವು.

35. ಸಹಾಯಕ ಸೈನ್ಯ ಪದ್ಧತಿಯ ಪರಿಣಾಮಗಳು

- ಭಾರತದ ರಾಜ್ಯಗಳು ಆರ್ಥಿಕವಾಗಿ ದುರ್ಬಲಗೊಂಡವು.
- ಬ್ರಿಟಿಷರು ಭಾರಿ ಭೂಪ್ರದೇಶಗಳನ್ನು ತಮ್ಮ ಹತೋಟಿಗೆ ತೆಗೆದುಕೊಂಡರು.
- ಭಾರತದ ರಾಜರು ಪರೋಕ್ಷವಾಗಿ ಬ್ರಿಟಿಷರ ಅಧೀನರಾದರು.
- ಈ ನೀತಿಗೆ ಒಳಪಟ್ಟ ರಾಜ್ಯಗಳು ತಮ್ಮ ಪರಮಾಧಿಕಾರವನ್ನೇ ಕಳೆದುಕೊಂಡವು.

36.

- ಯಾವುದೇ ಭಾರತೀಯ ರಾಜನಿಗೆ ಮಕ್ಕಳಿಲ್ಲದಿದ್ದರೆ ಅದು ಬ್ರಿಟಿಷರ ವಶವಾಗುತ್ತಿತ್ತು.

- ಈ ಕುಟೀಲ ನೀತಿಯಿಂದಾಗಿ ಔದ್.ಸತಾರಾ,ನಾಗಪುರ ಮತ್ತು ಝಾನ್ಸಿ ಮುಂತಾದ 11 ರಾಜ್ಯಗಳು ಬ್ರಿಟಿಷರ ವಶವಾದವು.

ಹೀಗೆ ಭಾರತದ ಅನೇಕ ಪ್ರದೇಶಗಳು ಬ್ರಿಟಿಷರ ವಶವಾದವು.

37. ದಿವಾನಿ ಹಕ್ಕಿನ ಪರಿಣಾಮಗಳು

- ಬ್ರಿಟಷ ಈಸ್ಟ್ ಇಂಡಿಯಾ ಕಂಪನಿಯು ದಿವಾನಿ ಹಕ್ಕಿನ ಮೂಲಕ ಅಧಿಕೃತ ಸಾರ್ವಭೌಮತ್ವ ಪಡೆಯಿತು.
- ಬಂಗಾಳವು ತೀವ್ರ ಆರ್ಥಿಕ ಶೋಷಣೆಗೆ ಒಳಗಾಯಿತು.
- ಕಂಪನಿಯು ಕೋಟ್ಯಾಂತರ ರೂಪಾಯಿ ಸಂಗ್ರಹಿಸಿ ಖಜಾನೆ ತುಂಬಿಸಿಕೊಂಡಿತು.

38. ದತ್ತು ಪುತ್ರರಿಗೆ ಹಕ್ಕಿಲ್ಲವೆಂಬ ನೀತಿಯು ನ್ಯಾಯಬದ್ಧವಾಗಿರಲಿಲ್ಲ ಏಕೆಂದರೆ

- ಈ ನೀತಿಯನ್ನು ಡಾಲಹೌಸಿ ಜಾರಿಗೆ ತಂದಿದ್ದನು.
- ಇದೊಂದು ವಿಲಕ್ಷಣ ನೀತಿಯಾಗಿತ್ತು.
- ಭಾರತದ ಯಾವುದೇ ರಾಜನು ಪುತ್ರ ಸಂತಾನವಿಲ್ಲದೇ ದತ್ತು ಪಡೆದರೆ ದತ್ತು ಮಕ್ಕಳು ಪಟ್ಟಕ್ಕೆ ಏರುವ ಹಾಗಿರಲಿಲ್ಲ.

39. ಬಕ್ಸಾರ ಕದನದ ಕಾರಣಗಳು-

- ಬಂಗಾಳದ ನವಾಬ ಮೀರಕಾಸೀಂ ಸ್ವತಂತ್ರ ಮನೋಭಾವದವನಾಗಿದ್ದನು.
- ಬ್ರಿಟಿಷರು ದುರ್ಬಳಕೆ ಮಾಡಿಕೊಳ್ಳುತ್ತಿದ್ದ ದಸ್ತಕಗಳನ್ನು ಪರಿಶೀಲಿಸಿದನು.
- ಇದರಿಂದ ಕುಪಿತಗೊಂಡ ಬ್ರಿಟಿಷರು ಮೀರ್ ಕಾಸಿಂನನ್ನು ಕಿತ್ತೊಗೆದರು.
- ಕುಪಿತಗೊಂಡ ಮೀರ್ ಕಾಸಿಂ ನು ಸೈನಿಕ ಮೈತ್ರಿಕೂಟವನ್ನು ಮಾಡಿಕೊಂಡು ಬ್ರಿಟಿಷರ ಮೇಲೆ ಎರಗಿದನು.

40. ಬಕ್ಸಾರ ಕದನದ ಫಲಿತಾಂಶಗಳು

- ಬ್ರಿಟಿಷರು ಜಯ ಗಳಿಸಿದರು.
- ಮಿರ್ ಜಾಫರ್ ನು ಬಂಗಾಳದ ನವಾಬನಾದನು.
- ಬ್ರಿಟಿಷರು ಮತ್ತಷ್ಟು ಪ್ರಬಲರಾದರು.

41. ಬಂಗಾಳ,ಬಿಹಾರ,ಒರಿಸ್ಸಾಗಳ ಪ್ರಾಂತ್ಯಗಳ ದಿವಾನಿ ಹಕ್ಕನ್ನು ಪಡೆದರು.

42. ಸೈನಿಕ ವೆಚ್ಚದ ಅಗಾಧ ಹೊರೆಯು ಭಾರತದ ರಾಜ್ಯಗಳನ್ನು ಆರ್ಥಿಕವಾಗಿ ದುರ್ಬಲಗೊಳಿಸಿತು.

ಬ್ರಿಟಿಷರು ಭಾರಿ ಭೂಪ್ರದೇಶಗಳನ್ನು ತಮ್ಮ ಹತೋಟಿಗೆ ತೆಗೆದುಕೊಂಡರು.

ಈ ಪದ್ಧತಿಯನ್ನು ಒಪ್ಪಿಕೊಂಡ ರಾಜರು ಪರೋಕ್ಷವಾಗಿ ಬ್ರಿಟಿಷರ ಅಧೀನರಾದರು.

ಈ ನೀತಿಗೆ ಒಳಪಟ್ಟ ರಾಜ್ಯಗಳು ತಮ್ಮ ಪರಮಾಧಿಕಾರವನ್ನೇ ಕಳೆದುಕೊಂಡವು.

43. ಲಾರ್ಡ್ ಡಾಲ್ಹೌಸಿ ಜಾರಿಗೆ ತಂದ 'ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ'ಯು ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿದ್ದ ದತ್ತು ಸ್ವೀಕಾರ ರೂಢಿಗೆ ಸಂಪೂರ್ಣವಾಗಿ ವಿರುದ್ಧವಾಗಿತ್ತು.

ಮಕ್ಕಳಿಲ್ಲದ ದೇಶೀಯ ರಾಜರ ದತ್ತುಪುತ್ರನಿಗೆ ಪಟ್ಟವೇರುವ ಹಕ್ಕಿಲ್ಲವೆಂದು ಘೋಷಿಸಿದ ಈ ಕುಟಿಲ ನೀತಿಯು, ರಾಜರ ನೈಸರ್ಗಿಕ ಹಕ್ಕನ್ನು ಕಸಿದುಕೊಂಡಿತ್ತು.

ಯಾವುದೇ ಜನಹಿತಾಸಕ್ತಿ ಇಲ್ಲದೆ ಕೇವಲ ಬ್ರಿಟಿಷರ ಅಧಿಕಾರ ಮತ್ತು ಸಂಪತ್ತಿನ ಗಳಿಕೆಗಾಗಿ ಜಾರಿಯಾದ ಈ ಕ್ರಮವು ಭಾರತೀಯರ ಧಾರ್ಮಿಕ ಹಾಗೂ ಸಾಮಾಜಿಕ ನಂಬಿಕೆಗಳಿಗೆ ಧಕ್ಕೆ ತಂದಿತ್ತು.

44. ಕಂಪನಿಯ ಅಧಿಕಾರವನ್ನು ಕಾನೂನುಬದ್ಧಗೊಳಿಸಲು ಗವರ್ನರ್ ರಾಬರ್ಟ್ ಕ್ಲೈವ್ ಕ್ರಿ.ಶ. 1765ರಲ್ಲಿ ಮೊಘಲ್ ಚಕ್ರವರ್ತಿ ಎರಡನೇ ಷಾ ಆಲಂನೊಡನೆ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದಂತೆ ಕಂಪನಿಯು ಪ್ರತಿವರ್ಷ 26 ಲಕ್ಷ ರೂಪಾಯಿಗಳನ್ನು ಮೊಘಲ್ ರಾಜನಿಗೆ ನೀಡಬೇಕೆಂದು ನಿರ್ಧರಿಸಲಾಯಿತು. ಇದಕ್ಕೆ ಪ್ರತಿಯಾಗಿ ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾ ಪ್ರಾಂತ್ಯಗಳ 'ದಿವಾನಿ' ಹಕ್ಕನ್ನು (ಭೂಕಂದಾಯ ಸಂಗ್ರಹಿಸುವ ಹಕ್ಕು) ಪಡೆದುಕೊಂಡರು.

ಉ.

45. ಬ್ರಿಟಿಷ ಸರ್ಕಾರವು ಕಂಪನಿಯ ಅಧಿಕಾರಿಗಳ ಅನೈತಿಕ ಮಾರ್ಗವನ್ನು ತಡೆಗಟ್ಟಿತು.

- ಈ ಕಾಯ್ದೆ ವಾರನ್ ಹೆಸ್ಟಿಂಗ್ ಜಾರಿಗೆ ತಂದನು.
- ಕಲ್ಕತ್ತವನ್ನು ತಮ್ಮ ಅಧಿಕಾರದ ಕೇಂದ್ರವನ್ನಾಗಿಸಿಕೊಂಡರು.
- ಪ್ರಾಂತೀಯ ಸರ್ಕಾರದ ಕಾರ್ಯವೈಖರಿಯನ್ನು ತಮ್ಮ ಹತೋಟಿಗೆ ತೆಗೆದುಕೊಂಡು ಬಂದರು.

46. ದಕ್ಷಿಣ ಭಾರತದಲ್ಲಿ ಬ್ರಿಟಿಷರ ಶಕ್ತಿಯು ಕ್ರಮೇಣ ವೃದ್ಧಿಸಿತು.

- ಹೈದರಲಿ ಮತ್ತು ಟಿಪ್ಪು ಬ್ರಿಟಿಷರ ವಿರುದ್ಧ ಹೋರಾಡಿದರು.
- ಮೈಸೂರು ರಾಜ್ಯವನ್ನು 4 ಭಾಗಗಳಾಗಿ ವಿಂಗಡಿಸಿದರು.
  ಒಂದು – ಬ್ರಿಟಿಷರು
  ಇನ್ನೊಂದು-ನಿಜಾಮ
  ಮತ್ತೊಂದು-ಮರಾಠರಿಗೆ
  ಉಳಿದ ಭಾಗ ಮೈಸೂರು ಒಡೆಯರಿಗೆ
  ಇದರಿಂದಾಗಿ ಭಾರತದಲ್ಲಿ ಬ್ರಿಟಿಷರ ಶಕ್ತಿ ಕ್ರಮೇಣ ವೃದ್ಧಿಸಿತು.

47. ಆಂಗ್ಲೋ ಮರಾಠ ಯುದ್ಧಗಳ ಪರಿಣಾಮಗಳು

- ಆಂಗ್ಲೋ ಮರಾಠ ಯುದ್ಧಗಳು 3 ಜರುಗಿವೆ.
- ಬ್ರಿಟಿಷರು ಜಯ ಸಾಧಿಸಿದರು.
- ಪೇಶ್ವೆ ಬ್ರಿಟಿಷರಿಗೆ ಶರಣಾದನು.
- ಯುದ್ಧಗಳಲ್ಲಿ ಮರಾಠರು ಸೋತರು.
- ಸಮಸ್ತ ಪ್ರದೇಶಗಳು ಇಂಗ್ಲೀಷರ ವಶವಾದವು.
- ಇಂಗ್ಲೀಷರು ಪೇಶ್ವೆ ಪಟ್ಟವನ್ನು ರದ್ದು ಮಾಡಿದರು.

48. ಆಂಗ್ಲೋ ಸಿಖ್ ಯುದ್ಧಗಳು

- ಸಿಖ್ ಹಾಗೂ ಬ್ರಿಟಿಷರ ನಡುವೆ ಜರುಗಿದ ಯುದ್ಧಗಳಾಗಿವೆ.
- ರಣಜಿತ್ ಸಿಂಗ್ ಎಂಬ ಪರಾಕ್ರಮಿ ಸಿಖ್ ನಾಯಕ.

- ಸಿಖ್ ರನ್ನು ಒಗ್ಗೂಡಿಸಿ ಪ್ರಬಲ ರಾಜಕೀಯ ಶಕ್ತಿಯಾಗಿ ಮಾರ್ಪಡಿಸಿದನು.
- ರಣಜಿತ್ ಸಿಂಗ್ ನ ಮರಣಾನಂತರ ರಾಜಕೀಯ ಗೊಂದಲ ಏರ್ಪಟ್ಟಿತ್ತು.
- ಇದರ ಲಾಭ ಬ್ರಿಟಿಷರು ತೆಗೆದುಕೊಂಡರು
- ಬ್ರಿಟಿಷರು ಮತ್ತು ಸಿಖ್ ರ ನಡುವೆ 4 ಯುದ್ಧಗಳು ನಡೆದವು.
- ಕೊನೆಗೆ ಸಿಖ್ ರು ಸೋತರು.
- ಪಂಜಾಬ ಬ್ರಿಟಿಷರ ವಶವಾಯಿತು.

ಊ.

49. ಬ್ರಿಟಿಷರು ಮೀರ್ ಕಾಸಿಂ ನನ್ನು ಅಧಿಕಾರದಿಂದ ಕೆಳಗಿಳಿಸಲು ಪ್ರಮುಖ ಕಾರಣಗಳು

- ಮೀರ್ ಕಾಸಿಂ ಸ್ವತಂತ್ರ್ಯ ಮನೋಭಾವದವನಾಗಿದ್ದನು.
- ಬ್ರಿಟಿಷರು ದುರ್ಬಳಕೆ ಮಾಡಿಕೊಳ್ಳುತ್ತಿದ ದಸ್ತಕಗಳನ್ನು ಪರಿಶೀಲಿಸಿದನು.
- ಬಂಗಾಳದ ಎಲ್ಲಾ ವ್ಯಾಪಾರ ಸುಂಕ ಮುಕ್ತಗೊಳಿಸಿದನು.
- ಬ್ರಿಟಿಷರ ಕೈಗೊಂಬೆಯಾಗಿರಲು ಇಷ್ಟವಿರಲಿಲ್ಲ.

50. ಭಾರತದಲ್ಲಿ ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆಗೆ ಪ್ರಮುಖ ಅಂಶಗಳು

- ಕರ್ನಾಟಿಕ್ ಯುದ್ಧಗಳು
- ಪ್ಲಾಸಿ ಕದನ
- ಬಕ್ಸಾರ ಕದನ
- ದಿವಾನಿ ಹಕ್ಕಿನ ಪ್ರಾಪ್ತಿ
- ರೆಗ್ಯುಲೇಟಿಂಗ್ ಆಕ್ಟ್
- ಆಂಗ್ಲೋ –ಮೈಸೂರು ಯುದ್ಧಗಳು
- ಆಂಗ್ಲೋ – ಮರಾಠ ಯುದ್ಧಗಳು
- ಆಂಗ್ಲೋ – ಸಿಖ್ ಯುದ್ಧಗಳು
- ಸಹಾಯಕ ಸೈನ್ಯ ಪದ್ಧತಿ
- ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ.

## ಅಧ್ಯಾಯ-6 ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

ಅ.

| | | | |
|---|---|---|---|
| 1.D | 2.B | 3.C | 4.C |
| 5.C | 6.D | 7.A | 8.A |

ಆ. 9

1. C
2. D
3. E
4. A
5. F

ಇ.

10. ಬ್ರಿಟಷರು ಭೂ ಕಂದಾಯವನ್ನು ಖಾಯಂ ಆಗಿ ಜಮೀನ್ದಾರರ ಮೂಲಕ ವಸೂಲಿ ಮಾಡುವ ಒಪ್ಪಂದವನ್ನು ಖಾಯಂ ಜಮೀನ್ದಾರಿ ಪದ್ಧತಿ ಎನ್ನುವರು.

11. ಮಧ್ಯವರ್ತಿಗಳ ಸಹಾಯವಿಲ್ಲದೇ ರೈತನೇ ನೇರವಾಗಿ ಸರ್ಕಾರಕ್ಕೆ ಕಂದಾಯ ಸಂದಾಯ ಮಾಡುವುದೇ ರೈತವಾರಿ ಪದ್ಧತಿಯಾಗಿದೆ.

12.ಸಾ.ಶ 1844

13. ಭಾರತದ ಸಂಪತ್ತು ಇಂಗ್ಲೆಂಡಿಗೆ ಹರಿದು ಹೋಗಿರುವುದರಿಂದ

14 ಸುಲಿಗೆಕೋರರು

15. ದಾದಾಭಾಯಿ ನವರೋಜಿ

16. ಸಾ.ಶ 1784

17. 1 ಲಕ್ಷ ರೂ

18. ಲಾರ್ಡ್ ಕಾರ್ನ್ ವಾಲಿಸ್

19. 1773 ರಲ್ಲಿ ಜಾರಿಗೆ ತಂದಿತು. ಆಗಿನ ಬ್ರಿಟಿಷ್ ಪ್ರಧಾನಿ ಲಾರ್ಡ್ ನಾರ್ತ್ ಅವರ ನೇತೃತ್ವದಲ್ಲಿ ಈ ಕಾಯ್ದೆಯನ್ನು ಪಾಸ್ ಮಾಡಲಾಯಿತು

ಈ.

20. ಮುಂಬೈ, ಕಲ್ಕತ್ತಾ, ಮದ್ರಾಸ್

21. ಭಾರತದಲ್ಲಿ ಬ್ರಿಟಿಷರು ಜಾರಿಗೆ ತಂದ ಭೂಕಂದಾಯ ನೀತಿಯ ಉದ್ದೇಶ

- ಭಾರತದಲ್ಲಿ ಯುದ್ಧಗಳ ವೆಚ್ಚ ತುಂಬುವುದು
- ಬ್ರಿಟಿಷ ಸಿಬ್ಬಂದಿಗಳ ವೇತನ
- ಹಣಕಾಸಿನ ಅವಶ್ಯಕತೆ

22. ಬ್ರಿಟಿಷರು ಜಾರಿಗೆ ತಂದ ಮೂರು ಕಂದಾಯ ಪದ್ಧತಿಗಳು

- ಖಾಯಂ ಜಮೀನ್ದಾರಿ ಪದ್ಧತಿ
- ರೈತವಾರಿ ಪದ್ಧತಿ
- ಮಹಲ್ವಾರಿ ಪದ್ಧತಿ

23.ಭೂ ಕಂದಾಯ ಪದ್ಧತಿಯ ಪರಿಣಾಮಗಳು

- ಜಮೀನನ್ನು ಮಾರಾಟದ ವಸ್ತುವನ್ನಾಗಿ ಬ್ರಿಟಿಷರು ಪರಿವರ್ತಿಸಿದರು.
- ಜಮೀನಿನ ಹರಾಜು ಮತ್ತು ಮಾರಾಟ ಪ್ರಕರಣಗಳು ಹೆಚ್ಚಿದವು.
- ಭೂ ಕಂದಾಯವನ್ನು ನಗದು ರೂಪದಲ್ಲಿ ನೀಡಬೇಕಾದ ಕಾರಣ ಹಣದ ಮಹತ್ವ ಹೆಚ್ಚಾಯಿತು.

24.ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯಿಂದಾಗಿ ಭಾರತದ ಆರ್ಥಿಕತೆಯ ಮೇಲಾದ ಪ್ರಭಾವ

- ವ್ಯಾಪಾರ ಮತ್ತು ವಾಣಿಜ್ಯದ ಮೇಲೆ ಏಕಸ್ವಾಮ್ಯತೆ ಬ್ರಿಟಿಷ ಕಂಪನಿಯು ಸಾಧಿಸಿತು.
- ಭಾರತದ ಸಂಪತ್ತು ಇಂಗ್ಲೆಂಡಿಗೆ ಹರಿಯಿತು.

25. ಭಾರತದಲ್ಲಿ ಪ್ರಮುಖ ಶಾಸನಾತ್ಮಕ ಸುಧಾರಣೆಗಳು

- ರೆಗ್ಯುಲೇಟಿಂಗ್ ಕಾಯ್ದೆ ( ಸಾ.ಶ 1773)
- ಪಿಟ್ ಇಂಡಿಯಾ ಕಾಯ್ದೆ (ಸಾ.ಶ 1784)
- ಮಾರ್ಲೆ-ಮಿಂಟೋ ಸುಧಾರಣೆ

- ಮಾಂಟೆಗ್ಯು- ಚೆಲ್ಮ್ಸ್ ಫರ್ಡ ಸುಧಾರಣೆ (ಸಾ.ಶ 1919)
- 1935 ರ ಶಾಸನ

26. ಭಾರತದಲ್ಲಿ ಸಂಪತ್ತಿನ ಸೋರಿಕೆಯ ಪರಿಣಾಮಗಳು

- ಭಾರತವು ಬಡ ರಾಷ್ಟ್ರವಾಗಿ ಮಾರ್ಪಾಡುಗೊಂಡಿತು.
- ಬ್ರಿಟಿಷ ಭಾರತದಲ್ಲಿ ಬಂಡವಾಳದ ಕೊರತೆ ಉಂಟಾಯಿತು.
- ಭಾರತದ ಕೈಗಾರಿಕಾ ಅಭಿವೃದ್ದಿಗೆ ಅಡ್ಡಿಯಾಯಿತು.

27. ಸಾ.ಶ 1935 ರ ಭಾರತ ಸರ್ಕಾರದ ಕಾಯ್ದೆಯಿಂದಾದ ಬದಲಾವಣೆಗಳು

- ಭಾರತದ ಒಕ್ಕೂಟ ರಚನೆಯಾಯಿತು.
- ದ್ವಿಮುಖ ಆಡಳಿತ ಪದ್ಧತಿಯನ್ನು ಜಾರಿಗೆ ತರಲಾಯಿತು.

ಉ.

28. ಖಾಯಂ ಜಮೀನ್ದಾರಿ ಪದ್ಧತಿ ರೈತರ ಮೇಲೆ ಬೀರಿದ ಪರಿಣಾಮ

- ಜಮೀನ್ದಾರರು ಕೃಷಿಕರ ಮೇಲೆ ದಬ್ಬಾಳಿಕೆ ನಡೆಸಿದರು.
- ಭೂ ಮಾಲೀಕರು ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ಆಸಕ್ತಿ ತೋರಲಿಲ್ಲ.
- ಬೆಳೆ ನಾಶವಾಗಿದ್ದರೂ ರೈತರು ಗೇಣಿಯನ್ನು ಪಾವತಿಸಬೇಕಿತ್ತು.
- ಕೃಷಿರಂಗ ಕುಸಿಯಿತು.
- ವಾಣಿಜ್ಯ ಬೆಳೆ ಬೆಳೆಯಲು ರೈತರಿಗೆ ಒತ್ತಾಯಿಸಿದ್ದರಿಂದ ರೈತರು ಮತ್ತಷ್ಟು ಬಡವರಾದರು.
- ಜೀತಪದ್ಧತಿಯು ತೀವ್ರವಾಗಿ ಬೆಳೆಯಿತು.

29. ಭಾರತದ ಮೇಲೆ ಪಾಶ್ಚಾತ್ಯ ಶಿಕ್ಷಣದ ಪರಿಣಾಮಗಳು

- ಪರಂಪರಾನುಗತ ಶಿಕ್ಷಣ ಪದ್ಧತಿಯು ಅವನತಿಯ ಹಾದಿ ಹಿಡಿಯಿತು.
- ವಿವಿಧ ಭಾಷಿಕರು ಇಂಗ್ಲೀಷ ಭಾಷೆಯಲ್ಲಿ ಪರಸ್ಪರ ಸಂವಾದಿಸಲು ಸಾಧ್ಯವಾಯಿತು.
- ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸುವಲ್ಲಿ ಸಹಾಯಕವಾಯಿತು.
- ಭಾರತೀಯ ಸಾಹಿತ್ಯದ ಮೇಲೆ ಪ್ರಭಾವ ಬೀರಿತು.

- ಭಾರತದ ಸಾಮಾಜಿಕ ಮತ್ತುರಾಜಕೀಯ ಸ್ಥಿತಿಗಳನ್ನು ವೈಜ್ಞಾನಿಕವಾಗಿ ಗುರುತಿಸಲು ಸಹಾಯಕ
- ಯುರೋಪಿನ ಚಿಂತನೆಗಳು ಭಾರತದ ಸಮಾಜವನ್ನು ಪ್ರವೇಶಿಸಿದವು.

30. ರೈತವಾರಿ ಪದ್ಧತಿಯ ಷರತ್ತುಗಳು

- ರೈತನೇ ನೇರವಾಗಿ ಸರ್ಕಾರಕ್ಕೆ ಕಂದಾಯ ಕಟ್ಟಬೇಕಿತ್ತು.
- ಭೂಮಿಯನ್ನು ಅಳತೆಮಾಡಿ ಫಲವತ್ತತೆ ಆಧಾರದ ಮೇಲೆ ಕಂದಾಯ ನಿಗದಿ ಮಾಡುವುದು.
- ಕ್ಷಾಮ ಅಥವಾ ಪ್ರವಾಹದಿಂದ ಬೆಳೆ ಪೂರ್ಣವಾಗಿ ಹಾಳಾಗಿದ್ದರು ಕಂದಾಯ ತಪ್ಪದೇ ಕಟ್ಟಬೇಕು.
- ನೀರಾವರಿ ಅನುಕೂಲತೆ ಆಧರಿಸಿ ಕಂದಾಯ ನಿಗಧಿ ಮಾಡುವುದು.

31. ಮಹಲ್ ಎಂದರೆ ಗ್ರಾಮ ಅಥವಾ ಎಸ್ಟೇಟ್ಎಂದರ್ಥ. ಇಂತಹ ಮಹಲ್ ಗೆ ಭೂಕಂದಾಯವನ್ನು ನಿಗಧಿ ಪಡಿಸಲಾಗುತ್ತಿತ್ತು.

ಈ ಪದ್ಧತಿಯನ್ನು ಮಹಲ್ವಾರಿ ಪದ್ಧತಿ ಎನ್ನವರು.

- ಮಹಲ್ವಾರಿ ಪದ್ಧತಿಗಳು ಜಾರಿಗೆ ಬಂದ ಪ್ರದೇಶಗಳು – ಉತ್ತರಪ್ರದೇಶ,ಮಧ್ಯಪ್ರದೇಶ ಮತ್ತು ಪಂಜಾಬ

32. ಮಾಂಟೆಗ್ಯು ಚೆಲ್ಮ್ಸ್ ಫರ್ಡ ಸುಧಾರಣೆಗಳು

- ಮಾರ್ಲೆ ಮಿಂಟೋ ಸುಧಾರಣೆಗಳು ಭಾರತೀಯರಿಗೆ ಸಮಾಧಾನ ಉಂಟುಮಾಡಲಿಲ್ಲ.
- ಸೆಕ್ರೆಟರಿ ಆಫ್ ಸ್ಟೇಟ್ ಆಗಿದ ಮಾಂಟೆಗ್ಯು ಒಂದು ಘೋಷಣೆ ಹೋರಡಿಸಿದರು.
- ಭಾರತೀಯರಿಗೆ ಆಡಳಿತದಲ್ಲಿ ಹೆಚ್ಚಿನ ಪಾತ್ರ ನೀಡುವುದು.
- ಸ್ವಯಂ ಅಧಿಕಾರ ಸಂಸ್ಥೆಗಳು ಬೆಳೆಯುವಂತೆ ಮಾಡುವುದು.
- ಸೆಕ್ರೆಟರಿ ಆಫ್ ಸ್ಟೇಟ್ ಇಂಡಿಯಾ ಕೌನ್ಸಲಿಂಗ್ ನಲ್ಲಿ ಸದಸ್ಯರ ಸಂಖ್ಯೆಯನ್ನುಹೆಚ್ಚಿಸುವುದು

- ಭಾರತದ ಹೈ ಕಮೀಷನರ್ ಒಬ್ಬನನ್ನು ಲಂಡನನಲ್ಲಿ ನೇಮಕ ಮಾಡಲಾಯಿತು.

ಊ.

33. ಖಾಯಂ ಜಮೀನ್ದಾರಿ ಪದ್ದತಿ ( ಸಾ.ಶ 1793)

- ಗವರ್ನರ್ ಜನರಲ್ ಕಾರ್ನ್ ವಾಲೀಸ್ ನು ಜಾರಿಗೆ ತಂದನು.
- ಬಂಗಾಳ,ಬಿಹಾರ,ಒರಿಸ್ಸಾಗಳಲ್ಲಿ ಜಾರಿಗೆ ತಂದು ಕಂದಾಯ ಸಂಗ್ರಹಕ್ಕೆ ಜಮೀನ್ದಾರರೊಡನೆ ಮಾಡಿಕೊಂಡ ಒಪ್ಪಂದವಾಗಿದೆ.
- ಜಮೀನ್ದಾರರು ಬ್ರಿಟಿಷ್ ಸರ್ಕಾರದ ಏಜೆಂಟರಾಗಿದ್ದರು.
- ಕಂಪನಿಯ ಗೇಣಿ ಪಾಲು ಖಾಯಂ ಆಗಿ ನಿಗಧಿಯಾಗಿತ್ತು.
- ಕಂದಾಯ ವಸೂಲಿಗಾಗಿ ಸರ್ಕಾರ ಮಾಡುವ ವೆಚ್ಚ ಕಡಿಮೆಯಾಯಿತು.
- ಜಮೀನ್ದಾರರು ಸರ್ಕಾರಕ್ಕೆ ಬೆಂಬಲ ನೀಡಿದರು.
- ಬ್ರಿಟಿಷರು ತಮ್ಮನ್ನು ಬೆಂಬಲಿಸಲು ಮತ್ತು ಸಮರ್ಥಿಸಲು ಹೊಸ ವರ್ಗಗಳನ್ನು ಸೃಷ್ಟಿಸಿದರು.

34. ಮಾರ್ಲೆ - ಮಿಂಟೋ ಸುಧಾರಣೆಗಳು

- ಲಾರ್ಡ್ ಮಿಂಟೋ ಭಾರತದಲ್ಲಿ ಇದನ್ನು ಜಾರಿಗೆ ತಂದನು.
- ಕರ್ಜನ್ನ ದರ್ಪ ಹಾಗೂ ಭಾರತೀಯ ಕ್ರಾಂತಿಕಾರರು ನಡೆಸಿದ ಉಗ್ರ ಚಳುವಳಿಯಿಂದ ಈ ಸುಧಾರಣೆಗಳು ಜಾರಿಗೆ ಬಂದವು.
- ಕೇಂದ್ರ ಶಾಸನ ಸಭೆಯಲ್ಲಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಯಿತು.
- ಪ್ರಾಂತ್ಯ ಶಾಸನಸಭೆಯನ್ನು ವಿಸ್ತರಿಸಲಾಯಿತು.
- ಅಷ್ಟೊಂದು ಕ್ರಾಂತಿಕಾರಕ ಬದಲಾವಣೆ ತರಲಿಲ್ಲ .

ಋ 35. ಭಾರತದ ನಕ್ಷೆ



# ಅಧ್ಯಾಯ-7 ಮೈಸೂರು ಮತ್ತು ಇತರ ಸಂಸ್ಥಾನಗಳು

**7.1**

ಅ.

| | | | |
|---|---|---|---|
| 1.A | 2.C | 3.A | 4.D |
| 5.B | 6.B | 7.D | 8.B |

ಆ.

9. ಚಿಕ್ಕದೇವರಾಜ ಒಡೆಯರ್

10. ಹೈದರಾಲಿ,ಟಿಪ್ಪು ಮತ್ತು ಬ್ರಿಟಿಷರು

11. ಮದ್ರಾಸ್ ಒಪ್ಪಂದ

12. ಮಂಗಳೂರು ಒಪ್ಪಂದ

13.ಶ್ರೀರಂಗ ಪಟ್ಟಣ

14. ದಿವಾನ್ ಪೂರ್ಣಯ್ಯ

15. ಬೆಂಗಳೂರು ಹಾಗೂ ಜೋಲಾರ ಪೇಟೆ ಮಧ್ಯ

16. ಸಾ.ಶ 1881 ರಲ್ಲಿ ಹತ್ತನೆಯ ಚಾಮರಾಜ ಒಡೆಯರಿಗೆ ಬ್ರಿಟಿಷರು ಮೈಸೂರು ರಾಜ್ಯವನ್ನು ಪುನಃ ವಹಿಸಿಕೊಟ್ಟರು ಇದನ್ನು ಪುನರ್ದಾನ ಎನ್ನುವರು.

17. ಕೆಂಪನಂಜಮ್ಮಣ್ಣಿ

18. ಮಿಲ್ಲರ್ ಆಯೋಗ

19. ಸರ್ ಎಂ ವಿಶ್ವೇಶ್ವರಯ್ಯ

20. ಕಾರ್ಯಕರ್ತ

21. ರಾಮರಾಜ್ಯ

22. 1881

23. ನಾಲ್ವಡಿ ಕೃಷ್ಣರಾಜ ಒಡೆಯರ

24. ಸರ್. ಎಂ. ವಿಶ್ವೇಶ್ವರಯ್ಯನವರು

25. ಚಿಕ್ಕದೇವರಾಜ ಒಡೆಯರು

26. ಶ್ರೀರಂಗಪಟ್ಟಣ

27. ಬೆಂಗಳೂರು. ಹೈದರಾಲಿ.

28. ಬೆಂಗಳೂರು, ಸಾ.ಶ. 1915

29. ಕೆ. ಸಿ. ರೆಡ್ಡಿ

ಇ.

30. ಮೈಸೂರು ಒಡೆಯರ ಆರಂಭಿಕ ರಾಜಧಾನಿ ಶ್ರೀರಂಗಪಟ್ಟಣ

31. ಟಿಪ್ಪು ಸುಲ್ತಾನ್.

32. ಪೂರ್ಣಯ್ಯ

33. ಸಾ.ಶ. 1881

34. ಮಿರ್ಜಾ ಇಸ್ಮಾಯಿಲ್

**ಈ.**

35. 1. ಇ)

2.ಉ)

3.ಅ)

4.ಆ)

5.ಈ)

ಉ.

36. ಚಿಕ್ಕದೇವರಾಜ ಒಡೆಯರ ಜನಮುಖಿ ಸಾಧನೆಗಳು

- ರಾಜಧಾನಿಯಲ್ಲಿ 'ಅಠಾರಿ ಕಚೇರಿ' ಸ್ಥಾಪಿಸಿದರು.
- ಅಳತೆ ಮತ್ತು ತೂಕಗಳ ನಿಯಮ ಜಾರಿಗೆ
- ಲಂಚಗುಳಿತನ ತಡೆಯಲು ಕ್ರಮ ಕೈಗೊಂಡರು.

37. ಮೈಸೂರಿನ ಪ್ರಮುಖ ಕಮೀಷನರ್ ಗಳು

- ಮಾರ್ಕ್ ಕಬ್ಬನ್
- ಲೂಯಿ ಬೆಂಥಾಮ್

38. ಮುಮ್ಮಡಿ ಕೃಷ್ಣರಾಜ ಒಡೆಯರು ಶಿವಮೊಗ್ಗ ಜಿಲ್ಲೆಯ ನಗರ ದಂಗೆಯನ್ನು ಸರಿಯಾಗಿ ಹತ್ತಿಕ್ಕಲಿಲ್ಲವೆಂಬ ಕಾರಣಕ್ಕೆ ಅವರನ್ನು ಕೆಳಗಿಳಿಸಿ ಕಮೀಷನರ್ ಆಡಳಿತವನ್ನು ಜಾರಿಗೆ ತಂದರು.

39. ಶ್ರೀರಂಗ ಪಟ್ಟಣ ಒಪ್ಪಂದದ ಕರಾರುಗಳು

- ಅರ್ಧ ರಾಜ್ಯವನ್ನು ಬ್ರಿಟಿಷರಿಗೆ ಬಿಟ್ಟು ಕೊಡುವುದು.
- ಅಪಾರ ಪರಿಹಾರ ಧನವನ್ನು ನೀಡುವುದು
- ತನ್ನಿಬ್ಬರು ಮಕ್ಕಳನ್ನು ಬ್ರಿಟಿಷರ ಒತ್ತೆ ಆಳಾಗಿ ಇರಿಸುವುದು.
- ಮೈಸೂರು, ಗಂಡಬೇರುಂಡ
- ಸಾ.ಶ 1859 ಬೆಂಗಳೂರು-ಜೋಲಾರ ಪೇಟ ಮಾರ್ಕ್ ಕಬ್ಬನ್ ರಿಗೆ.

40. ರಾಜಧಾನಿ: ಮೈಸೂರು

ರಾಜ್ಯದ ಲಾಂಛನ: ಗಂಡಭೇರುಂಡ (ಎರಡು ತಲೆಯ ಹದ್ದು)

41. ಮೊಟ್ಟ ಮೊದಲ ಕನ್ನಡ ನಾಟಕ: ಮಿತ್ರವಿಂದಾ ಗೋವಿಂದ

ಕೃತಿಕಾರರು: ಸಿಂಗರಾರ್ಯರು (Singararya)

42. ಮೊದಲ ರೈಲು ಮಾರ್ಗ: ಬೆಂಗಳೂರು – ಜೋಲಾರ್ಪೇಟೆ ರೈಲು ಮಾರ್ಗ

ಕೀರ್ತಿ ಸಲ್ಲುವ ಕಮೀಷನರ್: ಸರ್ ಮಾರ್ಕ್ ಕಬ್ಬನ್

ಊ.

43. ಹೈದರಾಲಿ ಸಾಧನೆಗಳು

- ಕನ್ನಡ ಸೇರಿದಂತೆ ಹಲವು ಭಾಷೆಗಳನ್ನು ಬಲ್ಲವರಾಗಿದ್ದರು.
- ಮೈಸೂರು ರಾಜ್ಯ ವಿಸ್ತಾರಗೊಳಿಸಿದರು.
- ಶೂರ ಯೋಧನೂ ದಕ್ಷ ಆಡಳಿತಗಾರನು ಆಗಿದ್ದನು.
- ಬೆಂಗಳೂರಿನಲ್ಲಿ ಲಾಲ್ ಬಾಗ್ ಉದ್ಯಾನವನ ನಿರ್ಮಿಸಿದರು.

44. ಪ್ರಮುಖ ಕಮೀಷನರ್ ಗಳ ಸಾಧನೆಗಳು

1) ಮಾರ್ಕ ಕಬ್ಬನ್( ಸಾ.ಶ 1834 -1861)

- ರಾಜಧಾನಿ ಮೈಸೂರನಿಂದ ಬೆಂಗಳೂರಿಗೆ ವರ್ಗಾಯಿಸಿದರು.
- ಅನೇಕ ಆಡಳಿತದ ಘಟಕಗಳನ್ನಾಗಿ ಮಾಡಿದರು.
- ಅವುಗಳು ಸೂಪರಿಟೆಂಡೆಂಟ್ ರ ಮೇಲ್ವಿಚಾರಣೆ
- ನ್ಯಾಯಾಂಗ ಮತ್ತು ಪೊಲೀಸ್ ಇಲಾಖೆಗಳನ್ನು ಉತ್ತಮವಾಗಿಸಿದರು.
- ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೊಳಿಸಲಾಯಿತು.
- ಬೆಂಗಳೂರನಿಂದ ಜೋಲಾರ್ ಪೇಟೆ ರಾಜ್ಯದ ಪ್ರಥಮ ರೈಲು ಮಾರ್ಗವಾಗಿದೆ.
- ಇವರ ಹೆಸರಿನಲ್ಲಿ ಕಬ್ಬನ್ ಉದ್ಯಾನವನವಿದೆ.

2) ಲೂಯಿ ಬೆಂಥಮ್ (ಸಾ.ಶ 1862-1870)

- ಸಾ.ಶ 1862ರಲ್ಲಿ ಕಮೀಷನರ್ ಆಗಿ ನೇಮಕವಾದರು.
- ಪೋಲೀಸ್ ಮತ್ತು ನ್ಯಾಯಾಂಗ ವ್ಯವಸ್ಥಿತವಾಗಿ ಸಂಘಟಿಸಿದರು.
- ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ಶಿಕ್ಷಣದಲ್ಲಿ ಸುಧಾರಣೆ ಮಾಡಿದರು.

ಋ.

45. . ನಾಲ್ವಡಿ ಕೃಷ್ಣರಾಜರ ಕಾಲ ರಾಮರಾಜ್ಯವಾಗಿತ್ತು. ಏಕೆಂದರೆ

- ಜೆ ಎನ್ ಟಾಟಾ ರವರು ಬೆಂಗಳೂರಿನಲ್ಲಿ ವಿಜ್ಞಾನ ಸಂಸ್ಥೆಗೆ 371 ಎಕರೆ ಭೂಮಿ ಹಾಗೂ ಐದು ಲಕ್ಷಕ್ಕೂ ಹೆಚ್ಚಿನ ದನಸಹಾಯ ನೀಡಿದರು.
- ಸಾ.ಶ 1907 ರಲ್ಲಿ 'ನ್ಯಾ ವಿದೇಯಕ ಸಭೆ'ಯನ್ನು ಸ್ಥಾಪಿಸಿದರು.

- ಮೈಸೂರು ಅರಮನೆಯನ್ನು ಸಾ.ಶ 1910 ರಲ್ಲಿ ಪೂರ್ಣಗೊಳಿಸಿದರು.
- ಕೃಷ್ಣರಾಜಸಾಗರ ಆಣಿಕಟ್ಟು ನಿರ್ಮಿಸಿದರು.
- ಸಾ.ಶ 1911 ರಲ್ಲಿ ಸಂಪತ್ ಅಭ್ಯುದಯ ಪರಿಷತ್ ಪ್ರಾರಂಭಿಸಿದರು.
- ಹಿಂದುಳಿದ ವರ್ಗಗಳಿಗೆ ಆಸ್ಪತ್ರೆಗಳಲ್ಲಿ ವಿಶೇಷ ಪ್ರಾತಿನಿಧ್ಯ ನೀಡಿದರು.
- ಮೊದಲ ಬಾರಿಗೆ ಸ್ತ್ರೀಯರಿಗೆ ಮತಾಧಿಕಾರ ನೀಡಿದರು.

46. ಸರ್ ಎಂ ವಿಶ್ವೇಶ್ವರಯ್ಯರವರ ಸಾಧನೆಗಳು

- 'ಆಧುನಿಕ ಮೈಸೂರಿನ ಶಿಲ್ಪಿ ಮತ್ತು ನಿರ್ಮಾತೃ'
- ಕೈಗಾರೀಕರಣ ಇಲ್ಲದೇ ವಿನಾಶ ಎಂದರು.
- ಭದ್ರಾವತಿಯಲ್ಲಿನ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪಿಸಿದರು.
- ಮೈಸೂರಿನಲ್ಲಿ ಗಂಧದ ಎಣ್ಣೆ ಕಾರ್ಖಾನೆ
- ಬೆಂಗಳೂರಿನಲ್ಲಿ ಸಾಬೂನು ಕಾರ್ಖಾನೆ
- ಚರ್ಮ ಹದಮಾಡುವ ಕಾರ್ಖಾನೆ ಸ್ಥಾಪಿಸಿದರು.
- ಸಾ.ಶ 1913 ರಲ್ಲಿ ಮೈಸೂರು ಬ್ಯಾಂಕ್ ಸ್ಥಾಪಿಸಿದರು.
- ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೊಳಿಸಿದರು.
- ಬೆಂಗಳೂರಿನ ಹೆಬ್ಬಾಳದಲ್ಲಿ ಕೃಷಿ ಶಾಲೆ ಸ್ಥಾಪನೆ.
- ಸಾ.ಶ 1916 ಮೈಸೂರ ವಿಶ್ವವಿದ್ಯಾಲಯ ಸ್ಥಾಪನೆ.
- ಸಾ. ಶ 1915 ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ.
- 'ಭಾರತ ರತ್ನ' ಪ್ರಶಸ್ತಿ ಪಡೆದ ಮೊದಲ ಕನ್ನಡಿಗ ಆಗಿದ್ದಾರೆ.

47. ಟಿಪ್ಪುವಿನ ಸಾಧನೆಗಳು

- ಹೈದರಾಲಿಯ ಮಗ
- 2ನೇ ಆಂಗ್ಲೋ ಮೈಸೂರ ಯುದ್ಧದ ಪ್ರವೇಶ
- ಮೊದಲನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಮರಾಠರೊಂದಿಗೆ ವಿಜಯ.
- ಏಕಾಂಗಿಯಾಗಿ 4 ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಹೋರಾಡಿದನು.
- ಶ್ರೀರಂಗ ಪಟ್ಟಣದ ಬೇಸಿಗೆ ಅರಮನೆ ದರಿಯಾ ದೌಲತ್ ಕಟ್ಟಿಸಿದನು.
- ರೇಷ್ಮೆಕೃಷಿ ವ್ಯಾಪಕವಾಗಿ ಜನಪ್ರಿಯಗೊಳಿಸಿದನು.
- ಟಿಪ್ಪು ರಾಕೆಟ್ ಬಳಕೆಯ ತಂತ್ರಜ್ಞಾನ ತಿಳಿದಿದ್ದನು.

ಎ.

48. ಭಾರತದ ನಕ್ಷೆ




7.2

ಅ.

1. B

2.D

3.D

4.C

5. D

ಆ.

6. ಕರಾವಳಿ ಪೋರ್ಚುಗೀಸರ ಕೋಟೆಗಳನ್ನು ವಶಪಡಿಸಿಕೊಂಡಿದ್ದರಿಂದ 'ಪಡುಗಡಲೊಡೆಯ' ಎಂದು ಕರೆಯುತ್ತಾರೆ.

7. ಶಿವಮೊಗ್ಗ

8. ರಾಣಿ ಚನ್ನಮ್ಮಜಿ

9. ಪಶ್ಚಿಮ ದಿಕ್ಕಿನಲ್ಲಿದೆ.

10. ಒಂದನೇ ಕೆಂಪೇಗೌಡ

11. ಹಾಲೇರಿ

12. ಫರ್ಡಿನಾಂಡ್ ಕಿಟೆಲ್

13. ರಾಮಿ

14. ಶಿವಪ್ಪ ನಾಯಕನು ಜಾರಿಗೆ ತಂದ ಕ್ರಮಬದ್ಧವಾದ ಭೂಕಂದಾಯ ಪದ್ಧತಿಯನ್ನು 'ಶಿವಪ್ಪ ನಾಯಕನ ಶಿಸ್ತು' ಎನ್ನುತ್ತಾರೆ.

ಇ.

15. ಹಿರಿಯ ವೆಂಕಟ್ಟನಾಯಕನ ಸಾಧನೆಗಳು

- ಕೆಳದಿ ಅರಸರಲ್ಲಿಯೇ ಪ್ರಖ್ಯಾತ
- ಕರಾವಳಿ ಚಂದ್ರಗಿರಿ ನದಿಯವರೆಗೆ ವಿಜಯ ಯಾತ್ರೆ ಮಾಡಿದನು.
- ಪೋರ್ಚುಗಿಸರನ್ನು ಮಂಗಳೂರಿನಲ್ಲಿ ಸೋಲಿಸಿದನು.
- ವಿಜಯಪುರ ಆದಿಲ್ ಷಾಹಿಯನ್ನು ಸೋಲಿಸಿ ವಿಜಯ ಸ್ತಂಭ ಸ್ಥಾಪಿಸಿದನು.

16. ಕೆಳದಿಯ ಚೆನ್ನಮ್ಮಾಜಿ

- ಶಿವಪ್ಪನಾಯಕನ ಸೊಸೆ
- ಮೊಗರನ್ನು ಹಿಮ್ಮೆಟ್ಟಿಸಿ ಶಿವಾಜಿ ಮಗ ಛತ್ರಪತಿ ರಾಜಾರಾಮನಿಗೆ ರಕ್ಷಣೆ ನೀಡಿದಳು.
- ಶೌರ್ಯ, ತ್ಯಾಗಕ್ಕೆ ಎತ್ತಿದ ಕೈ
- ಮಠಗಳಿಗೆ ದಾಸೋಹ ಮತ್ತು ಶಿಕ್ಷಣ ನೀಡುತ್ತಿದ್ದರು.

17. ಒಂದನೇ ಕೆಂಪೇಗೌಡನ ಸಾಧನೆಗಳು

- ಬೆಂಗಳೂರಿನ ಸಂಸ್ಥಾಪಕ.
- ಬೆಂಗಳೂರಿನ ಕೋಟೆ ನಿರ್ಮಿಸಿದನು.
- ಬೆಂಗಳೂರಿನಲ್ಲಿ ಅನೇಕ ಕೆರೆ ನಿರ್ಮಾಣ
- ಬಸವನ, ಗವಿ ಗಂಗಾಧರೇಶ್ವರ ದೇವಾಲಯ ವಿಸ್ತರಣೆ

ಈ

18. **ಸೇನಾ ಸಾಧನೆ:** ಇವನು ಕರಾವಳಿಯ ಪೋರ್ಚುಗೀಸರ ಕೋಟೆಗಳನ್ನು ಗೆದ್ದು, '**ಪಡುಗಡಲೋಡೆಯ**' ಎಂಬ ಬಿರುದು ಪಡೆದನು ಹಾಗೂ ರಕ್ಷಣೆಗಾಗಿ ಬೇಕಲ, ಚಂದ್ರಗಿರಿ ಮತ್ತು ಮಂಗಳೂರಿನಲ್ಲಿ ಭದ್ರವಾದ ಕೋಟೆಗಳನ್ನು ಕಟ್ಟಿಸಿದನು.

- **ಕಂದಾಯ ಸುಧಾರಣೆ:** ಇವನು ಜಾರಿಗೆ ತಂದ ಅತ್ಯಂತ ಕ್ರಮಬದ್ಧವಾದ ಭೂಕಂದಾಯ ಪದ್ಧತಿಯನ್ನು '**ಶಿವಪ್ಪ ನಾಯಕನ ಶಿಸ್ತು**' ಎಂದು ಕರೆಯಲಾಗುತ್ತದೆ.
- **ಕೃಷಿ ಮತ್ತು ವ್ಯಾಪಾರ:** ರಾಜ್ಯದ ಅಭಿವೃದ್ಧಿಗಾಗಿ ಗೋವೆಯ ವ್ಯಾಪಾರಿಗಳನ್ನು ಮತ್ತು ಕೃಷಿಯಲ್ಲಿ ನಿಪುಣರಾಗಿದ್ದ ಕ್ರೈಸ್ತರನ್ನು ತನ್ನ ರಾಜ್ಯಕ್ಕೆ ಆಹ್ವಾನಿಸಿ, ಭೂಮಿಯನ್ನು ಕಾಣಿಕೆಯಾಗಿ ನೀಡಿ ಪ್ರೋತ್ಸಾಹಿಸಿದನು.
- **ಧಾರ್ಮಿಕ ಕಾರ್ಯ:** ಧರ್ಮ ಶ್ರದ್ಧೆಯುಳ್ಳವನಾಗಿದ್ದ ಈತನು ವಾಜಪೇಯ ಮುಂತಾದ ವೈದಿಕ ಯಜ್ಞಗಳನ್ನು ಮಾಡಿಸಿದನು.

19. ಇವನು ಬೆಂಗಳೂರು ನಗರದ ಎಲ್ಲೆಕಟ್ಟುಗಳನ್ನು (ಗಡಿಗಳನ್ನು) ಗುರುತಿಸಿ, ನಾಲ್ಕು ದಿಕ್ಕುಗಳಲ್ಲೂ ಪ್ರಸಿದ್ಧ ಗೋಪುರಗಳನ್ನು ಕಟ್ಟಿಸಿದನು.

ಈತನ ಆಡಳಿತದ ಅವಧಿಯಲ್ಲಿ ಬೆಂಗಳೂರು ನಗರವು ನೇಕಾರಿಕೆಯ ದೊಡ್ಡ ವ್ಯಾಪಾರ ಕೇಂದ್ರವಾಗಿ ಬೆಳೆಯಿತು.
ತನ್ನ ತಂದೆಯಂತೆಯೇ ಈತನು ಕೂಡ ಪ್ರಜೆಗಳಿಗಾಗಿ ಹೊಸ ಪೇಟೆಗಳು, ಸುಂದರ ದೇವಾಲಯಗಳು ಮತ್ತು ಕೆರೆಗಳನ್ನು ನಿರ್ಮಿಸಿ ಹೆಸರು ಗಳಿಸಿದನು.
**20. ಸಾಮ್ರಾಜ್ಯದ ವಿಸ್ತಾರ:** ಕೆಳದಿಯ ನಾಯಕರು ಕರ್ನಾಟಕದ ಕರಾವಳಿ ಮತ್ತು ಮಲೆನಾಡಿನ ಭಾಗಗಳಲ್ಲಿ ದೀರ್ಘಕಾಲ ದಕ್ಷ ಆಡಳಿತ ನಡೆಸಿ, ಪ್ರಬಲ ರಾಜ್ಯವನ್ನು ಕಟ್ಟಿದರು.
**ವೆಂಕಟಪ್ಪ ನಾಯಕನ ಸಾಧನೆ:** ಇವರಲ್ಲಿ ವೆಂಕಟಪ್ಪ ನಾಯಕನು ಅತ್ಯಂತ ಪರಾಕ್ರಮಿಯಾಗಿದ್ದು, ಪೋರ್ಚುಗೀಸರನ್ನು ಸೋಲಿಸಿ ಮಂಗಳೂರಿನಲ್ಲಿ ತನ್ನ ಜಯಸ್ತಂಭವನ್ನು ಸ್ಥಾಪಿಸಿದನು.

**ಶಿವಪ್ಪ ನಾಯಕನ ಸುಧಾರಣೆ:** ಶಿವಪ್ಪ ನಾಯಕನು ಜಾರಿಗೆ ತಂದ ಅತ್ಯಂತ ಕ್ರಮಬದ್ಧವಾದ ಭೂಕಂದಾಯ ಪದ್ಧತಿಯಾದ '**ಶಿವಪ್ಪ ನಾಯಕನ ಶಿಸ್ತು**' ಮಲೆನಾಡಿನ ಆರ್ಥಿಕ ಸಮೃದ್ಧಿಗೆ ಕಾರಣವಾಯಿತು.
**ರಾಣಿ ಚೆನ್ನಮ್ಮಾಜಿಯ ಶೌರ್ಯ:** ವೀರರಾಣಿ ಚೆನ್ನಮ್ಮಾಜಿಯು ಮೊಘಲರ ಸೈನ್ಯವನ್ನು ಎದುರಿಸಿ, ಶಿವಾಜಿಯ ಮಗ ಛತ್ರಪತಿ ರಾಜಾರಾಮನಿಗೆ ಆಶ್ರಯ ನೀಡಿ ಕನ್ನಡ ನಾಡಿನ ಶೌರ್ಯವನ್ನು ಎತ್ತಿಹಿಡಿದಳು.
**ಸಂಸ್ಕೃತಿ ಮತ್ತು ಧರ್ಮ:** ಈ ಅರಸರು ಶಿಲ್ಪಕಲೆಗೆ ಪ್ರಸಿದ್ಧವಾದ ಕೆಳದಿಯ ಅಘೋರೇಶ್ವರ ದೇವಾಲಯ ಸೇರಿದಂತೆ ಹಲವು ದೇವಸ್ಥಾನ, ಅಗ್ರಹಾರ ಹಾಗೂ ದಾಸೋಹ ಮತ್ತು ಶಿಕ್ಷಣ ನೀಡುವ ಮಠಗಳನ್ನು ಸ್ಥಾಪಿಸಿದರು.

21. ಮದಕರಿ ನಾಯಕನು ಚಿತ್ರದುರ್ಗದ ನಾಯಕರಲ್ಲಿಯೇ ಅತ್ಯಂತ ಪ್ರಬಲ ಹಾಗೂ ಪ್ರಸಿದ್ಧ ಅರಸನಾಗಿದ್ದನು.

ಈತನು ಕೇವಲ ೧೨ ವರ್ಷದ ಬಾಲಕನಾಗಿದ್ದಾಗಲೇ ಚಿತ್ರದುರ್ಗದ ಸಿಂಹಾಸನವನ್ನು ಏರಿದನು.
ಮದಕರಿಯ ಪರಾಕ್ರಮವನ್ನು ಕಂಡು ಅಸೂಯೆಪಟ್ಟ ಮೈಸೂರಿನ ಹೈದರ ಅಲಿಯು ಚಿತ್ರದುರ್ಗದ ಏಳು ಸುತ್ತಿನ ಕೋಟೆಗೆ ಮುತ್ತಿಗೆ ಹಾಕಿದನು.
ಹೈದರಾಲಿಯ ಸೈನಿಕರು ರಹಸ್ಯ ದಾರಿಯಿಂದ ಕೋಟೆ ನುಗ್ಗುವಾಗ, ವೀರವನಿತೆ ಒನಕೆ ಓಬವ್ವಳು ತನ್ನ ಒನಕೆಯಿಂದಲೇ ಶತ್ರುಗಳನ್ನು ಜಜ್ಜಿ ಕೊಂದಳು.

- ಕೊನೆಗೆ ನಡೆದ ಭೀಕರ ಯುದ್ಧದಲ್ಲಿ ಮದಕರಿ ನಾಯಕನಿಗೆ ಸೋಲPage ಆಯಿತು; ಹೈದರ ಅಲಿಯು ಆತನನ್ನು ಬಂಧಿಸಿದ ನಂತರ ಚಿತ್ರದುರ್ಗದ ನಾಯಕರ ಆಳ್ವಿಕೆ ಕೊನೆಗೊಂಡಿತು.
- 22.
- ಹೈದರಾಲಿಯ ಸೈನಿಕರು ರಹಸ್ಯ ಕಿಂಡಿಯ ಮೂಲಕ ಕೋಟೆಯೊಳಗೆ ನುಗ್ಗಲು ಯತ್ನಿಸಿದಾಗ, ಓಬವ್ವನು ಕಿಂಚಿತ್ತೂ ಹೆದರದೆ ಏಕಾಂಗಿಯಾಗಿ ಎದುರಿಸಿದಳು.
- ತನ್ನ ಕೈಯಲ್ಲಿದ್ದ ಸಾಮಾನ್ಯ **ಒನಕೆಯನ್ನೇ** ಶಕ್ತಿಶಾಲಿ ಅಸ್ತ್ರವನ್ನಾಗಿ ಮಾಡಿಕೊಂಡು, ಕಿಂಡಿಯಿಂದ ಒಳಗೆ ಬರುತ್ತಿದ್ದ ಶತ್ರುಗಳನ್ನು ಒಬ್ಬೊಬ್ಬರಾಗಿ ಹೊಡೆದು ಉರುಳಿಸಿದಳು.

- ತನ್ನ ಪ್ರಾಣದ ಹಂಗನ್ನು ತೊರೆದು, ಸಮಯಪ್ರಜ್ಞೆಯಿಂದ ನೂರಾರು ಶತ್ರು ಸೈನಿಕರನ್ನು ಕೊಂದು ಚಿತ್ರದುರ್ಗದ ಕೋಟೆಯನ್ನು ರಕ್ಷಿಸಿದಳು.
- ಸಾಮಾನ್ಯ ಮಹಿಳೆಯೊಬ್ಬಳು ನಾಡಿಗಾಗಿ ತೋರಿದ ಈ ಅಸಾಧಾರಣ ಧೈರ್ಯ ಮತ್ತು ಶೌರ್ಯದ ಸಂಕೇತವಾಗಿ ಒನಕೆ ಓಬವ್ವನ ಹೆಸರು ಇತಿಹಾಸದಲ್ಲಿ ಅಮರವಾಗಿದೆ.

.

## 7.3

**ಉತ್ತರಗಳು**

**ಅ.**

| | | | | | | | | | |
|---|---|---|---|---|---|---|---|---|---|
| 1.D | 2.A | 3.C | 4.B | 5.C | 6.C | 7.D | 8.B | 9.A | 10.C |
| 11.C | 12.D | 13.D | 14.B | 15.A | 16.B | 17.C | 18.D | 19.C | 20.A |
| 21. C | 22.C | 23.B | 24.D | 25.C | 26.A | 27.C | 28.B | 29.D | 30.A |
| 31.D | 32.C | 33.B | 34.D | 35.C | 36.A | 37.B | 38.B | 39. D | 40. B |

**ಆ.**

41. ಪುಟ್ಟಬಸಪ್ಪ,ಕಲ್ಯಾಣಸ್ವಾಮಿ ಮತ್ತು ಗುಡ್ಡೆಮನೆ ಅಪ್ಪಯ್ಯಗೌಡ.

42. ಅಮರ ಸುಳ್ಯ ಹೋರಾಟಗಾರರು ಸುಳ್ಯ, ಪುತ್ತೂರು, ಕಾಸರಗೂಡು ಹಾಗೂ ಮಂಗಳೂರನ್ನು

13 ದಿನಗಳ ಕಾಲ ತಮ್ಮ ವಶಕ್ಕೆ ತೆಗೆದುಕೊಂಡರು.

43. ಕದಂಬ, ಆಳುಪ, ಹೊಯ್ಸಳ ಮತ್ತು ವಿಜಯನಗರ ಮುಂತಾದವು.

44. ಉದ್ಯಾವರ(ಉದಯಪುರ), ಮಂಗಳೂರು (ಮಂಗಳಪುರ), ಬಾರಕೂರು.

45. ತುಳುನಾಡಿನ ಎರಡು ಆರಾಧನಾ ಪಂಥಗಳು : ನಾಗಾರಾಧನೆ ಮತ್ತು ಭೂತಾರಾಧನೆ

46. ದಕ್ಷಿಣ ಕನ್ನಡ ಮತ್ತು ಉಡುಪಿ

47. ಬೇಡ ನಾಯಕರ ದಂಗೆಗೆ ಕಾರಣಗಳು:

- ಸ್ಥಳೀಯ ಜಮೀನ್ದಾರರ ಶೋಷಣೆ
- ಬ್ರಿಟಿಷರು ಜಾರಿಗೆ ತಂದಿದ್ದ ಶಸ್ತ್ರಾಸ್ತ್ರ ಕಾಯ್ದೆ, ಅರಣ್ಯ ಕಾಯ್ದೆಗಳು

- ಬ್ರಿಟಿಷರ ದಬ್ಬಾಳಿಕೆಗಳಿಂದ ಬೇಸತ್ತ ಸ್ಥಳೀಯ ಪಾಳೆಯಗಾರರು ಮತ್ತು ಜನಸಾಮಾನ್ಯರು ಪ್ರತಿಭಟನೆಗೆ ಇಳಿದರು.

48. ಹಲಗಲಿ ದಂಗೆಯೇ ಪ್ರಮುಖ ನಾಯಕರು:ಜಡಗ,ಬಾಲ,ರಾಮಿ.

49. ಸ್ವಾಮಿ ರಮಾನಂದ ತೀರ್ಥರು, ಹರ್ಡೇಕರ್ ಮಂಜಪ್ಪ ರಾಮಚಂದ್ರರಾವ್, ಶರಣಗೌಡ ಇನಾಂದಾರ್ ಮುಂತಾದವರು.

50. ಕೆನರಾ ಜಿಲ್ಲೆಯಲ್ಲಿ ಬ್ರಿಟಿಷರು ರೈತರ ಮೇಲೆ ಕಂದಾಯವನ್ನು (ತೆರಿಗೆ) ಹೆಚ್ಚಿಸಿದ್ದರಿಂದ ಅಲ್ಲಿನ ರೈತರು ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟ ಮಾಡಿದರು.

51.

ಕಿತ್ತೂರಿನ ರಾಜ ಮಲ್ಲಸರ್ಜನ ಮಗನ ಮರಣದ ನಂತರ, ಬ್ರಿಟಿಷರ ಧಾರವಾಡದ ಕಲೆಕ್ಟರ್ ಥ್ಯಾಕರೆ ಚೆನ್ನಮ್ಮಳು ದತ್ತು ಪಡೆದಿದ್ದ ಮಗನಿಗೆ ಉತ್ತರಾಧಿಕಾರತ್ವದ ಹಕ್ಕಿಲ್ಲವೆಂದು ನಿರಾಕರಿಸಿದನು.

ಕಿತ್ತೂರಿನ ಆಡಳಿತವನ್ನು ಬ್ರಿಟಿಷ್ ಸರ್ಕಾರವೇ ವಹಿಸಿಕೊಳ್ಳಬೇಕೆಂದು ಆಜ್ಞೆ ಮಾಡಿದಾಗ, ಇದನ್ನು ವಿರೋಧಿಸಿ ತನ್ನ ನಾಡಿನ ಸ್ವಾತಂತ್ರ್ಯಕ್ಕಾಗಿ ಚೆನ್ನಮ್ಮಳು ಬ್ರಿಟಿಷರ ವಿರುದ್ಧ ಸಿಡಿದೆದ್ದಳು.

52. ತುಳುನಾಡಿನ ಅಗ್ರಗಣ್ಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ದೇಶಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ **'ದೇಶಭಕ್ತ'** ಎಂದು ಪ್ರಸಿದ್ಧರಾಗಿದ್ದಾರೆ. ಇವರು ತಮ್ಮ ಮನೆಯಲ್ಲಿಯೇ ದಲಿತ ವರ್ಗದ ಹಲವಾರು ಮಕ್ಕಳಿಗೆ ಊಟ ಹಾಕಿ, ಮರೆಯಲಾಗದ ಹರಿಜನ ಸೇವೆ ಹಾಗೂ ಸಮಾಜ ಸುಧಾರಣೆ ಮಾಡಿದುದಕ್ಕಾಗಿ ನಾವು ಇಂದಿಗೂ ಅವರನ್ನು ನೆನಪಿಸಿಕೊಳ್ಳುತ್ತೇವೆ.

53. ಕುದ್ಮೂಲ್ ರಂಗರಾವರು ಸಮಾಜದಲ್ಲಿದ್ದ ಅಸ್ಪೃಶ್ಯತೆಯ ವಿರುದ್ಧ ಬಲವಾದ ಚಳವಳಿಯನ್ನು ನಡೆಸಿದರು.

ಇದರೊಂದಿಗೆ ದಲಿತ ಹೆಣ್ಣು ಮಕ್ಕಳಿಗಾಗಿ ಶಿಕ್ಷಣವನ್ನು ನೀಡುವ ಪ್ರಮುಖ ದಲಿತೋದ್ಧಾರ ಕಾರ್ಯಗಳನ್ನು ಕೈಗೊಂಡು ಮುಂಚೂಣಿಯಲ್ಲಿದ್ದರು.

54. **ರಾಮಚಂದ್ರ ರಾವ್.** ಸರ್ಕಾರವು 'ವಂದೇ ಮಾತರಂ' ಹಾಡುವುದನ್ನು ನಿಷೇಧಿಸಿದಾಗ, ಅದರ ವಿರುದ್ಧ ನಡೆದ ಪ್ರತಿಭಟನಾ ಹೋರಾಟದ ನೇತೃತ್ವ ವಹಿಸಿ ಧೀರತನ ತೋರಿದ್ದರಿಂದ ಅವರನ್ನು 'ವಂದೇ ಮಾತರಂ ರಾಮಚಂದ್ರರಾವ್' ಎಂದೇ ಕರೆಯಲಾಯಿತು

ಇ.

55. ಕಿತ್ತೂರು ರಾಣಿ ಚೆನ್ನಮ್ಮ

- ವೀರವನಿತೆ ಕಿತ್ತೂರು ಚೆನ್ನಮ್ಮ ಮಲ್ಲಸರ್ಜನ ದೇಸಾಯಿಯ ಕಿರಿಯ ಪತ್ನಿ
- ಶಿವಲಿಂಗ ರುಧ್ರ ಸರ್ಜನನ್ನು ದತ್ತು ಪಡೆದು ರಾಜ್ಯವಾಳಲು ಪ್ರಾರಂಭಿಸಿದಳು.
- ದತ್ತು ಸ್ವೀಕಾರ ಕ್ರಮಬದ್ಧವಲ್ಲವೆಂದು ಥ್ಯಾಕರೆ ಕುಂಟುನೆಪ ತೆಗೆದನು.
- ಬ್ರಿಟಿಷರ ದಮನ ನೀತಿಯನ್ನು ಕಂಡು ಕಿಡಿ ಕಿಡಿಯಾದಳು.
- ಥ್ಯಾಕರೆಯು 500 ಮಂದಿ ಸೈನಿಕರೊಡನೆ ಕಿತ್ತೂರಿನ ಮೇಲೆ ದಾಳಿ ಮಾಡಿದನು.
- 6000 ಸೈನಿಕರೊಂದಿಗೆ ಚೆನ್ನಮ್ಮ ವೀರಾವೇಶದಿಂದ ಹೋರಾಡಿದಳು.
- ಚೆನ್ನಮ್ಮನ ಕಡೆಯವರೇ ಮೋಸ ಮಾಡಿದರು.
- ಚೆನ್ನಮ್ಮ ನ್ನು ಬೈಲಹೊಂಗಲದ ಸೆರೆಯಲ್ಲಿಟ್ಟರು.
- ಬ್ರಿಟಿಷರನ್ನು ವಿರೋದಿಸಿದ ಪ್ರಥಮ ಭಾರತೀಯ ಮಹಿಳೆ
- ಆಕೆಯ ಹೆಸರಲ್ಲಿ ಇಂದಿಗೂ ಲಾವಣಿ ಹಾಡುತ್ತಾರೆ.

56. ಹಲಗಲಿಯ ಬೇಡನಾಯಕರ ದಂಗೆಗಳಿಗೆ ಕಾರಣಗಳು

- ಬ್ರಿಟಿಷರು ಜಾರಿಗೆ ತಂದ ಶಸ್ತ್ರಾಸ್ತ್ರ ಕಾಯ್ದೆ
- ಈ ಕಾಯ್ದೆಯಂತೆ ಬೇಡರು ಬ್ರಿಟಿಷರ ಅಪ್ಪಣೆ ಪಡೆದೇ ಶಸ್ತ್ರಾಸ್ತ್ರ ಆಯುಧಗಳನ್ನು ಇರಿಸಿಕೊಳ್ಳುಬಹುದಾಗಿತ್ತು.
- ಸ್ವಭಾವತಃ ಶೂರರಾದ ಬೇಡರಿಗೆ ಇದು ನುಂಗಲಾರದ ತುತ್ತಾಯಿತು.
  ಈ ಕಾರಣಗಳಿಂದಾಗಿ ಘರ್ಷಣೆ ನಡೆದು ಬ್ರಿಟಿಷರು ಬೇಡನಾಯಕರ ಮೇಲೆ ದಾಳಿ ಮಾಡಿದರು.

57. ಸಿಂಧೂರ ಲಕ್ಷ್ಮಣ ಇತಿಹಾಸ ಪುಟದಲ್ಲಿ ಸ್ಮರಣೀಯನಾಗಿದ್ದಾನೆ. ಏಕೆಂದರೆ

- ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಮಹಾವೀರ
- ಇನಾಂದಾರ (ಗೌಡರ) ಅಳ್ವಿಕೆಯಿಂದ 'ಸಿಂಧೂರ್' ಗ್ರಾಮ ತತ್ತರಿಸಿತ್ತು.
- ಬ್ರಿಟಿಷರ ಖಜಾನೆಗಳನ್ನು ಮತ್ತು ಶ್ರೀಮಂತರ ಹಣವನ್ನು ದೋಚಿ ಬಡವರಿಗೆ ಹಂಚುತ್ತಿದ್ದನು.
- ಶೋಷಿತರ ಸೇವೆ ಮಾಡುತ್ತಿದ್ದನು.
- ಚಾವಡಿ ಮುಂದೆ ಕರೆಸಿ ಕಳ್ಳತನದ ಬಗ್ಗೆ ವಿಚಾರಿಸಿ ಅವಮಾನ ಮಾಡಿದಾಗ ಅಲ್ಲಿಂದ ಪರಾರಿಯಾದನು.
- ಬ್ರಿಟಿಷ ಪೋಲೀಸ್ ನನ್ನು ಗುಂಡಿಕ್ಕಿ ಕೊಂದನು.

58. ನಾಲ್ವಡಿ ವೆಂಕಟಪ್ಪ ನಾಯಕನು ಸುರಪುರ ಸಂಸ್ಥಾನದ ಅತ್ಯಂತ ಪ್ರಸಿದ್ಧ ಅರಸನಾಗಿದ್ದನು. ಈತನು ಬ್ರಿಟಿಷರ ಗುಲಾಮಗಿರಿಯ ವಿರುದ್ಧ ಧೈರ್ಯದಿಂದ ದಂಗೆಯೆದ್ದನು.ಬ್ರಿಟಿಷರನ್ನು ಸೋಲಿಸಲು ತನ್ನದೇ ಆದ ಬಲಿಷ್ಠ ಸೈನ್ಯವನ್ನು ಸಂಘಟಿಸಿದನು. ಅಲ್ಲದೆ, ನೆರೆಹೊರೆಯ ನಾಯಕರನ್ನು ಒಗ್ಗೂಡಿಸಿ ಬ್ರಿಟಿಷರ ವಿರುದ್ಧ ಹೋರಾಡಲು ಪ್ರೇರೇಪಿಸಿದನು.ಬ್ರಿಟಿಷರೊಂದಿಗೆ ಕೈಜೋಡಿಸಿದ್ದ ಹೈದರಾಬಾದ್‌ನ ನಿಜಾಮನ ಸೈನ್ಯವನ್ನು ಸಹ ವೀರಾವೇಶದಿಂದ ಎದುರಿಸಿದನು.ಶತ್ರುಗಳ ಕುತಂತ್ರಗಳಿಗೆ ಹೆದರದೆ, ತನ್ನ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡಿದ ಮಹಾನ್ ವೀರನಾಗಿದ್ದಾನೆ. ಆದ್ದರಿಂದ ನಾಲ್ವಡಿ ವೆಂಕಟಪ್ಪ ನಾಯಕನನ್ನು ಕರ್ನಾಟಕದ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬನೆಂದು ಗೌರವದಿಂದ ಸ್ಮರಿಸಲಾಗುತ್ತ

ಈ.

59. ಹೈದರಾಬಾದ್ – ಕರ್ನಾಟಕ ವಿಮೋಚನಾ ಹೋರಾಟ

- ಹೈದರಾಬಾದ ನಿಜಾಮನ ವಿರುದ್ಧ ಬಂಡಾಯವೆದ್ದ ಉಜ್ವಲ ಇತಿಹಾಸ
- ಮಹಾನ್ ತ್ಯಾಗ,ಬಲಿದಾಗಳಿಗೆ ಅಚ್ಚಳಿಯದ ಸಾಕ್ಷಿಯಾಗಿದೆ.
- ಹಿಂದೂಗಳು ಸ್ಥಿತಿ ಹೈದರಾಬಾದ ನಲ್ಲಿ ದಾರುಣವಾಗಿತ್ತು.
- ನಿಜಾಮನು 'ಕಾಲಾಗಪ್ತಿ' ಗಳು ಅತ್ಯಂತ ಹಿಂಸಾತ್ಮಕವಾಗಿದ್ದರು.

- ಈ ಹೋರಾಟದ ಜನಪ್ರಿಯ ನಾಯಕರೆಂದರೆ ಸ್ವಾಮಿ ದಯಾನಂದರು
- ಹರ್ಡೇಕರ್ ಮಂಜಪ್ಪ ಪ್ರಮುಖ ನಾಯಕರಾಗಿದ್ದಾರೆ.
- ರಾಮಚಂದ್ರರಾವ್ 'ವಂದೇ ಮಾತರಂ' ಚಳುವಳಿ ಪ್ರಾರಂಭಿಸಿದರು.
- ಸಾ.ಶ 1947 ರಲ್ಲಿ ಭಾರತ ಸ್ವತಂತ್ರ ಗೊಂಡರು,ಹೈದರಾಬಾದ ಇನ್ನೂ ಭಾರತಕ್ಕೆ ವೀಲಿನವಾಗಿರಲಿಲ್ಲ.
- ಗೃಹಮಂತ್ರಿ ಸರ್ದಾರ್ ವಲ್ಲಭಾಯ್ ಪಟೇಲರ ಪ್ರಯತ್ನದಿಂದ ಸಾ.ಶ 1948 ಸಪ್ಟಂಬರ್ 17 ರಂದು ಭಾರತೀಯ ಸೇನೆಯ ಪ್ರಯತ್ನದಿಂದ ಹೈದರಾಬಾದ ವಿಮೋಚನೆಗೊಂಡು ಭಾರತದೊಂದಿಗೆ ವಿಲೀನವಾಯಿತು.

60. ಸಂಗೊಳ್ಳಿ ರಾಯಣ್ಣನ ಸಾಧನೆಗಳು

- ಕಿತ್ತೂರ ಚೆನ್ನಮ್ಮಳ ಬಲಗೈ ಬಂಟ
- ಅಪ್ರತಿಮ ದೇಶಭಕ್ತ ,ಸ್ವಾತಂತ್ರ್ಯ ವೀರ
- ಬ್ರಿಟಿಷರ ಕಚೇರಿ ಸುಟ್ಟು,ಖಜಾನೆ ಲೂಟಿ ಮಾಡಿದ
- ಗೆರಿಲ್ಲಾ ಯುದ್ದದಲ್ಲಿ ನಿಷ್ಣಾತನಾಗಿದ್ದನು.
- ಬ್ರಿಟಿಷರಿಗೆ ಸಿಂಹ ಸ್ವಪ್ನನಾಗಿದ್ದನು.
- ಹಣದಾಸೆಗೆ ಬಲಿಬಿದ್ದ ದೇಶದ್ರೋಹಿಗಳು ರಾಯಣ್ಣನನ್ನು ಮೋಸದಿಂದ ಸೆರೆಹಿಡಿದುಕೊಟ್ಟರು.
- ರಾಯಣ್ಣನ ಜೊತೆ 6 ಮಂದಿ ಸಂಗಡಿಗರನ್ನು ಗಲ್ಲಿಗೇರಿಸಲಾಯಿತು.
- ರಾಯಣ್ಣ ನ ಸಮಾಧಿ ನಂದಗಡದಲ್ಲಿದೆ.

ಉ.

6. ದಕ್ಷಿಣ ಭಾರತದ ನಕ್ಷೆ


@ ಹೈದರಾಬಾದ್
@ ಯಾದಗಿರಿ
@ ಕಿತ್ತೂರು
@ ಮೈಸೂರು
N
0 100 200 km

## ಅಧ್ಯಾಯ-8 ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ

ಅ.

1. C
2. A
3. B
4. A
5. D

ಆ.

6. ಗೋವಿಂದ ಭಟ್ಟರಿಂದ
7. ಕನಕದಾಸ
8. ಸಂತ ಶಿಶುನಾಳ ಶರೀಫ
9. ವಿಶ್ವಂಭರ , ನವದ್ವೀಪ
10. ಗೇಸುದರಾಜ್
11. ತಿರುಪ್ಪಾವೈ
12. ಪುರಂದರ ವಿಠ್ಠಲ
13. ಶಿಶುನಾಳ
14. ಸಾ.ಶ 1819
15. ನೀರು ಮತ್ತು  ನಿಮಾ
16. 2 ಸಾಲಿನ ಪದ್ಯ
17. ಗ್ರಂಥ ಸಾಹೀಬ್
18. ಸಿಖ್ ರ ಹಾಡುಗಳು

19. ರಾಮಚರಿತ ಮಾನಸ

20. ಈಶ್ವರಿಪುರಿ

21. ಮೀರಾಬಾಯಿ

22. ಮೊರೆ ಹೊಕ್ಕವರನ್ನು ಪೊರೆಯುವ

ಇ.

23. ವ್ಯಾಸರಾಯರು

24. ಹಾವೇರಿ ಜಿಲ್ಲೆ ಬಂಕಾಪುರ ತಾಲ್ಲೂಕಿನ ಬಾಡ ಗ್ರಾಮ

25. ವರದಪ್ಪ ನಾಯಕ ಮತ್ತು ಲೀಲಾವತಿ

26. ಕನಕ ( ಬಂಗಾರ ) ತುಂಬಿದ ಕೊಪ್ಪರಿಗೆ ದೊರೆಯುತ್ತದೆ.

27. ರಮಾನಂದರ ಶಿಷ್ಯರಾಗಿದ್ದರು.

28. ಗುರುನಾನಕ

29. ಗುರುನಾನಕರು ಬೀದರಿನಲ್ಲಿ ತಂಗಿದ್ದ ಸ್ಥಳವನ್ನು 'ನಾನಕ್ ಝುರಾ' ಎನ್ನುವರು.

30. ತುಳಸಿದಾಸರು

31. ಮೀರಾಬಾಯಿ

32. ಮುಯಿನುದ್ದೀನ ಚಿಸ್ತಿ

33. ಗೋದಾದೇವಿ

34. ಶಿವಮೊಗ್ಗ ಜಿಲ್ಲೆಯ ಉಡುತಡಿ

35. ಸಂತ ಶಿಶುನಾಳ ಶರೀಫ

36. ತಂದೆ: ಬೀರಪ್ಪ (ಬೀರನಾಯಕ)
ತಾಯಿ: ಬಚ್ಚಮ್ಮ (ಬಚ್ಚಮ್ಮನವರು)

37. ಖ್ವಾಜಾ ಮೊಯಿನುದ್ದೀನ್ ಚಿಶ್ತಿ, ನಿಜಾಮುದ್ದೀನ್ ಔಲಿಯಾ ಮತ್ತು ಬಾಬಾ ಫರೀದ್

**ಈ. 38**

1. (ಆ) ಸಿಖ್ ಧರ್ಮ
2. (ಈ) ಹರೇಕೃಷ್ಣ ಪಂಥ
3. (ಅ) ಸೂಫಿಸಂತ
4. (ಇ) ಕಲಿಯುಗದ ರಾಧ

ಉ..

39. ಕಬೀರ್ ದಾಸರ ಸಂದೇಶಗಳು

- ಹಿಂದೂ –ಮುಸ್ಲಿಂ ಧರ್ಮದ ನಡುವೆ ಸಾಮರಸ್ಯಕ್ಕೆ ಒತ್ತು
- ಜಾತಿ ಪದ್ಧತಿ, ಆಡಂಬರದ ಜೀವನ,ಜಾತಿ ಶ್ರೇಷ್ಠತೆ,ಧಾರ್ಮಿಕ ಅಸಮಾನತೆ ಇವುಗಳನ್ನು ಖಂಡಿಸಿದರು.

40. ಭಕ್ತಿ ಪಂಥದ ಪರಿಣಾಮಗಳು

- ಭಕ್ತಿ ಸಂತರು ಹಿಂದೂ-ಮುಸ್ಲಿಂರಲ್ಲಿ ಸಾಮರಸ್ಯ ಸಾಧಿಸಿದರು.
- ಸ್ಥಳೀಯ ಭಾಷೆಯಲ್ಲಿ ಸಾಹಿತ್ಯ ರಚನೆಯಾಗಿದ್ದರಿಂದ ದೇಶಿ ಭಾಷೆಗಳು ಶ್ರೀಮಂತಗೊಂಡವು.

41. ಅಕ್ಕಮಹಾದೇವಿ ತಂದೆ – ನಿರ್ಮಲ ಶೆಟ್ಟಿ ತಾಯಿ- ಸುಮತಿ

ಅಕ್ಕಮಹಾದೇವಿ ಶ್ರೀಶೈಲದ ಕದಳಿವನದಲ್ಲಿ ಲಿಂಗೈಕ್ಯರಾಗುತ್ತಾರೆ.

ಊ.

42. ಗುರುನಾನಕರ ಬೋಧನೆಗಳು

- ಗುರುನಾನಕರು ಸಿಖ್ ಧರ್ಮದ ಸಂಸ್ಥಾಪಕರು
- ವಿಶ್ವಕ್ಕೆ ದೇವರು ಒಬ್ಬನೇ ಎಂದು ಸಾರಿದರು.
- ದೇವರು ಸತ್ಯ, ನಿತ್ಯನೆಂದು ಸಾರಿದರು.

- ಜೀವನದಲ್ಲಿ ಮೋಸ,ವಂಚನೆ,ಕಳ್ಳತನ,ಹಿಂಸೆ ಮಾಡಬಾರದು.
- ಗುರುವಿನಿಂದ ಭಕ್ತಿ,ಭಕ್ತಿಯಿಂದ ಮುಕ್ತಿಯನ್ನು ಪಡೆಯಬಹುದು ಎಂದರು.
- ಮೂರ್ತಿ ಪೂಜೆ,ಜಾತಿ ಪದ್ಧತಿ, ಸತಿ ಪದ್ಧತಿ ವಿರೋಧಿಸಿದರು.

43. ಸೂಫಿ ಪಂಥದ ಸಾರ ಸಂಗ್ರಹ

- ದೇವರು ಒಬ್ಬನೇ ಆತನು ಸರ್ವಶಕ್ತನಾಗಿದ್ದಾನೆ.
- ನಾವೆಲ್ಲರೂ ಆತನ ಮಕ್ಕಳು.
- ಉತ್ತಮ ಕಾಯಕಕ್ಕೆ ಮಹತ್ವ ನೀಡಿತು.
- ಎಲ್ಲಾ ಮಾನವರು ಸಮಾನರು ಎಂದು ಸಾರಿತು.
- ಜಾತಿ ಪದ್ಧತಿಯನ್ನು ವಿರೋಧಿಸಿತು.

44. ಭಕ್ತಿ ಪಂಥದ ಸಾರ

- ಮೇಲು ಕೀಳು ,ಭೇದಭಾವ ಖಂಡಿಸಿ ಸಮಾನತೆ ಸಾರಿತು.
- ಭಕ್ತಿ ಪಂಥದ ಸಂತರು ಕಂದಾಚಾರ ವಿರೋಧಿಸಿದರು.
- ಜನರ ಹೃದಯ ಬೆಸೆಯುವ ಕಾರ್ಯ ಮಾಡಿದರು.
- ಧರ್ಮ ಎಂದರೆ ಪ್ರೇಮ ಹಾಗೂ ಮಾನವರ ಸೇವೆ ಎಂದು ಸಾರಿತು.
- ದೇವರು ಒಬ್ಬನೇ ಎಂದು ಸಾರಿತು.

ಋ.

45. ಕನಕದಾಸರ ಕುರಿತು ಟಿಪ್ಪಣಿ

- ಕನಕದಾಸರು ದಾಸ ಸಾಹಿತ್ಯದ ಒಬ್ಬ ಪ್ರಮುಖ ಕೀರ್ತನಕಾರರು.
- ಸಾ.ಶ 1508 ರಲ್ಲಿ ಬಂಕಾಪುರ ತಾಲೂಕಿನ ಬಾಡ ಗ್ರಾಮದಲ್ಲಿ ಜನಿಸಿದರು.
- ಮೂಲ ಹೆಸರು- ತಿಮ್ಮಪ್ಪ
- ತಂದೆ – ಬೀರಪ್ಪ ತಾಯಿ- ಬಚ್ಚಮ್ಮ
- 78 ಗ್ರಾಮಗಳಿಗೆ ಢಣಾಯಕರಾಗಿದ್ದರು.
- ಕನಕದ ಕೊಪ್ಪರಿಗೆ ದೊರೆತಿದ್ದರಿಂದ ಕನಕನಾಯಕರಾದರು.
- ‘ಆದಿಕೇಶವ’ ಇವರ ಅಂಕಿತನಾಮ
- ಮೂಢನಂಬಿಕೆ ಖಂಡಿಸಿದ್ದಾರೆ.

- ತಮ್ಮ ಕೀರ್ತನೆಗಳಲ್ಲಿ ಜಾತಿ ಪದ್ಧತಿಯನ್ನು ವಿಡಂಬನೆ ಮಾಡಿದ್ದಾರೆ.

46. ಮೀರಾಬಾಯಿ ಕುರಿತು ಟಿಪ್ಪಣಿ

- ಶ್ರೀ ಕೃಷ್ಣ ಮೀರಾಬಾಯಿಯ ಆರಾಧ್ಯ ದೇವ
- 'ಕಲಿಯುಗದ ರಾಧೆ' ಎನ್ನುವರು.
- ರಾಜಸ್ಥಾನದ ರಾಜಾ-ರತನ್ ಸಿಂಗ್ನ ಮಗಳು
- ಮೇವಾಡದ ರಾಜಕುಮಾರನೊಡನೆ ವಿವಾಹವಾಗಿತ್ತು.
- ಬಾಲ್ಯದಿಂದಲೂ ಆದ್ಯಾತ್ಮದ ಕಡೆಗೆ ಒಲವು
- ಪೂಜೆ,ದ್ಯಾನ ಮತ್ತು ಕೀರ್ತನೆಗಳಲ್ಲಿ ಕಾಲ ಕಳೆಯುತ್ತಿದ್ದಳು.
- ಪತಿ ಮನೆಯಲ್ಲಿ ಅವಳ ಭಕ್ತಿಗೆ ಅಡ್ಡಿಯಾಗಿದ್ದರಿಂದ ಅರಮನೆ ತ್ಯಜಿಸಿ ಕೃಷ್ಣನ ಕ್ಷೇತ್ರ ಬೃಂದಾವನಕ್ಕೆ ಹೋದಳು.
- ಗಿರಿಧರ ಗೋಪಾಲ ಇವಳ ಆರಾಧ್ಯ ದೈವ
- ನೂರಾರು ಭಜನೆಗಳಿಂದ ಇಂದಿಗೂ ಜನಮನದಲ್ಲಿ ಶಾಶ್ವತವಾಗಿ ಉಳಿದಿದ್ದಾಳೆ.

ಎ.

47. 1) ಕನಕದಾಸರು 2) ಗುರುನಾನಕರು 3) ಚೈತನ್ಯರು 4) ಮೀರಾಬಾಯಿ 5) ತುಳಸಿದಾಸರು

## ಅಧ್ಯಾಯ-9 ಶಾಸಕಾಂಗ , ಕಾರ್ಯಾಂಗ ಮತ್ತು ನ್ಯಾಯಾಂಗ ಪರಿಭಾಷೆಗಳ ಪರಿಚಯ

**ಅ.**

1. B) ಶಾಸಕಾಂಗ
2. C) ಸಂಸತ್ತು
3. D) ಲೋಕಸಭೆ
4. B) ರಾಜ್ಯಸಭೆ
5. C) ಸರ್ವೋಚ್ಚ ನ್ಯಾಯಾಲಯ
6. A) ಇಂಗ್ಲೆಂಡನಲ್ಲಿ

**ಆ.**

7. ಬಾರೋ ಮೀಟರ್
8. ಪಾರ್ಲಿಮೆಂಟ್(Parliament)
9. ಸಾರ್ವಭೌಮತ್ವದ
10. ಶಾಸಕಾಂಗ
11. ಸಾರ್ವಜನಿಕ
12. ದ್ವಿಸದನ
13. ಏಕ ಸದನ
14. ದ್ವಿಸದನ
15. ಕಾರ್ಯನಿರ್ವಹಿಸು
16. ಎಕ್ಸಿಕ್ಯುಟಿವ್(Executive)
17. ಲ್ಯಾಟಿನ್ ಭಾಷೆಯ ಎಕ್ಸಿಕ್ಯೂ
18. ಮೆದುಳು
19. ನೌಕರಶಾಹಿ
20. ಯೋಗಕ್ಷೇಮ ಹಾಗೂ ಭದ್ರತೆ
21. ನ್ಯಾಯಾಂಗ
22. ಸಂವಿಧಾನ

23. ವಂಶಪಾರಂಪರ್ಯದ
24. ಲ್ಯಾಟಿನ್ ಭಾಷೆಯ ಜಸ್ಟಿಸಿಯಾ
25. ಚಾರ್ಲ್ಸ್ ಇವಾನ್ಸ್ ಹ್ಯೂಸ್
26. ಸೂರ್ಯ ಕಾಂತ್ (2026 ಜೂನ್)

**ಇ.**

27. ಮೇಲ್ಮನೆ
28. ಜಸ್ಟಿಶಿಯಾ(Justitia)
29. ಇಂಗ್ಲೆಂಡ್
30. ಪ್ರಧಾನಮಂತ್ರಿ ಮತ್ತು ಮಂತ್ರಿ ಮಂಡಲ
31. ಲ್ಯಾಟಿನ್

**ಈ.**

32. ಒಂದು ದೇಶದ ಪ್ರಜಾಪ್ರತಿನಿಧಿಗಳು ಒಂದೆಡೆ ಸೇರಿ ಜನರ ಅಭಿಪ್ರಾಯವನ್ನು ತಿಳಿಸುವ ವೇದಿಕೆಯಾಗಿರುವುದರಿಂದ.
33. ಶಾಸಕಾಂಗಕ್ಕೆ
34. ಫ್ರೆಂಚ್ ಭಾಷೆಯ Parler ಮತ್ತು ಲ್ಯಾಟಿನ್ ಭಾಷೆಯ Parlamentum
35. ರಾಷ್ಟ್ರಕ್ಕೆ ಬೇಕಾದ ಶಾಸನ ಅಥವಾ ಕಾನೂನುಗಳನ್ನು ರಚಿಸುವ ಸರ್ಕಾರದ ಅಂಗವೇ ಶಾಸಕಾಂಗ
36. ಒಂದು ಸದನವನ್ನು ಮಾತ್ರ ಹೊಂದಿರುವ ಶಾಸಕಾಂಗ
37. ಎರಡು ಸದನವನ್ನು ಹೊಂದಿರುವ ಶಾಸಕಾಂಗ
38. ಭಾರತ ಮತ್ತು ಇಂಗ್ಲೆಂಡ್
39. ಶಾಸಕಾಂಗ ರಚಿಸಿದ ಶಾಸನಗಳನ್ನು ಕಾರ್ಯರೂಪಕ್ಕೆ ತರುವ ಸರ್ಕಾರದ ಅಂಗ.
40. ಲ್ಯಾಟಿನ್ ಭಾಷೆಯ ಎಕ್ಸಿಕ್ಯೂ(Exsequi)
41. ಕಾರ್ಯಾಂಗ
42. ಕಲ್ಯಾಣ ರಾಜ್ಯ

43. ರಾಷ್ಟ್ರದ ಮುಖ್ಯಸ್ಥನ ಹೆಸರಿನಲ್ಲಿ ಸರ್ಕಾರದ ಮುಖ್ಯಸ್ಥರು ಅಧಿಕಾರ ಚಲಾಯಿಸುವ ಪದ್ಧತಿಯೇ ನಾಮ ಮಾತ್ರ ಕಾರ್ಯಾಂಗ.
44. ಕಾರ್ಯಾಂಗದ ಮುಖ್ಯಸ್ಥನು ವಾಸ್ತವವಾಗಿ ನೈಜ ಅಧಿಕಾರವನ್ನು ಚಲಾಯಿಸುವ ಪದ್ಧತಿಯೇ ನೈಜ ಕಾರ್ಯಾಂಗ.
45. ಫ್ರೆಂಚ್ ಭಾಷೆಯ Parler ಮತ್ತು ಲ್ಯಾಟಿನ್ ಭಾಷೆಯ Parlamentum
46. ನ್ಯಾಯಾಂಗವನ್ನು
47. ಜಸ್ಟಿಶಿಯಾ (Justitia)
48. ರಾಷ್ಟ್ರದೊಳಗಿನ ಎಲ್ಲ ನ್ಯಾಯಾಲಯಗಳು ಶ್ರೇಣಿಕೃತ ತತ್ವದ ಆಧಾರದ ಮೇಲೆ ರಚಿತಗೊಂಡು ಕಾರ್ಯನಿರ್ವಹಿಸುತ್ತಿದ್ದರೆ ಏಕೀಕೃತ ನ್ಯಾಯಾಂಗ ವ್ಯವಸ್ಥೆ.
49. ದೇಶದಲ್ಲಿ ಕೇಂದ್ರ ಮತ್ತು ರಾಜ್ಯಗಳು ಪ್ರತ್ಯೇಕ ಹಾಗು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ ಹೊಂದಿದ್ದರೆ ಸಂಯುಕ್ತ ನ್ಯಾಯಾಂಗ ವ್ಯವಸ್ಥೆ.
50. ಭಾರತ ಮತ್ತು ಕೆನಡ.
51. ಆಚರಣೆಯಲ್ಲಿರುವ ಕಾನೂನಿಗೆ ಬದ್ಧವಾಗಿ ನ್ಯಾಯ ತೀರ್ಮಾನ ಮಾಡುವುದು.
52. ಅಮೇರಿಕಾ ಮತ್ತು ಸ್ವಿಟ್ಜರ್ ಲ್ಯಾಂಡ್
53. ಪರೋಕ್ಷ ಚುನಾವಣೆ
54. ಜಸ್ಟಿಶಿಯಾ
55. ಕಾರ್ಯಾಂಗ
56. ಪ್ರಧಾನಮಂತ್ರಿ
57. ನವದೆಹಲಿ
58. ಪ್ರತ್ಯಕ್ಷ ಚುನಾವಣಾ ವಿಧಾನ ಎಂದರೆ ಮತದಾರರು ತಮ್ಮ ಪ್ರತಿನಿಧಿಯನ್ನು ನೇರವಾಗಿ ಮತ ಚಲಾಯಿಸಿ ಆಯ್ಕೆ ಮಾಡುವ ಚುನಾವಣಾ ವಿಧಾನ.

**ಉ.**

59. ಶಾಸಕಾಂಗವು ಒಂದು ರಾಷ್ಟ್ರಕ್ಕೆ ಬೇಕಾದ ಹೊಸ ಕಾನೂನುಗಳನ್ನು ರೂಪಿಸುವ ಮತ್ತು ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಮಾರ್ಪಾಡು ಮಾಡುವ ಹಾಗೂ ಅನುಪಯೋಗಿ ಕಾನೂನುಗಳನ್ನು ರದ್ದುಪಡಿಸುವ ಪರಮ ಅಧಿಕಾರವನ್ನು ಹೊಂದಿದ್ದರಿಂದ.

60. ಒಂದು ರಾಷ್ಟ್ರಕ್ಕೆ ಬೇಕಾದ ಹೊಸ ಕಾನೂನುಗಳನ್ನು ರೂಪಿಸುವ ಮತ್ತು ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಮಾರ್ಪಾಡು ಮಾಡುವ ಹಾಗೂ ಅನುಪಯೋಗಿ ಕಾನೂನುಗಳನ್ನು ರದ್ದುಪಡಿಸುವುದು.
61. ಏಕಸದನ ಶಾಸಕಾಂಗ ಮತ್ತು ದ್ವಿಸದನ ಶಾಸಕಾಂಗ
62. ರಾಜ್ಯದ ಮುಖ್ಯ ಕಾರ್ಯನಿರ್ವಾಹಕ ಹಾಗೂ ಅದರ ಸಲಹೆಗಾರ
63. ಶಾಸನಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ಅಧಿಕೃತ ವ್ಯಕ್ತಿಗಳ ಸಮೂಹ.
64. "ಸಂವಿಧಾನ ಮತ್ತು ನ್ಯಾಯಾಂಗದ ನಿರ್ಧಾರಗಳ ಮೂಲಕ ವ್ಯಕ್ತವಾಗುವ ರಾಜ್ಯದ ಇಚ್ಛೆಯನ್ನು ಕಾರ್ಯಗತಗೊಳಿಸುವ ಸರ್ಕಾರದ ಅಂಗವೇ ಕಾರ್ಯಾಂಗ"
65. ಕಾರ್ಯಾಂಗಿಯ ಅಧಿಕಾರ ಅಥವಾ ಅದರ ಕಾರ್ಯ ಇಡೀ ಸರ್ಕಾರವನ್ನು ಪ್ರತಿನಿಧಿಸುತ್ತಿದ್ದು, ಅದರ ಕಾನೂನುಗಳು ಅದರ ಹಲವಾರು ಅಂಗಗಳು ಕೋರಿಕೆಯನ್ನು ಈಡೇರಿಸುವಂತೆ ನೋಡಿಕೊಳ್ಳುವುದೇ ಕಾರ್ಯಾಂಗ.
66. ಏಕೀಕೃತ ನ್ಯಾಯಾಂಗ ವ್ಯವಸ್ಥೆ ಮತ್ತು ಸಂಯುಕ್ತ ನ್ಯಾಯಾಂಗ ವ್ಯವಸ್ಥೆ
67. ಕತ್ತಲೆಯಿಂದ ನ್ಯಾಯದ ದೀಪವು ಹೊರಟರೆ ಕಗ್ಗತ್ತಲೆಯ ಕೌರ್ಯ ಏನೆಂಬುದು ಮನವರಿಕೆಯಾಗುತ್ತದೆ
68. ಪ್ರಜೆಗಳ ಹಕ್ಕುಗಳಿಗೆ ಚ್ಯುತಿ ಬಂದಾಗ ಅವುಗಳ ರಕ್ಷಣೆಗಾಗಿ ನ್ಯಾಯಾಲಯವು ಹೊರಡುಸುವ ಆಜ್ಞೆಗಳು.
69. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ

**ಊ.**

70. ಸಂವಿಧಾನಕ್ಕೆ ಹೊಸ ವಿಧಿಗಳನ್ನು ಸೇರಿಸುವ, ಮಾರ್ಪಾಡು ಮಾಡುವ ಮತ್ತು ರದ್ದುಗೊಳಿಸುವ ಪ್ರಕ್ರಿಯೆ.
71. ಜನತೆಯ ಆಶೋತ್ತರಗಳನ್ನು ಈಡೇರಿಸಲು ಬೇಕಾದ ಸಾರ್ವಜನಿಕ ನೀತಿ ನಿಯಮಗಳನ್ನು ರೂಪಿಸುವ ಮೂಲಕ ರಾಷ್ಟ್ರದ ಸಮಗ್ರ ಪ್ರಗತಿಗಯನ್ನು ಪ್ರತಿಬಿಂಬಿಸುವದರಿಂದ ಶಾಸಕಾಂಗ ರಾಷ್ಟ್ರಜೀವನದ ಕನ್ನಡಿಯಾಗಿದೆ.
72. ಗ್ರೀಸ್, ಫಿನ್ ಲ್ಯಾಂಡ್, ಸ್ವಿಡನ್, ಡೆನ್ಮಾರ್ಕ್, ಯುಗೋಸ್ಲಾವಿಯ, ಪೋರ್ಚುಗಲ್, ನ್ಯೂಜಿಲ್ಯಾಂಡ್ ಮುಂತಾದವು.

73. ಕಾನೂನುಗಳನ್ನು ರಚಿಸುವುದು, ಸರ್ಕಾರದ ರಚನೆ, ಸಾರ್ವಜನಿಕ ಕುಂದುಕೊರತೆಗಳ ನಿವಾರಣೆ, ಸಂವಿಧಾನ ತಿದ್ದುಪಡಿ ಹೀಗೆ ಶಾಸಕಾಂಗವು ವ್ಯಾಪಕ ಅಧಿಕಾರ ಹೊಂದಿದೆ.
74. ರಾಷ್ಟ್ರದ ಸಂಪೂರ್ಣ ಆಡಳಿತದ ಜವಾಬ್ದಾರಿ ನಿರ್ವಹಣೆ, ಕಾನೂನುಗಳನ್ನು ಅನುಷ್ಠಾನಗೊಳಿಸುವುದು, ಕಲ್ಯಾಣ ರಾಜ್ಯ ಸ್ಥಾಪನೆ, ವಿದೇಶಿ ನೀತಿ, ನಿಯಮ, ಒಪ್ಪಂದ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳ ಸಂರಕ್ಷಣೆ. ಮುಂತಾದವು
75. ಕಾರ್ಯಾಂಗದ ಯಾವುದಾದರೂ ನಾಲ್ಕು ವಿಧಗಳು
    - ನಾಮ ಮಾತ್ರ ಕಾರ್ಯಾಂಗ
    - ನೈಜ ಕಾರ್ಯಾಂಗ
    - ಸಂಸದೀಯ ಕಾರ್ಯಾಂಗ
    - ಅಧ್ಯಕ್ಷೀಯ ಕಾರ್ಯಾಂಗ
    - ಏಕವ್ಯಕ್ತಿ ಕಾರ್ಯಾಂಗ
    - ಬಹುವ್ಯಕ್ತಿ ಕಾರ್ಯಾಂಗ
    - ರಾಜಕೀಯ ಕಾರ್ಯಾಂಗ
    - ಶಾಶ್ವತ ಕಾರ್ಯಾಂಗ
76. ಶಾಸಕಾಂಗದಿಂದ ರಚಿಸಲ್ಪಟ್ಟ ಶಾಸನಗಳು ಮತ್ತು ಕಾರ್ಯಾಂಗದಿಂದ ಹೊರಡಿಸಲ್ಪಟ್ಟ ಆಜ್ಞೆಗಳ ಸಂಇಧಾನ ಬದ್ಧತೆಯನ್ನು ಪರಿಶೀಲಿಸಿ, ಅವುಗಳ ಸಿಂಧುತ್ವ ಮತ್ತು ಅಸಿಂಧುತ್ವವನ್ನು ಘೋಷಿಸುವ ಅಧಿಕಾರವೇ ಣ್ಯಾಯಿಕ ವಿಮರ್ಶೆ.
77. "ಪ್ರಜೆಗಳ ಹಕ್ಕುಗಳನ್ನು ನಿರ್ಧರಿಸಿ ಸಂರಕ್ಷಿಸುವ, ಅಪರಾಧಿಗಳನ್ನು ಶಿಕ್ಷಿಸುವ, ನ್ಯಾಯವನ್ನು ಎತ್ತಿ ಹಿಡಿಯುವ ಮತ್ತು ಮುಗ್ದರನ್ನು ದುರಾಕ್ರಮಣದ ಅಪಾಯದಿಂದ ರಕ್ಷಿಸುವ ಸರ್ಕಾರದ ಅಂಗವೇ ನ್ಯಾಯಾಂಗ"

**ಋ.**

78. ಶಾಸಕಾಂಗದ ಪ್ರಾಮುಖ್ಯತೆ
    - ಕಾನೂನುಗಳ ರಚನೆ
    - ಸರ್ಕಾರದ ರಚನೆ
    - ಸಂವುಧಾನ ತಿದ್ದುಪಡಿ
    - ಸಾರ್ವಜನಿಕ ಕುಂದುಕೊರತೆಗಳ ನಿವಾರಣೆ

- ರಾಷ್ಟ್ರಜೀವನದ ಕನ್ನಡಿ
- ರಾಷ್ಟ್ರದ ಸಾರ್ವಭೌಮತ್ವದ ಸಂಕೇತವಾಗಿದೆ

79. ಕಾರ್ಯಾಂಗದ ಮಹತ್ವ

- ಕಾರ್ಯಾಂಗವೇ ಸರ್ಕಾರದ ಯಂತ್ರ
- ಕಾನೂನುಗಳನ್ನು ಅನುಷ್ಠಾನಗೊಳಿಸುವುದು
- ಪರಿಣಾಮಕಾರಿ ಪ್ರಾಜಾಪ್ರಭುತ್ವದ ಸಾಧನ
- ಕಲ್ಯಾಣ ರಾಜ್ಯದ ಸಾಧನ
- ರಾಷ್ಟ್ರದ ಘನತೆಯ ಪ್ರತೀಕ

80. ನ್ಯಾಯಾಂಗದ ಮಹತ್ವ

- ಕಾನೂನನ್ನು ರಕ್ಷಿಸುವುದು
- ಹಕ್ಕು ಮತ್ತು ಸ್ವಾತಂತ್ರ್ಯಗಳಿಗೆ ರಕ್ಷಣೆ
- ನಾಗರಿಕ ಭದ್ರತೆ ಮತ್ತು ಕಲ್ಯಾಣ
- ರಾಜ್ಯದಲ್ಲಿ ಸುವ್ಯವಸ್ಥೆಯ ಸ್ಥಾಪನೆ
- ಸಾರ್ವಜನಿಕರಲ್ಲಿ ನಂಬಿಕೆಯನ್ನು ಮೂಡಿಸುವುದು.

81. ಶಾಸಕಾಂಗ ಮತ್ತು ಕಾರ್ಯಾಂಗದ ನಡುವಿನ ವ್ಯತ್ಯಾಸ

| **ಶಾಸಕಾಂಗ** | **ಕಾರ್ಯಾಂಗ** |
|---|---|
| 1. ರಾಷ್ಟ್ರಪತಿ ಮತ್ತು ಸಂಸತ್ತನ್ನು ಒಳಗೊಂಡಿದೆ. | 1. ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಳವನ್ನು ಒಳಗೊಂಡಿದೆ. |
| 2. ದೇಶಕ್ಕೆ ಬೇಕಾದ ಕಾನೂನುಗಳನ್ನು ರಚಿಸುವುದು. | 2. ಶಾಸಕಾಂಗ ರಚಿಸಿದ ಕಾನೂನುಗಳನ್ನು ಅನುಷ್ಠಾನಗೊಳಿಸುವುದು. |
| 3. ಅಂತರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕುವ ಅಥವಾ ಅಂಗೀಕರಿಸುವ ಅಧಿಕಾರವಿಲ್ಲ | 3. ಅಂತರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕುವ ಅಥವಾ ಅಂಗೀಕರಿಸುವ ಅಧಿಕಾರವಿದೆ. |
| 4. ರಾಷ್ಟ್ರಜೀವನದ ಕನ್ನಡಿಯಾಗಿದೆ. | 4. ರಾಷ್ಟ್ರದ ಘನತೆಯ ಪ್ರತೀಕವಾಗಿದೆ |

82. ಕಾರ್ಯಾಂಗದ ವಿಧಗಳು

- ನಾಮ ಮಾತ್ರ ಕಾರ್ಯಾಂಗ
- ನೈಜ ಕಾರ್ಯಾಂಗ
- ಸಂಸದೀಯ ಕಾರ್ಯಾಂಗ
- ಅಧ್ಯಕ್ಷೀಯ ಕಾರ್ಯಾಂಗ
- ಏಕವ್ಯಕ್ತಿ ಕಾರ್ಯಾಂಗ
- ಬಹುವ್ಯಕ್ತಿ ಕಾರ್ಯಾಂಗ
- ರಾಜಕೀಯ ಕಾರ್ಯಾಂಗ
- ಶಾಶ್ವತ ಕಾರ್ಯಾಂಗ

83. ನ್ಯಾಯಾಂಗದ ಕಾರ್ಯಗಳು

- ಕಾನೂನನ್ನು ಅರ್ಥೈಸುವುದು
- ನ್ಯಾಯ ತೀರ್ಮಾನ
- ಆಜ್ಞೆಗಳನ್ನು ಹೊರಡಿಸುವುದು
- ಸಲಹೆ ನೀಡುವುದು
- ನ್ಯಾಯಿಕ ವಿಮರ್ಶೆ

84. ಕಾರ್ಯಾಂಗವು ರಾಷ್ಟ್ರದ ಘನತೆಯ ಪ್ರತೀಕ

- ಅಂತರಾಷ್ಟ್ರೀಯ ಸಂಬಂಧಗಳ ಸಂವರ್ಧನೆ
- ಅಂತರಾಷ್ಟ್ರೀಯ ಒಪ್ಪಂದ ಮಾಡಿಕೊಳ್ಳುವುದು
- ರಾಷ್ಟ್ರೀಯ ಹಿತಾಸಕ್ತಿಗಳ ಸಂರಕ್ಷಣೆ
- ಶಾಂತಿ ಮತ್ತು ಸೌಹಾರ್ದಯುತ ನೀತಿ ಅನುಷ್ಠಾನಗೊಳಿಸುವುದು.

ಈ ಮೇಲಿನ ಎಲ್ಲ ಕಾರಣಗಳಿಂದ ಶಾಸಕಾಂಗ ರಾಷ್ಟ್ರದ ಪ್ರತೀಕವಾಗಿದೆ.

# ಅಧ್ಯಾಯ-10 ಕೇಂದ್ರ ಸರ್ಕಾರ

**ಅ.**

1. B)28
2. D)08
3. C)552
4. D)250
5. C) ರಾಷ್ಟ್ರಪತಿ
6. A) ಪ್ರಧಾನಮಂತ್ರಿ

**ಆ.**

7. ಶಾಸಕಾಂಗ
8. ಕಾರ್ಯಾಂಗ
9. ನ್ಯಾಯಾಂಗ
10. 25 ವರ್ಷ
11. 12
12. 30 ವರ್ಷ
13. ಲೋಕಸಭೆಯಲ್ಲಿ
14. ರಾಷ್ಟ್ರಪತಿ ಭವನ
15. ಐದು ವರ್ಷ
16. ಲೋಕಸಭೆ ಮತ್ತು ರಾಜ್ಯಸಭೆ.
17. ಆರು ವರ್ಷ

**ಇ.**

18. ರಾಜ್ಯಸಭೆ
19. ಆರು ವರ್ಷ

20. ಮೂವತ್ತು ವರ್ಷ

**ಈ.**

21. ಸಂಸತ್ತು ಅಥವಾ ಪಾರ್ಲಿಮೆಂಟ್

22.ರಾಷ್ಟ್ರಪತಿ, ಲೋಕಸಭೆ ಮತ್ತು ರಾಜ್ಯಸಭೆ

23. ಲೋಕಸಭೆ ಮತ್ತು ರಾಜ್ಯಸಭೆ

24.ಹದಿನೆಂಟು ವರ್ಷ ವಯಸ್ಸಾದ ಪ್ರಜೆಗಳು

25. ಲೋಕಸಭೆಯ ಸದಸ್ಯರು

26.ಎಲ್ಲಾ ರಾಜ್ಯಗಳ ವಿಧಾನಸಭೆ ಸದಸ್ಯರು

27. ಸಂಸತ್ತ ಸದಸ್ಯರು (ಮೆಂಬರ್ ಆಫ ಪಾರ್ಲಿಮೆಂಟ್- MP)

28. ರಾಷ್ಟ್ರಪತಿ, ಪ್ರಧಾನಮಂತ್ರಿ ಹಾಗೂ ಮಂತ್ರಿಮಂಡಲ

29. 35 ವರ್ಷ

30. ಲೋಕಸಭೆ ಮತ್ತು ರಾಜ್ಯಸಭೆ

31. ರಾಷ್ಟ್ರಪತಿ

32. ಕೇಂದ್ರ ಸಂಸತ್ತಿನ ಎರಡೂ ಸದನದ ಸದಸ್ಯರು

33. ಪ್ರಧಾನಮಂತ್ರಿ

34. ಲೋಕಸಭೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕನ್ನು ರಾಷ್ಟ್ರಪತಿ ನೇಮಿಸುತ್ತಾರೆ.

35. ಲೋಕಸಭೆ

36. ಲೋಕಸಭೆಯು ಅವಿಶ್ವಾಸ ಗೊತ್ತುವಳಿ ಮಂಡಿಸಿ ಬಹುಮತ ಸಾಬೀತು ಪಡಿಸುವ ಮೂಲಕ

37. ಸಂಸತ್ತಿಗೆ

**ಉ.**

38. ಲೋಕಸಭೆಯ ಅಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯಗಳು

- ಸದನದಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ತೀರ್ಮಾನಿಸುವುದು.
- ಸದನದಲ್ಲಿ ಶಿಸ್ತು, ಶಾಂತಿ ಹಾಗೂ ಸಂಯಮ ಕಾಪಾಡುವುದು.
- ಸರಿಯಾದ ರೀತಿಯಲ್ಲಿ ಚರ್ಚೆ ನಡೆಸುವುದು.
- ಸರಿಯಾದ ನಿರ್ಣಯ ಕೈಗೊಳ್ಳುವುದು.

39. ಸಂಸತಿನ ಎರಡು ಸದನಗಳ ಚುನಾಯಿತ ಸದಸ್ಯರು ಮತ್ತು ಎಲ್ಲ ರಾಜ್ಯಗಲ ವಿಧಾನಸಭೆಗಳ ಚುನಾಯಿತ ಸದಸ್ಯರು.

40. ಪ್ರಧಾನಮಂತ್ರಿ ಮತ್ತು ಸಚಿವರು ಸೇರಿ ರಚನೆಯಾಗುವ ಕೇಂದ್ರ ಮಂತ್ರಿಮಂಡಲವನ್ನು ಸಂಸದೀಯ ಪದ್ಧತಿ ಎನ್ನುವರು.

**ಊ.**

41. ಪ್ರತಿಪಕ್ಷ ನಾಯಕರ ಪಾತ್ರ ಮತ್ತು ಕಾರ್ಯಗಳು

- ಆಡಳಿತ ಸರ್ಕಾರ ತಪ್ಪು ಎಸಗುತ್ತಿದ್ದರೆ ಅವುಗಳನ್ನು ಎತ್ತಿ ತೋರಿಸುತ್ತಾರೆ.
- ಸರ್ಕಾರದ ನೀತಿ ನಿಯಮಗಳನ್ನು ಪರಾಮರ್ಶಿಸುತ್ತಾರೆ.
- ಸರ್ಕಾರ, ಮಂತ್ರಿಮಂಡಲ ಹಾಗೂ ಅಧಿಕಾರಿಗಳನ್ನು ಎಚ್ಚರಗೊಳಿಸುತ್ತಾರೆ.

42. ಲೋಕಸಭೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕರನ್ನು ರಾಷ್ಟ್ರಪತಿ ನೇಮಕ ಮಾಡುತ್ತಾರೆ. ಪ್ರಧಾನಮಂತ್ರಿಯವರ ಸಲಹೆ ಮೇರೆಗೆ ಉಳಿದ ಸಚಿವರ ನೇಮಕ ಮಾಡುವ ಮೂಲಕ ಕೇಂದ್ರ ಮಂತ್ರಿ ಮಂಡಲ ರಚನೆಯಾಗುತ್ತದೆ.

**ಋ.**

43. ಲೋಕಸಭಾ ಸದಸ್ಯರ ಅರ್ಹತೆಗಳು

- ಭಾರತದ ಪ್ರಜೆಯಾಗಿರಬೇಕು
- ಕನಿಷ್ಠ 25 ವರ್ಷ ವಯಸ್ಸಾಗಿರಬೇಕು
- ಸರ್ಕಾರದ ಯಾವುದೇ ಹುದ್ದೆಯಲ್ಲಿರಬಾರದು.
- ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರಬಾರದು.

- ನ್ಯಾಯಾಲಯದಿಂದ ಜೈಲು ಶಿಕ್ಷೆಗೆ ಒಳಗಾಗಿರಬಾರದು.
- ದಿವಾಳಿಯಾಗಿರಬಾರದು.
- ಸಂಸತ್ತು ಕಾಲಕಾಲಕ್ಕೆ ನಿಗಧಿಪಡಿಸುವ ಅರ್ಹತೆಗಳು

44. ಸಂಸತ್ತಿನ ಅಧಿಕಾರ ಮತ್ತು ಕಾರ್ಯಗಳು

- ಶಾಸನೀಯ ಅಧಿಕಾರ
- ಹಣಕಾಸಿನ ಅಧಿಕಾರ
- ಆಡಳಿತದ ಅಧಿಕಾರ
- ಸಂವಿಧಾನ ತಿದ್ದುಪಡಿ ಅಧಿಕಾರ

45. ಭಾರರತದ ರಾಷ್ಟ್ರಪತಿಗಳ ಅಧಿಕಾರಗಳು

- ಲೋಕಸಭೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕನನ್ನು ಪ್ರಧಾನಮಂತ್ರಿಯಾಗಿ ನೇಮಿಸುವುದು.
- ಪ್ರಧಾನಮಂತ್ರಿ ಸಲಹೆ ಮೇರೆಗೆ ಇತರ ಮಂತ್ರಿಗಲ ನೇಮಕ.
- ಕರಡು ಶಾಸನವಾಗಲು ಅಂಕಿತ ಹಾಕುವುದು.
- ಮೂರು ರಕ್ಷಣಾಪಡೆಗಳ ಮೇಲೆ ಸರ್ವೋಚ್ಚ ಅಧಿಕಾರವಿದೆ.
- ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರ.
- ಅಪರಾಧಿಗಳಿಗೆ ಕ್ಷಮಾದಾನ ಮತ್ತು ಶಿಕ್ಷೆ ಕಡಿಮೆ ಮಾಡುವ ಅಧಿಕಾರವಿದೆ.

46. ಪ್ರಧಾನಮಂತ್ರಿಯವರ ಮಹತ್ವ

- ಲೋಕಸಭೆಯ ನಾಯಕರು.
- ಖಾತೆಗಳ ಹಂಚಿಕೆ ಅಧಿಕಾರವಿದೆ
- ಸರ್ಕಾರದ ಮುಖ್ಯಸ್ಥರಾಗಿದ್ದಾರೆ.
- ಸಚಿವ ಸಂಪುಟ ಪುನರ್ ರಚನೆ
- ವಿವಿಧ ಇಲಾಖೆಗಳ ಸಚಿವರ ನೇಮಕ ಮಾಡಲು ರಾಷ್ಟ್ರಪತಿಯವರಿಗೆ ಶಿಫಾರಸ್ಸು ಮಾಡುತ್ತಾರೆ.

- ಸಚಿವರನ್ನು ಪದಚ್ಯುತಿಗೊಳಿಸುವಂತೆ ರಾಷ್ಟ್ರಪತಿಯವರಿಗೆ ಶಿಫಾರಸ್ಸು ಮಾಡುತ್ತಾರೆ.

47. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ

- ಶಾಸಕಾಂಗದ ಕಾರ್ಯ: ಶಾಸಕಾಂಗವು (ಸಂಸತ್ತು) ದೇಶಕ್ಕೆ ಬೇಕಾದ ಅತ್ಯಗತ್ಯವಾದ ಕಾನೂನುಗಳನ್ನು ರೂಪಿಸುವ ಕಾರ್ಯವನ್ನು ಮಾಡುತ್ತದೆ.
- ಕಾರ್ಯಾಂಗದ ಕಾರ್ಯ: ಕಾರ್ಯಾಂಗವು (ರಾಷ್ಟ್ರಪತಿ, ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಲ) ಶಾಸಕಾಂಗ ರೂಪಿಸಿದ ಕಾನೂನುಗಳನ್ನು ದೇಶಾದ್ಯಂತ ಜಾರಿಗೆ ತರುತ್ತದೆ.
- ನ್ಯಾಯಾಂಗದ ಕಾರ್ಯ: ನ್ಯಾಯಾಂಗವು (ಸುಪ್ರೀಂ ಕೋರ್ಟ್ ಮತ್ತು ಇತರ ನ್ಯಾಯಾಲಯಗಳು) ಕಾನೂನುಗಳನ್ನು ರಕ್ಷಿಸುತ್ತದೆ ಹಾಗೂ ಸಂವಿಧಾನಕ್ಕೆ ವಿರೋಧವಾಗಿ ನಡೆಯುವವರಿಗೆ ಮತ್ತು ಅಪರಾಧಿಗಳಿಗೆ ಕಾನೂನಿನ ಪ್ರಕಾರ ನ್ಯಾಯದಾನ ಮಾಡುತ್ತದೆ.

## ಅಧ್ಯಾಯ-11 ರಾಜ್ಯ ಸರ್ಕಾರ

**ಅ.**

1. C)ಬೆಳಗಾವಿ
2. D)06
3. D)224
4. B)75
5. B) ಮುಖ್ಯಮಂತ್ರಿ

**ಆ.**

6. ವಿಧಾನಸಭೆಯ ಸಭಾಧ್ಯಕ್ಷರು (ಸ್ಪಿಕರ್)
7. ರಾಷ್ಟ್ರಪತಿ ಚುನಾವಣೆ
8. 25 ವರ್ಷ
9. 30 ವರ್ಷ
10. ಮುಖ್ಯಮಂತ್ರಿ
11. 5 ವರ್ಷ
12. ಬೆಂಗಳೂರು

**ಇ.**

13. ರಾಜ್ಯ ಸರ್ಕಾರ
14. ಮೇಲ್ಮನೆ
15. ಮೂವತ್ತು ವರ್ಷ

**ಈ.**

16. ವಿಧಾನ ಪರಿಷತ್ತು
17. ರಾಷ್ಟ್ರಪತಿ
18. ರಾಜ್ಯಪಾಲರು ಮತ್ತು ವಿಧಾನ ಮಂಡಲವನ್ನು ರಾಜ್ಯ ಶಾಸಕಾಂಗವೆನ್ನುತ್ತಾರೆ
19. ವಿಧಾನಸಭೆ ಮತ್ತು ವಿಧಾನ ಪರಿಷತ್ತು
20. ರಾಜ್ಯಗಳಲ್ಲಿ ವಿಧಾನಸಭೆ ಮಾತ್ರ ಹೊಂದಿದ್ದರೆ ಏಕಸದಸನ

21.ರಾಜ್ಯಪಾಲರು ಮತ್ತು ಮುಖ್ಯಮಂತ್ರಿ ಹಾಗೂ ಮಂತ್ರಿಮಂಡಲ

22.35ವರ್ಷ

23. ರಾಜ್ಯಪಾಲರು

24.ರಾಜ್ಯಪಾಲರು

25.ಮುಖ್ಯಮಂತ್ರಿ

26.ರಾಜ್ಯಪಾಲರು

27.ರಾಜ್ಯ ಶಾಸಕಾಂಗವು ಎರಡು ಸದನಗಳನ್ನು ಹೊಂದಿದ್ದರೆ ದ್ವಿಸದನ

28.ನಮ್ಮ ವಿಧಾನಸಭಾ ಕ್ಷೇತ್ರದ ಶಾಸಕರು.................

**ಉ.**

29. ವಿಧಾನಸಭೆಯ ಸದಸ್ಯರ ಅರ್ಹತೆಗಳು

- ಭಾರತದ ಪ್ರಜೆಯಾಗಿರಬೇಕು.
- ಕನಿಷ್ಠ 25 ವರ್ಷ ವಯಸ್ಸಾಗಿರಬೇಕು
- ಸರ್ಕಾರದ ಯಾವುದೇ ಲಾಭದಾಯಕ ಹುದ್ದೆಯಲ್ಲಿರಬಾರದು.
- ದಿವಾಳಿಯಾಗಿರಬಾರದು

30. ವಿಧಾನಸಭೆಯ ಅಧಿಕಾರ ಮತ್ತು ಕಾರ್ಯಗಳು

- ರಾಜ್ಯದ ಶಾಸಕಾಂಗವಾಗಿದೆ.
- ಹಣಕಾಸು ವಿಷಯದಲ್ಲಿ ವಿಧಾನಸಭೆಯ ನಿರ್ಣಯವೇ ಅಂತಿಮ.
- ಮಂತ್ರಿಮಂಡಳದ ಮೇಲೆ ನಿಯಂತ್ರಣ.
- ಮಂತ್ರಿಮಂಡಳ ವಜಾಗೊಳಿಸುವ ಅಧಿಕಾರವಿದೆ.
- ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸುತ್ತಾರೆ.

31. ಶಾಸಕರ ಜವಾಬ್ದಾರಿಗಳು

- ಕ್ಷೇತ್ರದಲ್ಲಿ ಪ್ರವಾಸ ಕೈಗೊಂಡು ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು.
- ಜನಕಲ್ಯಾಣ ಯೋಜನೆಯಲ್ಲಿ ವಿಶೇಷ ಕಾಳಜಿ ವಹಿಸುವುದು.
- ಜನರ ಕುಂದುಕೊರತೆಗಳನ್ನು ಸದನದಲ್ಲಿ ಚರ್ಚಿಸುಚುದು.
- ಜನರ ಪರವಾದ ಕಾನೂನುಗಳು ಜಾರಿಯಾಗಲು ಶ್ರಮಿಸುವುದು.

32. ರಾಜ್ಯಪಾಲರ ಅರ್ಹತೆಗಳು

- ಭಾರತದ ಪ್ರಜೆಯಾಗಿರಬೇಕು.
- ಕನಿಷ್ಠ 35 ವರ್ಷ ವಯಸ್ಸಾಗಿರಬೇಕು.
- ಸಂಸತ್ತಿನ ಅಥವಾ ರಾಜ್ಯ ಶಾಸಕಾಂಗದ ಸದಸ್ಯರಾಗಿರಬೇಕು.

33. ರಾಜ್ಯಪಾಲರು ರಾಜ್ಯದ ಮುಖ್ಯಮಂತ್ರಿ ಹಾಗೂ ಇತರ ಸಚಿವರನ್ನು ನೇಮಕ ಮಾಡುವ ಕಾರ್ಯಾಂಗದ ಅಧಿಕಾರವನ್ನು ಹೊಂದಿರುತ್ತಾರೆ. ರಾಜ್ಯ ಶಾಸಕಾಂಗವು ಅಂಗೀಕರಿಸಿದ ಯಾವುದೇ ಮಸೂದೆಯು ಕಾಯಿದೆಯಾಗಲು ಇವರ ಅಂಕಿತ/ಸಹಿ ಕಡ್ಡಾಯವಾಗಿದೆ. ಜೊತೆಗೆ, ರಾಜ್ಯದ ವಾರ್ಷಿಕ ಆಯವ್ಯಯವನ್ನು (ಬಜೆಟ್) ಶಾಸಕಾಂಗದ ಮುಂದೆ ಮಂಡಿಸುವಂತೆ ನೋಡಿಕೊಳ್ಳುವ ಮತ್ತು ಇವರ ಅನುಮತಿಯಿಲ್ಲದೆ ಹಣಕಾಸು ಮಸೂದೆಯನ್ನು ಮಂಡಿಸದಿರುವ ಹಣಕಾಸಿನ ಅಧಿಕಾರವೂ ಇವರಿಗಿದೆ.

34. ವಿಧಾನಸಭಾ ಸದಸ್ಯರು ರಾಜ್ಯದ ಜನರ ಹಿತದೃಷ್ಟಿಯಿಂದ ಹೊಸ ಕಾನೂನುಗಳನ್ನು ರಚಿಸುವ ಮತ್ತು ತಿದ್ದುಪಡಿ ತರುವ ಮುಖ್ಯ ಕರ್ತವ್ಯ ನಿರ್ವಹಿಸುತ್ತಾರೆ. ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಾದ ರಸ್ತೆ, ಶಿಕ್ಷಣ, ಆರೋಗ್ಯ ಮುಂತಾದ ಸಮಸ್ಯೆಗಳನ್ನು ಶಾಸನಸಭೆಯಲ್ಲಿ ಪ್ರಸ್ತಾಪಿಸಿ ಸರ್ಕಾರದಿಂದ ಪರಿಹಾರ ಕಂಡುಕೊಳ್ಳುತ್ತಾರೆ. ಹಾಗೂ ಪ್ರಶ್ನೋತ್ತರ ವೇಳೆಯ ಮೂಲಕ ಸರ್ಕಾರದ ಕಾರ್ಯವೈಖರಿಯನ್ನು ಪ್ರಶ್ನಿಸಿ, ಬಜೆಟ್ ವೆಚ್ಚಗಳ ಮೇಲೆ ಮೇಲ್ವಿಚಾರಣೆ ನಡೆಸುತ್ತಾರೆ.

**ಊ.**

**35.** ಲೋಕಸಭೆ ಮತ್ತು ವಿಧಾನಸಭೆ ಹೋಲಿಕೆಗಳು

- ಈ ಸದನಗಳ ಸದಸ್ಯರಾಗಲು ಕನಿಷ್ಠ 25 ವರ್ಷ ವಯಸ್ಸಾಗಿರಬೇಕು.
- ಜನರಿಂದ ನೇರವಾಗಿ ಚುನಾವಣೆಗಳ ಮೂಲಕ ಆಯ್ಕೆಯಾಗುತ್ತರೆ.
- ಅಧಿಕಾರ ಅವಧಿ ಐದು ವರ್ಷಗಳು.
- ಶಾಸಕಾಂಗದಲ್ಲಿ ಎರಡು ಸದನಗಳು ಕೆಳಮನೆಯಾಗಿವೆ.
- ಪ್ರಜೆಗಳ ಸಮಸ್ಯೆಗಳನ್ನು ಸದನಗಳಲ್ಲಿ ಚರ್ಚಿಸುತ್ತಾರೆ.
- ಹಣಕಾಸಿನ ವಿಧೇಯಕವನ್ನು ಮೊದಲು ಈ ಸದನಗಳಲ್ಲಿಯೇ ಮಂಡಿಸಬೇಕು.

- ಈ ಸದನಗಳ ಮುಖ್ಯಸ್ಥರು ಶಾಸಕಾಂಗದ ನಾಯಕರಾಗಿರುತ್ತಾರೆ.
- ಈ ಸದನಗಳ ಸದಸ್ಯರು ಮಂತ್ರಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

36. ರಾಜ್ಯಸಭೆ ಮತ್ತು ವಿಧಾನ ಪರಿಷತ್ತ ಹೊಲಿಕೆಗಳನ್ನು ಪಟ್ಟಿ ಮಾಡಿ.

- ಈ ಸದನಗಳ ಸದಸ್ಯರಾಗಲು ಕನಿಷ್ಠ 30 ವರ್ಷ ವಯಸ್ಸಾಗಿರಬೇಕು.
- ಜನರಿಂದ ಪರೋಕ್ಷವಾಗಿ ಆಯ್ಕೆಯಾಗುತ್ತರೆ.
- ಅಧಿಕಾರ ಅವಧಿ ಆರು ವರ್ಷಗಳು.
- ಶಾಸಕಾಂಗದಲ್ಲಿ ಎರಡು ಸದನಗಳು ಮೇಲ್ಮನೆಯಾಗಿವೆ.
- ಪ್ರಜೆಗಳ ಸಮಸ್ಯೆಗಳನ್ನು ಸದನಗಳಲ್ಲಿ ಚರ್ಚಿಸುತ್ತಾರೆ.
- ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಈ ಸದನಗಳಿಗೆ ನಾಮನಿರ್ದೇಶನ ಮಾಡುಲಾಗುತ್ತದೆ.
- ಈ ಸದನಗಳ ಸದಸ್ಯರು ಮಂತ್ರಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

37. ಮುಖ್ಯಮಂತ್ರಿಯ ಅಧಿಕಾರ ಮತ್ತು ಕರ್ತವ್ಯಗಳು

- ಮುಖ್ಯಮಂತ್ರಿಗಳನ್ನು ನೇಮಿಸಲು ರಾಜ್ಯಪಾಲರಿಗೆ ಸಲಹೆ ಮಾಡುವುದು.
- ಮಂತ್ರಿಗಳಿಗೆ ಖಾತೆ ನೀಡುವ ಮತ್ತು ಬದಲಾಯಿಸುವ ಅಧಿಕಾರ.
- ಮಂತ್ರಿಗಳನ್ನು ಪದಚ್ಯುತಿಗೊಳಿಸುವ ಅಧಿಕಾರ.
- ಕೇಂದ್ರ ಮತ್ತು ರಾಜ್ಯಗಳ ನಡುವೆ ಉತ್ತಮ ಸಂಬಂಧ ಇಟ್ಟುಕೊಳ್ಳಲು ಮುಖ್ಯಮಂತ್ರು ಪಾತ್ರ ಪ್ರಮುಖವಾದುದು.

38. ಕರ್ನಾಟಕದ ಮುಖ್ಯಮಂತ್ರಿಗಳ ಹೆಸರುಗಳನ್ನು ಪಟ್ಟಿ ನೋಡಿ ಮೌಲ್ಯೀಕರಿಸುವುದು.

# ಅಧ್ಯಾಯ-12 ಭಾರತದ ಪ್ರಾಕೃತಿಕ ವಿಭಾಗಗಳು

ಅ

| | | | | | | | |
|---|---|---|---|---|---|---|---|
| 1 | A | 7 | C | 13 | C | 19 | A |
| 2 | B | 8 | B | 14 | D | 20 | C |
| 3 | C | 9 | C | 15 | B | 21 | A |
| 4 | A | 10 | C | 16 | A | 22 | B |
| 5 | C | 11 | B | 17 | C | 23 | C |
| 6 | D | 12 | A | 18 | A | 24 | D |

ಆ. 25. 82 ½ ಪೂರ್ವ ರೇಖಾಂಶ

26. ನವಮಂಗಳೂರು

27. ಮುಳ್ಳಯ್ಯನ ಗಿರಿ

28. ಆಗುಂಬೆ

29. ಏಳನೇ

30. ಮೂವತ್ತೊಂದು (31)

31. 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳು

32. ಆಗುಂಬೆ

ಇ. 33. ಭಾರತದ ಪ್ರಾಕೃತಿಕ ವಿಭಾಗಗಳು

ಉತ್ತರದ ಪರ್ವತಗಳು- ಉತ್ತರದ ಮೈದಾನ- ಪರ್ಯಾಯಪ್ರಸ್ಥಭೂಮಿ- ಕರಾವಳಿಮೈದಾನಗಳು

34. ಕರ್ನಾಟಕದ ಪ್ರಾಕೃತಿಕ ವಿಭಾಗಗಳು- ಕರಾವಳಿಪ್ರದೇಶ- ಮಲೆನಾಡು- ಮೈದಾನ ಪ್ರದೇಶ.

35. ಭಾರತವು ಸಂಪೂರ್ಣವಾಗಿ ಉತ್ತರಗೋಳಾರ್ಧದಲ್ಲಿದೆ. ಇದೊಂದು ದಕ್ಷಿಣ ಏಷ್ಯಾದ ಪರ್ಯಾಯ ದ್ವೀಪ, ಭಾರತವು ವಿಸ್ತೀರ್ಣದಲ್ಲಿ 7ನೇ ಹಾಗೂ 2ನೇ ಜನಭರಿತ ರಾಷ್ಟ್ರವಾಗಿದೆ.

36. ಪರ್ಯಾಯ ಪ್ರಸ್ಥಭೂಮಿಯ ಉತ್ತರ ಭಾಗವನ್ನು ಮಾಳ್ವ ಪ್ರಸ್ಥಭೂಮಿ ಎಂತಲೂ ಹಾಗೂ ದಕ್ಷಿಣದ ಭಾಗವನ್ನು ದಖನ್ ಪ್ರಸ್ಥಭೂಮಿ ಎಂತಲೂ ಕರೆಯಲಾಗಿದೆ.

37. ಪರ್ಯಾಯ ಪ್ರಸ್ಥಭೂಮಿಯ ಎರಡೂ ಬದಿಗಳು ಕರಾವಳಿ ಮೈದಾನಗಳಿಂದ ಆವರಿಸಿದೆ. ಅದನ್ನು ಪಶ್ಚಿಮ ಹಾಗೂ ಪೂರ್ವ ತೀರ ಮೈದಾನ ಎಂದು ವಿಂಗಡಿಸಬಹುದು.

38. ಅಕ್ಷಾಂಶ: 8 ಉತ್ತರ ಅಕ್ಷಾಂಶದಿಂದ 37 ಉತ್ತರ ಅಕ್ಷಾಂಶ

ರೇಖಾಂಶ: 68 ಪೂರ್ವ ರೇಖಾಂಶದಿಂದ 97 ಪೂರ್ವ ರೇಖಾಂಶ

39.

- ಗೋವಾ (ವಾಯುವ್ಯದಲ್ಲಿ)
- ಮಹಾರಾಷ್ಟ್ರ (ಉತ್ತರದಲ್ಲಿ)
- ತೆಲಂಗಾಣ (ಈಶಾನ್ಯದಲ್ಲಿ)
- ಆಂಧ್ರಪ್ರದೇಶ (ಪೂರ್ವದಲ್ಲಿ)
- ತಮಿಳುನಾಡು (ಗ್ನೇಯ ಮತ್ತು ದಕ್ಷಿಣದಲ್ಲಿ)
- ಕೇರಳ (ನೈಋತ್ಯದಲ್ಲಿ)

40. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ

**ಈ. 41**


ಭಾರತದ ಪ್ರಾ ಕೃತಿಕ ವಿಭಾಗಗಳು
ಅ) ಉತ್ತರದ ಪರ್ವತಗಳು
(Northern Mountains)
ಆ) ಉತ್ತರದ ಮೈದಾನಗಳು
(Northern Plains)
ಇ) ಪರ್ಯಾಯ ಪ್ರಸ್ಥಭೂಮಿ
(Peninsular Plateau)
ಈ) ಕರಾವಳಿ ಮೈದಾನಗಳು
(Coastal Plains)
J&K
China
Pakistan
Nepal
Bhutan
Arunachal
Bangladesh
Myanmar
Indus
Ganga
Arabian Sea
Bay of Bengal
Western Coastal Plains
Eastern Coastal Plains
Indian Ocean
Sri Lanka
N
ಸೂಚಿ
ಅ) ಉತ್ತರದ ಪರ್ವತಗಳು (Northern Mountains)
ಆ) ಉತ್ತರದ ಮೈದಾನಗಳು (Northern Plains)
ಇ) ಪರ್ಯಾಯ ಪ್ರಸ್ಥಭೂಮಿ (Peninsular Plateau)
ಈ) ಕರಾವಳಿ ಮೈದಾನಗಳು (Coastal Plains)

# ಅಧ್ಯಾಯ-13  ಉತ್ತರ ಅಮೇರಿಕ ಖಂಡ

ಅ.

1. 231/2 ಕರ್ಕಾಟಕ ಸಂಕ್ರಾAತಿ ವೃತ್ತ
2. ಬೇರಿಂಗ್ ಜಲಸಂದಿ
3. ಹಿಂದೂ ಮಹಾ ಸಾಗರ
4. ಪನಾಮ
5. ಮೂರನೇಅತಿದೊಡ್ಡ ಭೂಖಂಡ
6. ಪಶ್ಚಿಮ ಭಾಗ
7. ಈ ಮೇಲಿನ ಎಲ್ಲವೂ
8. ಮೌಂಟ್ ಮ್ಯಾಕ್‌ಕಿನ್ಲೆ
9. ಕೋಲರಾಡೋ ನದಿ
10. ಪ್ರೈರೀಸ್ ಮೈದಾನಗಳು
11. ಅಪಲೇಪಿಯನ್ ಪ್ರದೇಶ
12. ಮಿಸ್ಸಿಸಿಪ್ಪಿ ನದಿ
13. ಗ್ರ್ಯಾಂಡ್‌ಕ್ಯಾನಿಯನ್ (ಮಹಾ ಕಂದಕ)
14. ಸೆಂಟ್ ಲಾರೆನ್ಸ್
15. ಸುಪಿರಿಯರ್ ಸರೋವರ
16. ಮಿಚಿಗನ್
17. ಕೇಂದ್ರ ಮತ್ತುದಕ್ಷಿಣ ಪ್ರದೇಶಗಳು
18. ತಂಡ್ರ ಮಾದರಿಯ ಪಾಚಿ ಮತ್ತು ಹಾವಸೆಗಳು
19. ಫೈನ್ ಫರ್ ಸ್ಪ್ರೂಸ್ ಲಾರ್ಚ
20. ಪ್ರೈರೀಸ್ ಹುಲ್ಲುಗಾವಲು
21. ಕ್ಯಾಲಿಫೋರ್ನಿಯಾದ ಪಶ್ಚಿಮ ಕರಾವಳಿ
22. ಕ್ಯೂಬಾ
23. ಕ್ಯಾಲಿಫೋರ್ನಿಯಾ
24. ಮೀನುಗಾರಿಕಾ ಪ್ರದೇಶ
25. ಚಿನ್ನದಗಣಿ

26. ಮೆಕ್ಸಿಕೋ

27. ಯುಎಸ್ ಎ

28. ಪಿಟ್ಸ್ ಬರ್ಗ್

29. ಚಿಕಾಗೋ

30. ಪೂರ್ವ ಭಾಗದಲ್ಲಿ.

**ಆ.**

31. ಪ್ರೈರಿಸ್ ಗಳ ನಾಡು

32. ಲಂಬರ್‌ಜಾಕ್ಸ

33. ಪ್ರೈರಿಸ್ ಮೈದಾನ

34. ಟೈಗಾ

35. ಅಟ್ಲಾಂಟಿಕ್ ಮಹಾಸಾಗರ

36. ಯುಎಸ್ ಎ ಎಲ್ಲೋ ಸ್ಟೋನ್ ರಾಷ್ಟ್ರೀಯ ಉದ್ಯಾನವನ

37. ಬಯರ್

**ಇ. 38.**

1. ಮೆಕ್ಸಿಕೋ - ಮಾಯನ ನಾಗರಿಕತೆಯ ತಾಣಗಳು

2. ಕೆನಡ - ಹಿಮ ಹಕ್ಕಿ ಹಿಮ ಕರಡಿ

3. ಯುಎಸ್ಎ - ಗ್ರಾಂಡ್‌ಕ್ಯಾನಿಯನ್ ಹೋಂಸ್ ಬಾರ್‌ರಿಂಗರ್‌ಕ್ರಿಟರ್ ವಾಲ್ಕೆನಾಸ್

4. ವೆಸ್ಟ್‌ಇಂಡೀಸ್ - ಕ್ರಿಕೆಟ್, ದ್ವೀಪಗಳು

**ಈ.**

39. ಗ್ರೀನ್ಲ್ಯಾಂಡ್

40. ಮೃತ್ಯುಕಣಿವೆ

41. ಕ್ಯಾಲಿಫೋರ್ನಿಯಾ

42. ಸೆಂಟ್ ಲಾರೆನ್ಸ್

43. ಸೆಂಟ್ ಲಾರೆನ್ಸ್

44. ಮೆಕ್ಕೆಜೋಳ

45. ಚಿನ್ನದಗಣಿ

46. ಅಮೆರಿಕ

47. ಗ್ರೀನ್ಲ್ಯಾಂಡ್

48. 24 ದೇಶಗಳು

**ಉ.**

49. ಉತ್ತರ ಅಮೆರಿಕವು ಸಂಪೂರ್ಣವಾಗಿ ಸಮಭಾಜಕ ವೃತ್ತದ ಉತ್ತರದಲ್ಲಿ ನೆಲೆಗೊಂಡಿದೆ. ಅದು ಅಕ್ಷಾಂಶಿಕವಾಗಿ 7'' ಉತ್ತರ ಅಕ್ಷಾಂಶದಿAದ 84' ಉತ್ತರ ಅಕ್ಷಾಂಶದ ವರೆಗೆ ಹಬ್ಬಿದೆ, ಉತ್ತರ ಅಮೆರಿಕವು 24.24 ದಶಲಕ್ಷ ಚದರ ಕಿಲೋಮಿಟರ್ ವಿಸ್ತೀರ್ಣವನ್ನು ಹೊಂದಿದೆ.
50. ಉತ್ತರ ಅಮೇರಿಕಾ ಖಂಡದಲ್ಲಿ 24 ದೇಶಗಳಿವೆ, ಕೆನಡಾ, ಅಮೇರಿಕಾ ಸಂಯುಕ್ತ ಸಂಸ್ಥಾನ, ಮೆಕ್ಸಿಕೋ, ಅಲಾಸ್ಕಾ, ಗ್ರೀನ್ ಲ್ಯಾಂಡ್, ವೆಸ್ಟ್ಇಂಡೀಸ್, ಕ್ಯಾಲಿಫೋರ್ನಿಯಾ, ಕ್ಯೂಬಾ ಮುಂತಾದವು ಪ್ರಮುಖ ರಾಷ್ಟ್ರಗಳಾಗಿವೆ.
51. ಉತ್ತರ ಅಮೇರಿಕಾದ ಗ್ರಾಂಡ್ ಕ್ಯಾಲಿಯನ್ ಇದು ಕೋಲಾರೋ ನದಿಯ ಕೋಲಾರೋಡೋ ಪ್ರಸ್ಥಭೂಮಿಯಲ್ಲಿ ಉಂಟು ಮಾಡಿದ ಅಪಾರ ಸವಕಳಿಯಿಂದ ನಿರ್ಮಾಣಗೊಂಡಿದೆ.
52. ಉತ್ತರಅಮೆರಿಕದ ಪ್ರಮುಖ ಸಸ್ಯಗಳು ಪಾಚಿ ಹಾವಸೆ ಫೈನ್, ಫರ್, ಲಾರ್ಚ್, ಓಕ್ , ಚೆಸ್ಟ್ ನಟ್, ಬರ್ಚ್, ಬೀಚ, ಮ್ಯಾಪಲ್, ಮಹಾಗನಿ, ಲಾಗ್ ವುಡ್ ಮುಂತಾದವು ಪ್ರಾಣಿಗಳುಗಳು- ಹಿಮ ಜಿಂಕೆ, ಕಾರಿಬೋ, ಹಿಮಕರಡಿ, ಬೀವರ್, ಕಪ್ಪುಕರಡಿ, ಸಿಲ್ವರ್ ಫಾಕ್ಸ್, ಹಿಮ ಇಲಿ, ವರ್ಕು ಪೈನ್, ಲೈನಕ್ಸ್, ಸಾಂಬಾರ್ ಇತ್ಯಾದಿ.
53. ಉತ್ತರ ಅಮೇರಿಕಾದ ಪ್ರಮುಖ ನದಿಗಳು- ಮೆಸ್ಸಿಸಿಪ್ಪೀ, ಮಿಸೌರಿ, ಕೋಲರಾಡೋ, ಸೆಂಟ್ ಲಾರೆನ್ಸ್ ಇತ್ಯಾದಿ.
54. ಬಹುತೇಕ ಉತ್ತರ ಅಮೆರಿಕನ್ನರು ಅಮೆರಿಕನ್ ಇಂಡಿಯನ್ ಮತ್ತು ಆಫ್ರಿಕನ್ನರಾಗಿದ್ದಾರೆ ಅವರಲ್ಲಿ ಬಹುತೇಕಜನರು ಸ್ಪ್ಯಾನಿಶ್, ಇಂಗ್ಲಿಷ್, ಫ್ರೆಂಚ್ ಅಥವಾ ಅಮೆರಿಕನ್ ಇಂಡಿಯನ್ ಭಾಷೆಗಳನ್ನು ಮಾತನಾಡುತ್ತಾರೆ.

**ಊ**

55. ಉತ್ತರ ಅಮೆರಿಕ ಖಂಡವನ್ನು ನಾಲ್ಕು ಮುಖ್ಯ ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಲಾಗಿದೆ ಅವುಗಳೆಂದರೆ,

1. ಪಶ್ಚಿಮದ ಪರ್ವತಾವಳಿಗಳು ಅಥವಾ ರಾಕಿ ಪರ್ವತಗಳು.
2. ಮಹಾ ಕೇಂದ್ರೀಯ ಮೈದಾನಗಳು
3. ಕೆನಡಿಯನ್ ಭೂಫಲಕ
4. ಆಪಲೇಪಿಯನ್ ಉನ್ನತ ಪ್ರದೇಶಗಳು

56. ಕೇಂದ್ರಿಯ ಮೈದಾನಗಳನ್ನು ಪ್ರೈರಿಸ್‌ನ ಮಹಾಮೈದಾನಗಳೆಂದು ಕರೆಯಲಾಗಿದೆ, ಅವುಗಳು ಪೂರ್ವದಲ್ಲಿ ಅಪಲೇಪಿಯನ್‌ಗಳು ಮತ್ತು ಪಶ್ಚಿಮದಲ್ಲಿ ಪರ್ವತಾವಳಿಗಳ ಮಧ್ಯೆ ಕಂಡುಬರುತ್ತವೆ ಈ ಮೈದಾನಗಳು ಹೆಚ್ಚು ವಿಸ್ತಾರವಾಗಿದ್ದು (ಉತ್ತರ ಅಮೇರಿಕಾದ ಒಟ್ಟು ಭೂಭಾಗದ ⅗ ರಷ್ಟು) ಸಮತಟ್ಟಾದ ಲಕ್ಷಣದಿಂದ ಇಳಿಜಾರು ಲಕ್ಷಣದ ವರೆಗಿನ ಮುಂಭಾಗದಿAದ ಕೂಡಿದೆ, ಈ ಮೈದಾನಗಳು ಮೆಸ್ಸಿಪಿ ಮತ್ತು ಮಿಸ್ಸೌರಿ ನದಿಗಳು ಮತ್ತು ಅವುಗಳ ಉಪನದಿಗಳಿಂದ ನಿರ್ಮಾಣವಾಗಿವೆ, ಇದು ವಿಶ್ವದ ಅತಿ ಫಲವತ್ತಾದ ಮೈದಾನಗಳಲ್ಲೊಂದಾಗಿದ್ದು ಉತ್ತಮ ಕೃಷಿ ಪ್ರದೇಶವಾಗಿದೆ.

57. ಉತ್ತರ ಅಮೆರಿಕವು ಅಪಾರ ಸಂಖ್ಯೆಯ ಸಿಹಿ ನೀರಿನ ಮತ್ತು ಉಪ್ಪು ನೀರಿನ ಸರೋವರಗಳನ್ನು ಹೊಂದಿದೆ ಅವುಗಳು ಕೆನಡಿಯನ್ ಭೂಫಲಕದ ದಕ್ಷಿಣದಗಡಿ ಭಾಗದಲ್ಲಿ ನೆಲೆಗೊಂಡಿವೆ, ಹ್ಯೂರಾನ್, ಒಂಟರಿಯೋ, ಮಿಚುಗನ್, ಐರಿ ಮತ್ತು ಸುಪೀರಿಯರ್ ಗಳು ಪ್ರಮುಖವಾದ ಸರೋವರಗಳಾಗಿವೆ. ಒಟ್ಟಾರೆಯಾಗಿ ಸರೋವರಗಳನ್ನು ಹೋಮ್ಸ್ ಎಂದು ಕರೆಯಲಾಗಿದೆ, ಸೂ ಪೀರಿಯರ್ ಸರೋವರವು ಮಹಾ ಸರೋವರಗಳಲ್ಲಿ ದೊಡ್ಡದಾಗಿದ್ದು, ವಿಶ್ವದಅತಿದೊಡ್ಡ ಸಿಹಿ ನೀರಿನ ಸರೋವರವಾಗಿದೆ, ಚಿಕಾಗೋ ಮತ್ತು ಡೆಡ್ರಾಯಿಟ್ ನಗರಗಳು ಮೆಚ್ಚಿದ ಸರೋವರದ ದಡದ ಮೇಲೆ ನೆಲೆಗೊಂಡಿವೆ, ಈ ಎಲ್ಲಾ ಸರೋವರಗಳು ಪ್ರಮುಖವಾದ ಜಲಮಾರ್ಗಗಳನ್ನು ಒದಗಿಸಿವೆ.

58. ಉತ್ತರ ಅಮೆರಿಕ ಖಂಡದ ಸ್ವಾಭಾವಿಕ ಸಸ್ಯವರ್ಗದ ವಿಧಗಳು ಈ ಕೆಳಗಿನಂತಿವೆ,

1. ತಂಡ್ರ
2. ಸೂಚಿಪರ್ಣಅರಣ್ಯ
3. ಸಮಶೀತೋಷ್ಣ ಮಿಶ್ರಅರಣ್ಯ

4. ಸಮಶೀತೋಷ್ಣ ಹುಲ್ಲುಗಾವಲು

5. ಮೆಡಿಟೇರಿಯನ್ಅರಣ್ಯ

6. ಉಷ್ಣ ಮತ್ತು ಅರೆ ಮರಭೂಮಿ

7. ಉಷ್ಣವಲಯದ ಮಳೆ ಅರಣ್ಯ.

59. ಉತ್ತರಅಮೆರಿಕಾದ ಪೂರ್ವ ಭಾಗಗಳಲ್ಲಿ ಅತಿ ಹೆಚ್ಚಿನ ಜನಸಾಂದ್ರತೆಯನ್ನು ಕಾಣಬಹುದು, ಇಲ್ಲಿ ಹೆಚ್ಚಿನ ನಗರೀಕರಣ ಹೊಂದಿದೆ ಉದಾಹರಣೆ, ನ್ಯೂಯಾರ್ಕ್ ವಾಷಿಂಗ್ಟನ್ ಚಿಕ್ಕಗೋ ಇತ್ಯಾದಿ, ಆದರೆ ಖಂಡದ ಬಹುತೇಕಉತ್ತರ ಭಾಗವು ಸಾಮಾನ್ಯವಾಗಿ ಹೆಚ್ಚು ಹಿಮಾಮೃತದಿಂದ ಕೂಡಿರುವುದರಿಂದ ಖಾಲಿ ಲಕ್ಷಣದಿಂದ ಕೂಡಿದೆ.ಅಮೆರಿಕ ಸಂಯುಕ್ತ ಸಂಸ್ಥಾನದ ನಗರ ಕೇಂದ್ರಗಳು ಮತ್ತು ಕೈಗಾರಿಕಾ ಪ್ರದೇಶಗಳು ಅಧಿಕ ಜನಸಾಂದ್ರತೆಯ ಪ್ರದೇಶಗಳಾಗಿವೆ, ಉತ್ತರ ಅಮೆರಿಕಾದ ಶೇಕಡ 98ರಷ್ಟು ಜನಸಂಖ್ಯೆಯು ನಗರ ಜನಸಂಖ್ಯೆಯಾಗಿದೆ.

## ಅಧ್ಯಾಯ-14  ದಕ್ಷಿಣ ಅಮೇರಿಕ ಖಂಡ

ಅ .

1. B) 1498

2. B) ರೆಡ್ ಇಂಡಿಯನ್ಸ್

3. C) ಭೂಮಧ್ಯ ರೇಖೆ ಮತ್ತು ಮಕರ ಸಂಕ್ರಾAತಿ ವೃತ್ತಗಳು

4. D) ದಕ್ಷಿಣ ಅಮೆರಿಕ

5. D) ಆರ್ಕ್ಟಿಕ್ ಸಮುದ್ರ

6. B) ಬ್ರೆಜಿಲ್

7. C) ಬೋಲಿವಿಯ ಮತ್ತು ಪರಾಗ್ವೆ

8. D) ಆ್ಯಂಡಿಸ್ ಪರ್ವತಗಳು

9. B) ಮೌಂಟ್ ಅಕನಕಾಗುವ

10. C) ಏಂಜಲ್ ಜಲಪಾತ

11. D) ಈ ಮೇಲಿನ ಎಲ್ಲವೂ

12. C) ಅಮೆಜಾನ್

13. B) ಟಿಟಿಕಾಕಾ ಸರೋವರ

14. A) ಭೂಮಧ್ಯರೇಖೆ ಮತ್ತು ಮಕರ ಸಂಕ್ರಾAತಿ ವೃತ್ತ

15. C) ಸಮಭಾಜಕ ವೃತ್ತದ ವಾಯುಗುಣ ಪ್ರದೇಶ

16. C) ಅಟಕಾಮ ಮರುಭೂಮಿ

17. B) ಸೆಲ್ವಾಸ

18. B) ಮಹಾಗನಿ ಮತ್ತು ಎಬೋನಿ

19. C) ಲಾನೋಸ

20. C) ಪಂಪಾಸ್

21. B) ದಕ್ಷಣ ಅಮೆರಿಕ ಖಂಡÀ

22. B) ಗಾಲ್ಪಗೋಸ್

23. A) ಮೆಕ್ಕೆಜೋಳ

24. B) ಬ್ರೆಜಿಲ್

25. A) ಪೆರು ಮತ್ತು ಚಿಲಿ

26. C) ದಕ್ಷಿಣ ಅಮೆರಿಕ ಖಂಡÀ

**ಆ.**

27. ರೆಡ್ಇಂಡಿಯನ್ಸ್

28. ಪಂಪಾಸ್

29. ಬ್ರೆಜಿಲ್

30. ಪನಾಮ ಕಾಲುವೆ

31. ಫುಟ್ಬಾಲ್

**ಇ. 32.**

| ಅ | ಬ |
|---|---|
| 1. ವೆನಿಜೂಲ್ | ಲಾನೋಸ್ |
| 2. ಬ್ರೆಜಿಲ್ | ಕಾಂಪಾಸ್ |
| 3. ಅರ್ಜೆಂಟೈನ | ಪಂಪಾಸ್ |
| 4. ಸಮಭಾಜಕ ವೃತ್ತ ಪ್ರದೇಶ | ಸೆಲ್ವಾಸ್ |

**ಈ.**

33. ಫ್ರೆಂಚ್‌ಗಯಾನ

34. ಚಿಲಿ ದೇಶ

35. ಸಾವೋ ಪೌಲೋ ಸಿಟಿ ಆಫ್ ಸ್ಕೈಸ್ಕೇಪರ್

36. 6960 ಮೀ

37. ಚೂರನ ನದಿ

38. ಚೂರನ್ ನದಿ

39. ಕಾಂಡರ ಪಕ್ಷಿ

40. ಉರುಗ್ವೆ

41. ಗಯಾನ

42.ಲ್ಯಾಟೆಕ್ಸ್/ ರಬ್ಬರ್ ಹಾಲು

**ಉ. ಎರಡು ಅಂಕದ ಉತ್ತರಗಳು**

43. ಇದು ಉತ್ತರದಲ್ಲಿ ಅಗಲವಾಗಿಯೂ ಮತ್ತು ದಕ್ಷಿಣದ ಕಡೆಗೆ ಕಿರಿದಾಗಿದ್ದು ತ್ರಿಕೋನಾಕಾರವಾಗಿದೆ ಹನ್ನೆರಡು ಡಿಗ್ರಿ ಉತ್ತರ ಅಕ್ಷಾಂಶದಿAದ 56 ಡಿಗ್ರಿ ದಕ್ಷಿಣ ಅಕ್ಷಾಂಶದವರೆಗೂ ಮತ್ತು ರೇಖಾಂಶವಾಗಿ 35 ಡಿಗ್ರಿ ಪಶ್ಚಿಮ ರೇಖಾಂಶದಿAದ 81 ಡಿಗ್ರಿ ಪಶ್ಚಿಮ ರೇಖಾಂಶದವರೆಗೂ ವಿಸ್ತರಿಸಿದೆ, ದಕ್ಷಿಣ ಅಮೆರಿಕಾದ ಒಟ್ಟು ಭೂಭಾಗವು ಸುಮಾರು 177.1 ಲಕ್ಷಚದರ ಕಿಲೋಮೀಟರ್ ಗಳಷ್ಟು ಅದು ಭಾರತಕ್ಕಿಂತಲೂ ಮೂರು ಪಟ್ಟುದೊಡ್ಡದಾಗಿದೆ.

44. ವೆನಿಜುಲಾದ ಲಾನೋಸ್

- ಬ್ರೆಜಿಲಿನ ಕಾಂಪಾಸ್
- ಅರ್ಜೆಂಟೀನಾದ ಪಂಪಾಸ್

